12th Century's
Enlightment Technic
and Evolution

ಪರಮ ಪೂಜ್ಯ ಸದ್ಗುರು ಶ್ರೀ ವಿದ್ಯಾನಂದ ಶರಣರು ವಿರಚಿತ

ಅಕಾಯ ಭಕ್ತ



ಸಂಪಾದಕರು

ಬಸವರಾಜ ಸ್ವಾಮಿ

12th Century's
Enlightment Technic
and Evolution

ಅಕಾಯ ಭಕ್ತ

ಲೇಖಕರು
ಪರಮ ಪೂಜ್ಯ ಸದ್ಗುರು ಶ್ರೀ ವಿದ್ಯಾನಂದ ಶರಣರು
ಡಬ್ಬೇರು ಮಡುವು

ಸಂಪಾದಕರು
ಬಸವರಾಜಸ್ವಾಮಿ
ರಾಯಚೂರು

ಪ್ರಕಾಶಕರು
ಶ್ರೀ ಬಸವಸೇವಾ ಪ್ರತಿಷ್ಠಾನ
ನಂ.12–7–196 ಸುದ್ದಿಮೂಲ ಕಾರ್ಯಾಲಯ
ಸಿಯಾತಲಾಬ ಗಂಜ್ ಏರಿಯಾ
ರಾಯಚೂರು–584102

ಅಕಾಯ ಭಕ್ತ
ವಚನಾನುಭಾವ
Akaya Bhakta Vachananubhava Author : Sadguru Sri Vidyananda Saharanaru
Dabberumaduvu Tq. Lingsugur , Dt. Raichur
Edited by : Basavaraj Swamy , Raichur
Mobile : 9980553750

ಲೇಖಕರು
ಪರಮಪೂಜ್ಯ ಸದ್ಗುರು ಶ್ರೀ ವಿದ್ಯಾನಂದ ಶರಣರು ಡಬ್ಬೇರಮಡುವು

ಸಂಪಾದಕರು:
ಬಸವರಾಜ ಸ್ವಾಮಿ,
ರಾಯಚೂರು

ಮಿಂಚಂಚೆ:
suddimoola@gmail.com

ಪ್ರಕಾಶಕರು:
ಶ್ರೀ ಬಸವಸೇವಾ ಪ್ರತಿಷ್ಠಾನ
ನಂ.12-7-196 ಸುದ್ದಿಮೂಲ ಕಾರ್ಯಾಲಯ
ಸಿಯಾತಲಾಬ ಗಂಜ್ ಏರಿಯಾ
ರಾಯಚೂರು- 584102

ಬೆಲೆ : 150/-

ಪ್ರತಿಗಳು : 500

ಮುದ್ರಣ : ಪ್ರಥಮ ಮುದ್ರಣ ಮೇ 2023

ಬಳಸಿದ ಕಾಗದ : 70 ಜಿ.ಎಸ್.ಎನ್.ಎಸ್ ಮ್ಯಾಪಲಿತೋ

ಆಕಾರ : ಡೆಮಿ 1/8

ಪುಟಗಳು : 131 + viii

ಮುಖ ಪುಟ : ಮುರಳೀಧರ ವಿ. ರಾಠೋಡ್ ಬೆಂಗಳೂರು

ಮುದ್ರಣ
ಟ್ರಿನಿಟಿ ಅಕಾಡೆಮಿ - ಬೆಂಗಳೂರು

ಓದುವ ಮುನ್ನ ....

ದ್ವೈತ, ದ್ವೈತಾದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಿವಶಕ್ತಿ ವಿಶಿಷ್ಟಾದ್ವೈತ, ಮುಂತಾದ ಸಿದ್ಧಾಂತಗಳು ಭಾರತದಲ್ಲಿ ಪ್ರಚಲಿತದಲ್ಲಿವೆ. ಪ್ರತಿ ದೇಹದಲ್ಲಿರುವ ಶಕ್ತಿಯನ್ನು ಆಯಾ ದೇಹವೇ ಬಳಕೆ ಮಾಡಿಕೊಳ್ಳಲು ಸಕಲ ದೇಹಗಳಿಗೆ ನೆರವಾಗಲೆಂದು ಆಯಾ ಸಿದ್ಧಾಂತಗಳನ್ನು ಮಹಾಜ್ಞಾನಿಗಳು ರಚಿಸಿರುವರು . ಆದರೆ ಜನ ಆಯಾ ಗ್ರಂಥಗಳನ್ನು ಬರೆದ ಜ್ಞಾನಿಗಳನ್ನು ಅವರು ಬರೆದ ಸೂತ್ರಪ್ರಧಾನವಾದ ಜ್ಞಾನ ಗ್ರಂಥಗಳನ್ನು ಮಾತ್ರ ವಿಶ್ವಾಸಕ್ಕೆ ತೆಗೆದುಕೊಂಡರು . ತಮ್ಮ ತಮ್ಮ ದೇಹಗಳಲ್ಲಿ ತನ್ಮಯವಾದ ಅರಿವಿನ ಶಕ್ತಿಯನ್ನೆ ಮರೆತರು . ಒಬ್ಬೊಬ್ಬ ಜ್ಞಾನಿಯ ಹೆಸರಲ್ಲಿ ಮತ ಧರ್ಮ ನಿರ್ಮಾಣವಾಯಿತು . ಜಾತಿಉಪಜಾತಿ ಪಂಗಡಗಳು ಹುಟ್ಟಿಕೊಂಡವು. ಜ್ಞಾನಿಗಳು ಬರೆದ ಸೂತ್ರ ಪ್ರಧಾನ ಸಿದ್ಧಾಂತಗಳೆಲ್ಲಾ ಧರ್ಮಗ್ರಂಥಗಳಾದವು . ಅವು ಪೂಜೆಗೆ , ವಾದ ವಿವಾದಗಳಿಗೆ ಉಪನ್ಯಾಸಕ್ಕೆ ಮೀಸಲಾದವು .

ದೇಹದ ಉನ್ನತಿಗಾಗಿ ದೇಹದಿಂದಲೇ ಬರೆದ ಗ್ರಂಥಗಳು ದೇಹಗಳಿಗೆ ಮುಳುವಾದವು. ಈ ಸಕಲ ಸಿದ್ಧಾಂತಗಳಿಂದ ಆದ ಬದಲಾವಣೆಯನ್ನು ಶ್ರೀ ವಿದ್ಯಾನಂದ ಶರಣರು ಗಮನದಲ್ಲಿಟ್ಟು ಕೊಂಡು ಅಕಾಯ ಭಕ್ತ ಗ್ರಂಥವನ್ನು ಬರೆದರು . **ಅಕಾಯ ಭಕ್ತ** ಪುಸ್ತಕದಲ್ಲಿ ಶ್ರೀ ವಿದ್ಯಾನಂದ ಶರಣರು ಬಸವಣ್ಣ ಚೆನ್ನಬಸವಣ್ಣ ಹಾಗೂ ಅಲ್ಲಮಪ್ರಭು ಅವರ 30 ವಚನಗಳಿಗೆ ವಚನಾನುಭಾವವನ್ನು ಬರೆದಿದ್ದಾರೆ.

ನಂಬರು ನಚ್ಚರು ಬರಿದೆ ಕರೆವರು,
ನಂಬಲರಿಯರೀ ಲೋಕದ ಮನುಜರು !
ನಂಬಿ ಕರೆದಡೆ, ಓ ಎನ್ನನೆ ಶಿವನು ?
ನಂಬದೆ ನಚ್ಚದೆ ಬರಿದೆ ಕರೆವರ
ಕೊಂಬ ಮೆಟ್ಟಿ ಕೂಗೆಂದ ಕೂಡಲಸಂಗಮದೇವಾ !
ವಚನದಿಂದ ಹಿಡಿದು
ಗುರು ಧ್ಯಾನ ವಲ್ಲದೆ ಧ್ಯಾನವಿಲ್ಲವು, ಗುರುಪಾದ ಪೂಜೆಯಲ್ಲದೆ ಪೂಜೆಯಿಲ್ಲವು,
ಗುರು ವಾಕ್ಯವಿಲ್ಲದೆ ಮಂತ್ರವಿಲ್ಲವು, ಗುರುಕೃಪೆಯಿಲ್ಲದೆ ಮೋಕ್ಷವಿಲ್ಲವು
ಅದೆಂತೆಂದೊಡೆ ಧ್ಯಾನ ಮೂಲೋ ಗುರು ಮೂರ್ತಿಃ
ಮೋಕ್ಷ ಮೂಲೋ ಗುರು ಕೃಪಾ ಃ
ಎಂಬ ವಾಕ್ಯ ನಿಮ್ಮದಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನ .

ವರೆಗೆ ಹೀಗೆ ಒಟ್ಟು 30 ವಚನಗಳನ್ನು ಆಧಾರವಾಗಿಟ್ಟುಕೊಂಡು ಅವುಗಳ ಮೂಲಕ ಅನುಭಾವ ಶಕ್ತಿಯನ್ನು ಓದುವ ತನುವಿಗೆ ಮನದಟ್ಟಾಗುವಂತೆ "**ಅಕಾಯ ಭಕ್ತ**" ಗ್ರಂಥ ಸಿದ್ಧಪಡಿಸಿ ಸ್ವಾನುಭಾವದ ಕೃಷಿಯಲ್ಲಿ ತೊಡಗಿದ ಓದುಗನಿಗೆ ದಾಸೋಹ ರೂಪದಲ್ಲಿ ಉಣ ಬಡಿಸಿದ್ದಾರೆ.

ಸತ್ಯವನ್ನು ಲೋಕೋಪಯೋಗಿ ದೃಷ್ಟಿಯಿಂದ ಹೇಳುವವರೇ ಆಪ್ತರು. ಲೋಕೋದ್ಧಾರವೆಂದರೇನು? ಅದು ಯಾವುದರಿಂದ ಆಗುತ್ತದೆ? ಎಂಬುದನ್ನು ಸ್ಪಷ್ಟವಾಗಿ ತಿಳಿದು

ಸ್ವಾರ್ಥದ ಲವಲೇಶವೂ ಇಲ್ಲದೆ ಉಸಿರಾಟದಷ್ಟೇ ಸಹಜವಾಗಿ ಆ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು ಡಬ್ಬೇರುಮಡುವಿನ ಪರಮಪೂಜ್ಯ ಶ್ರೀ ವಿದ್ಯಾನಂದ ಶರಣರು.

ಶರಣರ ಮಾತೆಲ್ಲಾ ಅಮೃತವಾಯಿತು. ಪೂಜ್ಯರ ವ್ಯಕ್ತಿತ್ವವನ್ನು ವರ್ಣಿಸುವುದು ಕಷ್ಟವೇ. ಅವರನ್ನು ಕಣ್ಣಾರೆ ಕಂಡ, ಅವರೊಡನಾಡಿದ ಶಿಷ್ಯವರ್ಗ, ಅವರ ಪ್ರವಚನಗಳನ್ನು ಕೇಳಿದವರಿಗೆ ಅವರ ಬಗ್ಗೆ ಹೇಳಬೇಕಾಗಿಲ್ಲ . ಯಾರು ಅವರನ್ನು ನೋಡಿಲ್ಲವೋ, ಕೇಳಿಲ್ಲವೋ ಅಂಥವರನ್ನು ಇಂಥ ಒಬ್ಬ ಶರಣರಿದ್ದರು ಎಂದು ನಂಬಿಸುವುದು ಕಷ್ಟದ ಕೆಲಸ ಅಂತಹ ವ್ಯಕ್ತಿತ್ವ ಪೂಜ್ಯ ಸದ್ಗುರು ಶ್ರೀ ವಿದ್ಯಾನಂದಶರಣರದು.

ಮಗುವಿನಂಥ ನಿಷ್ಕಲ್ಮಷ ಹೃದಯ , ನಿರ್ಮಲ ನಗೆ, ವಾತ್ಸಲ್ಯಪೂರ್ಣ ನೋಟ. ಸದಾ ಶರಣರ ಗುರುಗಳಾದ ಸದ್ಗುರು ನಾಗಭೂಷಣರ ಸ್ಮರಣೆ, ಒಂದೇ ಮಾತಿನಲ್ಲಿ ಹೇಳುವುದಾದರೆ ಕಣ್ಣಿಗೆ ಬಿದ್ದ ಅರುಹೃದಯಿಗೆ ಸ್ವರೂಪ ಜ್ಞಾನ ಮಾಡಿಸುವ ಛಲವಂತ ಶರಣರವರು.

ಅವರೇ ಹೇಳಿದಂತೆ 4ನೇ ತರಗತಿಯವರೆಗೆ ಅಯ್ಯನವರ ಶಾಲೆಯಲ್ಲಿ ಅಭ್ಯಾಸ. ತಮ್ಮ 23ನೇಯ ವಯಸ್ಸಿನವರೆಗೆ ಈ ಲೋಕದವರು ಆಚರಿಸುವ ಹಲವಾರು ಆಚಾರಗಳಲ್ಲಿದ್ದೆವೆಂದು ಆಗಾಗ ಹೇಳಿಕೊಳ್ಳುತ್ತಿದ್ದರು.

ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ಮುಚಳಾಂಬದ **ಸದ್ಗುರು ಶ್ರೀ ನಾಗಭೂಷಣ ಶಿವಯೋಗಿಗಳ** ದರ್ಶನದ ನಂತರ ಅವರೆಂದೂ ಹಿಂತಿರುಗಿ ನೋಡಲಿಲ್ಲ. ಪೂರ್ವಾಶ್ರಯದ ಡಬ್ಬೇರುಮಡುವಿನ ಆದನಗೌಡರು **ಶ್ರೀ ವಿದ್ಯಾನಂದ ಶರಣ**ರಾದರು. ಅಯ್ಯನವರ ಶಾಲೆಯಲ್ಲಿ ಕೇವಲ ಕನ್ನಡ ಅಭ್ಯಾಸ ಮಾಡಿದ್ದ ಆದನಗೌಡರು ಸದ್ಗುರು ನಾಗಭೂಷಣರ ಗರಡಿಯಲ್ಲಿ ಸಂಸ್ಕೃತ ಹಾಗೂ ಹಿಂದಿ ಅಭ್ಯಾಸ ಮಾಡಿ ಭಗವದ್ಗೀತೆಯನ್ನು ಸರಳ ಹಾಗೂ ಸುಲಲಿತವಾಗಿ ಪ್ರವಚನ ಮಾಡ ಹತ್ತಿದರು. ಸಕಲ ಶಿವಶರಣರ ವಚನಗಳು ಅವರಿಗೆ ಅತ್ಯಂತ ಪ್ರಿಯವಾದವು. ಕಬ್ಬಿಣದ ಕಡಲೆಯಂತಿರುವ ಅಲ್ಲಮ ಪ್ರಭುಗಳ ವಚನಗಳನ್ನು ನೋಡಿ ಅತ್ಯಂತ ಆನಂದಿತರಾದರು. ಅವುಗಳ ಒಳಗುಟ್ಟನ್ನು ತಮ್ಮ ಪ್ರವಚನಗಳ ಮೂಲಕ ಹೇಳಿ ಶಿಷ್ಯರ ಸ್ವರೂಪ ಜ್ಞಾನಕ್ಕೆ ದಾರಿಮಾಡಿಕೊಟ್ಟರು. ಹಗಲು ದಣಿವರಿಯದೆ ಪ್ರವಚನ ಮಾಡಿದರೆ ರಾತ್ರಿ ಏಕಾಂತದಲ್ಲಿ ವಚನಗಳಿಗೆ ವ್ಯಾಖ್ಯಾನ ಬರೆಯುತ್ತಿದ್ದರು. ಪುಸ್ತಕ ಓದಿ ಉದಾಹರಿಸುವ ಪಂಡಿತೋತ್ತಮನಿಗೆ ತನ್ನ (ದೇಹವೆಂಬ) ಪುಸ್ತಕದ ಪರಿಚಯ ಸ್ವರೂಪ ಜ್ಞಾನ ಕರುಣಿಸುತ್ತಿದ್ದರು.

ಸಕಲ ಶರಣರ ವಚನಗಳೂ ಅವರ ನಾಲಿಗೆಯ ತುದಿಯಲ್ಲಿದ್ದವು. ಪ್ರವಚನಗಳನ್ನು ಸಿದ್ಧಮಾಡಿಕೊಳ್ಳುತ್ತಿರಲಿಲ್ಲ. ಒಮ್ಮೆ ಹೇಳಿದ ವಚನದ ತಿರುಳು ಮತ್ತೊಮ್ಮೆ ಅನೇಕ ಕವಲುಗಳನ್ನು ಒಡೆದು ಒಂದೇ ಅರ್ಥದಲ್ಲಿ ಲೀನವಾಗಿ ಮೈಮನಗಳನ್ನು ಅರಳಿಸಿ ತನ್ನನ್ನು ನೋಡಿಕೊಳ್ಳುವಂತೆ ಮಾಡುವ ಮೋಡಿ ಸದ್ಗುರುಗಳಿಗೆ ಕರಗತವಾಗಿತ್ತು. ಅವರ ಪ್ರವಚನ ಕಲಿತ ವಿದ್ಯೆಯ ಪ್ರದರ್ಶನವಾಗಿರದೆ ಸತ್ಯವೇ ತಾನಾಗಿ ತಾನೇ ಸತ್ಯವಾಗಿ ತಾಯಿ ರೂಪದಲ್ಲಿ ತುತ್ತು ಮಾಡಿ ಉಣಬಡಿಸಿದಂತಿರುತ್ತಿತ್ತು. ತಾವೂ ಉಂಡು ಶಿಷ್ಯರಿಗೂ ಉಣ್ಣಿಸಿ ಸತ್ಯದ ಡೇಗು ಡೇಗುತ್ತಿದ್ದರು.

ಒಬ್ಬ ವ್ಯಕ್ತಿ ಸ್ವರೂಪ ಜ್ಞಾನಿಯಾಗಿ ತಾನು ಯಾವ ಕಾಯಕವನ್ನಾದರೂ ಮಾಡಲಿ ಅವನಿಂದ ಲೋಕಕ್ಕೆ ಉಪಯೋಗವಾಗುತ್ತದೆ. ಮಹದಾನಂದ ಹೊಂದಿ ಸ್ವಸುಖ ಪಡೆಯುತ್ತಾನೆ ಎಂಬ ಕಳಕಳಿ

ಅವರದಾಗಿತ್ತು. ಹಗಲಿರುಳೆನ್ನದೆ ತಮ್ಮ ಅರವತ್ತು ವಸಂತಗಳನ್ನು ಇದಕ್ಕಾಗಿ ಮೀಸಲಿಟ್ಟರು.

ಕುಳಿತಲ್ಲಿ, ನಿಂದಲ್ಲಿ, ಮಲಗಿದಲ್ಲಿ ಅವರ ಧ್ಯಾನ ಶರಣರ ಕುರಿತೇ ಆಗಿರುತ್ತಿತ್ತು. ಅರುಹೃದಯ ಸಿಕ್ಕ ಕೂಡಲೇ ಅವನನ್ನು ಬಿಗಿದಪ್ಪಿ ತಮ್ಮವನನ್ನಾಗಿ ತಮ್ಮ ಮಗನನ್ನಾಗಿ ಮಾಡಿಕೊಂಡು ಆತನೊಳಗಿದ್ದ ಅರುವನ್ನು ಆತನಿಗೇ ಪರಿಚಯಿಸುತ್ತಾ ಆತನ ಮರುವನ್ನು ಆತನಿಂದಲೇ ನಷ್ಟಮಾಡಿಸಿ ಸ್ವರೂಪ ಜ್ಞಾನಿಯನ್ನಾಗಿಸುವ ಸುಳುಹು ನೀಡುತ್ತಿದ್ದರು.

ಹೀಗೆ ಮಾಡುವಾಗ ಅವರ ಜಾತಿ-ಮತ ಪಂಥ ಅರ್ಥವ್ಯವಸ್ಥೆ, ಅಧಿಕಾರ, ಇದಾವುದನ್ನು ಗಮನಿಸದೆ ಅರುಹೃದಯವನ್ನು ಮಾತ್ರ ನೋಡುತ್ತಿದ್ದರು. ಅವನ ಭೇಟಿಗಾಗಿ ಹಗಲಿರುಳು ಹಂಬಲಿಸುತ್ತಿದ್ದರು. ದೇಹದ ಅಭಿಮಾನ ಅಹಂಕಾರ ಬಿಡುವವರಿಗೆ ಸುಲಲಿತವಾಗಿ ಪರೀಕ್ಷೆಗಳು ಸದಾ ನಡೆಯುತ್ತಿದ್ದವು. ಒಬ್ಬ ವ್ಯಕ್ತಿ ಸ್ವರೂಪ ಜ್ಞಾನಿಯಾಗಿ ತಾನು ಯಾವ ಕಾಯಕವನ್ನಾದರೂ ಮಾಡಲಿ ಪಾದದಿಂದ ಹಿಡಿದು ನೆತ್ತಿಯವರೆಗಿನ ಅಭಿಮಾನ ಬಿಟ್ಟಾಗಲೇ ಆತ ಸದ್ಗುರುಗಳಿಂದ ಪೂಜಿತನಾಗುತ್ತಿದ್ದ ಪೂಜಿಸಲ್ಪಡುತ್ತಿದ್ದ. ಗುರುವಾಗುತ್ತಿದ್ದ. ಗುರುಮುಟ್ಟಿ ಗುರುವಾಗುವ ಪರಂಪರೆ ಶರಣ ಪರಂಪರೆಯಲ್ಲಿ ಮಾತ್ರ ಕೇಳುತ್ತೇವೆ. ಆದರೆ ಸದ್ಗುರು ವಿದ್ಯಾನಂದ ಶರಣರು ಆರು ದಶಕಗಳವರೆಗೆ ಇದನ್ನು ಸದ್ದುಗದ್ದಲವಿಲ್ಲದೆ ಏಕಾಂಗಿಯಾಗಿ ನಡೆಸಿಕೊಂಡು ಬಂದರು. ಜ್ಞಾನ ಪಡೆದು ತಮ್ಮ ಕಾಯಕ ಮಾಡುತ್ತಾ ಸ್ವಸುಖದಲ್ಲಿ ಲೀನವಾದ ಸದ್ಗುರು ವಿದ್ಯಾನಂದ ಶರಣರ ಶಿಷ್ಯಂದಿರು ಸಾವಿರಾರು ಸಂಖ್ಯೆಯಲ್ಲಿದ್ದಾರೆ. ಅವರೆಲ್ಲರೂ ಸದ್ಗುರು ವಿದ್ಯಾನಂದರ ಕಾಯಕದಲ್ಲಿ ತಲ್ಲೀನವಾದರೆ ಕಲ್ಯಾಣ ರಾಜ್ಯ ನಿರ್ಮಾಣವಾಗುವುದರಲ್ಲಿ ಸಂದೇಹವಿಲ್ಲ.

ಮಹಾತ್ಮಾ ಬಸವಣ್ಣ ಇಷ್ಟ ಲಿಂಗ ಕೊಟ್ಟು ಉಪಕಾರ ಮಾಡಿದನೆಂದು ಒಂದು ವರ್ಗ ಅವರನ್ನು ಸ್ಮರಿಸುತ್ತದೆ. ಮತ್ತೊಂದು ವರ್ಗ ರೇಣುಕರು ಇಷ್ಟಲಿಂಗ ಕೊಟ್ಟರೆಂದು ಪ್ರತಿಪಾದಿಸುತ್ತದೆ. ಹೀಗೆ ಅನ್ನುವ ಈ ಎರಡು ವರ್ಗಗಳು ಉಣ್ಣೆಯಂತೆ ಕ್ಷೀರದ ರುಚಿಯನ್ನು ಸವಿಯಲಿಲ್ಲವೆಂದು ರೇಣುಕ ಹಾಗೂ ಶರಣರ ಅಮೃತವನ್ನು ಸವಿದ ಅನುಭಾವಿಗಳಿಗೆ ಅನ್ನಿಸದೇ ಇರದು. ಶರಣರ ವಚನಗಳಲ್ಲಿ ರೇಣುಕರ ಅನುಭಾವದಲ್ಲಿ ಕುರುಹನ್ನೆ ಕಂಡರು. ಸದಾ ಕತ್ತಲನ್ನೆ ಕಂಡವರಿಗೆ ಬೆಳಕಿನ ರುಚಿ ಹಿಡಿಸುವುದಿಲ್ಲ.

ಸದ್ಗುರು ವಿದ್ಯಾನಂದರು ಈ ನಾಡು ಕಂಡ ಮಹಾನ್ ಸಂತರು. ಮಠ ಮಾನ್ಯಗಳ ಒಡೆಯರು ಸಾಹಿತಿಗಳು ಈ ಸತ್ಪುರುಷರನ್ನು ನೋಡಲು ಬರಲಿಲ್ಲ . ರಾಜಕಾರಣಿಗಳು ಇವರತ್ತ ಸುಳಿಯಲಿಲ್ಲ, ಗುರುಗಳಾದರೂ ಅಷ್ಟೆ, ಅವರ ನೆರಳಿನ ಸಾಮಿಪ್ಯವೂ ಹೋಗಲಿಲ್ಲ. ಅರುಹೃದಯಿಗಳನ್ನು ಕಂಡು ಅರಿವಿನ ಬೀಜ ಬಿತ್ತಿದರು. ಮೊಳಕೆಯೊಡೆದು ಸಸಿಗಳಾಗಿವೆ. ಕೆಲವು ಮರಗಳಾಗಿ ಫಲಕ್ಕೆ ಬಂದಿವೆ . ಆ ಮಾಗಿದ ಅರಿವಿನ ಫಲ ತನ್ನ ಕೆಲಸ ಮಾಡದೇ ಇರದು.

ತನ್ನೊಳಗಿರುವ ಒಡೆಯನನ್ನು ತೋರಿಸಿ ಅವನೇ ತಾನಾಗುವ ಪ್ರಯತ್ನವನ್ನು ಶರಣರು ಹನ್ನೆರಡನೆಯ ಶತಮಾನದಲ್ಲಿ ಯಶಸ್ವಿಯಾಗಿ ಪೂರೈಸಿದ್ದಾರೆ.

ಅದೇ ಪ್ರಯತ್ನವನ್ನು ಪರಮ ಪೂಜ್ಯ ಸದ್ಗುರು ಡಬ್ಬೇರುಮಡುವಿನ ಶ್ರೀ ವಿದ್ಯಾನಂದ ಶರಣರು ಮನೆ ಮನೆಗೆ ತೆರಳಿ ಶ್ರೀಸಾಮಾನ್ಯನನ್ನು ಸ್ವರೂಪ ಜ್ಞಾನಿಗಳನ್ನಾಗಿ ಪರಿವರ್ತಿಸಲು ಏಕಾಂಗಿಯಾಗಿ ಯತ್ನಿಸಿದರು. ಹೆದ್ದೊರೆನಾಡು ಕಂಡ ಅಪೂರ್ವ ಸಂಚಾರಿ ಸಂತರಾದ ಪೂಜ್ಯ ಶ್ರೀ

ವಿದ್ಯಾನಂದ ಶರಣರು ನಾಡಿನಾದ್ಯಂತ ಆಧ್ಯಾತ್ಮದ ಚಿಂತನೆಯ ವಾತಾವರಣವನ್ನು ಮೂಡಿಸಿದರು.

ಉತ್ತರ ಕರ್ನಾಟಕದ ರಾಯಚೂರು, ಕಲಬುರ್ಗಿ, ಬೀದರ್, ಬಾಗಲಕೋಟೆ, ಬಿಜಾಪುರ, ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಗಳಾದ್ಯಂತ ಸತತ ಅರವತ್ತು ವರ್ಷಗಳವರೆಗೆ ಹಗಲಿರುಳೆನ್ನದೆ ಸಂಚರಿಸಿ ಸಾವಿರಾರು ಸಂಖ್ಯೆಯ ಜಿಜ್ಞಾಸುಗಳಲ್ಲಿ ಆಧ್ಯಾತ್ಮದ ಆಸಕ್ತಿ ಹುಟ್ಟಿಸಿದರು.

ಈ ಜ್ಞಾನ ಮಹಾಯಜ್ಞ ಅವರೊಂದಿಗೆ ನಂದಲಿಲ್ಲ. ಅನುಭವ ಮಂಟಪದಲ್ಲಿ ಚೆನ್ನಬಸವಣ್ಣನವರು ಕ್ರಿಯಾಶೀಲರಾದಂತೆ ಬೆನಕನ ಹಳ್ಳಿಯ ಸದ್ಗುರು ನಾಗಭೂಷಣ ಶಿವಯೋಗಿ ಮಹಾಬೋಧಾಲಯದಲ್ಲಿ ಪೂಜ್ಯ ವಿದ್ಯಾನಂದ ಶರಣರ ಪ್ರೀತಿಯ ಕಂದ ಮಹಾಜ್ಞಾನಿ ದೇವಾನಂದರಾಗಿ ರೂಪುಗೊಂಡಿರುವರು.

ಸಾಧನೆಯ ಮಾರ್ಗದಲ್ಲಿರುವವರಿಗೆ ಯಾದಗಿರಿ ಜಿಲ್ಲೆಯ ಹುಣಶಿಗಿ ತಾಲೂಕಿನ ಬೆನಕನ ಹಳ್ಳಿಯ ಮಹಾ ಬೋಧಾಲಯ ಕೈ ಮಾಡಿ ಕರೆಯುತ್ತಲಿದೆ.

ಸದ್ಗುರು ಶ್ರೀ ವಿದ್ಯಾನಂದಶರಣರು ಜೂನ್ 1-2006 ರಂದು ಅಸ್ವಸ್ಥರಾದರು. ದೇಹದ ಬಳಲಿಕೆಯ ಮಧ್ಯೆಯೇ ಪ್ರವಚನ ಸಾಗಿತ್ತು. ಆನಂದದ ಮರೆಯಲ್ಲಿ ದೇಹ ಮತ್ತು ಪ್ರಾಣದ ಚಿನ್ನಾಟ ನಡೆದೇ ಇತ್ತು. 23 ದಿನಗಳ ಚಿಕಿತ್ಸಾ ಹಂತದಲ್ಲಿ ವೈದ್ಯರಿಗೆ ಒಮ್ಮೆಯೂ ದೇಹಕ್ಕಾದ ನೋವಿನ ಸಂಗತಿಯನ್ನು ವ್ಯಕ್ತಪಡಿಸಲಿಲ್ಲ.

ಗುರುಗಳು ಮುಂದಿನ ಚಿಕಿತ್ಸೆಗೆ ಒಪ್ಪಿಗೆ ಕೊಡಲಿಲ್ಲ. ಈ ಶರೀರದ ಕತೆ ಮುಗಿಯಿತು. ಬೆಳಿಗ್ಗೆ ಊರಿಗೆ ಹೊರಡೋಣ ಎಂದರು. ಅವರ ದೇಹದ ನರಳಾಟದಿಂದ ನನ್ನ ಹಾಗೂ ದೇವಾನಂದ ಶರಣರ ಮುಖ ಕಂದಿತು. ಇದನ್ನು ಗಮನಿಸಿದ ಗುರುಗಳು ನಮ್ಮಿಬ್ಬರನ್ನು ಹತ್ತಿರ ಕೂಡಿಸಿಕೊಂಡು ಇಡೀ ರಾತ್ರಿ ಪ್ರವಚನ ಮಾಡಿದರು, ಮಹಾಜ್ಞಾನ ಕಾಯ ಮತ್ತು ಪ್ರಾಣದ ಚಿನ್ನಾಟದ ದರ್ಶನ ಮಾಡಿಸಿದರು.

ಬೆನಕನಹಳ್ಳಿಯಲ್ಲಿ ದೇಹ ಬಿಡುವುದಾಗಿ ಹೇಳಿ ಕರೆದುಕೊಂಡು ಹೋಗಲು ಸೂಚಿಸಿದರು. ದಿನಾಂಕ 23-6-2006 ರಂದು ಬೆನಕನ ಹಳ್ಳಿಗೆ ಹೋದೆವು. ಕೊನೆಗೆ ಮೂರು ದಿನಗಳಲ್ಲಿ ಸಂಜ್ಞೆಯ ಮೂಲಕ ಹೇಳಿ ದಿನಾಂಕ 2-7-2006 ಮಧ್ಯಾಹ್ನ 2.20 ಗಂಟೆಗೆ ದೇಹಬಿಟ್ಟರು.

ಅವರು ಬರೆದ ಶರಣ ಸಾಹಿತ್ಯದಲ್ಲಿ 'ನಾನು ನನ್ನ ಕಂಡ ಕಣ್ಣು', 'ನಿಃಶಬ್ದ ಕೃಪೆ' ಅವರಿರುವಾಗಲೇ ಪ್ರಕಟವಾಗಿದೆ. ಅವರು ಇರುವವರೆಗೂ ತಮ್ಮ ಸಾಹಿತ್ಯ ಪ್ರಕಟಿಸಲು ಮುಂದೆ ಬಂದವರಿಗೆ ಇದನ್ನು ತಮ್ಮ ಹೃದಯದಲ್ಲಿ ಪ್ರಕಟಿಸಿಕೊಳ್ಳಿ, ಪ್ರಕಟಣೆ ಬೇಡ ಎಂದು ಒತ್ತಿ ಹೇಳುತ್ತಿದ್ದರು. ನನ್ನ ಒತ್ತಾಯದ ಮೇರೆಗೆ ಪ್ರಕಟಿಸಲು ಅನುಮತಿ ಕೊಟ್ಟರು. 'ಗಗನ ಸಿದ್ಧಾಂತ ' ' ಗುರುಕನ್ಯ, ' ಡಿ.ಟಿ.ಪಿ.ಮಾಡಿ ತೋರಿಸಿದಾಗ ಅತ್ಯಂತ ಆನಂದ ಪಟ್ಟರು. ಇಷ್ಟು ಸಾಕು. ಬೇಕಾದವರು ಇದರ ಫೋಟೊ ಪ್ರತಿ ಮಾಡಿಕೊಳ್ಳಲಿ ಎಂದು ಹೇಳಿದರು.

ಗಗನ ಸಿದ್ಧಾಂತ 136 ವಚನಗಳ ತಾತ್ಪರ್ಯ ಮೊದಲ ಭಾಗ 6-7-2006 ರಂದು ಮುದ್ರಣಗೊಂಡು ಪ್ರಕಾಶಿಸಲ್ಪಟ್ಟಿತು. ಪ್ರತಿಗಳು ಮುಗಿದು ಹೋದ ನಿಮಿತ್ತ ಪುನಃ ಸಮಗ್ರವಾಗಿ ಗಗನ ಸಿದ್ಧಾಂತವನ್ನು ಪ್ರಕಟಿಸಲಾಯಿತು . ಈ ಗ್ರಂಥ ಭೂಮಿಯೊಳಗಿದ್ದ ನಿಧಿಯಂತೆ ಅಂಜನ

ಹಾಕಿ ಹುಡುಕಬೇಕು. ಸಾಧಕರಿಗೆ ಮಾರ್ಗ ಸುಲಭವಾಗಲಿ ಎಂದು ಹೆಚ್ಚಿನ ವಿವರಣೆಯೊಂದಿಗೆ ಶ್ರೀಸಾಮಾನ್ಯರ ಮನ ಮುಟ್ಟುವಂತೆ ಸದ್ಗುರುಗಳು ವಿವರಿಸಿದ್ದಾರೆ.

ಪೂಜ್ಯ ವಿದ್ಯಾನಂದ ಶರಣರ ಅಪ್ರಕಟಿತ ಸಾಹಿತ್ಯ ಐದು ಸಾವಿರ ಪುಟಗಳನ್ನು ಮೀರಲಿದೆ. ಪತ್ರಿಕೆ ಪ್ರಸಾರದೊಂದಿಗೆ ಅರಿವಿನ ಪ್ರಸಾರ ಮಾಡಲು ಪಣ ತೊಟ್ಟಿರುವ ರಾಯಚೂರು (ಸ್ಪಿಲ್)ಸುದ್ದಿಮೂಲ ಪಬ್ಲಿಷರ್ಸ್ ಇಂಡಿಯಾ ಲಿಮಿಟೆಡ್ ಸಂಸ್ಥೆಯು ಸದ್ಗುರುಗಳ ಇಚ್ಛೆಯಂತೆ ಶ್ರೀ ಬಸವ ಸೇವಾ ಪ್ರತಿಷ್ಠಾನ ಪ್ರಕಾಶನದ ಮೂಲಕ ಸಕಲರೂ ಸ್ವರೂಪ ಜ್ಞಾನಿಗಳಾಗಬೇಕೆನ್ನುವ ಆಶಯದೊಂದಿಗೆ '**ಅಕಾಯ ಭಕ್ತ**' ಪುಸ್ತಕದಲ್ಲಿ ಪ್ರಕಾಶಿಸಿದೆ.

ಪ್ರಯತ್ನ ನಮ್ಮದು, ಅಂತಿಮ ಇಚ್ಛೆ ಓದುಗರದು; ಸಕಲ ತನುಗಳಲ್ಲಿಯೇ ತನ್ಮಯವಾದ ಅರಿವೆಂಬ ಗುರುದೇವನದು.

ಬಸವರಾಜ ಸ್ವಾಮಿ
ಸಂಪಾದಕ, ರಾಯಚೂರು
ಜೂನ್ 13 , 2023

ವಚನ - 1

ನಂಬರು ನಚ್ಚರು ಬರಿದೆ ಕರೆವರು,
ನಂಬಲರಿಯರೀ ಲೋಕದ ಮನುಜರು !
ನಂಬಿ ಕರೆದಡೆ, ಓ ಎನ್ನನೆ ಶಿವನು ?
ನಂಬದೆ ನಚ್ಚದೆ ಬರಿದೆ ಕರೆವರ
ಕೊಂಬ ಮೆಟ್ಟಿ ಕೂಗೆಂದ ಕೂಡಲಸಂಗಮದೇವಾ !

ತಾತ್ಪರ್ಯ: ನಂಬರು ? ಆರು ನಂಬರು ? ಆರು ನಚ್ಚರು ? ಆರು ಬರಿದೆ ಕರೆವರು ? ಶಿವೋಪಾಸಕರೇ ಆಗಲೀ, ಶಕ್ತಿಉಪಾಸಕರೇ ಆಗಲಿ, ಸಾಕಾರ ನಿರಾಕಾರ ಉಪಾಸಕರೇ ಆಗಲಿ ಇವರುಗಳು ಮಾಯಿಕ ದೇವನ ನಂಬಿದರಲ್ಲದೆ, ನಿಜವಾದುದ ನಂಬಲಿಲ್ಲ.

ಕಣ್ಣಪ್ಪ ಕಣ್ಣನ್ನೇ ಶಿವನಿಗೆ ಅರ್ಪಿಸಿದನು. ತಾನರ್ಪಿಸಿದ ದೇವನು ಮಾಯಿಕನೋ ಅಥವಾ ನಿರ್ಮಾಯನೋ ಎಂದು ತಿಳಿದು ಕಣ್ಣನ್ನು ಅರ್ಪಿಸಿದನೋ? ಮಾಯಿಕ ಶಿವ ತೋರಿ ಇಲ್ಲವಾಗುವ ಶಿವನ ನಂಬಿದ. ಶಿವ ಭಕ್ತರಿಗೆ ಬೇಡಿದ ಪದವಿಗಳ ಕೊಟ್ಟರೂ ತಾನಾರೆಂದರಿತನೇ, ದೇವನಾರು ಎಂದು ಕಣ್ಣಪ್ಪ ತಿಳಿದನೆ ? ಇದ ಕಂಡು ಬಸವರಸರು ನಂಬರು ನಚ್ಚರು ಎಂದು ಎಚ್ಚರಿಸಿದರು.

ನಂಬಿದವರು ಯಾರು? ನಿಜವಾದ ದೇವನ ನಂಬದವ ನಾಮದೇವ . ನಂಬಿದವರು ಯಾರು ? ನಿಜವಾದ ದೇವನ ನಂಬಿದವರು ಜ್ಞಾನದೇವ ! ಮಾಯಿಕ ದೇವನ ನಂಬಲಿಲ್ಲ . ಕಾಣುವ ದೇವ ಗುರುದೇವನ ನಂಬಿ ಗುರುಲಿಂಗವಾದ. ಜ್ಞಾನದೇವ ನಿವೃತ್ತಿನಾಥನೆಂಬ ಗುರುಘನನ ನಂಬಿದ, ಸಾಕ್ಷಾತ್ ಪರಶಿವನಿಗಿಂತ ಗುರುದೇವ ವಿಶೇಷವೆಂದು ನಂಬಿದ. ಆತನ ಹೃದಯದಿಂದ ಹೊರಬರುವ ಮಾತು ಮಾತಲ್ಲ , ಅವು ಮಹಾವಾಕ್ಯಗಳು, ಅವು ಜ್ಯೋತಿರ್ಲಿಂಗ. ನುಡಿದು ನಿಶ್ಯಬ್ದನಾಗಿಹ ಬ್ರಹ್ಮ, ನಡೆದು ನಿರ್ಗಮನಿಯಾಗಿಹ ಅಚಲಿತಲಿಂಗ ಎಂದು ನಂಬಿದ.

ಇತ್ತ ಬಸವಣ್ಣನವರು ಗುರುಲಿಂಗವ ನಂಬಿದ ನಚ್ಚಿದ. ಲಿಂಗ ಒಂದಾಗಿರ್ದ ಜಂಗಮವೆಂದು ಕರೆದ. ನಿರ್ದೇಹಿ ಜಂಗಮಲಿಂಗವೆಂದು ಕರೆದ. ನಿಜೈಕ್ಯ ಜಂಗಮನೆಂದು ಕರೆದ. ಅದಕ್ಕಾಗಿ ನಂಬಿ ಕರೆದಡೆ ಓ ಎನ್ನನೇ ಶಿವನು ಎಂದು ಹೇಳಿದ. ಶಿವನನ್ನು ಕರೆಯುವ ಸಮರ್ಥ ಶಕ್ತಿ ತಂದು ಕೊಟ್ಟಾತ ಬಸವರಸ.

'ಶಿವ ಗುರುವೆಂದು ಬಲ್ಲಾತನೆ ಗುರು. ಶಿವ ಲಿಂಗವೆಂದು ಬಲ್ಲಾತನೆ ಗುರು. ಶಿವ ಜಂಗಮವೆಂದು ಬಲ್ಲಾತನೆ ಗುರು. ಶಿವ ಶಿವಾಚರವೆಂದು ಬಲ್ಲಾತನೆ ಗುರು. ಶಿವ ಪ್ರಸಾದವೆಂದು ಬಲ್ಲಾತನೇ ಗುರು. ಇಂತಿ ಪಂಚವಿಧ ಪರಬ್ರಹ್ಮವೆಂದು ಅರಿದ ಮಹಾಮಹಿಮ ಸಂಗನ ಬಸವಣ್ಣ ಎನಗೆಯೂ ಗುರು, ನಿನಗೆಯೂ ಗುರು, ಜಗಕ್ಕೆ ಗುರು ಕಾಣಾ ಗುಹೇಶ್ವರ ' ಬಸವರಸರು ಅಖಂಡ ಜ್ಞಾನ ಸೀಮಾತೀತ ನಿಲುವುಳ್ಳ ಮಹಾಂತ, ಜಗಕ್ಕೆಲ್ಲ ಗುರು ಎಂದು ಪ್ರಭು ಕೊಂಡಾಡಿದುದು ನೋಡುವುಡೆ, ಜಗಕ್ಕೆಲ್ಲ ಗುರು, ಲಿಂಗ, ಜಂಗಮವ ನಂಬುವದು ಕಲಿಸಿದ, ಮೆಚ್ಚುವದು ಕಲಿಸಿದ, ಕರೆಯುವದು ಕಲಿಸಿದ, ಮೂರೊಂದಾ

ದುದು ತಿಳಿಸಿದ.

ಈ ಪಂಚ ವಿಧದಿಂದ ಶಿವನ ದರ್ಶನವಾಗುವುಡೆ, ನಿಜವಾದ ಶಿವನ ದರ್ಶನ ಅರಿಯದೆ ಕಣ್ಣು ಕಳಕೊಂಡರೇನು? ಮಗುವ ಕೊಂದು ಉಣಬಡಿಸಿದರೇನು? ನಾನಾ ರೂಪದಲ್ಲಿ ತನುವ ದಂಡಿಸಿದರೇನು? ತನು, ಮನ, ಅರ್ಪಿತ ಮಾಡಿದರೇನು? ಅರ್ಪಿತ ಮಾಡಿದವ ತಾನಾರು ಕಣ್ಣ ಕಳಕೊಂಡವ ತಾನಾರು? ಅರ್ಪಿಸಿಕೊಂಡವನಾರು? ತಾನಾರು ಎಂದು ತನ್ನ ಅರಿತನೆ? ಅರ್ಪಿಸಿಕೊಂಡ ಶಿವನನ್ನು ಅರಿತನೇ, ಅರಿಯದೆ ನಂಬಿದ ನಂಬುಗೆ ನಿಜವಾದ ನಂಬಿಗೆಯೇ? ಆಗದು. ತಾನಾರು ತನ್ನ ತಿಳಿಯದೆ ಕಣ್ಣು ಕಳೆದುಕೊಂಡರೆ ಶಿವ ನೊಲಿಯುವನೆ? ಶಿವ ಗುರುವಾಗಿ ಬಂದು ನೀನಾರು ಎಂದು ನಿನ್ನ ನಿಜದಿರುವು ತೋರಿ ದನೆ? ಇಲ್ಲವೆಂದಲ್ಲಿ ಇವೆಲ್ಲವು ಅವಿಚಾರ ಕಾಲದಲ್ಲಿ ಮಾಡಿದುದು ಎಂದು ತಿಳಿಯುವುದು. ಅರ್ಪಿತದ ರಹಸ್ಯ ತಿಳಿಸಿದಾತ ಬಸವಣ್ಣ.

'ತನು ಗುರುವಿಂಗೆ ಕೊಟ್ಟು ತನು ಬಯಲಾಯಿತ್ತು. ಮನ ಲಿಂಗಕ್ಕೆ ಕೊಟ್ಟು ಮನ ಬಯಲಾಯಿತ್ತು. ಧನ ಜಂಗಮಕ್ಕೆ ಕೊಟ್ಟು ಧನ ಬಯಲಾಯಿತ್ತು. ಇಂತಿ ತ್ರಿವಿಧವ ಕೊಟ್ಟು ಬಸವಣ್ಣಂಗೆ ಬಯಲ ಸಮಾಧಿಯಾಯಿತ್ತು.' ತನುವೆಂಬ ಭ್ರಾಂತಿಯ ಸುಜ್ಞಾನನೆಂಬ ಗುರುವಿಂಗೆ ಕೊಟ್ಟು ಭ್ರಾಂತಿ ನಷ್ಟವಾಯಿತ್ತು. ಮನವೆಂಬ ಕಲ್ಪಿತವ ಕಲ್ಪನಾರಹಿತವೆಂಬ ಲಿಂಗಕ್ಕೆ ಕೊಟ್ಟು ಮನರೂಪಿ ಕಲ್ಪಿತ ನಷ್ಟವಾಯಿತು. ಧನವೆಂಬ ಭಾವ ಭಾವಕ್ಕಗಮ್ಯವಾಗಿಹ ನಿಜ ಚೈತನ್ಯಕ್ಕೆ ಕೊಟ್ಟು ಭಾವ ನಷ್ಟವಾಯಿತ್ತು. ತ್ರಿವಿಧವ ತ್ರಿವಿಧಕ್ಕೆ ಕೊಟ್ಟು ನಿರಂತರವಾಗಿಹ ನಿಜದಲ್ಲಿ ಲೀಯವಾದನಯ್ಯ ಬಸವಣ್ಣ. ಇದು ಭಕ್ತನಾದ ಹಿರಿಮೆ, ತಾನಾರೆಂದರಿಯದೆ ಏನು ಮಾಡಿದರೂ ನಿರರ್ಥಕ. ಇದು ಕಾರಣ ಇವರು ನಂಬುಗೆವಂತರಲ್ಲ, ಭಕ್ತರಲ್ಲ, ಮುಕ್ತರಲ್ಲ. ಇವರು ಕೊಂಬ ಮೆಟ್ಟಿ ಕೂಗಿದರೂ ಫಲವಿಲ್ಲ, ಪದವಿಲ್ಲ, ಭವ ವಿರಹಿತ ರಾಗ ಲಿಲ್ಲವೆಂದು ಚೆನ್ನಬಸವರಾಜದೇವರು ಭಕ್ತರಾರು ಎನ್ನುವ ಭಕ್ತಿ ಸ್ಥಲದ ಘನವನ್ನು ಮುಂದಿನ ವಚನದಲ್ಲಿ ಬಿತ್ತರಿಸಿದ್ದಾರೆ.

ವಚನ – 2

ಭಕ್ತರಾದೆವೆಂದು ಯುಕ್ತಿಗೆಟ್ಟು ನುಡಿವರು; ಭಕ್ತಿ ಜನ್ಮವೆಲ್ಲರಿಗೆಲ್ಲಿಯದೊ ?
ಗುರುವಿನಲ್ಲಿ ತನುವಂಚನೆ, ಲಿಂಗದಲ್ಲಿ ಮನವಂಚನೆ,
ಜಂಗಮದಲ್ಲಿ ಧನವಂಚನೆವುಳ್ಳನ್ನಕ್ಕ ಭಕ್ತನೆ ?
ಗುರುವಿನಲ್ಲಿ ಚಾರಿತ್ರ್ಯವ ಲಿಂಗದಲ್ಲಿ ಲಕ್ಷಣವ,
ಜಂಗಮದಲ್ಲಿ ಜಾತಿಯನರಸುವನ್ನಕ್ಕ ಭಕ್ತನೆ ? ಅಲ್ಲ, ಅವನು ದೋಷಾರ್ಥಿ
''ಭಕ್ತಶ್ಚ ಪ್ರತಿಪಕ್ಷಶ್ಚ ಸದಾಚಾರೇಣ ವರ್ಜಿತಃ
ಗುರುಲಿಂಗ ಜಂಗಮ ದ್ವೇಷೀ ಯೋ ನರಸ್ಸದುರಾತ್ಮಕಃ''
ಇದು ಕಾರಣ ಕೂಡಲಚೆನ್ನಸಂಗಮದೇವಾ
ಭಕ್ತಜನ್ಮವೆಲ್ಲರಿಗೆಲ್ಲಿಯದು ?

ತಾತ್ಪರ್ಯ : ಭಕ್ತರಾದೆವೆಂದು ಯುಕ್ತಿಗೆಟ್ಟು ನುಡಿವರು ; ಭಕ್ತಿ ಸ್ಥಲವೆಲ್ಲರಿಗೆಲ್ಲಿ

ಯದೋ ?; ಗುರುವಿನಲ್ಲಿ ತನು ವಂಚನೆ, ಲಿಂಗದಲ್ಲಿ ಮನ ವಂಚನೆ, ಜಂಗಮದಲ್ಲಿ ಧನ ವಂಚನೆ ವುಳ್ಳನ್ನಕ್ಕರ ಭಕ್ತನೆ ? : ಭಕ್ತ ಆರು ಗೊತ್ತೇ ? ಭ ಕಾರಂ ಪರಮಜ್ಞಾನಂ, ಕ್ತ ಕಾರಂ: ತತ್ವರೂಪಂ, ಈ ಜ್ಞಾನ ಜ್ಞೇಯಗಳ ಸಮರಸವೇ ಭಕ್ತಿ.

ಭ ಕಾರಂ ಪರಮ ಜ್ಞಾನಂ ತ ಕಾರಂ ತತ್ವ ರೂಪಂ, ತತ್ವ ಜ್ಞಾನ ದ್ವಯೋರೈಕ್ಯಂ ಭಕ್ತಿ ಶಬ್ದೋಭಿದೀಯತೆ. ಭಕಾರವೆ ಪರಮಜ್ಞಾನವಾದ ಚಿತ್ ಕ್ತಕಾರವೆ ಪರಶಿವ ತತ್ವ. ಈ ಜ್ಞಾನ ಜ್ಞೇಯಗಳ ಸಮರಸವೇ ಭಕ್ತಿ.

ಓ ಭಕ್ತರಾದೆವೆಂದು ಹೇಳಿಕೊಳ್ಳುವ ಅಣ್ಣಯ್ಯಗಳಿರಾ ಗುರು, ಲಿಂಗದಲ್ಲಿ ನೀವು ಸಮರಸವಾದಿರಾ ? ಗುರು ತತ್ವ, ನೀವು ಒಂದಾದಿರಾ ? ಗುರು, ಲಿಂಗ, ಜಂಗಮ ಭಕ್ತ ರೆಂಬ ಭೇದ ಜ್ಞಾನ ನಷ್ಟವಾಗಿ ಸಮನಿಲಯವು ನಿಮ್ಮದಾಯಿತೇ ? ಚಿಂತನ ಕೆಟ್ಟು ನಿಶ್ಚಿಂತ್ಯ ನಿಲುವು ನಿಮ್ಮದಾಯಿತೇ ? ವಿಷಮದೃಷ್ಟಿ ಹೋಗಿ ಸಮದೃಷ್ಟಿ ಸಮಸುಖ ಸುಖದ ಸುಖ ನಿಮ್ಮದಾಯಿತೇ ? ಆಗದಿದ್ದಲ್ಲಿ ಇದೇತರ ಭಕ್ತಿ ಇದೇತರ ಯುಕ್ತಿ ?

ಗುರುವಿನಲ್ಲಿ ತನು ವಂಚನೆ, ಲಿಂಗದಲ್ಲಿ ಮನ ವಂಚನೆ, ಧನದಲ್ಲಿ ಜಂಗಮ ವಂಚ ನೆ ಮಾಡಿದುದರಿಂದ ಸಮತೆ ಸಯವಾಗಿಹ ತನ್ನಿರುವು ತನಗೆ ವೇದ್ಯವಾಗಿರುವುದಿಲ್ಲ. ಇದು ಕಾರಣ ಸಮಸುಖ, ಸ್ವರೂಪದ ಸುಖ ,ಸುಖದ ಸುಖ ಅಲ್ಲಿ ಇಲ್ಲ.

ಭಕ್ತನಾದವನು ಗುರುವಿನಲ್ಲಿ ಚಾರಿತ್ರ್ಯವ, ಲಿಂಗದಲ್ಲಿ ಲಕ್ಷಣವ ಹಾಗೂ ಸ್ಥಲ ಸಂಪಾ ದನೆ, ಜಂಗಮದಲ್ಲಿ ಜಾತಿ ಅರಸುವನ್ನಕ್ಕ ಭಕ್ತನೇ ಅಲ್ಲ; ದೋಷಾರ್ಥಿ. ಗುರು; ಬೆಳಗುವ ಜ್ಯೋತಿ ಜ್ಞಾನ ಜ್ಯೋತಿ. ಅಜ್ಞಾನ ಕಳೆಯುವ ಭಾಸ್ಕರ ಪ್ರಕಾಶದ ಮುಂದೆ ಕತ್ತಲೆ ಉಳಿಯಬ ಹುದೇ ?

ಚಿಜ್ಯೋತಿ ಅದರ ಮುಂದೆ ತನು ಭಾವ ಉಳಿಯಬಹುದೇ ? ಭಕ್ತನಾದವನು ಜ್ಞಾನ ಜ್ಯೋತಿಯ ಅರಿಯ ಹೋಗಲಿಲ್ಲ, ಇದು ಕಾರಣ ಭಕ್ತನ ತನು ಚಿಜ್ಯೋತಿಯಾಗಲಿಲ್ಲ, ಮನ ಲಿಂಗವರಿಯ ಹೋಗಲಿಲ್ಲ, ಅದು ತನ್ನ ಸಂಕಲ್ಪ ವಿಕಲ್ಪವಾಗಿಹ ಪೂರ್ವ ಸ್ವಭಾವ ಬಿಡ
ಲಿ ಲ ್ಲ .
ಭಕ್ತ ಭಾವಕ್ಕಗಮ್ಯವಾಗಿಹ ಜಂಗಮದರಿವು ಅರಿಯ ಹೋಗಲಿಲ್ಲ, ಧನವು ಭಾವಕ್ಕಗ ಮ್ಯವಾಗಿ ಪ್ರಜ್ವಲಿಸಲಿಲ್ಲ. ಕಾರಣ ಭಕ್ತರಾಗಲರಿಯರು.

ಭಕ್ತರಾದವರು ಗುರುವಿನಲ್ಲಿ ಚಾರಿತ್ರ್ಯಯವ ಕಾಣಬೇಕೆ ? ಲಿಂಗದಲ್ಲಿ ಸ್ಥಲ ಸಂಪಾದನೆ ಮಾಡಬೇಎ ? ಜಂಗಮದಲ್ಲಿ ಜಾತಿ ಅರಸಬೇಕೆ ? ಇದು ದೋಷವುಳ್ಳ ವರ್ತನೆ, ಇದು ಭಕ್ತಿಸ್ಥಲವಾಗದು.

ಭಕ್ತರಾದವರು ಗುರುವ ಹೊರಗೆ ಮಾಣಬೇಕೆ ? ಗುರುವಿನ ಗುರು ; ತನ್ನಂತರಂಗದ ಲ್ಲಿ ಗುರು ಕಂಡಿದ್ದರೆ ಗುರುವಿನ ವಾರಿತ್ರ್ಯ ಕಾಣುತ್ತಿದ್ದಿಲ್ಲ. ಗುರು ಅರಿಯಲಿಲ್ಲಿದ ಅರುವನರುಹಿಸಿ ಗುರು ಅಗಣಿತ. ಅಪರಿಮಿತ ,ಅಗಣಿತ ಗಣನೆಗೆ ಒಳಪಡಿಸಿ ನೋಡಿದುದೆ ದೋಷ; ಅಪರಿಮಿತನ ಪರಿಮಿತ ಮಾಡಿ ನೋಡಿದುದೆ ದೋಷ. ಅರಿಯಲಿಲ್ಲದ ಅರುವ ಅರಿಹಿಸಿಕೊಂಬ ಅರಿವ ಮಾಯಿಕ ನನ್ನಾಗಿ ಕಂಡುದೆ ದೋಷ. ಏನೆಂದೆನ್ನದ ಮುನ್ನ ತಾನೆ ಆದ ಮಹಾ ಘನವ ಒಪಮೆಗೆ ಪಳಪಡಿಸಿ ಕಂಡುದೆ ದೋಷ. ಭಕ್ತರಾದವರು ಗುರು

ಘನವ ಅರಿಯುವ ಅರುಹಿಸಿಕೊಂಬುದನ್ನಾಗಿ ಕಂಡುದೆ ಗುರುವಿನಲ್ಲಿ ದೋಷವ ಕಂಡುದಾಗಿದೆ. ಅರಿಯಬಾರದ ಘನವದು ಗುರು. ಇಂತಪ್ಪ ಗುರುಘನ ತನಗೆ ಬೇರಾಗಿ ಕಂಡುದೆ ಗುರುವಿನಲ್ಲಿ ಚಾರುತ್ರ್ಯ ಕಂಡುದಾಗಿದೆ.

ಲಿಂಗದಲ್ಲಿ ಸ್ಥಲ ಸಂಪಾದನೆಯ ಮಾಡುವುದು ಭಕ್ತನಿಗೆ ವಿರೋಧವು. ಲಿಂಗವದು ತುದಿ ಮೊದಲಿಲ್ಲದ; ಓಲ ಹೊರಗೆನ್ನದ ಭರಿತವು. ಇಂತಪ್ಪ ತೆರಹಿಲ್ಲದ ಲಿಂಗಭರಿತ ಜ್ಞಾನವಾಗದ್ದರಿಂದ ಲಿಂಗದಲ್ಲಿ ಲಕ್ಷಣವಕಂಡು ದೋಷಾಥಿಯಾದ.

ಜಂಗಮದಲ್ಲಿ ಜಾತಿ ಹುಡುಕಿ ಭಕ್ತ ದೋಷಾರ್ಥಿಯಾದ ಲಿಂಗ ಒಂದಾಗಿರ್ದ ಜಂಗಮ ಜಂಗಮೊಂದಾಗಿರ್ದವನು ಲಿಂಗ ಉಪಮೆಗೆ ತಂದು ' ಎರಡೆನ್ನಬಹುದೆ ? ಶುದ್ಧ ಶಿವೈಕ್ಯನು ಕೂಡಲಸಂಗಮದೇವಾ''ನಿರೂಪ ಜಂಗಮ. ನಿರಾಲಂಬ ಜಂಗಮ ನಿರುಪಮನಾದುದರಿಂದ ಅರುವ ಅರುಹಿಸಿ ಹುಡುಕುವವರಾಗಿಹರು. ನಾಮವ ಕಂಡರು, ಉಪಾದಿಯ ಕಂಡರು,ಆವುದೆ ಆಲಂಬನ ಅವನಲ್ಲಿ ಕಂಡು ಜಾತಿ ಹುಡುಕಿದರು. ಜಂಗಮ ಒಂದಾಗಿರ್ದ ಲಿಗವಾಗಿರುವಲ್ಲಿ ಅವನಿಗಾವ ನಾಮರೂಪ ? ಅವನಿಗಾವ ಕುಲಗೋತ್ರ ? ಅಕುಲನು ಕುಲವ ಕಾಣಬಹುದೆ ? ನಿಸ್ಸಿಮನು ಸೀಮಿತನಾಗಬಹುದೆ ?

ಗುರು ಭಕ್ತರಾದಲ್ಲಿ ತಮ್ಮ ತನು ನಿರುಪಮ ತನುವಾಗಬೇಕು. ಲಿಂಗ ಭಕ್ತರಾದಲ್ಲಿ ಮನ ಅಕಲ್ಪಿತ ಘನವಾಗಬೇಕು. ಜಂಗಮ ಭಕ್ತರಾದಲ್ಲಿ ಭಾವಕ್ಕಮ್ಯವಾಗಿಹ ಸ್ವಯ ಸುಖದ ಸುಖಿಯಾಗುವುದು.

ಸದ್ಯದ ಸಮಾಜ ತನ್ನಂತರಂಗದಲ್ಲಿ ಗುರು, ಲಿಂಗ, ಜಂಗಮದ ಗನತ್ವ ತಿಳಿಯದ್ದರಿಂದ ತನು ವಂಚನೆ, ಮನವಂಚನೆ, ಧನ ವಂಚನೆಯುಳ್ಳದ್ದಾಗಿ ನಿಜದಿರುವ ತಿಳಿಯದಂತಾಗಿದೆ. ಇದು ಕಾರಣ ದೋಷ ದೃಷ್ಟಿಯುಳ್ಳದ್ದಾಗಿ ಗುರು ಘನಚಾರಿತ್ರ್ಯವ ಪುರುಷನಾಗಿ ಕಂಡ ಲಿಂಗ ಗೋಳಾಕಾರವಾಗಿ ಕಂಡ . ಜಂಗಮದಲ್ಲಿ ಜಾತಿಯ ಕಂಡ. ಗುರುವಿನ ತನುವಿನ ತನುವಾದಲ್ಲಿ ಅದು ಗುರುಲಿಂದುದಯವಾಗಿಹ ತನು. ಅರಿಲಿಲ್ಲದ ಅರುವ ಹೋದ ತನು. ಅದು ಚೈತನ್ಯ ತನು. ಸಚ್ಚಿದಾನಂದ ತನು. ಮರವರುವೆಂಬುದಕ್ಕೂ ಎಡೆಗೊಡದೆ ಬೆಳಗಿಂಗೆ ಘನ. ಲಿಂಗದ ಮನವಾದಲ್ಲಿ ನೆನಹು ನಿರ್ಣಯ, ಮುಕ್ತಾಯವಾದ ನಿಲುವು ಅಚಿಂತ್ಯ ನಿಲುವು. ಮನವು ತನ್ನ ನಿಜದಿರುವ ಕಡ ಸ್ವಯ ಜ್ಯೋತಿ ವರ್ಣಾತೀತವಾಗಿಹ ಘನವು. ಜಂಗಮದ ಧನವಾದಲ್ಲಿ ತನ್ನದೆನ್ನಲಿಲ್ಲ, ಕೊಟ್ಟುದಿಲ್ಲ, ಕೊಂಡುದಿಲ್ಲ, ಕೊಟ್ಟೆನೆಂಬುದಿಲ್ಲ, ಕೊಂಡೆನೆಂಬುದಿಲ್ಲ, ತನು, ಮನ, ಧನವೆಂಬಿವು ಗುರು, ಲಿಂಗ, ಜಂಗಮದೊಡವೆ ಎಂಬುವುದು ಅರಿವಾದಲ್ಲಿ ಅಲ್ಲಿ ವಂಚನೆ ಬರದು. ಕಪಟ, ಮೋಸ ಬರದು. ನಿಭ್ರಾಂತಿ ನಿಜವು.

ಅರಿವಿಂಗರುವಾಗಿಹ ತನುವಾಗದೆ ಮರವರುವಿನ ತನುವಾದದ್ದೇ ಮೋಸ. ತನುವಿನ ತನುವಾಗದೆ ಭ್ರಾಂತಿ ತನು ಕಂಡುದೆ ದೋಷ. ದೇಹ ಬುದ್ಧಿಯಿಂದುಕ್ತವಾದುದೆ ಮೋಸದ ತನು. ಲಿಂಗಾಂಗ ಸಾಮರಸ್ಯ ಮನವಾಗದೆ ಸಂಕಲ್ಪ, ವಿಕಲ್ಪಕ್ಕವಕಾಶಕೊಟ್ಟುದೆ ಮೋಸದ ಮನವೆಂದು ಹೇಳಿಹರು.

ಅಕಲ್ಪಿತದರುವುಳ್ಳದ್ದಾಗದೆ ಕಲ್ಪಿತ ಮನವಾದುದೆ ಮೋಸ. ಅಚಿಂತ್ಯ ಪದವುಳ್ಳದ್ದಾಗದೆ

ಚಿಂತನ ಕೊಳ್ಳಪಟ್ಟುದೇ ಮೋಸ. ನಿರಾಲಂಬ ದರುವುಳ್ಳದ್ದಾಗದೆ ಮರವರುವಿನ ಅವಲಂಬನ ಮನವಾದುದೆ ಮೋಸ.

ನಿರಾಭಾರಿ ಜಂಗಮ, ನಿರಾಲಂಬ ಜಂಗಮ, ನಿಜೈಕ್ಯ ಜಂಗಮ ತತ್ವಕ್ಕಾಗಿ ಸಲ್ಲಿದ ಧನವೇ ನಿಜವಾದ ಧನ. ಆಧ್ಯಾತ್ಮ ತತ್ವಕ್ಕಾಗಿ ಭಕ್ತಿ, ಜ್ಞಾನ, ವೈರಾಗ್ಯಕ್ಕಾಗಿ ಸರ್ವಾರ್ಪಿತ ಮಾಡುವ ಧನವದು ನಿಜವಾದ ಧನ. ಇದು ಭಕ್ತನ ಭಕ್ತಿಯ ಲಕ್ಷಣ. ಸತಿಯು ಪತಿಯಲ್ಲಿ ವಂಚನೆ ಮಾಡಿದವಳು ಸತಿಯೇ ? ಸತಿ ಯಾರು ? ಚೂಡಾಲಾ, ಅಕ್ಕಮಹಾದೇವಿ, ಅಕ್ಕ ನಾಗಲಾಂಬಿಕೆ, ಸತ್ಯಕ್ಕ, ಲಿಂಗಮ್ಮ, ಅಮುಗೆಯ ರಾಯಮ್ಮ ಮೊದಲಾದವರು ಲಿಂಗಾಂಗ ಸಾಮರಸ್ಯ ಸುಧೆ ಸವಿದವರೆಲ್ಲ ಸತಿಯರು. ಇಂತಪ್ಪ ಸುಜ್ಞಾನ ಮತಿಯುಳ್ಳವರು ಭಕ್ತರೆ ನಿಸಿಕೊಂಡಿಹರು.

ಒಚ್ಚೊಚ್ಚಿ ಭಕ್ತರು, ಒಚ್ಚೊಚ್ಚಿ ಭವಿಗಳು. ಭಕ್ತರಾದಲ್ಲಿ ಅಹಂಕಾರ ನಷ್ಟವಾಗದೆ ತೆರಹಿ ಲ್ಲದಭವ ನುಡಿಗೆಡೆಗೊಡನೆಂಬ ಮಹಾ ಘನವ ಕಾಣದೆ ಒಮ್ಮೆ ನಿರಹಂಭಾವಿಗಳು, ಒಮ್ಮೆ ಅಹಂಕಾರಿಗಳು, ಒಮ್ಮೆ ಅರ್ಪಿತ ಮಾಡಿದವರು ಮತ್ತೊಮ್ಮೆ ಅರ್ಪಿತ ಮಾಡದವರು. ಹೀಗಾಗಿ ಗುರುವನ್ನು ಗುಣವಂತರಾಗಿ ಕಂಡರು. ಲಿಂಗ ಲಕ್ಷಣದಿಂದುಕ್ತವಾಗಿ ಕಂಡರು. ಜಂಗಮದಲ್ಲಿ ಜಾತಿ ಕಂಡರು. ಹೀಗಾಗಿ ಪರಮ ಪುರುಷಾರ್ಥದಿರುವ ನೋಡುವ ಭಾಗ್ಯ ವಂತರಾಗದೇ ಪ್ರತಿಪಕ್ಷದವರಾದರು. ದೋಷವರ್ತಿಗಳಾದರು. ಸದಾಚಾರದಿಂದ ದೂರಾಗಿ ದುರಾತ್ಮರೆನಿಸಿಕೊಂಡು ಭಕ್ತಿ ಸ್ಥಲಕ್ಕೆ ದೂರಾದರು.

ವಚನ - 3

ದೇವಲೋಕ ಮರ್ತ್ಯಲೋಕವೆಂಬುದು ಬೇರೆ ಮತ್ತುಂಟೆ ?
ಈ ಲೋಕದೊಳಗೆ ಮತ್ತೆ ಅನಂತಲೋಕ !
ಶಿವಲೋಕ ಶಿವಾಚಾರಯ್ಯಾ.
ಶಿವಲೋಕನಿದ್ದ ಠಾವೆ ದೇವಲೋಕ,
ಭಕ್ತನಂಗಳವೆ ವಾರಣಾಸಿ; ಕಾಯವೆ ಕೈಲಾಸ !
ಇದು ಸತ್ಯ, ಕೂಡಲಸಂಗಮದೇವಾ.

ತಾತ್ಪರ್ಯ : ದೇವಲೋಕ ಮರ್ತ್ಯಲೋಕವೆಂಬುದು ಬೇರೆ ಮತ್ತುಂಟೆ ? : ಶಿವ ಪಥವರಿತವರ ದೃಷ್ಟಿ ಇದು, ಇಹಪರವೆಂದು ವಿಭಾಗ ಮಾಡಲಿಲ್ಲ, ಈ ಲೋಕ ಶಿವಮಯ, ಚಿನ್ಮಯ, ಸತ್ಯ ಜ್ಞಾನಾನಂದಮಯ. ಇದರಲ್ಲಿಯೇ ಮತ್ತನಂತಲೋಕ. ಗುಣಾತೀತದೋಳ್ ಸಗುಣವೆಂದು ನಿರ್ಗುಣವೆಂದು ವಿಭಾಗ ಮಾಡಿ ನೋಡುವಡೆ, ಅವರವರ ಗುಣ ಕರ್ಮಗ ಳಿಗನುಸಾರವಾಗಿ ಲೋಕಂಗಳು ನಿರ್ಮಾಣವಾಗಿ ಕಂಡುಬರುವವು. ಇದು ಮರುವುಳ್ಳವರಿಗೆ ಮರ್ತ್ಯಲೋಕವಾಗಿ, ಅರುವಿನ ಭಾವವುಳ್ಳವರಿಗೆ ದೇವಲೋಕವಾಗಿ, ತಮ್ಮ ತಾವರಿತವರಿಗೆ ಶಿವಲೋಕವಾಗಿದೆ.

ಅರಿತವರ ಆಚಾರ ಶಿವಾಚಾರ. ಶಿವಭಕ್ತರಿದ್ದ ಠಾವೇ ದೇವಲೋಕ, ಭಕ್ತರಂಗಣವೇ ವಾರಣಾಸಿ, ಕಾಯವೇ ಕೈಲಾಸ. ಇದು ಸತ್ಯ ಕೂಡಲಸಂಗಮದೇವಾ:

ಶಿವಾಚಾರವದು ಶಿವಲೋಕ. ಶಿವ ಅನಂತ, ಅಪಾರ, ಒಳಹೊರಗೆನ್ನದೇ ಭರಿತವಾದುದು ಶಿವ. ಭರಿತ ದೃಷ್ಟಿ ಭರಿತ ಭಾವ, ಭರಿತ ಜ್ಞಾನವಾಗಿ ಅಖಂಡಾನಂದ ಮಯನಾಗಿಹುದೇ ಶಿವಾಚಾರ. ಅಖಂಡ ದೃಷ್ಟಿ , ಅಖಂಡ ಭಾವ, ಅಖಂಡ ಜ್ಞಾನಿಯಾಗಿಹುದೇ ಶಿವಾಚಾರ. ಇದು ಖಂಡ ದೃಷ್ಟಿ ಖಂಡ ಭಾವ ನಷ್ಟವಾಗಿ ಅರಿಯ ಬಾರದ ಘನವರಿತು ಅರಿಯದಂತಿದ್ದುದು ಶಿವಲೋಕ. ಈ ಶಿವಲೋಕವೇ ಶಿವಾಚಾರವಯ್ಯ ಎಂದು ಹೇಳಿಹರು.

ಶಿವಭಕ್ತರಿದ್ದ ಠಾವೇ ದೇವಲೋಕ. ಅವರಂಗಣವೇ ವಾರಣಾಸಿ. ಅವರ ಕಾಯವೇ ಕೈಲಾಸ: ಶಿವಾಚಾರವೆಂಬುದು ಲಿಂಗಾಂಗ ಸಮರಸ ಜ್ಞಾನಿಗಳ ಆಚಾರ . ಅರುವಿನ ಆಚಾರ . ಇದು ಶಿವಮಯ ಇರುವಲ್ಲಿ ವ್ಯಾಪ್ಯ ತಾನೆ. ವ್ಯಾಪಕ ತಾನೇ. ತನ್ನಿಂದ ಬೇರೆಯಾಗದ ಶಿವನನ್ನು ಭೇಧಾಭೇದ ಹೇಗೆ ಮಾಡುವುದು?

ಅಂಗ ಲಿಂಗ, ಲಿಂಗ ಅಂಗವೆಂದರಿತಲ್ಲಿ ಅಲ್ಲಿಯೇ ಲಿಂಗ ನಿರಂತರ ಕೂಡಲ ಚೆನ್ನಸಂಗಮದೇವಾ ಎಂಬ ಮಹದರುವು ಸರ್ವತ್ರ ಶಿವನರಿತ ದಿವ್ಯ ದೃಷ್ಟಿ ಇದು ಅರುವ ಅರಿತ ಭರಿತ ಭಾವ, ಶಿವಭಾವ. ಶಿವಾಚಾರ, ಶಿವನ ಹೊರತು ಅನ್ಯ ಕಾಣದವರ ಆಚಾರ. ಪಂಡಿತ ಪಾಮರರಲ್ಲಿಯೂ ಸಮದೃಷ್ಟಿ ನೆಲೆಗೊಂಡ ಆಚಾರ. ಅವರಿರುವ ಲೋಕ ದೇವ ಲೋಕ. ಸ್ವಸ್ವರೂಪವರಿತವರ ಲೋಕ. ನಾನೀನೆನ್ನದಿಹ ಸಂದಿಲ್ಲದಿಪ್ಪಗಮ್ಯ ಸುಖಿಗಳ ಲೋಕ. ನಿರಂತರವಾಗಿಹ ಮಂಗಳಮಯ ಪರಮ ಸತ್ಯವರಿತವರ ಲೋಕ. ಏಕಮೇವಾದ್ವಿತೀಯ ಬ್ರಹ್ಮವರಿತವರ ಲೋಕ. ತಾನಾರೆಂದರಿತು ಸ್ವ ಸುಖದಲ್ಲಿದ್ದುದು ದೇವಲೋಕ. ಆ ಹೃದಯ ದಲ್ಲಿ ಬೆಳಗುಳ್ಳ ಬೆಳಗೆ ಅಖಂಡ ಪ್ರಕಾಶ, ಇಂತಪ್ಪ ಶರಣರೇ ನಿಸ್ಸೀಮರು.

ಭಕ್ತರಂಗಣವೇ ವಾರಣಾಸಿ: ಇದು ತತ್ವಗೋಷ್ಟಿ ಅಂಗಳ. ಸಮಗೋಷ್ಟಿಯ ಅಂಗಳ, ಅರುವ ಗೋಷ್ಟಿಯ ಮಾಡುವ ಅಂಗಳ, ಆಧ್ಯಾತ್ಮ ವಿದ್ಯೆ ನಡೆಯುವ ಅಂಗಳ. ಅರು ಹೃದಯ ಮಾಡುವ ಅಂಗಳ. ಇದು ವಾರಣಾಸಿ, ಇದು ಕಾಶಿ ಎಂದು ಹೇಳಿಹರು. ಅವರ ಕಾಯ ಸುಖದ ಕಾಯ ಸುಖದ ಸುಖ ಸವಿಯುವ ಕಾಯ. ಚಿತ್‌ಕಾಯ. ಅಲ್ಲಿ ಜ್ಞಾನಾ ನಂದವೇ ಬೇರೂರಿರುವುದರಿಂದ ನಿಶ್ಚಿಂತ ಕಾಯ, ನಿರ್ಭಯ ಕಾಯವಾದ್ದರಿಂದ ಅಮರ ಕಾಯ. ತೃಪ್ತರೂಪ ತೃಪ್ತಿನಿಲಯವಾದುದ್ದಕ್ಕಾಗಿ ಕಾಯವೇ ಕೈಲಾಸ. ಇದು ಸತ್ಯ ಕೂಡಲ ಸಂಗಮದೇವಾ.

ವಚನ - 4

ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿಭೋ
ಸತ್ಯವ ನುಡಿವುದೇ ದೇವಲೋಕ; ಮಿಥ್ಯವ ನುಡಿವುದೆ ಮರ್ತ್ಯಲೋಕ.
ಆಚಾರವೇ ಸ್ವರ್ಗ; ಅನಾಚಾರವೇ ನರಕ-
ಕೂಡಲಸಂಗಮದೇವಾ, ನಿವೇ ಪ್ರಮಾಣು.

ತಾತ್ಪರ್ಯ: ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಭೋ: ಬಸವ ರಾಜ ದೇವರು ಸತ್ಯ ಮಿಥ್ಯವರಿತ ತತ್ವವೇತ್ತ ಗುರು ಸಾರ್ವಭೌಮ ತತ್ವಮಸಿವರಿತ, ತತ್ ಸ್ವರೂಪ.ಪರಶಿವನಿಂದ ವಿಶೇಷ ಸಕಲರನ್ನು ತನ್ನಂತೆ ಮಾಡಲು ಬಂದ ಮಹಾಮಹಿಮ. ಸತ್ಯ

ವರಿಯಲು ಸತ್ಯ ನುಡಿ ಕಲಿಸಲು ಬಂದ ದೇವರ ದೇವ. ಮಿಥ್ಯ ನುಡಿಯಿಂದ ಮರ್ತ್ಯಲೋಕ. ಅರುವಿನ ಜನ್ಮ ಧರಿಸಿದ ಮಾನವ ಜನ್ಮಕ್ಕಿದು ಸಲ್ಲದು. ಜ್ಞಾನವಾನ್ ಜನ್ಮದಲ್ಲಿ ಸತ್ಯವಂತ ಸತ್ಯವ ನುಡಿವುದೇ ಲೇಸು. ಹಗ್ಗದಲ್ಲಿ ಹಾವು ತೋರುವುದು ಇದು ಮಿಥ್ಯಾತೋರಿಕೆ. ಹಗ್ಗ ಸತ್ಯ. ಹಾವು ಮಿಥ್ಯ. ನಸುಗತ್ತಲೆ ದೋಷದಿಂದ ಇದ್ದ ಹಗ್ಗ ಅದರಲ್ಲಿ ಇಲ್ಲದ ಹಾವು ತೋರುವುದು. ಇದೇನು ? ಎಂದು ಬೆಳಕಿನ ಸಹಾಯದಿಂದ ನೋಡುವುಡೆ ಹಗ್ಗ ಸತ್ಯವಾಗುವುದು. ಹಾವಿನ ತೋರಿಕೆ ಮಿಥ್ಯವಾಗುವುದು. ಹಾಗೆಯೇ ತನ್ನಲ್ಲಿ ಇಲ್ಲದ ಸ್ವಪ್ನ ತೋರುವುದು . ಎಚ್ಚರವಾಗುವಡೆ ಸ್ವಪ್ನ ಇಲ್ಲವಾಗುವುದು. ತಾನು ಮಾತ್ರ ಇದ್ದಂತೆ ಇದ್ದ ಸತ್ಯ ಸ್ವರೂಪನು.

ತಾನೆಂದಡೆ ಅಂದು ಇಂದು ಎಂದೆಂದೂ ಇದ್ದಂತಿದ್ದ ಪರಮ ಸತ್ಯ. ಸ್ವಪ್ನ ವೆಂದರೆ ಮಿಥ್ಯತೋರಿಕೆ. ಯಾವುದು ನಿರಂತರವಾಗಿ ತೋರದಡಗದ ಮಂಗಲಮಯವಾಗಿರುವದದು ಅದು ಸತ್ಯ. ಇದು ಸತ್ಯವರಿತವರ ಸತ್ಯದ ನುಡಿ. ನಾಮರೂಪಂಗಳ ಮಿಥ್ಯವಾದವರ ನುಡಿ.ಇದು ಸ್ವಪ್ನ ನುಡಿ ಎಚ್ಚರವಾಗುವಡೆ ಸ್ವಪ್ನ ತಾನಾಗುವನೇ ? ತಾನಾರೆಂದರಿತವನು ತನಗಿಂತನ್ಯವಾದ ಈ ಮಿಥ್ಯ ತೋರಿಕೆ ತಾನೆನ್ನಬಹುದೇ ? ಅವನಿಗೆ ಮರ್ಥ್ಯಲೋಕವು ಸತ್ಯವಾಗಿ ಕಾಣಬಹುದೇ ? ಇಲ್ಲಿ ತೋರುವ ಪಿಂಡಾಂಡ ಬ್ರಹ್ಮಾಂಡ ಅವುಗಳ ಕಾರ್ಯವಾದರೂ ಸತ್ಯವಾಗಿ ತೋರಬಹುದೇ ? ಇದಲ್ಲದೇ ಜನನ ಮರಣಂಗಳ ತೋರಿಕೆಯಾದರೂ ದಿಟವಾಗಬಹುದೇ ? ಸೃಷ್ಟಿಯ ಕಾರ್ಯವಾದರೂ ದಿಟವೇ. ಸೃಷ್ಟಿಸಿದ ಬ್ರಹ್ಮಾದಿಗಳಾದರೂ ದಿಟವೇ ? ಇದು ಕಾರಣ ತಾನಾರೆಂದರಿತ ಶರಣ ಸ್ವಯಂ ಜ್ಯೋತಿ ಲಿಂಗ. ಲಿಂಗ ಸಕೀಲ ಸಂಯೋಗ ವರ್ಮ ಸ್ಥಲವನರಿತ ನಿಃಶಬ್ದ ಲಿಂಗಾನುಭವಿ. ನಿರಂತರವಾಗಿಹ ಮಂಗಳಮಯವಾಗಿಹ ಜ್ಯೋತಿ ಅಲುಪ್ತ ಜ್ಯೋತಿ. ಶರಣರ ಮಾತೆಂಬುದು ಜ್ಯೋತಿರ್ಲಿಂಗ. ಅವು ದೇವ ಲೋಕ ನಿರ್ಮಾಣಮಾಡುವ ನಿಶಃಬ್ಧ ವೇದ. ಮಾತನಳಿವ ಮಾತು ಬಂದವರಿಗೆ ವೇದ್ಯವಾಗುವ ಜ್ಞಾನರತ್ನ.

ಆವ ದೇಶದಲ್ಲಿ , ಪಟ್ಟಣಗಳಲ್ಲಿ , ಗ್ರಾಮಗಳಲ್ಲಿ ಮಹಾತ್ಮರಿಲ್ಲ ಆ ದೇಶವೆ ಮರ್ತ್ಯಲೋಕ. ಆ ಲೋಕದಲ್ಲಿರುವ ಪಟ್ಟಣ ಗ್ರಾಮಗಳೆಲ್ಲ ಭಯದಿಂದುಕ್ತವಾದ ಯಮನ ಲೋಕ. ಅದುವೇ ಜನನ ಮರಣಗಳಿಂದುಕ್ತವಾದ ಮರ್ತ್ಯಲೋಕವೆನಿಸಿದೆ. ಅಲ್ಲಿಯ ಮಿಥ್ಯಾ ನುಡಿಯೇ ಸತ್ಯವಾಗಿವೆ. ಮಹಾ ವಾಕ್ಯಗಳ ಸುಳಿವು ಸಹ ಇಲ್ಲ ಏಕೆಂದರೆ, ಸದ್ಗುರು ನಾಥನ ದರ್ಶನ ಅಲ್ಲಿ ಇಲ್ಲವಾಗಿದೆ. ಸದ್ಗುರು ನಾಥ ದೊರೆಯುವುದು ದುರ್ಲಭವಾಗಿದೆ. ಮಹಾ ವಾಕ್ಯಗಳ ಹೇಳುವ ಮಹಾಂತರು ಸಿಕ್ಕುವರು.

''ನಿತ್ಯ ನಿರಂಜನ ತಾನೆಂದರಿಯದೆ ತತ್ವ ಮಸಿ ಎಂದು ಹೊರಗನೆ ಬಳಸಿ ಸತ್ತಿತ್ತಲ್ಲಾ ಜಗವೆಲ್ಲ ನಾಯಿಸಾವ ತಮ್ಮ ತಾವರಿಯದೇ, ಸತ್ತವರ ಹೆಸರ ಪತ್ರವ ನೊದಿದಡೆತ್ತಣ ಮುಕ್ತಿ ಗುಹೇಶ್ವರಾ''

ನಿತ್ಯ ನಿರಂಜನ ತಾನೆಂದರಿತ ಘನಕ್ಕೆ ಘನವಾದ ಪರತತ್ವವೇ ಸದ್ಗುರು ರೂಪ . ಸ್ವಯಂ ಜ್ಯೋತಿ ಎಂದಾದರೂ ನುಡಿದಿರಬಹುದೇ. ನುಡಿ ನಡೆಯಿಂದುಕ್ತವಾದುದು ಪರ ವಸ್ತು ಹೇಗಾಗಬಲ್ಲದು. ತತ್ವಮಸಿಯೆಂದು ಹೊರಗನೆ ಬಳಸಿದವರು ಸದ್ಗುರುಗಳೇ ? ನಡೆ ನುಡಿಗೆ ಮೀರಿದ ಘನ ಜ್ಯೋತಿಯೇ ಸದ್ಗುರು ಜ್ಯೋತಿ. ಚಿಜ್ಯೋತಿ ತಾನಾದ ಜ್ಯೋತಿ.

ಅದು ಚಿಜ್ಯೋತಿ ಎನಲಿಲ್ಲ. ಅದು ನಿತ್ಯ ನಿರಂತನ ತಾನೇ ಆದುದರಿಂದ ನಿತ್ಯ ನಿರಂಜನ ತಾನೆಂದರಿತ ಜ್ಯೋತಿ. ಇದು ಸಕಲ ಶರಣ , ಶರಣೆಯರ ಅಂತರಂಗದಲ್ಲಿ ಗುರು ಲಿಂಗದುದಯ ತನ್ನಲ್ಲಿಯೇ ನೋಡಿಕೊಳ್ಳುವುದು.

ಇಂತಪ್ಪ ಮಹಾಂತನ ನುಡಿ ಸತ್ಯ. ಮಹಾಂತ ನುಡಿದುದೇ ದೇವಲೋಕ. ಮಾತ ನಳಿವ ರಹಸ್ಯವರಿತಲ್ಲಿ ದೇವಲೋಕ. ಮಿಥ್ಯವ ನುಡಿವುದೇ ಮರ್ತ್ಯಲೋಕ. ಗುರುಭಕ್ತರಾ ಗಿಯೂ ಗುರುಘನವನರಿಯಲಿಲ್ಲ. ಭಕ್ತನಂತರಂಗದಲ್ಲಿ ಗುರುಲಿಂಗದುದಯವಾಗಲಿಲ್ಲ. ನಿಶಃಬ್ದವೇದಿಯಾಗಲಿಲ್ಲ. ಶಬ್ದ ಸಂಭ್ರಮದವರಾದರಲ್ಲದೇ ತಮ್ಮ ಕಲ್ಪಿತ ನಷ್ಟವಾಗಲಿಲ್ಲ. ಮಾತನಳಿವ ರಹಸ್ಯ ಗೊತ್ತಾಗದ್ದರಿಂದ ತಮ್ಮ ಮಾತೇ ತಮಗೆ ಕಾಡುತ್ತಿಹವು. ಇವರ ಅವಿ ಚಾರ ವಿಚಾರದಂತೆ ತೋರುತ್ತದೆ. ಶಬ್ದ ನಷ್ಟವಾಗದ್ದರಿಂದ ಮರವೇ ಅರುವಾಗಿ ತೋರು ತ್ತದೆ.

ನುಡಿಗೆಡೆಗೊಡದ ಘನದಲ್ಲಿ ನುಡಿಯಿಂದುಕ್ತವಾದುದು ಇವರುಗಳ ಸ್ವರೂಪವಾಗಿ ರುವಲ್ಲಿ, ಆರು ಹೇಳುವುದು, ಆರು ಕೇಳುವುದು, ಹೇಳುವವರೇ ಆದಲ್ಲಿ , ಕೇಳುವವರೇ ಆದಲ್ಲಿ ಗುರುಲಿಂಗದುದಯ ತನ್ನಂತರಂಗದಲ್ಲಿ ಕಾಣದಾಯಿತ್ತು.

''ರೂಪವನೇ ಕಂಡು ನಿರೂಪನೆ ಕಾಣರು, ತನುವನೆ ಕಂಡರು ಅನುವನೆ ಕಾಣರು. ಆಚಾರವನೆ ಕಂಡರು ವಿಚಾರವನೇ ಕಾಣರು ಗುಹೇಶ್ವರಾ ನಿಮ್ಮ ಕುರುಹನೇ ಕಂಡರು ಕೂಡಲರಿಯದೇ ಕೆಟ್ಟರು'' ಒಂದು ಕಾಣಲು ಬಂದಿದೆ, ಇನ್ನೊಂದು ಕಾಣುವ ಭಾಗ್ಯ ಇಲ್ಲ ವಾಗಿದೆ. ರೂಪ ಕಾಣಲು ಬಂದಿದೆ ನಿರೂಪ ಕಾಣಲು ಬಾರದಂತಾಗಿದೆ. ಸಟೆಯ ಕಾಣಲು ಬಂದಿದೆ, ದಿಟ ಕಾಣಲು ಬಾರದಂತಾಗಿದೆ. ಕಾಣಬಾರದ ಘನ ಕಾಣದಂತಾಗಿದೆ. ನಿರೂಪವದು ನಿರಂತರ, ಮಂಗಲಮಯ ಜ್ಯೋತಿ ಅದು ಕಾಣಬಾರದ ಘನ ತಿಳಿಯದಂತಾಗಿದೆ. ತಾನು ನಿರೂಪ, ಲಿಂಗ ನಿರೂಪ , ಅಂಗ ನಿರೂಪ, ತಾನು ಕಾಣಬಾರದ ಘನ, ಲಿಂಗ ಕಾಣಬಾ ರದ ಘನ, ಅಂಗ ಕಾಣಬಾರದ ಘನ ಈ ಮೂರೊಂದಾದುದು ನಿತ್ಯ ನಿರಂಜನ. ತಾನಾ ದುದು ತನ್ನಲ್ಲಿ ಇಲ್ಲದುದು ಇಲ್ಲವೇ ಇಲ್ಲ. ಇದ್ದ ತಾನು ನಿರಂತರ ಇದ್ದಂತೆ ಇಹನು. ಇದು ಕೆಡದ ಆಚಾರ, ಮಾತನಳಿವ ರಹಸ್ಯವರಿತವರ ಆಚಾರ, ಒಡಲಳಿದ ಆಚಾರ. ಇದು ಅಗೋ ಚರ ಆಚಾರ, ತನು ನಷ್ಟ , ಮನ ನಷ್ಟ ನೆನಹು ನಷ್ಟ ಭಾವ ನಷ್ಟ ಜ್ಞಾನ ನಷ್ಟ ನಾ ನೀನೆಂಬುದು ನಷ್ಟವಾದುದರಿಂದ ಕಲ್ಪಿತ ನಷ್ಟವಾಗಿ ಕಲ್ಪನಾರಹಿತ ತಾನರಿದುದೇ ಆಚಾರ. ತನ್ನ ಆಚಾರ ನಿಜಾಚಾರ. ವಾಙ್ಮನಕ್ಕಗೋಚರವಾದ ಆಚಾರವೇ ಸ್ವರ್ಗ. ಸವೆಯದ ಸುಖವೇ ಸ್ವರ್ಗ. ಸುಖದ ಸುಖವೇ ಸ್ವರ್ಗ. ತನ್ನ ನಿರಂತರವಾಗಿರುವ ಮಂಗಲಮಯದಿರುವಿನ ನಿತ್ಯ ಸುಖ ಸವೆಯುವುದೇ ಸ್ವರ್ಗವಾಗಿದೆ.

ಆಚಾರವೇ ಸ್ವರ್ಗ ಅನಾಚಾರವೇ ನರಕ, ಕೂಡಲಸಂಗಮದೇವಾ ಇದಕ್ಕೆ ನೀವೇ ಪ್ರಮಾಣ : ಆಚಾರದಿಂದ ಸ್ವರ್ಗ. ಅನಾಚಾರದಿಂದ ನರಕ. ಸ್ವರ್ಗವದು ಸುಖ. ಸುಖ ವದು ಅಕ್ಷಯ ಸುಖ. ಅಕ್ಷಯ ಸಂಪತ್ತು ತಾನೆಂದರಿತ ತನ್ನ ಸುಖ. ಅರಿದರುಹಿಸಿಕೊಂಬು ದಕ್ಕೆ ಮೀರಿದ ಘನ ಸುಖ. ಅರುವ ಅರುಹಿಸಿಕೊಂಬ ಉಭಯ ಅರಿಯದಂತಿದ್ದ ಸುಖ. ಅರಿಯಲಿಲ್ಲದ ಅರುವೆ ತಾನಾದ ಸುಖವೇ ಸ್ವರ್ಗ.

ತನ್ನ ಹುಸಿ ಮಾಡಿ ಪರಬ್ರಹ್ಮವೆಂಬ ನುಡಿಯೆ ದಿಟವ ಮಾಡಿದ ಅಣ್ಣಯ್ಯಗಳ ಸುಖ

ಅರಿಯಬಾರದ ಘನವರಿತು ಅರಿಯದಂತಿದ್ದವರ ಸುಖ. ಇದು ತನ್ನ ಕಂಡ ಸುಖ ಎಲ್ಲಿ ನೋಡಿದಡಲ್ಲಲ್ಲಿ ತನ್ನ ಕಂಡವರ ಆಚಾರ, ಮಂಗಳಮಯ ತಾನೇ ಆದ ಆಚಾರ. ತಾನೆಂಬುದು ಸುಖ ತನ್ನ ಸ್ವರೂಪ ಸುಖದಲ್ಲಿದ್ದುದೇ ಆಚಾರ. ಇದು ಶ್ರೇಷ್ಠ ಆಚಾರ, ಈ ಆಚಾರವೇ ಸ್ವರ್ಗವೆಂದು ಹೇಳಿಹರು.

ಅನಾಚಾರವೇ ನರಕ: ತನ್ನ ನಿಜಸುಖವ ಮರೆತು ಮೂರುವರಿ ಮಳ ಶರೀರ ತಾನಾದುದು ಅನಾಚಾರ. ದೇಹ ಭಾವ ದೇಹ ಬುದ್ಧಿಯಿಂದ ಉಕ್ತನಾದುದೇ ಅನಾಚಾರ. ಧ್ವನಿಯ ಮರೆಯಲ್ಲಿದ್ದ ಘನವ ಕಂಡು ಘನಕ್ಕೆ ಘನವಾದ ಗುರುಸಾರ್ವಭೌಮನಿಗೆ ಶರಣಾಗತನಾಗದಿದ್ದುದೇ ಅನಾಚಾರ. ಅವರ ಮಹಾನುಭಾವಕ್ಕೆ ಮಹತ್ವ ಮಾಡದಿದ್ದುದೇ ಅನಾಚಾರ. ಅವರಿಂದ ಹೊರಕ್ಕೆ ಬರುವ ತತ್ವಮಸಿ ಮಹಾವಾಕ್ಯ ತಿಳಿಯುವ ರಹಸ್ಯ ಮರೆತುದೇ ಅನಾಚಾರ. ಲಿಂಗಾಂಗ ಸಾಮರಸ್ಯ ಜ್ಞಾನದನುವ ತಿಳಿಯದಿದ್ದುದು ಆಚಾರವಲ್ಲ, ಅದು ಅನಾಚಾರ. ಅನಾಚಾರದಿಂದ ನರಕ. ನಿರಂತರ ಹುಟ್ಟು ಸಾವುಗಳಿಗೀಡಾದುದು ನರಕ. ಇದಕ್ಕೆ ನೀವೇ ಪ್ರಮಾಣ. ಸತ್ಯವರಿತು ಅಮರತ್ವ ನಿಮ್ಮದಾದುದು. ಮಿಥ್ಯವರಿತು ಭವಕ್ಕೀಡಾಗಿ ಮೃತ್ಯುಗೀಡಾಗಿ ಭಯವುಳ್ಳವರಾದುದಕ್ಕೆ ನಿಮಗೆ ನೀವೇ ನ್ಯಾಯಾಧೀಶರು. ಈ ಆಚಾರ, ಅನಾಚಾರ ನಿಮ್ಮ ಹೃದಯವೇ ಸಾಕ್ಷಿಯು ಅಂದರೆ ನಿಮ್ಮ ಹೃದಯ ಬಲ್ಲದು ಎಂದು ಹೇಳಿಹರು.

ವಚನ - 5

ಜಂಗಮ ಬರಬೇಕೆಂದು ಲಿಂಗಾರ್ಚನೆಯ ಮಾಡೂದು.
ಆ ಜಂಗಮ ಬಂದರೆ ಲಿಂಗಾರ್ಚನೆಯ ಮಾಣಬೇಕು,
ಮಾದು ಜಂಗಮಾರ್ಚನೆಯ ಮಾಡಬೇಕು.
ಲಿಂಗದಲೇನುಂಟು, ಜಂಗಮದಲ್ಲೇನುಂಟೆಂದರೆ;
ಲಿಂಗದಲ್ಲಿ ಫಲವುಂಟು, ಪದವುಂಟು, ಕುಲವುಂಟು, ಛಲವುಂಟು,ಭವವುಂಟು.
ಜಂಗಮದಲ್ಲಿ ಫಲವಿಲ್ಲ ಪದವಿಲ್ಲ ಕುಲವಿಲ್ಲ ಛಲವಿಲ್ಲ ಭವವಿಲ್ಲ.
ಇದು ಕಾರಣ ಕೂಡಲಚೆನ್ನಸಂಗಮದೇವಾ
ಜಂಗಮವೇ ಲಿಂಗವೆಂದು ನಂಬಿದನಾಗಿ ಬಸವಣ್ಣ ಸ್ವಯಲಿಂಗವಾದ.

ತಾತ್ಪರ್ಯ : ಲಿಂಗಾರ್ಚನೆಯ ಮಾಡುವ ಲಿಂಗವಂತರಿಗೆ, ಲಿಂಗಪೂಜೆ ಮಾಡುವುದು, ಲಿಂಗದೇವನಿಂದ ಫಲ ಪದಂಗಳ ಪಡೆಯುವುದೇ ಮುಖ್ಯ ಗುರಿಯಾಗಿದೆ. ಬಸವಣ್ಣನವರ ಗುರಿಯೇ ಬೇರೆ. ಈ ಲಿಂಗಾರ್ಚಕರ ಗುರಿಯೇ ಬೇರೆ. ಬಸವರಸರು ಲಿಂಗಾರ್ಚನೆ ಮಾಡಿದುದು ಜಂಗಮ ಮನೆಗೆ ಬರಬೇಕೆಂದು. ಆವ ಜಂಗಮ ಬರಬೇಕೆಂದು ? ''ಲಿಂಗ ಒಂದಾಗಿರ್ದ ಜಂಗಮ, ಜಂಗಮ ಒಂದಾರ್ಗಿದ ಲಿಂಗ, ಲಿಂಗವನು ಪಮೆಗೆ ತಂದು ಎರಡೆನ್ನಬಹುದೇ ? ಮಹಾ ಘನ ಶುದ್ಧ ಶಿವೈಕ್ಯ ಕೂಡಲಚೆನ್ನಸಂಗಮದೇವಾ'' ಶುದ್ಧ ಶಿವೈಕ್ಯ ಜಂಗಮ ಉಪಮಾತೀತ ಜಂಗಮ ಬರಬೇಕೆಂದು ಲಿಂಗಾರ್ಚನೆ ಮಾಡುವುದು. ಇಂತಪ್ಪ ಜಂಗಮ ಬಂದರೆ ಲಿಂಗಾರ್ಚನೆ ತ್ಯಜಿಸಿ ಜಂಗಮಾರ್ಚನೆ ಮಾಡು

ವುದು. ಪೂಜಾ ಲಿಂಗವ ಪೂಜಿಸುವ ಲಿಂಗವಂತರು ಅದೆಷ್ಟೋ ಜನ ಇದ್ದಾರೆ.

ಬಸವರಸರ ಲಿಂಗಾರ್ಚನೆಯ ಪರಮ ಗುರಿಯುಳ್ಳವರು ಇದ್ದಾರೆಯೇ ? ಇದ್ದರೂ ವಿರಳ ! ಆ ಲಿಂಗದಲೇನುಂಟು ? ಜಂಗಮದಲೇನುಂಟು ? ಲಿಂಗಪೂಜಿಸುವ ಆಚಾರ ಉಳ್ಳವರಿದ್ದಾರೆ. ಲಿಂಗದ ವಿಚಾರ ಉಳ್ಳವರಿದ್ದಾರೆಯೇ ? ಜಂಗಮದೇವನ ಪೂಜಿಸುವ ಆಚಾರ ಉಳ್ಳವರಿದ್ದಾರೆ ಅರುವುಳ್ಳವರಿದ್ದಾರೆಯೇ ? ಜಂಗಮದ ವಿಚಾರ ಉಳ್ಳವರಿದ್ದಾ ರೆಯೇ ? ಅಂಥ ಶ್ರದ್ಧೆಯವರುಂಟು , ಮುಗ್ಧ ಭಾವಿಕರುಂಟು, ಭಕ್ತರುಂಟು, ಸದ್ಭಕ್ತರು ಸಿಕ್ಕುವುದು ವಿರಳವಾಗಿದೆ ! ಕೂಡುವ ಅಗಲುವ ಭಕ್ತರು ಸಿಕ್ಕುವರು. ಕೂಡದಗಲದ ಸದ್ಭ ಕ್ತರು ಸಿಕ್ಕುವುದು ಅತಿ ವಿರಳ.

ಬಸವರಸರು ಲಿಂಗ ಜಂಗಮದ ಆಚಾರ್ಯರು. ಲಿಂಗಕ್ಕೆ ಲಿಂಗವಾಗಿಹ ಸ್ವಯ ಲಿಂಗ, ಜಂಗಮಕ್ಕೆ ಜಂಗಮವಾಗಿಹ ನಿಜಚೈತನ್ಯವಾದುದರಿಂದ ಆ ಲಿಂಗದಲೇನುಂಟು ? ಆ ಜಂಗಮದಲೇನುಂಟು ಎಂದು ವಿವೇಚಿಸಿದರು. ಲಿಂಗದಲ್ಲಿ ಕುಲವುಂಟು, ಛಲವುಂಟು, ಫಲವುಂಟು, ಪದವುಂಟು, ಭವವುಂಟು ಎಂದು ಹೇಳಿಹರು. ಪೂಜಾ ಲಿಂಗದಲಿ ಕುಲ ವುಂಟು ಛಲವುಂಟು. ಪೂಜಾಲಿಂಗವ ಕಟ್ಟಿದ ಪ್ರತಿಯೊಬ್ಬ ಲಿಂಗಾಯತನ ಕಟ್ಟಳೆ ನಿಯಮವು ಳ್ಳವದಾಗಿರುವುದು. ಇಷ್ಟ ಲಿಂಗ ಧರಿಸಿದವನು ಪ್ರತಿದಿವಸ ಲಿಂಗವ ಪೂಜಿಸಲೇಬೇಕು. ಇದು ಕಟ್ಟಳೆ ಕಟ್ಟಾಚಾರ. ಪೂರ್ವಕಾಲದಿಂದಲೂ ಇದು ನಡೆಸಿಕೊಂಡು ಬಂದ ನಿಯಮ. ಇದು ಪೂರ್ವಿಕರ ಸಂಪ್ರದಾಯ. ಈ ಸಂಪ್ರದಾಯಕ್ಕೆ ಸಕಲ ಲಿಂಗವಂತರು ಒಪ್ಪಿರುವುದ ರಿಂದ ಲಿಂಗದಲಿ ಕುಲವುಂಟು, ಛಲವುಂಟು ಎಂದು ಹೇಳಿಹರು.

ಲಿಂಗಪೂಜೆಯಿಂದ ಲಿಂಗದ ಪೂಜ್ಯತೆ ಲಿಂಗವಂತನ ಹೃದಯದಲ್ಲಿ ಬೆಳೆಯುತ್ತದೆ. ತಾನು ಪೂಜಕನೆಂಬ ಬುದ್ಧಿ ಬೆಳೆಯುತ್ತದೆ. ಲಿಂಗದ ನೆನೆಹಿನಿಂದ ಸ್ಮೃತಿ ಕೆಡುವುದಿಲ್ಲ. ಭಾವವು ಧೃಢಗೊಳ್ಳುವುದು. ಲಿಂಗಪೂಜೆಯ ಪರಮ ಲಾಭವೆಂದರೆ ಮನವು ಶುದ್ಧಸತ್ವವು ಳ್ಳದ್ದಾಗುವುದು. ಇದರಿಂದ ಯಶಸ್ಸು, ಕೀರ್ತಿ, ಫಲವೂ ಇದೆ. ಪದವಿ ಇದೆ, ಸ್ಥಿತಿಯೂ ಇದೆ. ಲಿಂಗದಲಿ ದೃಷ್ಟಿ ಮನವು ತಲ್ಲೀನವಾಗುವಡೆ ಇದರಿಂದ ಪವಿತ್ರತೆ, ಏಕಾಗ್ರತೆ, ನಿಶ್ಚಲತೆ, ಬುದ್ಧಿಯ ಶುದ್ಧತ್ವ ಬೆಳೆಯುವದು.

ಜಂಗಮಾರ್ಚನೆಯಿಂದ ಕುಲಂ ನಾಸ್ತಿ, ಲಿಂಗಪೂಜೆಯಿಂದ ತನಗಿಷ್ಟವಾದ ಫಲ ಪದಂಗಳ ಪಡೆದು ಲೋಕದಲಿ ಬಹು ಸಂಪತ್ತುಳ್ಳವನಾಗಿ ವಿಶ್ವವೇ ಅವನಿಗೆ ಗೌರವ ಕೊಡಲಿ ಲೋಕದ ಚಕ್ರವರ್ತಿಯಾದರೂ ಅವನಿಗೆ ಭವದ ಭೀತಿ ಬಿಟ್ಟುದಲ್ಲ.

ಪುನರಪಿ ಜನನಂ ಪುನರಪಿ ಮರಣಂ ಈ ಭವ ಯಾತನೆ ಬಿಟ್ಟುದಲ್ಲ. ಇದಕ್ಕೆ ಜಂಗ ಮಾರ್ಚನೆಯೆ ಲೇಸು. ಆ ಜಂಗಮದಲೇನುಂಟು ? ಜಂಗಮಾರ್ಚನೆಯಿಂದ ಕುಲಂ ನಾಸ್ತಿ, ಛಲಂ ನಾಸ್ತಿ, ಫಲಂ ನಾಸ್ತಿ, ಪದಂ ನಾಸ್ತಿ, ಭವಂ ನಾಸ್ತಿ ಇದು ಕಾರಣ ಕೂಡಲ ಚೆನ್ನ ಸಂಗಮ ದೇವರಲ್ಲಿ ಜಂಗಮವೇ ಲಿಂಗವೆಂದು ನಂಬಿದನಾಗಿ ಬಸವಣ್ಣ ಸ್ವಯಂ ಲಿಂಗವಾದ: ಬಸವಣ್ಣನವವರು ಜಂಗಮವೇ ಲಿಂಗವೆಂದು ನಂಬಿದುದರಿಂದ ತಾನೇ ಲಿಂಗವಾದ.

ಭಕ್ತರ ಕರಕಮಲದಲ್ಲಿ ಪೂಜಿಸಿಕೊಳ್ಳುವ ಲಿಂಗಯ್ಯನೇ ! ನಿನ್ನ ಪೂಜಿಸುವ ಭಕ್ತರನ್ನು ನಿನ್ನಂತೆಯೇ ಮಾಡಿದೆಯಾ ? ನಿನ್ನ ಅರಿವಾದರೂ ಅವರ ಹೃದಯದಲ್ಲಿ ಉದಯಿಸಿ ದೆಯಾ ? ನಿನ್ನ ಇರುವೇ ನನ್ನಯ ಇರವು, ನನ್ನ ಇರುವೇ ನಿನ್ನಯ ಇರುವೆಂದು, ನೀನು

ನನಗಿಂತ ಅನ್ಯನಲ್ಲ, ನೀನಾರೆಂದು ಅರಿದರಿದು ನೋಡು, ಅರಿವುಡೆ ನನ್ನ ಸ್ವರೂಪವೇ ಇರುವಿಯೆಂದು ಬೋಧಿಸಿದೆಯಾ ? ಏಳು ಜಾಗೃತನಾಗು, ಅಂಧಶ್ರದ್ಧೆಯುಳ್ಳವನಾಗಿ, ಮುಗ್ಧ ಭಾವಿಕನಾಗಿ ಅದೆಷ್ಟು ಕಾಲ ನನ್ನ ಪೂಜಿಸುವೆ ? ಈ ಅಂಧ ವಿಶ್ವಾಸವೆಂಬ ನಿದ್ದೆಯಲ್ಲಿ ಅದೆಷ್ಟು ಕಾಲ ಮಲಗುವೆ ಎಚ್ಚರವಾಗು, ಜಾಗೃತನಾಗು, ನಾ ನೀನೆಂಬುದಕ್ಕೆಡೆಗೊಡದ ಮಹದರುವ ನೋಡು ಎಂದು ಜಾಗೃತ ಮಾಡಿದೆಯಾ ? ನಿನ್ನ ಮೌನತನವ ಕಂಡು ಆ ಲಿಂಗದಲೇನುಂಟು ಎಂದು ಹೇಳಿಹರು. ಬಸವರಸರು ಜಂಗಮವೇ ಲಿಂಗವೆಂದು ನಂಬಿದರು. ಈ ನಂಬಿಗೆ ಸ್ವಯಲಿಂಗವ ಮಾಡಿತ್ತು. ಲಿಂಗ ಒಂದಾಗಿರ್ದ ಜಂಗಮ ಒಂದಾಗಿರ್ದ ಲಿಂಗವನು ಉಪಮೆಗೆ ತಂದು ಎರಡೆನ್ನಬಹುದೇ ? ಮಹಾ ಘನ ಶುದ್ಧ ಶಿವೈಕ್ಯನು ಮಹಾ ಘನ ಜಂಗಮ ನಂಬಿದ್ದ ಭಕ್ತನು ಮಹಾ ಘನನೆ ಶುದ್ಧ ಶಿವೈಕ್ಯ ಜಂಗಮನ ನಂಬಿದ ಭಕ್ತನು ಶುದ್ಧ ಶಿವೈಕ್ಯನು. ಏಕೆಂದರೆ ಶಿವೈಕ್ಯ ಜಂಗಮ ಲಿಂಗವು, ತನ್ನಂತೆ ಮಾಡುವುದರಿಂದ ಭಕ್ತನು ಶಿವೈಕ್ಯನು ಎಂದು ಹೇಳಿಹರು.

''ಸುಳಿಯ ಬಲ್ಲಡೆ ಸುಳುಹೇ ಲೇಸು ಕಂಡಯ್ಯ, ಗಮನವಿಲ್ಲದೆ ಸುಳಿಯಬಲ್ಲಡೆ ನಿರ್ಗಮನಿಯಾಗಿ ನಿಲ್ಲಬಲ್ಲಡೆ ಅದಕ್ಕದೇ ಪರಿಣಾಮ, ಅದಕ್ಕದೇ ಸಂತೋಷ. ಗುಹೇಶ್ವರ ಲಿಂಗದಲ್ಲಿ ಅವರು ಜಗದಾರಾಧ್ಯರೆಂಬೆ.'' ಜಗದಾರಾಧ್ಯನು ಶುದ್ಧ ಶಿವೈಕ್ಯ ಜಂಗಮ, ನುಡಿದು ನಿಶಬ್ಧನಾಗಿ ಘನ ಜಂಗಮ. ನಡೆದು ನಿರ್ಗಮನಿಯಾಗಿಹ ಅಚಲಲಿಂಗ . ಅತೀಂದ್ರಿ ಶುಭಾಶುಭ ಕ್ರಿಯೆ ಕಾಣದ ನಿಷ್ಕ್ರಿಯ ಮಹಾಂತ. ಮಹಾಂತನ ಸುಳಿದಾಟ ಚೈತನ್ಯ ತಾನಾದ ಸುಳಿದಾಟ. ಸಚ್ಚಿದಾನಂದ ಸುಳಿದಾಟ. ಸಕಲರನ್ನು ತನ್ನಂತೆ ಮಾಡುವ ಸುಳಿದಾಟ. ಮರವರುವಿಗೆ ಮೀರಿ ನಿಲ್ಲಿಸುವ ಸುಳಿದಾಟ. ಅರುವಿನ ಕಣ್ಣಿನ ಕತ್ತಲೆಯ ಕಳೆಯುವ ಸುಳಿದಾಟ. ಭಿನ್ನ ದೃಷ್ಟಿ, ಭಿನ್ನ ಭಾವ, ಭಿನ್ನ ಜ್ಞಾನ ಕಾಣದ ಮಹಾಂತ ಲಿಂಗ ತಾನು ಒಂದಾದ ಮಹವು ಮಹಾದಾನಂದದಲಕ್ಕಾಡಿ ಮತ್ತಲ್ಲಿಯೇ ಲೀಯವಾಗಿರ್ದ ನಿರುಪಮ, ಸೀಮೆ ಸಾಯುಜ್ಯವ ನರಿಯದ ಶುದ್ಧ ಶಿವೈಕ್ಯ, ನಿರ್ಲಿಖಿತ ಜಂಗಮ. ಶೃತಿಗೆ ಮೀರಿದ ಮಹಾ ಘನನನ್ನು ಕಥನ ಮಾಡುವದದೆಂತು ?

ಬಸವರಸ ಇಂತಪ್ಪ ಘನ ಜಂಗಮವ ನಂಬಿ ಅಕುಲನಾದ ಛಲ ರಹಿತನಾದ, ಫಲ ಪದವಿ ರಹಿತನಾದ, ಭವವಿರಹಿತನಾದ್ದರಿಂದ ಸ್ವಯಂ ಲಿಂಗವಾದ.

ಲಿಂಗವರಿಯದ್ದರಿಂದ ಲಿಂಗಾಯತವೆಂಬುದು ಕುಲವಾಗಿದೆ, ಲಿಂಗಲಿಂಗವೆಂಬುದು ಛಲವಾಗಿದೆ, ಕಟ್ಟಾಚಾರವಾಗಿದೆ. ಲಿಂಗವರಿತು ತಾನೇ ಲಿಂಗವಾದವಂಗೆ ಅದೇತರ ಕುಲ, ಅದೇತರ ಛಲ, ಅದೇತರ ಫಲ, ಅದೇತರ ಪದ, ಅದೇತರ ಭವ ?

ಲಿಂಗವರಿಯದ ವಿಪರೀತ ಬುದ್ಧಿಗೆ ಕುಲವೂ ಇದೆ. ಛಲವೂ ಇದೆ, ಫಲವೂ ಇದೆ, ಪದವೂ ಇದೆ, ಜನನ ಮರಂಣಂಗಳೂ ಇವೆ. ಲಿಂಗವರಿತ ನಿರ್ದೇಹಿ ಅದು ಭಕ್ತ ಕಾಯ ಅಕಾಯ ಅಂತಪ್ಪ ಅಕಾಯ ಭಕ್ತಂಗೆ ಕುಲ ಛಲವುಂಟೆ ? ಫಲ ಪದವುಂಟೆ ? ಭವವುಂಟೆ ಇಲ್ಲ.

ವಚನ - 6

ದೇಹ ನಿರ್ದೇಹವೆಂದೆನುತ್ತಿಪ್ಪರಯ್ಯಾ.

ದೇಹ ನಿರ್ದೇಹ(ದ) ಮರ್ಮವನರಿಯರು.
ಅಹಮ್ಮೆಂಬುದೆ ದೇಹ ನೋಡಾ,
ದಾಸೋಹವೆಂಬುದೆ ನಿರ್ದೇಹ ನೋಡಾ.
ಅಹಂಭಾವವಳಿದುಳಿದು ದಾಸೋಹಿಯಾದ
ಕೂಡಲಚನ್ನಸಂಗಾನಿಮ್ಮ ಶರಣ.

ತಾತ್ಪರ್ಯ : ದೇಹ, ನಿರ್ದೇಹವೆನುತಿಪ್ಪರು: ದೇಹ ನಿರ್ದೇಹವಪ್ಪ ರಹಸ್ಯವರಿತವರು ಶರಣ ಶರಣೀಯರು. ತೋರುವ ಮಲಮಯ ಶರೀರಕ್ಕೆ ದೇಹವೆನ್ನುವವರಿದ್ದಾರೆ. ಇದಕ್ಕೆ ಪಿಂಡವೆಂದು ಕರೆಯುವವರೂ ಉಂಟು. ಚನ್ನಬಸವಣ್ಣನವರ ದಿವ್ಯ ದೃಷ್ಟಿಗೆ ಮಲ ದೇಹವು ಪಿಂಡವು ಉಂಟೆಂಬುದಿಲ್ಲ, ಅಹಂ ಎಂಬುದೇ ದೇಹ ದಾಸೋಹಂ ಎಂಬುದೇ ನಿರ್ದೇಹವಾಗಿ ಕಂಡರು.

''ಸೋಹಂ ನೀನೇ ಎಲೆ ಅಯ್ಯಾ, ಕೋಹಂ ತತ್ವ ತೂರಿಯಾರ್ಥವೂ ನೀನೇ ಅಯ್ಯಾ, ನಾಹಂ ನಾಹಂ ನೀನೇ ಅಯ್ಯಾ, ಆನೆಂಬುದೊಂದು ಭ್ರಾಂತುಂಟೆ ? ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ''

ಗುರುವಿನ ಕೈಯಲು ಆನು ಸತ್ತು ಹುಟ್ಟಿದ ಬಳಿಕ, ಆನು ನೀನೇಂಬ ಸಂದಳಿದೆ. ಅಹಂ ಇಲ್ಲದವರು ಶರಣರಾದುದರಿಂದ ನಿರ್ದೇಹಿಗಳು. ಪರತತ್ವವರಿತವರು, ನಿಜ ಸಂಯುಕ್ತರು. ಸಕಲರಲ್ಲಿ ದೇವನನ್ನು ಕಂಡ ಭರಿತ ಭಾವದವರು ಸಮ್ಯಜ್ಞಾನಿಗಳು, ಅವರು ದಾಸೋಹ ಮೂರ್ತಿಗಳು.

ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸಂನ್ಯಾಸ ಈ ನಾಲ್ಕೂ ಆಶ್ರಮಿಗಳು ಅಹಂಕಾರಿಗಳಾದುದರಿಂದ ದೇಹವುಳ್ಳವರು. ಕಲ್ಪಿತರೆಲ್ಲ ಅಹಂಕಾರಿಗಳು, ಮುಮುಕ್ಷು ಇರಲಿ ಜಿಜ್ಞಾಸು ಇರಲಿ, ಅನುಭಾವಿಯೇ ಇರಲಿ, ಇವರೂ ಕೂಡ ಅಹಂಭಾವದಿಂದ ಉಕ್ತರು. ಇದು ಕಾರಣ ದೇಹಧಾರಿಗಳು.

''ಕಾಯ ನಾನೆಂದರೆ ಕರ್ಮಕಾಂಡಿ, ಈಶಾರ್ಪಣವೆಂದರೆ ಭಕ್ತಕಾಂಡಿ, ಸಕಲ ಕರ್ಮಗಳಿಗೆ ಸಾಕ್ಷಿ ನಾನೆಂದರೆ ಜ್ಞಾನ ಕಾಂಡಿ. ಕಾಂಡತ್ರಯವಿಲ್ಲದ ಅಖಂಡನ ತೋರಾ ಕಪಿಲಸಿದ್ಧಮಲ್ಲಿಕಾರ್ಜುನಾ''

ಕರ್ಮಕಾಂಡಿಯಷ್ಟೆ ಅಹಂಕಾರಿಗಳೆಂದು ತಿಳಿಯಕೂಡದು. ಈಶಾರ್ಪಣ ಮಾಡುವ ಭಕ್ತಕಾಂಡಿಯೂ ಅಂಹಕಾರಿಗಳು. ಇದಲ್ಲದೆ ಸಕಲ ಕರ್ಮಗಳಿಗೆ ಸಾಕ್ಷಿ ನಾನೆನ್ನುವ ಜ್ಞಾನ ಕಾಂಡಿಯೂ ಕೂಡ ಅಹಂಕಾರಿಯಾದುದರಿಂದ ಇವರೆಲ್ಲರು ದೇಹವುಳ್ಳವರೆಂದು ತಿಳಿಯುವದು. ನಿರ್ದೇಹಿಗಳು ಸಿಗುವುದು ಮಾತ್ರ ವಿರಳವು. ನಿರ್ದೇಹಿಗಳೆಂದರೆ ಗುರುವಿನ ಕೈಯಲ್ಲಿ ಆನೆಂಬುದು ಸತ್ತು ಹುಟ್ಟಿದವರು. ಗುರುವಿನ ಚಿದಜ್ಞಿಯಲ್ಲಿ ಅಹಂಕಾರವೆಂದು ಆನು ಸತ್ತುದು. ಅವರು ನೆಪಮಾತ್ರ ದಾಸೋಹ ಮೂರ್ತಿಗಳು. ಅವರು ತಾನಾರೆಂದು ಯತಾರ್ಥ ತಿಳಿದ ತತ್ವಸ್ವರೂಪರು. ವಾಙ್ಮನೋತೀತರು. ಅವರು ನುಡಿದು ನಿಶಬ್ದರು, ನಡೆದು ನಿರ್ಗಮನಿಗಳಾದುದರಿಂದ ನಿರ್ದೇಹಿಗಳು ಎಂದು ಹೇಳಿರುವರು.

ಆನೆಂಬ ಅಹಂಕಾರ ಎಲ್ಲಿಯವರೆಗೆ ಬೀಜಭೂತವಾಗಿದೆಯೋ ಅಲ್ಲಿಯವರೆಗೆ ದೇಹ

ಧಾರಿಗಳು. ಇವರೆಲ್ಲ ಶಬ್ದ ಸಂಭ್ರಮದವರು. ಈ ಶಬ್ದ ಸಂಭ್ರಮವೇ ಗುರುಲಿಂಗವನ್ನು ಚಾರಿತ್ರ್ಯ ಪುರುಷನಾಗಿ ಕಂಡಿತು. ಲಿಂಗಕ್ಕೆ ಸ್ಥಲವ ಸಂಪಾದಿಸಿತು. ಜಂಗಮ ಲಿಂಗವ ಜಾತಿಯಲ್ಲಿ ಪರಿಗಣಿಸಿ ತನ್ನನ್ನು ಗುರುಲಿಂಗವಾಗಿ ಕಾಣಲಿಲ್ಲ. ಏಕೆಂದರೆ ತನ್ನಂತರಂಗದಲ್ಲಿ ಗುರುಲಿಂಗದುದಯವಾಗಲಿಲ್ಲ. ಯಾರದು ಗುರುವಿನ ಚಿದಜ್ಞಿಯಲ್ಲಿ ಆನೆಂಬ ಅಹಂಕಾರ ಸತ್ತು ಹೋಗಿದೆಯೋ ಅವರು ಅನುಪಮರು.

ಗುರುವಿನ ಚಿದಜ್ಞಿಯಲ್ಲಿ ಅಹಂಕಾರ ನಷ್ಟವಾಗಿಹ ಮಹಾಂತರೆಂದರೆ ಸಿದ್ಧರಾಮ ಶಿವಯೋಗಿ ತಂದೆ, ಹಡಪದ ಅಪ್ಪಣ್ಣಯ್ಯಗಳು, ಕಿನ್ನರಿ ಬೊಮ್ಮಯ್ಯಗಳು, ಮ್ಯಾದರ ಕೇತಯ್ಯ, ಡೋಹರ ಕಕ್ಕಯ್ಯ, ನೀಲಾಂಬಿಕೆ, ಮುಕ್ತಾಯಕ್ಕ, ಅಕ್ಕಮಹಾದೇವಿ, ಅಕ್ಕನಾಗಾಂಬಿಕೆ. ಅಮುಗೆಯ ರಾಯಮ್ಮ, ಸತ್ಯಕ್ಕ ಮೊದಲಾದವರು. ಇದಲ್ಲದೆ ಶಿಖರ ಧ್ವಜ, ಚೂಡಾಲ, ಹರಳಯ್ಯ ಚೆನ್ನಯ್ಯ ಮಡಿವಾಳ ಮಾಚಿ ತಂದೆಗಳು ಶರಣೆಯರೆಲ್ಲರೂ ನಿರ್ದೇಹಿಗಳು.

ಇವರುಗಳೆಲ್ಲ ಅಹಂ ಎಂಬ ದೇಹಕ್ಕಿಂಬು ಕೊಡದವರಾದುದರಿಂದ ಸೋಹಂ ನೀನೆ ಅಯ್ಯ, ಕೋಹಂ ತತ್ವ ತೂರ್ಯಾರ್ಥವು ನೀನೆ ಅಯ್ಯಾ, ನಾಹಂ ನಾಹಂ ನೀನೇ ಅಯ್ಯಾ, ಆನೆಂಬುದೊಂದು ಭ್ರಾಂತುಂಟೆ ? ಇವರು ಅಹಂಭಾವವಳಿದವರು ಅಕಾಯರು, ಇದು ಭಕ್ತಕಾಯ, ಗುರು ಲಿಂಗ ಜಂಗಮ ರೂಪಿ ತತ್ವದಲ್ಲಿ ಸಮರಸವಾದ ಕಾಯ. ಅಕಾಯ ಭಕ್ತಕಾಯ ನೋಡಾ, ಸೋಹಂ ಭಾವವು ತನ್ನದೆನಲಿಲ್ಲ, ಅದು ನೀನೇ ಎಂದು ಅಲ್ಲಿಯೂ ದೇವನನ್ನೆ ಕಂಡ. ತಾನಾರೆಂದು ವಿಚಾರ ಮಾಡಹೋದ, ವಿಚಾರ ತನ್ನದೆನಲಿಲ್ಲ, ಅದನ್ನು ದೇವನದಾಗಿ ಕಂಡ, ಪರಮಾತ್ಮ ತಾನೆಂಬ ಭಾವವು ತನ್ನದೆನಲಿಲ್ಲ, ಅದನ್ನು ದೇವನದಾಗಿ ಕಂಡ. ' ತತ್ವದೃಷ್ಟಿ ನೀನೇ ಅಯ್ಯಾ, ಸತ್ಯಜ್ಞಾನಾನಂದವದು ನೀನೇ ಎಂದು ತತ್ವ ನೀನಾಗಿ ಕಂಡ, ನಾಹಂ ನಾಹಂ ಎನ್ನುವವನು ನಾನಲ್ಲ ನಾನಲ್ಲ ಎನ್ನುವವನು ಸಕಲ ನಿಃಕಲ ನೀನೆ ಆಗಿರುವಲ್ಲಿ, ನೀನೇ ಇರುವಲ್ಲಿ ನಾನು ಎನ್ನುವುದು ಎಲ್ಲಿದೆ.

''ಆನು ನೀನೆಂಬುದಿಲ್ಲ, ತಾನಿಲ್ಲ ತಾನರಿದ ಬಳಿಕ ಏನೂ ಇಲ್ಲ, ಇಲ್ಲಾದುದಿಲ್ಲಾದುದೆಂದಿಪ್ಪುದು, ಇಲ್ಲಾದುದಿಲ್ಲಾದುದೆಂತಿಪ್ಪುದು. ಅನುವರಿತು ತನುವ ಮರೆದಡೆ ಭಾವರಹಿತ ಗುಹೇಶ್ವರ ಬಯಲು'' ಎಂದು ಪ್ರಭುದೇವ ಬಿತ್ತರಿಸಿದುದು ನೋಡಿದಡೆ ಎಲ್ಲಿ ನಾನೆಂಬ ಅಹಂಕಾರವದೆ ಅಲ್ಲಿ ನೀನೆಂಬ ನಿರಹಂಭಾವವಿದೆ. ಆರಲ್ಲಿ ಆನೆಂಬ ಅಹಂಕಾರ ನಷ್ಟವಾಗಿದೆ. ಅಲ್ಲಿ ನೀನೆಂಬ ನಿರಹಂಭಾವವು ನಷ್ಟವಾಗಿದೆ. ಅಲ್ಲಿ ತಾನಿಲ್ಲ ತಾನು ಅರಿದ ಬಳಿಕ ಏನೂ ಇಲ್ಲ, ಇಲ್ಲವೆಂಬುದೆ ಇಲ್ಲವಾಗಿರುವಲ್ಲಿ ಇಲ್ಲವೆಂಬುದೆಂದಿತ್ತು. ಇಲ್ಲಾದುದು ಇಲ್ಲಾಗಿರುವಲ್ಲಿ ಇಲ್ಲವೆನ್ನುವುದು ಹೇಗಿತ್ತು. ಗುರುಶಿಷ್ಯ ಮಧ್ಯದಲ್ಲಿದ್ದ ವಸ್ತು, ನಾನೀನೆಂಬ ಮಧ್ಯದಲ್ಲಿದ್ದ ವಸ್ತು. ಅರ್ಥಾತ್ ಸ್ವಸ್ವರೂಪವರಿತು, ಅಹಂ ಮರೆದೆಡೆ ಭಾವಕ್ಕಿಂಬು ಕೊಡದ ಗುಹೇಶ್ವರ ಅಪಾರ ಎಂದು ಹೇಳಿಹರು.

ಇಂತಪ್ಪ ಭಕ್ತರದು ಶ್ರೀ ಗುರುವಿನ ಚಿದಗ್ನಿಯಲ್ಲಿ ನಾನೆಂಬ ಅಹಂಕಾರ ನಷ್ಟವಾದುದರಿಂದ ಇವರು ನಿರ್ದೇಹಿಗಳು, ದಾಸೋಹಿಗಳು, ಅಕಾಯ ಭಕ್ತರು. ಅಹಂವಳಿದವರಾದುದರಿಂದ ಅಕಾಯರು. ಏನೊಂದುಸರಲು ಬಾರದ ಪೂರ್ವನಾಮವಿಲ್ಲದ ಗುರು, ಹೆಸರಿಲ್ಲದ ಲಿಂಗ ನಿರ್ನಾಮ, ಜಂಗಮ ತತ್ವದಲ್ಲಿ ಸಮರಸವಾದುದರಿಂದ ಭಕ್ತರು ನಿರ್ದೇಹಿಗಳು ಸತ್ತು ಬದುಕಿದವರು. ಅಮರತ್ವ ನೆಲೆಗೊಂಡ ಅಚಿಂತ್ಯರು.

ಅಚಿಂತ್ಯ ಪದವೆ ನಿಜವಾದ ಪದ. ಈ ಭಕ್ತಿ ಅದಾರಿಗೆ, ಈ ವಿಶ್ವಾಸ ಅದಾರಿಗೆ ಇದು ಬಸವಾದಿ ಪ್ರಮಥರು ಅಚಿಂತ್ಯಪದ ಪಡೆಯಲು ಗುರು ಘನನಲ್ಲಿ ವಿಶ್ವಾಸವಿಟ್ಟರು. ಚಿಂತನೆಗೆ ನಿಲುಕದ ಜ್ಞಾನ ಕರುಣಿಸುವ ಕರುಣಾಕರನೆ ಗುರುದೇವನೆಂದು ನಂಬಿದರು. ಗುರುವಿಂಗೆ ಗುರುವಾಗಿಹ ಗುಟ್ಟನ್ನು ತಿಳಿಸಿ ತನ್ನಂತೆ ಮಾಡುವವನೆ ನಿಜವಾದ ಪರಮಗುರು ವೆಂದು ನಂಬಿದರು.

ಅರಿದೆಹೆನೆಂದರೆ ಅರುಹಿಂಗಸಾಧ್ಯ,. ನೆನದಿಹರೆಂದರೆ ನೆನಹಿಂಗಸಾಧ್ಯ. ಭಾವಿಸಿಹೆನೆಂದರೆ ಭಾವಕ್ಕಸಾಧ್ಯವಾದದು ನುಡಿದಡೆ ನುಡಿಗೆಡೆಗೊಡದ ಘನವೆಂದು ಲಿಂಗದಿರುವು ಎನ್ನಂತ ರಂಗದಲ್ಲಿ ತೋರಿದ ಗುರುಲಿಂಗವೆ ಗುರುವೆಂದು ನಂಬಿದರು.

ಶೈವ ಭಕ್ತಿ ಅದು ಸಾಕಾರ ಭಕ್ತಿ. ವೀರಶೈವರ ಭಕ್ತಿ ಅದು ಕುರುಹಿನ ಭಕ್ತಿಯಾದುದರಿಂದ ಯತಾರ್ಥ ಭಕ್ತಿ ಯಾಗದು. ''ಅಂಡಜವಳಿದ ಬಸವ, ಪಿಂಡಜವಳಿದ ಬಸವ, ಸಾಕಾರವಳಿದ ಬಸವ, ನಿರಾಕಾರವಳಿದ ಬಸವ, ಸಂಗವಳಿದ ಬಸವ ನಿಸ್ಸಂಗವಳಿದ ಬಸವ, ಸಂಗಯ್ಯನಲ್ಲಿ ಸ್ವಯಲಿಂಗಿಯಾದ ಬಸವ,'' ವೀರಶೈವ ಪಕ್ಷಾತೀತ ಭಕ್ತಿ. ಸಮರತಿ ಭಕ್ತಿ, ಸಮಕಲೆ ಭಕ್ತಿ ಸಮತೆ ಸಯವಾದುದು ನಿಜ ಭಕ್ತಿ. ಇದರಿಂದ ಅಚಿಂತ್ಯ ಪದ ಸ್ವತಃ ಸಿದ್ಧವು. ಇದು ಅರಿಯಬಾರದ ಘನವರಿತು. ಅರಿಯದಂತಿದ್ದ ಭಕ್ತಿ ಇದು ನಿಸ್ಸೀಮ ಭಕ್ತಿ.

ವಚನ – 7

ವಿಶ್ವಾಸವೆ ಭಕ್ತಿ, ಗುರು ಲಿಂಗ,
ಜಂಗಮವೊಂದೆಂದರಿವುದೆ ಜ್ಞಾನ.
ನಿರ್ವಂಚನಯೆ ವೈರಾಗ್ಯ ತ್ರಿವಿಧದಲ್ಲಿ ನಿರ್ವಂಚನೆಯ ವೈರಾಗ್ಯ.
ಪ್ರಸಾದವೇ ಮುಕ್ತಿ. ಇದು ಸತ್ಯ. ಶಿವ ಬಲ್ಲ. ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

ತಾತ್ಪರ್ಯ: ವಿಶ್ವಾಸ ಭಕ್ತಿ, ಈ ಭಕ್ತಿ, ಮರವರುವಿನ ಕಣ್ಣ ಕತ್ತಲೆಯ ಕಳೆದ ಭಕ್ತಿ. ಅರಿಯಲಿಲ್ಲದ ಅರುವ ನರುಹಿಸಿದ ನಿರುಪಮನ ಭಕ್ತಿ. ಅಖಂಡಿತನ ಭಕ್ತಿ. ಗುರು ಭಕ್ತ. ಲಿಂಗ ಭಕ್ತಿ, ಜಂಗಮ ಭಕ್ತಿ ಇದು ಪರಿಶುದ್ಧ ಹೃದಯದಲ್ಲುದಯವಾದ ಭಕ್ತಿ. ಇದು ಶುದ್ಧ ವಿಶ್ವಾಸ ತೋರುವುದನ್ನೆ ತೋರಬಾರದ ಘನವನ್ನಾಗಿ ಕಂಡ ವಿಶ್ವಾಸ ಚೈತನ್ಯ ಭಕ್ತಿ. ಬಹು ಜನ್ಮಂಗಳಲ್ಲಿ ಮಾಡಿದ ನಿಷ್ಕಾಮ ಕರ್ಮ ದಿಂದಾದ ಪುಣ್ಯದ ಫಲ. ಈಶ್ವರನ ಕೃಪೆ, ಅಂತಃಕರಣ ಕೃಪೆಯಿಂದ ಉದಯಿಸುವ ಭಕ್ತಿ, ಏಕತ್ವ ಭಕ್ತಿ, ಗುರು ಲಿಂಗ ಜಂಗಮ, ಈ ಮೂರೊಂದಾದ ಭಕ್ತಿ ಗುರು ತಾನು ಒಂದಾದ ಭಕ್ತಿ, ಲಿಂಗ ತಾನು ಒಂದಾದ ಭಕ್ತಿ, ಜಂಗಮ ತಾನು ಒಂದಾದ ಭಕ್ತಿ. ಇಲ್ಲಿ ನಿಸ್ಸೀಮತ್ವ ಸಹಜ ಸಾಧ್ಯವಾಗಿದೆ. ಇದು ಸೀಮಿತವಾದುದಲ್ಲ. ಅಹಂಕಾರಿಗಳಿಗೆ ಏಕತ್ವ ಭಕ್ತಿ ಬರದು. ಪೂರ್ಣ ಶರಣಾಗತವುಳ್ಳವರಿಗಿದು ಸಾಧ್ಯವು. ಚರಿಸಿ ಜಂಗಮವೆನಿಸಿತ್ತಯ್ಯ ಲಿಂಗವು, ನೆಲೆಸಿ ಲಿಂಗವೆನಿಸಿತ್ತಯ್ಯ ಲಿಂಗವು, ಇದರಿರುವ ಅರುಹಿ ಗುರುವೆನಿಸಿತ್ತಯ್ಯ ಲಿಂಗವು, ಗುರು ಲಿಂಗ ಜಂಗಮಕ್ಕೆ ತಿಲಾಂಜನ ಭೇದವಿಲ್ಲನೋಡಾ ಎಲೆ ದೇವಾ. ಭೇದಿಸಿದವಂಗೆ ಭವ ಭಾದೆ ತಪ್ಪುವದೆ ದೇವರ ದೇವ ಕಪಿಲಸಿದ್ಧ ಮಲ್ಲಿಕಾರ್ಜುನ. ''ಇದು ಅರಿಯಬಾರದ ಘನವರಿತು ಅರಿಯದಂತಿಪ್ಪವರಲ್ಲಿ ಬರುವ ಭಕ್ತಿ, ಇದು ತತ್ವ ದೃಷ್ಠಿ. ಗುರು ಕರುಣಿಸಿದಾಗ ಬರುವ ಭಕ್ತಿಯಾಗಿದೆ ಇದು ಕಾರಣ.

ಗುರುದೇವ ತೋರಬಾರದ ಘನನೆಂದು ಸದಾಶಿವನೆಂದು ಮಹಾಮಹಿಮನೆಂದು ಅಕಲ್ಪಿತ

ಘನನೆಂದು ನಿರಂತರವಾಗಿರುವ ಮಂಗಳಮಯ ಪರಮದೇವನೆಂದು ಅರಿಯಬಾರದ ಘನನೆಂದು ಆರದು ಗಾಢ ವಿಶ್ವಾಸವಿದೆ. ಅವರಿಗೆ ಲಿಂಗಘನವು ಅರಿಯಬಾರದ ಘನವಾಗಿದೆ. ಜಂಗಮ ಲಿಂಗವು ಅರಿಯಬಾರದ ಘನವಾದುದರಿಂದ ಗುರು, ಲಿಂಗ, ಜಂಗಮ ತ್ರಿವಿಧವೊಂದೆಂದರಿಯುವ ಜ್ಞಾನ ಉದಯವಾಗುತ್ತದೆ.

ಮಹಾಘನನಾಗಿ ತೋರುವ ಗುರುದೇವ ಸಕಲರಿಗೂ ಮಾನವನಂತಯೆ ತೋರಿದರೂ ತೋರ ಬಾರದ ಘನನಾಗಿದ್ದರಿಂದ ಗುರುಲಿಂಗವಾಗಿಹನು. ಕಲ್ಪಿತ ಪುರುಷರಾಗಿ ನೋಡುವವರ ದೃಷ್ಠಿಗೆ ಈ ಮಹಾಂತನ ಇರವು ಗೊತ್ತಾಗದು. ಬೋಧ ಮಾಡುವಳಿಚಿದಹಮ್ಮುಳ್ಳವರಿಗೂ ಅರಿಯಬಾರದ ಘನದಿರುವ ಗೊತ್ತಾಗದು.

ಈ ಮಹಾಂತನ ಬೋಧ ಶಬ್ದನಷ್ಟ ಮಾಡುವ ಬೋಧ, ಮನನಷ್ಟಮಾಡುವ ಬೋಧ,' ನೆನಹು ನಷ್ಟಮಾಡುವ ಬೋಧ, ಸಂಯೋಗ ವೆಂಬೆರಡಿಲ್ಲದೆ ನಿಜವ ತೋರುವ ಬೋಧ, ಮರವರವುವೆಂಬು ದಕ್ಕೆಡೆಗೊಡದ ಬೋಧ, ಅರಿಯಲಿಲ್ಲದ ಅರಿವ ನರುಹಿಸುವ ಬೋಧ, ಇಂತಪ್ಪ ಮಹದರುವಿನಲ್ಲಿ ಇದು ನಾಶ, ಇದು ಅವಿನಾಶ, ಇದು ರೂಪ, ಇದು ಅರೂಪ, ಇದು ಜಡ, ಇದು ಅಜಡವೆಂಬ ಕಲ್ಪಿತ ದೃಷ್ಠಿಗಿಂಬಿಲ್ಲ, ಎಲ್ಲಿನೋಡಿದಲ್ಲಲ್ಲಿ ಗುರುಲಿಂಗವನ್ನೇ ತೋರಿಸುವ ಮಹಾಜ್ಞಾನ. ಗುರು ಲಿಂಗ ಜಂಗಮ ತನ್ನೊಳಗೆ ಕಂಡ ಜ್ಞಾನ, ಅರಿವ ಅರುಹಿನಿ ಈ ಉಭಯ ನಷ್ಟ ಮಾಡಿ ಅರಿಯ ಬಾರದ ಘನದಿರುವ ತೋರುವ ಕರುಣೆಗೆ ಏನೆನ್ನಬೇಕು.

ಗುರು, ಲಿಂಗ, ಜಂಗಮರಲ್ಲಿ ನಿರ್ವಂಚನೆಯ ವೈರಾಗ್ಯ, ಗುರುವಿನಲ್ಲಿ ವಂಚನೆ ಬರಬಾರದು. ಲಿಂಗ ಜಂಗಮದಲ್ಲಿ ವಂಚನೆ ಮಾಡಬಾರದು. ಮಾಡಿದಲ್ಲಿ ವೈರಾಗ್ಯವೆನಿಸದು. ಸ್ಥೂಲ ವೈರಾಗ್ಯದವರು ಸಿಕ್ಕುತ್ತಾರೆ. ಜ್ಞಾನ ವೈರಾಗ್ಯದಲ್ಲಿ ಸಮದೃಷ್ಟಿ, ಸಮರತಿ, ಸಮಭಾವ ನೆಲೆಯೂರಿರುವದು ಗುರುವಿನಲ್ಲಿ ಚಾರಿತ್ರವ, ಲಿಂಗದಲ್ಲಿ ಸ್ಥಲ ಸಂಪಾದನೆ, ಜಂಗಮದಲ್ಲಿ ಜಾತಿ ಕಾಣುವವರಿಗೆ ನಿರ್ವಂಚನೆ ಬಾರದು. ಆರು ಗುರುದೇವನನ್ನು ಅರಿಯಬಾರದ ಘನ ಲಿಂಗಯ್ಯನನ್ನು ಅರಿಯಬಾರದ, ಜಂಗಮದೇವನನ್ನು ಅರಿಯಬಾರದ ಘನವೆಂದು ವಿಶ್ವಾಸ ಮಾಡಿಹರು. ಅಪಾರ ನಂಬಿಗೆ ಮಾಡಿಹರು, ಅವರಲ್ಲಿ ನಿರ್ವಂಚನೆ ಇದೆ. ಆ ಪರಿಶುದ್ದವಿರುವದರಿಂದ ತ್ರಿವಿಧವನ್ನು ಕಾಣಬಾರದ ಘನವೆಂದು ಭಾವಿಸಿರು ವುರು. ಈ ಮೂರನ್ನು ಪೂರ್ವಾಶ್ರಮ ದೃಷ್ಠಿಯಿಂದ ನೋಡದ್ದರಿಂದ ನಿರ್ವಂಚನೆಯೆ ವೈರಾಗ್ಯವೆಂದು ಹೇಳಿದರು.

ಭಾವಕ್ಕಗಮ್ಯವಾಗಿಹ ನಿಲುವು ಅರುವಿಂಗರುವಾದುದು ಇಲ್ಲಿ ಬಿಟ್ಟುದಿಲ್ಲ, ಹಿಡಿದುದಿಲ್ಲ, ಅಕ್ರಿಯೆ ನಿಲವು, ಕ್ರಿಯಾಚಾರವಂತರಿಗೆ ಹೇಗೆ ಸಾಧ್ಯ. ಗುರು, ಲಿಂಗ, ಜಂಗಮ ಈ ಮೂರರಲ್ಲಿ ವಂಚನೆಯುಳ್ಳವರು ವೈರಾಗ್ಯವಂತರಲ್ಲ, ಗುರುಲಿಪಿ, ಲಿಂಗಲಿಪಿ, ಜಂಗಮಲಿಪಿ ತಿಳಿದವರು ವೈರಾ ಗ್ಯವಂತರು. ಅವರು ನಿರ್ವಂಚನೆಯುಳ್ಳವರು. ಅವರ ತನು ಗುರು ಲಿಂಗದಲ್ಲಿ ಸಮರಸವಾದುದರಿಂದ ನಿರ್ವಂಚಕರು. ಮನವು ಲಿಂಗವರಿಯಲು ಹೋಗಿ ಅಕಲ್ಪಿತ ಘನವಾದುದರಿಂದ ನಿರ್ವಂಚಕರು. ಭಾವ ತೆರಹಿಲ್ಲದ ಲಿಂಗಭರಿತವೆಂಬ ನಾಮವಿಡಿದು ಅರಿಯ ಹೋಗಿ ಭಾವಕ್ಕಗಮ್ಯವಾದುದರಿಂದ ಅವರು ಅರುವ ಅರಿಯಹೋದ ಅರು ಹೃದಯ. ಅದಕ್ಕಾಗಿ ಇವರಿಂದ ಲಭ್ಯವಾಗುವ ಮಹಾಜ್ಞಾನವೆ ಪ್ರಸಾದ. ಪ್ರಸಾದವೇ ಮುಕ್ತಿ ಇದು ಸತ್ಯ. ಶಿವಬಲ್ಲ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ. ಶುದ್ಧ ಜ್ಞಾನವೆ ಶುದ್ಧ ಪ್ರಸಾದ. ಸಿದ್ದ ಜ್ಞಾನವೆ ಸಿದ್ದ ಪ್ರಸಾದ . ಪ್ರಸಿದ್ದ ಜ್ಞಾನವೆ ಪ್ರಸಿದ್ದ ಪ್ರಸಾದ. ಪ್ರಸಾದವೆಂಬುದು ಪರಮಜ್ಞಾನ. ಅದು ಅರುವಿಂಗೆ ಅರುವು. ಅರಿಯಲಿಲ್ಲದ ಅರುಹು ಅದುಶುದ್ದ ಅರಿಯದರುವು ಅದು

ಸಿದ್ದ ಅರಿಯಲಿಲ್ಲದ ಅರುವು ತನಾದುದು ಪ್ರಸಿದ್ದ ಅರಿಯಲಿಲ್ಲದ ಅರುವನರುಹಿಸುವದೆ ಪ್ರಸಾದ ಅದುವೆ ಮೋಕ್ಷ.

ಮೋಕ್ಷವೆಂಬುದು ಸಕಲರಿಂದ ಬಿಡುಗಡೆಯಾದ ಅಚಿಂತ್ಯ ನಿಲವು. ಅಚಿಂತ್ಯ ಪದ ವಿಶ್ವಾಸ ಮಾಡುವದು ಸತ್ಯ. ಈ ಮೂರು ಅರಿಯಬಾರದ ಘನ ಅರಿದು ನೋಡಿದುದೆ ಸತ್ಯ. ಸತ್ಯ ಮಿಥ್ಯೆ ಆವುದ ರಿಂದ ಸಿದ್ದವಾಗುವದು ಸತ್ಯ. ಇದು ಸತ್ಯೆನ್ನ ಸತ್ಯ. ನುಡಿಗೆಡೆಗೊಡ ಘನವಾವುದು ಅದು ಸತ್ಯ. ಅರದರುಹಿಸಿಕೊಂಬುದಕ್ಕೆ ಮಿರಿದ ಘನವಾವುದು. ಅದು ಸತ್ಯ. ಅರಿಯಬಾರದ ಗನವಾವುದು ಅದು ಸತ್ಯ. ತೆರಹಿಲ್ಲದಭವ ನುಡಿಗೆಡಗೊಡದವನಾರು ಅವನೆ ಸತ್ಯ. ಸತ್ಯವಾವುದು ಅದು ಶಿವ, ಶಿವನೆನ್ನದ ಶಿವ, ಶಿವನೆಂದಲ್ಲಿಯೆ ತಪ್ಪಿತ್ತು. ಶಿವ ತನಗಿಂತನ್ಯನೆ? ತಾನೆ ಶಿವ. ಒಳಹೊರಗೆನ್ನದೆ ಭರಿತವಾದವನೆ ಶಿವ ಪೂರ್ಣ ಶಿವ ಅಖಂಡ ಶಿವ ನಾನೀನನೆಂಬುದಕ್ಕೆಡೆಗೊಡದ ಘನವಾದವುದು ಸತ್ಯ. ಚೈತನ್ಯ ಶಿವ, ತಾನೆ ಚೈತನ್ಯ, ಶಿವನೆಂದರೆ ತಾನೆ ಚೈತನ್ಯನೆಂದರೆ ತಾನೆ ಆದುದರಿಂದ ತಾನೆ ಬಲ್ಲ. ಸಕಲ ನುಡಿಗಳ ತಾನೆ ಬಲ್ಲವನಾದುದರಿಂದ ಸತ್ಯ ಶಿವಬಲ್ಲ ಎಂದು ಹೇಳಿರುವರು.

ವಚನ - 8

ಮಾಡುವಂತಿರಬೇಕು, ಮಾಡದಂತಿರಬೇಕು,
ಮಾಡುವ ಮಾಟದೊಳಗೆ ತಾನಿಲ್ಲದಿರಬೇಕು.
ಕೂಡಲ ಸಂಗಮದೇವ ನೋಡುತ್ತ ನೋಡುತ್ತ ನೋಡದಂತಿಬೇಕು.

ತಾತ್ಪರ್ಯ: ಮಾಡುವಂತಿರಬೇಕು, ಮಾಡದಂತಿರಬೇಕು : ನರಜನ್ಮ ಇದು ಅರುವಿನ ಜನ್ಮ, ಜ್ಞಾನವಾನ ಜನ್ಮದಲ್ಲಿ ಬಂದ ಮೇಲೆ ಮಾಡುವಂತಿದ್ದು ಮಾಡದಂತಿರಬೇಕು. ತನು, ಇಂದ್ರಿಯಗಳು, ಪ್ರಾಣ ಕರಣಂಗಳು ಮಾಡುವಂತಿದ್ದು, ತಾನು ನಿರುಪಾದಿ ನಿರಾಲಂಬತ್ವ, ನಿಸ್ಸಂಗತ್ವ ಅಂತೀಂದ್ರಿಯತ್ವ ಅರಿತಿರಬೇಕು. ತಾನಾರೆಂದು ಅರಿತಲ್ಲಿ ಮಾಡದಂತಿರುವ ನಿರಾಲಂಬತ್ವ ತನಗೆ ವೇದ್ಯವಾಗುವದು.

ಲಿಂಗಾಂಗ ಸಾಮರಸ್ಯ ಜ್ಞಾನಿಯಾಗುವುದೆ, ಮಾಡುವಂತಿದ್ದುದು. ಶರಣರ ಸಮಗೋಷ್ಠಿ ಮಾಡದಂತಿದ್ದ ಅಚಿಂತ್ಯಪದ. ಉಪಾದಿಯುಳ್ಳವನಾಗಿ ಕಂಡರು, ನಿರುಪಾದಿ ಅಳವಡಿಸಿಕೊಂಡುದೆ ಮಾಡುವಂತಿದ್ದುದು ಹೌದು ಮಾಡದಂತಿದ್ದುದು ಅಹುದು. ದಾಸೋಹಂ ಭಾವಿಗಳು ಮಾಡುವಂತೆ ಕಂಡುದು ಅಹುದು. ಭಾವಕ್ಕಗಮ್ಯರಾದದರಿಂದ ಮಾಡದಂತಿದ್ದುದು ಅಹುದು.

ಜ್ಞಾನ ಜ್ಞೇಯ ಒಂದಾದ ಭಕ್ತರು ಮಾಡುವಂತೆ ಕಂಡುದು ಅಹುದು. ಮಾಡದಂತೆ ಕಂಡುದು ಅಹುದು. ಅಂಗವೆ ಲಿಂಗ, ಲಿಂಗವೇ ಅಂಗವೆಂದರಿತ ಮಹಾಲಿಂಗಿ ಮಾಡುವದದೆಂತು ? ಚಿತ್ಕಾಯ, ಚಿದ್ಘನವೇ ತನ್ನಿರುವ ಎಂದರಿತ ಶರಣ ನಿರುಪಾಧಿಯು ನಿಸ್ಸಂಗಿಯಾದ ಘನ ಗಂಭೀರ, ಲಿಂಗವರಿತ ಘನವಂತರು ಮಾಡುವದದೆಂತು?

ಮಾಡುವಂತಿದ್ದು, ಮಾಡದಂತಿರಬೇಕಾದರೆ ಇವರು ತತ್ವಜ್ಞರು. ಸತ್ಯಜ್ಞಾನಾನಂದವರಿತ ಪರಿಣಾಮಿಗಳು ಅಲೌಕಿಕರು. ಇವರು ಕಾಯವುಳ್ಳವರಾಗಿ ಕಂಡರು ಅಕಾಯರು, ಚಿತ್ಕಾಯರು. ಇಂದ್ರಿಯವುಳ್ಳವರಾಗಿ ಕಂಡರು, ಅತೀಂದ್ರಿಯರು. ಇವರ ಕರಣಂಗಳು ಲಿಂಗ

ಕಿರಣಂಗಳು. ನಿತ್ಯ ನಿರಂಜನ ತಾನೆಂದರಿತ ಶರಣರ, ಅರುವಿನ ಕರಣಂಗಳು ಅರುವ ಅರಿಯಹೋದ ಕಿರಿಣಂಗಳು. ಇವರು ಸಮದೃಷ್ಟಿಯುಳ್ಳ ಪ್ರಾಜ್ಞರು. ಸವೆಯದ ಸುಖಿಗಳು. ಅಕ್ಷಯ ಸುಖಿಗಳು. ನಿರ್ದೇಹಿಗಳು. ಗುರುವಿನ ಕೈಯಲ್ಲಿ ಆನು ಎಂಬುದು ಸತ್ತು ಹುಟ್ಟಿದವರು, ಅಜಾತರು. ಇವರು ನಾನು ನೀನೆಂಬುದಕ್ಕಿಂಬುಗೊಡದ ಸೀಮಾತೀತರು. ನೆಪ ಮಾತ್ರ ಮಾಡುವಂತೆ ಕಂಡರೂ ಮಾಡದಂತಿದ್ದ ನಿಸ್ಸಂಗಿಗಳು. ಮಾಡುವ ಮಾಟದೊಳಗೆ ತಾನಿಲ್ಲದವರು. ಮಾನವರು ತಾನು ಮಾಡುವಲ್ಲಿ ತನ್ನದಾದ ಗುರಿಯನ್ನಿಟ್ಟುಕೊಂಡು ಮಾಡುವವರು ಸಾಕಷ್ಟು ಜನ ಸಿಕ್ಕುತ್ತಾರೆ. ಪ್ರಪಂಚಕರು ಫಲಾಪೇಕ್ಷೆಯನ್ನಿಟ್ಟುಕೊಂಡೆ ಪ್ರತಿಯೊಂದು ಕರ್ಮ ಮಾಡುವದು ಸಹಜ ರೂಢಿಯಾಗಿದೆ. ಕರ್ಮಿಗೆ ಫಲಾಪೇಕ್ಷದ ರೂಢಿ. ಭಕ್ತಂಗೆ ಅರ್ಪಿಸುವ ರೂಢಿ. ಜ್ಞಾನಿಗೆ ಚಿದಹಮ್ಮದ ರೂಢಿ ಇವರೆಲ್ಲರೂ ಮಾಡುವ ಮಾಟದೊಳಗೆ ತಾನಾಗಿದ್ದವರು.

ಬಸವರಸರು ಮಾಡುವ ಮಾಟದೊಳಗೆ ತಾನಿಲ್ಲದಿರಬೇಕೆಂದು ಬಿತ್ತರಿಸಿದುದು ನೋಡುವುಡೆ ಸಕಲರು ಅಹಂಕಾರದಿಂದುಕ್ತರು, ಕರ್ತೃತ್ವಭೋಕ್ತೃತ್ವದಿಂದುಕ್ತರು. ಇವರೆಲ್ಲರೂ ಭವದ ಭಾರಿಗಳು. ಎಲ್ಲಿಯವರೆಗೆ ಅಹಂವುಳ್ಳವರು ಅಲ್ಲಿಯವರೆಗೂ ಮಾಡುವ ಮಾಟದೊಳಗೆ ತಾನಿದ್ದವರು. ಇದು ಕಾರಣ ಸಕಲರಿಗೂ ಮಾಡುವ ಮಾಟದೊಳಗೆ ತಾನಿಲ್ಲದಿರುವುದು ಅವಶ್ಯಕವಾದುದು. ತಾನು ನಿಸ್ಸಂಗನಾಗಿದ್ದು ಆವುದೆ ಕಾರ್ಯ ಮಾಡಿದರೆ ಅಡ್ಡಿಯಿಲ್ಲ. ತತ್ವಜ್ಞಾನದಿಂದ ಮಾನವನಿಗೆ ನಿಸ್ಸಂಗನಾಗಿರುವುದು ಬರುವದು. ನಿಸ್ಸಂಗವಾಗಿರಲು ಸತ್ಸಂಗವ ಮಾಡುವುದು.

ಸತ್ಸಂಗತಂ ನಿಸ್ಸಂಗತ್ವಂ, ನಿಸ್ಸಂಗತ್ವ ನಿರ್ಮೋಹತಂ, ಜೀವನ್ಮುಕ್ತತಂ, ನಿಶ್ಚಿಂತತಂ, ತತ್ವಜ್ಞಾನಕ್ಕಾಗಿ ಸತ್ಸಂಗ ಮಾಡುವದು, ಸತ್ಸಂಗ ಮಾಡುವದರಿಂದ ಸಚ್ಚಿದ್ರೂಪವಾಗಿಹ ತನ್ನ ಸ್ವರೂಪ ಜ್ಞಾನವಾಗುವದು. ಸ್ವರೂಪ ಜ್ಞಾನೋದಯದಿಂದ ನಿಸ್ಸಂಗತ್ವ ಸಿದ್ದಿಸುವುದು. ನಿಸ್ಸಂಗದ ಸಿದ್ದಿಯಾಗಿರುವುದರಿಂದ ನಿರ್ಮೋಹನೆಲೆಗೊಳ್ಳುವದು. ನಿರ್ಮೋಹಕದಿಂದ ಪ್ರಪಂಚ ತೋರಿದರೂ ತಾನು ತೋರಬಾರದ ಘನದಿರುವ ಕಂಡು ಎಲ್ಲೆಲ್ಲೂ ತನ್ನನ್ನೆ ಕಾಣುವ ಸಮದೃಷ್ಟಿಯುಳ್ಳವನಾಗಿ ಸುಖದ ಸುಖವ ಸವಿಯುತ್ತ ನಿಶ್ಚಿಂತನಾಗಿಹನು. ಕಾರಣ ತತ್ವಜ್ಞಾನ ಪಡೆಯುವದು.

ಅರಿತ ಶರಣನ ಮನವು ಅರ್ಪಣ ಮಾಡುವಂತೆ ಕಂಡರೂ ತಾನು ಅಚಿಂತ್ಯ ಪಥದಲ್ಲಿ ತಲ್ಲೀನವು. ಬುದ್ದಿ ಬೋಧ ಮಾಡುವುದಾಗಿ ಕಂಡರೂ ತಾನು ಬೋದಕ್ಕೆ ಮೀರಿ ಬೆಳಗುವ ಮಹಾಬೆಳಗು. ಅಖಂಡ ಬೆಳಗುಳ್ಳವ ನಾದ್ದರಿಂದ ಮಾಡುವ ಮಾಟದೊಳಗೆ ತಾನಿಲ್ಲದವನು ಆಗಿಹನು ಎಂದು ತಿಳಿಯುವದು.

ಕೂಡಲಸಂಗಮದೇವಾ ನೋಡುತ್ತಾ ನೋಡುತ್ತಾ ನೋಡದಂತಿರಬೇಕು: ನಿರಂತರವಾಗಿರುವ ಮಂಗಳಮಯ ಸತ್ ಸ್ವರೂಪನೆ ಕೂಡಲಸಂಗಮದೇವನು. ಎನ್ನ ಅನುಭಾವದ ಗಮ್ಯನ? ಎನ್ನರುವಿನ ವಿಶ್ರಾಮವೆ, ಎನ್ನ ನಿಜದ ನಿಲವ ನೋಡುತ್ತಾ ನೋಡುತ್ತಾ ನೋಡದಂತಿರಬೇಕು. ಲಿಂಗಯ್ಯನನ್ನು ನೋಡುತ್ತ ನೋಡುತ್ತ ನೋಡದಂತಿರಬೇಕಾದರೆ; ಲಿಂಗಯ್ಯನನ್ನು ಕುರುಹಾಗಿ ಕಂಡವರು ನೋಡ ಹೋಗಲಿಲ್ಲ, ಇವರು ಪೂಜೆ ಮಾಡಲು ಸರಿಹೋದರು. ಲಿಂಗವರಿಯ ಹೋದವರು ಲಿಂಗವ ಬೆರೆಸಿ ಲಿಂಗವಾಗಿ ನೋಡದಂತಾದರು.

ಲಿಂಗದ ತನುವ ಕಂಡವರು ಅನುವ ಕಾಣದೆ ಲಿಂಗಯ್ಯನ ಪೂಜೆ ಮಾಡುತ್ತ ಪೂಜೆಯಲ್ಲಿಯೇ ನಿಂತರು. ಲಿಂಗದ ತನುವ ಕಂಡರೂ ಗುರು ಕರುಣೆಯ ಅನುವಿನಿಂದ ಸ್ವಪ್ರಭೆಯ ನೋಡುತ್ತ ನೋಡುತ್ತ ನೋಡದಂತಾದರು. ಕೆಲವರು ಶ್ರೀಗುರು ಇಷ್ಟ ಲಿಂಗವ ಕರುಣಿಸಿದರೂ ಅರಿಯಹೋಗದೆ ಪೂಜಾ ಮಾಡುವಲ್ಲಿಯೇ ಅರುವೆ ಆಚಾರವೆಂದು ಪೂಜೆ ಪೂಜೆ ಎಂದು ಪೂಜಾ ಕ್ರಿಯೆಯಲ್ಲಿಯೆ ನಿಂತರು.

ಆರುವು ಅನುಭಾವದಗಮ್ಯವು. ನಿಜದ ನಿಲುವು ಆ ಅರಿಯಲಿಲ್ಲದ ಅರುವೆ ತಾನಾಗಿ ಅರಿಯಲಿಲ್ಲ, ಗುರು ಕರುಣಿಸಿದ ಇರವು ಎಂದು ಎನ್ನ ಅನುಭಾವದಗಮ್ಯವೇ ಎಂಬುದು ಮರೆಯಲಿಲ್ಲ, ನನ್ನ ಇರುವಿನ ವಿಶ್ರಾಮಬವು ವೆಂದು ಮರೆಯಲಿಲ್ಲ. ನನ್ನಯ ನಿಜವೆನ್ನದ ಶಬ್ದಮುಗ್ದವಾಗಿಹ ನಿಜದ ನಿಲವು ಎಂಬುದು ಮರೆಯಲಿಲ್ಲ.ಇವರದು ನೋಡದ ನೋಟವಾಗಿ, ನೋಡುತ್ತ ನೋಡುತ್ತ ಸ್ವಯ ಲಿಂಗವೇ ತಾನಾದುದರಿಂದ ನೋಡದಂತಿರ ಬೇಕು ಎಂದು ಹೇಳಿಹರು.

ವಚನ - 9

ತಾ ನಡೆದಡೆ ನಡೆಗೆಟ್ಟ ನಡೆಯ ನಡೆವುದಯ್ಯಾ.
ತಾ ನುಡಿದಡೆ ನುಡಿಗೆಟ್ಟ ನುಡಿಯ ನುಡಿವುದಯ್ಯಾ.
ರೂಹಿಲ್ಲದ ಸಂಗವ ಮಾಡಬೇಕು,
ಭವವಿಲ್ಲದ ಭಕ್ತಿಯ ಮಾಡಬೇಕು.
ತಾನಾವನೆಂದರಿಯದಂತಿಹುದು, ಗುಹೇಶ್ವರಾ.

ತಾತ್ಪರ್ಯ: ತಾ ನಡೆದಡೆ ನಡೆಗೆಟ್ಟ ನಡೆಯ ನಡೆಯಬೇಕು, ತಾ ನುಡಿದಡೆ ನುಡಿಗೆಟ್ಟ ನುಡಿಯ ನುಡಿಯಬೇಕು: ನಡೆಯದವನ ನಡೆ ಅದಾವ ನಡೆ ? ಇದು ಅತೀಂದ್ರಿ ತಾನಾದ ನಡೆ, ಕಣ್ಣಿನ ಕಣ್ಣಾದವನ ನಡೆ, ಕಿವಿಯ ಕವಿಯಾದವನ ನಡೆ, ಕೈಯ ಕೈಯಾದವನೆ ಮನದ ಮನವಾದವನ ನಡೆ, ''ಕಣ್ಗಳು ತುಂಬಿದ ಬಳಿಕ ನೋಡಲಿಲ್ಲ, ಕಿವಿ ತುಂಬಿದ ಬಳಿಕ ಕೇಳಲಿಲ್ಲ , ಕೈ ತುಂಬಿದ ಬಳಿಕ ಹಿಡಿಯಲಿಲ್ಲ, ಮನ ತುಂಬಿದ ಬಳಿಕ ನೆನೆ ಯಲಿಲ್ಲ ಕೂಡಲಸಂಗಮದೇವಾ.'' ಭಾವ ಭಾವಿಸಲುಂಟೆ ? ಭಾವ ಭಾವಿಸಲರಿಯದು, ಅದೇನು ಕಾರಣ, ಭಾವದಲ್ಲಿ ಭರಿತನಾಗಿ. ಕಣ್ಣಿನ ಕಣ್ಣಾದವನು ಭರಿತನು, ಭರಿತನ ನಡೆ, ಲಿಂಗ ಭರಿತ; ಲಿಂಗವರಿತವನು ಭರಿತ. ಭರಿತ ತಾನಾದವನ ನಡೆ,ಲಿಂಗದ ನಡೆ, ನಡೆಯದ ವನ ನಡೆ, ಆಕಾಶವದು ನೆಡೆಯದ ನಡೆ, ಭರಿತ ನಡೆ, ಚಿದಾಕಾಶ ತಾನಾದುದೆ ನಡೆ ಯದ ನಡೆ, ಅರಿದರುಹಿಸಿ ಕೊಂಬುದ ಮೀರಿದ ಘನವರಿತವನ ನಡೆ. ಅರಿಸಿಕೊಂಬುದು ತಾನಾದ ನಡೆ, ಅರಿವವನೂ ತಾನಾಗದ ನಡೆ, ಅರಿಯಲಿಲ್ಲದ ಅರುವೆ ತಾನಾದ ನಡೆ.

''ನುಡಿಯಿಂದ ನಡೆಗೆಟ್ಟಿತ್ತು, ನಡೆಯಿಂದ ನುಡಿಕೆಟ್ಟಿತ್ತು, ಭಾವಗುಸುಟು ತಾನೆ ನಾಚಿ ಮಾದುದು ನೋಡಾ. ಗುಹೇಶ್ವರನೆಂಬ ಅರಿವು ಸಿನೆ ಬಂಜೆ ಯಾದುದು.'' ಎಂಬ ಪ್ರಭುವಿನ ಮಹದರುವು ನಡೆಯಿಂದ ನುಡಿ ಕೆಟ್ಟಿತ್ತು, ನುಡಿ ಕೆಡಿಸಿದ ನಡೆ, ಅದಾವ ನಡೆ ? ನುಡಿಯಿಂದ ನಡೆ ಕೆಟ್ಟಿತ್ತು ? ನುಡಿಯಿಂದ ನಡೆ ಕೆಡಿಸಿದ ನಡೆ ಆವುದು ?

ನುಡಿ ಗುರು ಹೃದಯದಿಂದ ಹೊರ ಬಂದ ನುಡಿ. ನುಡಿದರೆ ಮುತ್ತಿನ ಹಾರ ದಂತಿದ್ದ ನುಡಿ, ತೆರೆಹಿಲ್ಲದ ಲಿಂಗ ಭರಿತನೆಂಬ ನುಡಿ ಎಡಿದು ನಡೆ ಕೆಟ್ಟಿತ್ತು .ಅದಾವ ನಡೆ ಕೆಟ್ಟಿತ್ತು. ಕಲ್ಪಿತನ ನಡೆ, ಕಲ್ಪಿತನ ತನು, ಇಂದ್ರಿಯಂಗಳು, ಪ್ರಾಣಾದಿಗಳು, ಕರಣಂಗಳೆಂಬ ಭಾವವೆ ಕೆಟ್ಟು ನಡೆಯೆ ಕೆಟ್ಟಿತ್ತು. ಎಲ್ಲಿ ನೋಡಲಲ್ಲಿ ಲಿಂಗ ಭರಿತವೆಂಬುದು ಸಿದ್ಧವಾಗಿ ಇಲ್ಲದ ಭ್ರಮರೂಪ ಜೀವನೆಂಬ ನಡೆ ಕೆಟ್ಟಿತ್ತು, ಪರಮನೆಂಬ ನಡೆ ಕೆಟ್ಟಿತ್ತು. ಭ್ರಾಮರೂಪ ವದು ಭ್ರಮೆಯಾಗಿ ನಾಚ್ಚಿತ್ತು, ಗುಹೇಶ್ವರನೆಂಬ ಅರಿಯಲಿಲ್ಲದ ಅರುವು ಹುಟ್ಟ ಬಂಜೆ ಯಾದುದು.

ಗುಹೇಶ್ವರನೆಂಬ ಅರಿವು ಅದು ಅರುಸಿಕೊಂಬುದಕ್ಕೆ ಉದಯಿಸಿದುದಲ್ಲ. ಅರಿವ ಅರುವ ಉದಯಿಸಿದುದು ಅಲ್ಲ. ಅಂದು ಇಂದು ಎಂದೆಂದೂ ಅರಿಯಲಿಲ್ಲದ ಅರುವೆ ಆಗಿ ರುವದರಿಂದ ಗುಹೇಶ್ವರನೆಂಬ ಅರಿವು ನಿನೆ ಬಂಜೆ ಯಾದುದಲ್ಲ ವೆಂದು ಹೇಳಿಹರು.

ನಡೆಯಿಂದ ನುಡಿ ಕೆಟ್ಟಿತ್ತು ನಡೆ ? ಅದಾವ ನಡೆಯಿಂದ ನುಡಿ ಕೆಟ್ಟಿತ್ತು. "ಲಿಂಗವನ್ನೆ ಲಿಂಗೈಕ್ಯವೆನ್ನೆ , ಸಂಗವೆನ್ನೆ ಸಮರಸವೆನ್ನೆ ,ಆಯಿತ್ತೆನ್ನೆ , ಆಗದೆನ್ನೆ ಚನ್ನಮಲ್ಲಿಕಾ ರ್ಜುನನಲ್ಲಿ ಏನೂ ಎನ್ನದೆ ಶಬ್ದ ಮುಗ್ಧವಾಗಿದ್ದೆ," ಶಬ್ದಮುಗ್ಧವಾಗಿದ್ದ ನಡೆ, ಮಾತಿಲ್ಲದವನ ಕೂಡೆ, ಮಾತನಾಡ ಹೋದಡೆ ಎನ್ನ ಮಾತಿನ ಪ್ರಸಂಗವ ನುಡಿಯಲೊಲ್ಲನು, ಮಾತಿನ ಹಂಗು ಹರಿದು ಪರವಶವಾಗಿ ನಿಂತ ನಡೆಯಿಂದ ತೆರಹಿಲ್ಲದ ಲಿಂಗ ಭರಿತನೆಂಬ ನುಡಿ ಕೆಟ್ಟಿತ್ತು.

ಮಾತಿಲ್ಲದವನ ನೋಡ ಹೋದಲ್ಲಿ ಅಲ್ಲಿ ತನ್ನ ಮಾತೆ ನಿಷ್ಪ್ರಯೋಜಕವಾಗಿ, ಮಾತಾಡಲು ನಾಚಿಕೆಯಾಗಿ, ಅಲ್ಲಿ ಅರಿಸಿ ಕೊಳ್ಳುವ ನಾಮ ರೂಪಂಗಳ ಮಾತಾಡುವುದು ಅನಾರ್ಥಕವಾಗಿ ಇತ್ತ ಅರಿವ ದೃಕ್ ಸಾಕ್ಷಿ ಸ್ವಯಂ ಪ್ರಕಾಶವೆಂಬ ಮಾತು ನಿರರ್ಥಕ ವೆಂದನಿಸಿ ಏಕೆಂದರೆ ಇವೆರಡು ಮಾತಿಲ್ಲದವನ ಇರುವು. ಅಲ್ಲವೆಂದು ತಿಳಿದಲ್ಲಿ ಮಾತಾಡಲು ನಾಚಿಕೆಯಾಗಿ, ಮಾತಿಲ್ಲದವನ ಇರುವಾಗಿಹ ಅರಿಯಲಿಲ್ಲದ ಅರುವೆ ಪ್ರಜ್ವಲಿಸಿದಾಗ ಪರವ ಶವಾಗಿ ನಿಂತು ನುಡಿಗೆಡೆ ಗೊಡದ ಘನದಿರುವೆ ತನ್ನದಾಗಿ ಲಿಂಗವೆನ್ನೆ, ಲಿಂಗೈಕ್ಯವೆನ್ನೆ , ಸಂಗ ವೆನ್ನೆ , ಸಮರಸವೆನ್ನೆ ,ಆಯಿತೆನ್ನೆ ಆಗದೆನ್ನೆ ಎಂಬ ತನ್ನ ನುಡಿ ತಾನೆ ಸೇರದವ ನಾದುದರಿಂದ ಲಿಂಗವೆನ್ನೆ ಲಿಂಗೈಕ್ಯ ವೆನ್ನೆ ಎಂಬ ನಡೆಯಿಂದ ನುಡಿಕೆಟ್ಟಿತ್ತು ಎಂದು ಹೇಳಿಹರು. ಲಿಂಗ ವೆಂಬುದ್ದು ಭರಿತವೆಂಬ, ಅಂಗವೆಂಬುದು ಭರಿತವೆಂಬ ಭಾವ ನಾಚಿ ತಾನೆ ಮೌನವ ಧರಿಸಿ ಗುಹೇಶ್ವರ ಲಿಂಗವದು ಶಬ್ದ ಮುಗ್ದ ವಾದುದಕಂಡು ತಾ ನಡದೆಡೆ ನಡೆ ಗೆಟ್ಟ ನಡೆಯ ನಡೆ ಯುವದು.

ಶರಣರ ನಡೆ ಅರಿಯಲಿಲ್ಲದ ಅರುವ ತಾನಾಗಿಹ ನಡೆ ತನ್ನದು ಅಚಿಂತ್ಯ ನಡೆ. ತನ್ನ ಸ್ವಸುಖದಲ್ಲಿದ್ದು ತಾನೆ ತಾನಾಗಿ ಸಂಚರಿಸುವ ನಡೆ, ಅಹಮಿಲ್ಲದ ನಡೆ, ಮರವಿನ ಅಹಂಭಾ ವಿಯು ಅಲ್ಲ, ಅರುವಿನ ಅಹಂಭಾವಿಯು ಅಲ್ಲ, ಜೀವನೆಂಬುದಿಲ್ಲ, ಪರಮನೆಂಬುದಿಲ್ಲ, ನಾನೆಂಬುದಿಲ್ಲ, ನನ್ನದೆಂಬುದಿಲ್ಲ, ನೀನೆಂಬುದಿಲ್ಲ , ಅಹುದಾದುದಿಲ್ಲ ,ಅಲ್ಲಾದುದಿಲ್ಲ, ಬೇಕೆಂಬು ದಿಲ್ಲ , ಬೇಡೆಂಬುವದಿಲ್ಲ , ಅಂಗವೆಂಬುದಿಲ್ಲ , ಲಿಂಗವೆಂಬುದಿಲ್ಲ, ತೆರಹಿಲ್ಲದ ಭವ ನುಡಿ ಗೆಡೆಗೊಡದ ಘನದಿರುವಿಂಗೆ ಭೇದ ಅಭೇದವೂ ಇಲ್ಲ , ಆಸ್ತಿ ಆವುದೆಂದು ಹೇಳುವದು ನಾಸ್ತಿ ಆವುದೆಂದು ಹೇಳುವುದು, ತೆರಹಿಲ್ಲದ ಮಹಾಘನದಲ್ಲಿ ನುಡಿದು ಹೇಳು

ವದದ್ದೆಂತು ? ಅಕಲ್ಪಿತ ಘನವೆ ತನ್ನಿರುವೆಂದರಿದ ಘನವಂತನ ಕಲ್ಪಿಸುವ ದದೆಂತು ? ಭಾವಿಸುವ ದದೆಂತು ? ಅಚಿಂತ್ಯತ್ವವೆ ತನ್ನಿರುವು ತಾನಾದುದೆ ನಡೆ ಕೆಟ್ಟು ನಡೆಯ ನಡೆದುದು, ನುಡಿಗೆಡೆ ಗೊಡದ ಘನದಿರುವು ತನ್ನಿರುವಾಗಿ, ತಾನಾಗಿ, ನುಡಿಯ ಸೇರದವ ನಾಗಿದ್ದುದು ನುಡಿಯಕೆಟ್ಟು ನುಡಿಯ ತಾನಾಗದಿದ್ದುದು, ನುಡಿಯ ಕೆಟ್ಟು ನುಡಿಯ ನುಡಿದುದು. ಇದು ನಿ:ಶಬ್ದ ಬ್ರಹ್ಮವೆ ತನ್ನಿರುವು ತಾನಾದವಂಗೆ ಸಾಧ್ಯವು.

ತಾನೆಂಬುದು ವಾಙ್ಮನೋತೀತವು ವಾದ್ದರಿಂದ ವಾಕಿಗೂ ಅತೀತನು, ಮನದ ನೆನಹಿಂಗೂ ಕಲ್ಪನೆಗೂ ಅತೀತ ನಾದ್ಯರಿಂದ, ನುಡಿದರೂ ಆ ನುಡಿ ಆ ನುಡಿಯು ತಾನಾಗದವನು , ಮನವು ಕಲ್ಪಿಸಲಿ ನೆನಯಲಿ, ನೆನಹು ತಾನಾಗದವನು ಕಲ್ಪನೆ ಕಲ್ಪಿತ ತಾನಾಗದ್ದರಿಂದ ಘನ ಗಂಭೀರನು. ಆ ಘನವಂತನ ಮಾತೆಂಬುದು ಜ್ಯೋತಿರ್ಲಿಂಗ. ತನ್ನ ತಾನರಿದವಂಗೆ ನುಡಿಯೆಲ್ಲ ತತ್ವನೋಡಾ, ಮರತವಂಗೆ ನುಡಿಯೆಲ್ಲ ಮಾಯೆ ನೋಡಾ, ತನ್ನ ತಾನರಿತವರ ನುಡಿ, ನುಡಿಯದಂತಿದ್ದ ನುಡಿ, ಶಬ್ದಮುಗ್ಧವು, ಇದು ವಾಙ್ಮನೋತೀತ ವಾದ್ದರಿಂದ ನುಡಿಗೆಟ್ಟ ನುಡಿ, ಲಿಂಗ ವರಿತ ಘನ ಗಂಭೀರ ಶುಭಾ ಶುಭಗಳನ್ನು ನೋಡುವ ವಾಚಕ ಕರ್ಮ ತನಗಿಲ್ಲವೆಂದು ನಿಶ್ಚಯ ವಾದುದರಿಂದ ನುಡಿಯುವ ನುಡಿ ತಾನಾಗದೆ ನುಡಿಯುವದರಿಂದ ನುಡಿಗೆಟ್ಟ ನುಡಿಯ ನುಡಿಯುವವನು ಎಂದು ಹೇಳಿದೆ .

ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವರಿತು ಅಚಲಾನಂದದಲ್ಲಿದ್ದ ಮಹಾಂತನು ನಡೆಕೆಟ್ಟ ನಡೆ ಯಾದರಿಂದ ಶುಭಾಶುಭಾಗಳನ್ನು ಕೊಡುವ ಕಾಯಕ ಕರ್ಮ ತನಗಿಲ್ಲವೆಂದು ತಿಳಿದುದರಿಂದ ತಾ ನಡೆದಡೆ ನಡೆಗೆಟ್ಟ ನಡೆ ನಡೆಯುವವ ನಾಗಿಹನು.

ಶುಭಾಶುಭಗಳನ್ನು ಕೊಡುವ ಮಾನಸಿಕ ಕರ್ಮ ತನಗಿಲ್ಲವೆಂದು ತಿಳಿದುದರಿಂದ ತಾನಡದಡೆ ನಡೆಗೆಟ್ಟ ನಡೆಯ ನಡೆಯುವವನು, ಘನ ಗಂಭೀರನು, ಅತೀಂದ್ರಿಯನಾದ ಜ್ಞಾನಾ ಮೃತನು, ಚನ್ಮಯಾನಂದನು ತಾನೆಂಬುದು ನಿಶ್ಚಿತ ವಿದ್ದುದರಿಂದ ತಾನಾಗದ ತನ್ನದಾಗದ ಅನಾತ್ಮ ದೃಷ್ಠಿ ಅನಾತ್ಮ ಭಾವ ಅನಾತ್ಮ ಜ್ಞಾನ ಕೆಟ್ಟುದು ಎಂದು ಹೇಳಿದೆ .

ರೂಹಿಲ್ಲದ ಸಂಗವ ಮಾಡಬೇಕು, ನುಡಿಗೆಟ್ಟ ನುಡಿಯುವ ನುಡಿ ಅದು ರೂಹಿಲ್ಲದ ಸಂಗ ಮಾಡುವ ನುಡಿ, ಅದು ಸಚ್ಚಿದಾನಂದ ಸುಖವ ಅರಳಿಸುವ ನುಡಿ, ಅರು ಹೃದಯ ಮಾಡುವ ನುಡಿ , ಸೀಮಿತ ಜ್ಞಾನವ ಕೆಡಿಸುವ ನಿಸ್ಸೀಮ ನುಡಿ, ಅರುಹು ಅರುವೆಂಬುವವರ ಅರುವ ಅರಿಯ ಹಚ್ಚುವದಲ್ಲದೆ ಶಬ್ದಮುಗ್ಧ ಮಾಡುವ ನುಡಿ ಇದು ನುಡಿದಂತೆ ಕಂಡರು ನುಡಿ ಗೆಟ್ಟ ನುಡಿ ನುಡಿಯುವದೆ ರೂಹಿಲ್ಲದ ವನ ಸಂಗ ಮಾಡಿದುದು.

ಲಿಂಗವ,ರೂಹಿಲ್ಲದುದು, ಲಿಂಗದ ಸಂಗವ ಮಾಡುವದೆ, ರೂಹಿಲ್ಲದ ಸಂಗ ಮಾಡಿದಂತೆ, ಲಿಂಗದ ಸಂಗವ ಹೇಗೆ ಮಾಡುವುದು ?

''ಲಿಂಗಸ್ಥೂಲ ವೆಂಬರು ಕೆಲವರು, ಲಿಂಗ ಸ್ಥೂಲವಲ್ಲ, ಲಿಂಗ ಸೂಕ್ಷ್ಮವೆಂಬರು ಕೆಲವರು, ಲಿಂಗ ಸೂಕ್ಷ್ಮವಲ್ಲ, ಸ್ಥೂಲ ಸೂಕ್ಷ್ಮದ ಮೇಲಣ ಜ್ಞಾನರೂಪ, ಪರಾನಂದ ಪರಬ್ರಹ್ಮವೆ ಲಿಂಗವೆಂದ ಅರಿದ ಅರಿವು ಅಖಂಡ ರೂಪು ನಿಜ ಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ನಿಲವು ತಾನೆ ಬೇರಲ್ಲ .'' ಅರುವ ಅರಿಯುವದೆ ರೂಪಿಲ್ಲದ ಸಂಗ, ಲಿಂಗ ವರಿಯುವದೆ ರೂಹಿಲ್ಲದ ಸಂಗ. ಲಿಂಗವೆಂಬುದು ಜ್ಞಾನರೂಪು, ಅರು ಸ್ವರೂಪ ವೆಂದು ಅರುವ ಅರಿಯ ಹೋಗಲು, ತಾನೆ ಅಖಂಡ ರೂಪವೆಂದು ತನ್ನಿಂದ ತನಗದು ಸಿದ್ಧಿಸಿದುದೆ ರೂಹಿಲ್ಲದ ಸಂಗ

ಮಾಡಿ ತಾನು ಸುಖದ ಸುಖಿ ಯಾದುದು. ರೂಹಿಲ್ಲದ ಸಂಗ ಮಾಡಿದುದು ತನ್ನದು ಸವೆಯದ ಸುಖವಾದ್ದರಿಂದ ಪರಾನಂದ, ಈ ಪರಾನಂದವೆ ತನ್ನಿರುವು ಆದುದು ಎಂದು ತಿಳಿವುದು.

ಭವ ವಿಲ್ಲದ ಭಕ್ತಿ ಮಾಡಬೇಕು, ಇದು ಬಸವರಸರ ಭಕ್ತಿ, ಭವ ವಿಲ್ಲದ ಭಕ್ತಿ, ಇದು ಘನ ಗಂಭೀರ ಮಹಾ ಘನದೊಳಗೆ ಘನಕ್ಕೆ ಘನ ವಾಗಿದ್ದ ಭಕ್ತಿ, ಕೂಡಲ ಸಂಗಯ್ಯನೆಂಬ ಬೆಳಗಿನೊಳಗೆ ಬೆಳಗಾಗಿರ್ದ ಭಕ್ತಿ , ಕೂಡದಗಲದ ಭಕ್ತಿ, ತಾನಾರೆಂದರಿತು ಸಯ ಸುಖದಲ್ಲಿ ಲೀಯವಾದ ಭಕ್ತಿ, ಇದು ಇಲ್ಲದುದು ಇಲ್ಲವಾಗಿ ಇದ್ದ ತನ್ನ ಸ್ವರೂಪ ಇದ್ದಕ್ಕಿದ್ದಂತೆ ಬೆಳಗಿದ ಬೆಳಗು. ಆ ಮಹಾ ಬೆಳಗಿನಲ್ಲಿ ನೆರೆ ನಿಂತುದು ಭವ ವಿಲ್ಲದ ಭಕ್ತಿ, ಇದು ನಿರಂತರ ವಾಗಿರುವ ಮಂಗಳಮಯ ಪರಮ ಸತ್ಯದಲ್ಲಿ ಒಂದಾದ ಭಕ್ತಿ, ಇದುವೆ ಜ್ಞಾನ ಜ್ಞೇಯ ಒಂದಾದ ಭಕ್ತಿ, ಭವ ವಿಲ್ಲದ ಭಕ್ತಿ, ಇದು ಅಪೂರ್ವಿಕ ಭಕ್ತಿ, ನಿಃಕ್ರಿಯದ ನಿಜದ ನಿಲವು, ತನು ಗುಣ ಪೂರ್ವ ಸೂತಕ ವಿರಹಿತರ ಭಕ್ತಿ, ಇಲ್ಲಿ ಭೇದ ಜ್ಞಾನ, ಭೇದ ಭಾವ, ಭೇದ ದೃಷ್ಠಿಗಿಂಬಿಲ್ಲ ಇದು ಲಿಂಗಾಂಗ ಸಾಮರಸ್ಯ ಜ್ಞಾನಿಗಳ ಭಕ್ತಿ, ಇದು ಅರಿತ ಶರ ಣರು ಭಕ್ತಿ ಮಾಡುವ ಭವ ವಿಲ್ಲದ ಭಕ್ತಿ ಮಾಡಿದುದು ಎಂದು ಹೇಳಿಹರು.

ವಚನ - 10

ಪೂರ್ವಿಕ ಪೂಜಕ, ಅಪೂರ್ವಿಕ ಭಕ್ತ ;
ಕರ್ಮಿ ಪೂಜಕ, ನಿಷ್ಕರ್ಮಿ ಭಕ್ತ ;
ಲಿಂಗ ಪೂಜಕ, ಜಂಗಮ ಭಕ್ತ ,
ತನುಗುಣ ಪೂರ್ವಸೂತಕ ವಿರಹಿತ
ಕೂಡಲ ಚನ್ನಸಂಗಯ್ಯನಲ್ಲಿ ಆತನೆ ಅಚ್ಚ ಶರಣ .

ತಾತ್ಪರ್ಯ: ಪೂರ್ವಿಕ ಪೂಜಕ, ಅಪೂರ್ವಿಕ ಭಕ್ತ, ಪೂರ್ವಿಕರಾರು ? ಅಪೂರ್ವಿಕ ರಾರು ? ಪೂಜಿಕರು ಪೂರ್ವಿಕರು, ಭಕ್ತರು ಅಪೂರ್ವಿಕರು. ಅಂಗ ಲಿಂಗ ಬೇರೆಂಬ ಭೇದ ಜ್ಞಾನಿಗಳು ಪೂಜಕರು. ಅಂಗ ಕೀಳು, ಲಿಂಗ ಶ್ರೇಷ್ಠವೆಂಬ ಭೇದ ಜ್ಞಾನಿಗಳು ಪೂಜಕರು. ಅಂಗ ಅಲ್ಪಜ್ಞ , ಲಿಂಗ ಸರ್ವಜ್ಞನೆಂಬ ಭೇದ ಜ್ಞಾನಿಗಳು ಪೂಜಕರು. ಅಂಗ ಲಿಂಗ ಒಂದೆ ಎಂಬ ಅಭೇದ ಜ್ಞಾನಿಗಳು ಭಕ್ತ. ಅಂಗವು ಸಚ್ಚಿದಾನಂದ. ಲಿಂಗವು ಸಚ್ಚಿದಾನಂದ. ಇದ್ದುದೊಂದೆ ಸತ್ಯಜ್ಞಾನಾನಂದ ವೆಂಬ ಅಭೇದ ಜ್ಞಾನಿಗಳು ಭಕ್ತ. ಶೈವರು ಪೂಜಕರು. ವೀರಶೈವರು ಭಕ್ತರು, ಶೈವರು ಪೂರ್ವಿಕರು, ವೀರಶೈವರು ಭಕ್ತರು, ಪೂರ್ವಿಕರು ಮರವುಳ್ಳ ವರು ಅಪೂರ್ವಿಕರು ಅರುವುಳ್ಳವರು.

ಪೂರ್ವಿಕರಾದ ಪೂಜಕರೆತ್ತ ? ಅಪೂರ್ವಿಕರಾದ ಭಕ್ತರೆತ್ತ ? ಲಿಂಗ ಪೂಜಿಸುವ ಪೂಜಕರೆತ್ತ ? ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗ ವರಿತು ಲಿಂಗದಲ್ಲಿ ಲೀಯವಾದ ಭಕ್ತರೆತ್ತ ? ಪೂಜಾ ಲಿಂಗವ ಪೂಜಿಸುವ ಲಿಂಗ ವಂತರೆತ್ತ ? ವೇದ ವೇದಾಂತ ಗಳಿಗ ಸಾಧ್ಯ ವಾದ ಅನುಪಮ ಲಿಂಗವ ತಂದು ಕೊಟ್ಟನಯ್ಯ ಸದ್ಗುರು ಎನ್ನ ಕರಸ್ಥಲಕ್ಕೆ ಕರುಣಿಸಿದುದೆತ್ತ ? ಜ್ಞಾನ ಜ್ಞೇಯ ಒಂದಾದ ಭಕ್ತರುಗಳ ಅರು ಹೃದಯವೆತ್ತ ? ಪೂರ್ವಿಕರಾದ ಪೂಜಕರೆತ್ತ ?

ಕತ್ತಲೆ ಎತ್ತ ? ಬೆಳಕೆತ್ತ ? ಅರಿಯದವ ನೆತ್ತ ?ಅರಿತವ ನೆತ್ತ ?

ಶಬ್ದ ಸಂಭ್ರಮದ ಹಂಗಿಲ್ಲದೆ ಲಿಂಗದಲ್ಲಿ ಲೀಯವಾದ ಅಪೂರ್ವಿಕ ಭಕ್ತರೆತ್ತ ? ಮಾಯಾ ಅವಿದ್ಯಾ ಉಪಾಧಿಯಿಂದುಕ್ತರಾಗಿ ಪೂಜಿಸುವ ಪೂರ್ವಿಕ ಕರ್ಮಿಗಳೆತ್ತ ? ನಿರುಪಾದಿಗಳಾಗಿ ನಿರ್ಮಾಯರಾಗಿ ಒಡಲೊಳಗಿದ್ದ ಲಿಂಗ ವರಿತು ಸ್ವಯ ಲಿಂಗವೆ ತಾನಾದ ಅಪೂರ್ವಿಕ ಭಕ್ತ ರೆತ್ತ ? ಜೀವ ಪರಮರ ಭೇದಜ್ಞಾನಿಯಾಗಿ ಪೂಜಾ ಲಿಂಗವ ಪೂಜಿಸುವ ಪೂರ್ವಿಕ ಕರ್ಮಿಗಳೆತ್ತ ? ಜೀವ ಪರಮರ ಏಕತ್ವ ಜ್ಞಾನಿಗಳಾಗಿ ಅರುವ ಅರಿಯ ಹೇಳಿದ ಇಷ್ಟ ಲಿಂಗವರಿತು ಲಿಂಗಕ್ಕೆ ಲಿಂಗವಾಗಿಹ ಸ್ವಯ ಲಿಂಗವಾಗಿಹ ನಿಃಕರ್ಮಿಗಳೆತ್ತ ?

ಆದಿ ಪೂಜಕ ಅನಾದಿ ಭಕ್ತ ! ಆವರಣ ವುಳ್ಳವ ಪೂಜಕ, ನಿರಾವರಣ ವುಳ್ಳವ ಭಕ್ತ, ದೋಷ ವುಳ್ಳವರು ಪೂಜಕರು, ನಿರ್ದೋಷಿಗಳು ಭಕ್ತರು. ಮರವುಳ್ಳವ ಪೂಜಕ ಅರುವುಳ್ಳವ ಭಕ್ತ, ಅಂಗ ಭಾವಿಯು ಪೂಜಕ, ಲಿಂಗ ಭಾವಿಯು ಭಕ್ತ, ಲಿಂಗಪ್ರೇಮಿ ಪೂಜಕ, ಜಂಗಮಪ್ರೇಮಿ ಭಕ್ತ, ಲಿಂಗಾರ್ಚಕ ಪೂಜಕ, ಜಂಗಮಾರ್ಚಕ ಭಕ್ತ. ಕುಲ ಛಲಂಗಳ ಪ್ರೇಮಿ ಕರ್ಮಿ, ಕುಲಂ ನಾಸ್ತಿ, ಛಲಂ ನಾಸ್ತಿ ಯಾದವ ನಿಃಕರ್ಮಿ. ಫಲ ಪದಂಗಳಿಂದುಕ್ತ ನಾದವ ಕರ್ಮಿ. ಫಲಂ ನಾಸ್ತಿ , ಪದಂ ನಾಸ್ತಿ , ಯಾದವ ನಿಃಕರ್ಮಿ, ಭವಂಗಳ ಕಾಣುವವ ಕರ್ಮಿ, ಭವ ವಿರಹಿತ ನಿಃಕರ್ಮಿ.ಕರ್ಮಿ ಯಾರು ? ನಿಃಕರ್ಮಿ ಯಾರು ?

ಜೀವ ಇವರೆಂಬ ಭೇದ ಜ್ಞನಿಗಳು ಕರ್ಮಿಗಳು, ಶಿವ ಜೀವರೇಕತ್ವ ಜ್ಞಾನಿಗಳು ನಿಃಕರ್ಮಿ ಭೇದ ಜ್ಞಾನಿಗಳು ಕರ್ಮ ಕಾಂಡಿಗಳು ಈಶಾರ್ಪಣ ಮಾಡುವವರು,ಬೇಧ ಜ್ಞಾನಿಗಳು ಅಹಂ ಮಮವುಳ್ಳವರು ಆರೆ ಇರಲಿ, ಯೋಗಿ ಇರಲಿ ಅಣಿಮಾದಿ ಸಿದ್ದಿ ಪುರುಷರಿರಲಿ ಕರ್ಮಿಗಳು ಅಹಂ ಭಾವವಳಿಯದವರು ನಿಃಕರ್ಮಿಗಳು. ಮರವರುವಿಗೆ ಅಹಂಕಾರದಿಂದುಕ್ತರಾದವರು ಕರ್ಮಿಗಳು, ಮರವರುವಿನ ಮೀರಿದ ಮಹಾಂತರು ನಿಃಕರ್ಮಿಗಳು. ನಾನೀನೆನ್ನುವ ಮತಿ ವಂತರು ಕರ್ಮಿಗಳು. ನಾನೀನೆಂಬ ಸಂದಳಿದವರು ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆ ತಾನೆಂದವರು ನಿಃಕರ್ಮಿಗಳು ಲಿಂಗ ಪೂಜಕ ಜಂಗಮ ಭಕ್ತ.

ಪೂಜಕರು ಸಿಕ್ಕುತ್ತಾರೆ, ಭಕ್ತರು ಸಿಗುವುದು ವಿರಳ. ಪೂಜಕ ನಾಗಬಹುದು, ಭಕ್ತ ನಾಗುವುದು ದುಸ್ತರ, ಪೂಜಾಲಿಂಗ ಪೂಜಿಸುವ ಪೂಜಕ ನಾಗಬಹುದು, ಲಿಂಗವರಿತು ಸ್ವಯ ಲಿಂಗದಲ್ಲಿ ಲೀನವಾಗಿ ಭಕ್ತನಾಗುವುದು ದುಸ್ತರ ನೋಡಾ.

ಲಿಂಗ ಲಿಂಗವೆಂದು ಹಲಬುವರೆಲ್ಲ ಪೂಜಕರು, ಅರಸುವವರು ಅನು ಸಂದಾನ ಮಾಡುವವರೆಲ್ಲ ಪೂಜಕರು, ಇವರು ಲಿಂಗ ವರಿಯದ್ದರಿಂದ ಲಿಂಗವು ಕುರುಹಾಗಿ ಕಂಡು ಪೂಜಕರಾದರು, ಲಿಂಗ ಲಿಂಗ ಎನ್ನದವರು ಭಕ್ತರು. ಲಿಂಗ ಸಕೀಲ ಸಂಯೋಗ ವರ್ಮಸ್ಥಲ ವರಿತುದರಿಂದ ಭಕ್ತರು.

ತೆರಹಿಲ್ಲದ ಲಿಂಗ ಭರಿತವೆಂಬ ಗುರು ಕಾರುಣ್ಯ ವಿಡಿಯದೆ ಅರಿಯದ್ದರಿಂದ ಪೂಜಕರು. ಪೂಜಕರಿಗೆ ಸಾಮಾನ್ಯ ಜ್ಞಾನವಿದೆ. ವಿಶೇಷ ಜ್ಞಾನವಿಲ್ಲ , ವಿಶೇಷ ಜ್ಞಾನವದು ಚಿತ್ ಸ್ವರೂಪಿ ಜಂಗಮ ದೇವನಿಂದ ಲಭ್ಯವಾಗುವ ಜ್ಞಾನ, ಚಿದ್ಘನದೊಳ್ ತನ್ಮಯನಾದ ಘನ ಜಂಗಮನ ಕೃಪೆ ಯಿಲ್ಲದಿದ್ದರೆ ಲಿಂಗದನುವ ಲಿಂಗದ ಗುಟ್ಟು ದುಸ್ತರ ವಾಗುವುದು.

ನಿರ್ನಾಮಿ ಜಂಗಮ, ನಿಜೈಕ್ಯ ಜಂಗಮ, ನಿರ್ಲಿಖಿತ ಜಂಗಮ ಕರುಣಿಸಿದಾಗ ಅಪೂರ್ವಿಕ ಭಕ್ತ ನಾಗಲು ಸಹಜ. ಲಿಂಗ ವರಿಯುವದು ಸಹಜ, ಲಿಂಗದಲ್ಲಿ ಲೀಯವಾಗು

ವುದು ಸಹಜ, ಇದು ಕಾರಣ ಲಿಂಗ ಪೂಜಕ ಜಂಗಮ ಭಕ್ತನೆಂದು ಹೇಳಿಹರು.

ತನುಗುಣ ಪೂರ್ವಸೂತಕ ವಿರಹಿತ ಕೂಡಲ ಚೆನ್ನಸಂಗಯ್ಯನಲ್ಲಿ ಆತನೆ ಅಚ್ಚ ಶರಣ. ಅಚ್ಚ ಶರಣ ಯಾರು ? ತನು ಗುಣ ಪೂರ್ವಸೂತಕ ವಿಲ್ಲದವರು ಅಂಗವೆ ಲಿಂಗ, ಲಿಂಗವೆ ಅಂಗವೆಂದರಿತ ಶರಣ. ಲಿಂಗಾಂಗ ಸಮರಸ ಜ್ಞಾನಿಯೆ ಶರಣ. ತಾನಾರೆಂದರಿತ ಶರಣ ಅರುವಿಂಗರು ವಾಗಿಹ ಮಹಾಂತನೆ ಶರಣ. ಅರಿಯ ಬಾರದ ಘನ ವರಿತು ಅರಿಯದಂತಿದ್ದವನೆ ಶರಣ. ಈತನೆ ಅಚ್ಚ ಶರಣ.

ಮಹಾಲಿಂಗ ರೂಪಿ ಶರಣಂಗೆ ಕಾಯವುಂಟೆ, ಕಾಯಾಭಿಮಾನ ಉಂಟೆ ? ಕಾಯ ಭಾವ ಮುನ್ನಿಲ್ಲ ವಾದ್ದರಿಂದ ತನು ಗುಣ ಪೂರ್ವ ಸೂತಕ ವಿರಹಿತ ಶರಣಕಾಯ ಚಿತ್ಕಾಯ, ಲಿಂಗಕಾಯ, ಸ್ವತೇಜವೆ ಪ್ರಜ್ವಲಿಸುವ ಕಾಯ ಅಲ್ಲಿ ತನುಗುಣ ನಷ್ಟ.

ಬೆಳಕಿನ ಮುಂದೆ ಕತ್ತಲೆ ಇರದು, ಸ್ವಯಂಜ್ಯೋತಿ ಲಿಂಗ ವಾಗಿಹ ಅರುವಿನ ಮುಂದೆ ಮರವು ಇರದು, ಮರವಿಗಿಂಬಲ್ಲ ದಿರುವುಲ್ಲಿ ಅಲ್ಲಿ ಅಣವ ಮಲ, ಮಾಯಾ ಮಲ, ಕಾರ್ಮಿಕ ಮಲವೆಂಬ ಮಲತ್ರಯಂಗಳು ತನಗೆ ತೋರಬಹುದೆ ? ಏನೊಂದಾಗದ ಘನವೆ ತಾನಾದ ಶರಣ. ಅಜಾತ ಲಿಂಗವಾದ ಶರಣ. ಇಂತಪ್ಪ ತತ್ವವರಿತ ಅಪೂರ್ವಿಕನಿಗೆ ಆದಾವ ಪೂರ್ವ ಸೂತಕ. ಸಚ್ಚಿದ್ರೂಪ ತಾನೆಂದರಿದ ಶರಣ. ನಿತ್ಯ ನಿರಂಜನ ತಾನೆಂದರಿದ ವಂಗೆ ಷಡ್ವಿಕಾರ ಉಂಟೆ ? ಮಲತ್ರಯ ಕಾಣದವಂಗೆ ತಾಯಿಗರ್ಭದಲ್ಲಿದ್ದೆನೆಂಬುದಿಲ್ಲ . ಆದುದ ನರಿಯ, ಹೋದುದ ನರಿಯ, ಬಂದುದ ನರಿಯ, ನಿಂದುದ ನರಿಯ, ತೋರುವ ಪಿಂಡಾಂಡ ಬ್ರಹ್ಮಾಂಡ ಆವುದು ಅರಿಯದವ ನಾದ್ದರಿಂದ ತನುಗುಣ ಪೂರ್ವಸೂತಕ ವಿರಹಿತ ಲಿಂಗದಿಂದುದಯಿಸಿ ಲಿಂಗದಲ್ಲಿಯೆ ಇದ್ದು ಲಿಂಗದಲ್ಲಿ ಲೀಯವಾದುದರಿಂದ ಅಚ್ಚ ಶರಣನೆಂದು ಹೇಳಿಹರು.

ಆಧುನಿಕ ಸಮಾಜದಲ್ಲಿ ಶರಣರು ಆರು ? ಶರಣತ್ವ ಲಕ್ಷಣವೇನು ? ಎಂಬುದರಿ ಯದ್ದರಿಂದ ಭವಿಷ್ಯ ಹೇಳುವವರು ಶರಣರು. ಮಳೆ ಬೆಳೆ ಮಂತ್ರ ತಂತ್ರ ಯಂತ್ರಗಳ ಮಾಡುವವರಿಗೂ ಶರಣರೆನ್ನುವ ಪರಿಪಾಠವಾಗಿದೆ. ಇದು ತಿಳಿಯದ ಪರಿಪಾಠವೋ ? ತಿಳಿ ದವರ ಪರಿಪಾಠವೋ ? ಇದಾರು ನಿಶ್ಚಯಿಸ ಬೇಕು ? ಬಹುಶ್ಯಃ

ಶರಣ ಸಾಹಿತ್ಯ ನೋಡಿದವರಿಗೆ ಅವರ ಹೃದಯ ಒಪ್ಪದು. ತಾನಾರೆಂದು ತನ್ನ ತಾನರಿತವನೆ ಶರಣ "ಅರಿತವನೆಂತು ಸತ್ತನು, ಅರಿತವನೆಂತು ಹುಟ್ಟಿದನು, ಅರಿತವನೆಂತು ಅಘೋರ ಪಾಶಕ್ಕೆ ಒಳಗಾದನು ಅರಿತವನೆ ಚಿರಂಜೀವಿ ನೋಡಾ ಕಪಿಲ ಸಿದ್ಧ ಮಲ್ಲಿಕಾರ್ಜುನ ."

ಶರಣನೆಂದರೆ ಅರಿಯ ಬಾರದ ಘನವರಿತು ಅರಿಯದಂತಿದ್ದವನು ಅವನೆಂತು ಸತ್ತನು, ಅವನೆಂತು ಹುಟ್ಟಿದನು, ಅವನೆಂತು ಅಘೋರ ಪಾಶಕ್ಕೆ ಒಳಗಾದನು, ಅರಿಯಬಾ ರದ ಘನವೆ ತಾನಾದುದರಿಂದ ಚಿರಂಜೀವಿ ನೋಡಾ ಎಂದು ಹೇಳಿಹರು .

ಶರಣ ನಿರಂತರ ಮಂಗಲಮಯ ಸ್ವಯಂಜ್ಯೋತಿ ತಾನಾದವನು ಅಮರನು ಸತ್ತುದೆಂದು ? ಹುಟ್ಟಿದು ದೆಂದು ? ಅಘೋರ ಪಾಶಕ್ಕೆ ಒಳಗಾಗದವನೆ ಅರಿಯಬಾರದ ಘನವರಿತು ದೇಹ ಗುಣಂಗಳಳಿದು ಲಿಂಗದೇಹಿ ಯಾದವನು ಶರಣನೆನಸಿ ಕೊಳ್ಳುವನು ಈತನೆ ಕೂಡಲ ಚೆನ್ನ ಸಂಗಯ್ಯನಲ್ಲಿ ಅಚ್ಚ ಶರಣನೆಂದು ಹೇಳಿಹರು.

ವಚನ - 11

ಅಂಗದ ಮೇಲಣ ಲಿಂಗ ಹಿಂಗಿದಾತ ಭವಿ ಎಂಬರು.
ಅಂಗದ ಮೇಲಣ ಲಿಂಗ ಹಿಂಗದಾತ ಭಕ್ತ ನೆಂಬರು.
ಅಂಗದೊಳಗೆ ಬೆರಸಿರ್ಪ ಲಿಂಗದ ಹೊಲಬನಾರೂ ಅರಿಯರು.
ಆ ಲಿಂಗವಿಲ್ಲದೆ ಒಂದು ಕ್ಷಣ ಒಂದಂಗ ಸುಳಿವುದೆ ?
ಅಂಗದೊಳಗಣ ಲಿಂಗ ಹಿಂಗದೆ ಆರಾಧಿಸಬಲ್ಲಡೆ
ಹಿಂಗುವದು ಭವಮಾಲೆ ಸೌರಾಷ್ಟ್ರ ಸೋಮೇಶ್ವರಾ.

ತಾತ್ಪರ್ಯ : ಪೂಜಾಲಿಂಗವ ಪೂಜಿಸುವ ಲಿಂಗವಂತರಿಗೆ ಭವಿಯಾರು ? ಭಕ್ತರಾರು ? ಲಿಂಗ ವೆಂದರೇನು ? ಎಂಬ ಪರಿಜ್ಞಾನ ವಿಲ್ಲದೆ ಅಂಗದ ಮೇಲೆ ಲಿಂಗ ವಿಲ್ಲದವರು ಭವಿಗಳು. ಪೂಜಾಲಿಂಗ ವಿದ್ದವರು ಭಕ್ತರು. ಅಂಗದ ಮೇಲೆ ಧರಿಸಿದುದೆ ನಿಜವಾದ ಲಿಂಗವೆಂದು ತಿಳಿದ ಮತಿವಂತರು ಪೂರ್ವದಿಂದಲೂ ಈಗಲೂ ಈ ಭಾವಕ್ಕೆ ಒಪ್ಪುವದು ಸರಳವಾಗಿದೆ ಇದನ್ನು ಕಂಡ ಶರಣರು ಎಚ್ಚರಿಸಿಹರು .

ಶ್ರೀ ಗುರು ಲಿಂಗವನ್ನೇಕೆ ಕರುಣಿಸಿದ ? ಆ ಮಹಾಂತನು ಕರುಣಿಸಿದ ಲಿಂಗವನ್ನೇಕೆ ಧರಿಸುವದು ? ಧರಿಸಲು ಕಾರಣ ವಾವುದು ? ಕಾರಣ ವಿಲ್ಲದೆ ಲಿಂಗ ಧರಿಸಿದನೆ ? ಲಿಂಗ ವೆಂದರೇನು ? ಎಂಬುದು ತಿಳಿದವರೆಷ್ಟು ಲಿಂಗವಂತರು ಶಿಕ್ಕುವರು ? ''ಅರಿದೆವರಿದೆ ವೆಂಬಿರಿ ಅರಿದ ಪರಿ ಎಂತು ಹೇಳಿರೆ ? ಅರಿದವರು ಅರಿದೆವೆಂಬರೆ ? ಅರಿಯ ಬಾರದ ಘನವರಿತು ಅರಿಯದಂತಿಪ್ಪರು ಗುಹೇಶ್ವರ '' ಎಂಬ ಮಹದರುವಿನಂತೆ ಲಿಂಗವದು ಅರಿ ಯಬಾರದ ಘನವೆಂದು ಅರಿತು ಅರಿಯದಂತಿದ್ದ ಲಿಂಗದ ವಿಚಾರ ಲಿಂಗದರಿವು ತಿಳಿಯುವ ಸರಿಯಾದ ಮಾರ್ಗ ಲಭ್ಯವಾಗಿದ್ದರೆ ಲಿಂಗಾಯತ ಧರ್ಮ ವೆಂಬುದೊಂದು ಸೀಮಿತ ಧರ್ಮವಾಗುತ್ತಿದ್ದಿಲ್ಲ ಪಕ್ಷದ್ದಾಗುತ್ತಿದ್ದಿಲ್ಲ ವಿಶ್ವದ ಧರ್ಮವಾಗುತ್ತಿತ್ತು .

ಅಪೂರ್ವಿಕರಾದ ಶರಣ ಶರಣೆಯರಿಗೆ ಲಿಂಗದ ವಿಚಾರ ಲಿಂಗ ದರಿವು ಇದ್ದಕ್ಕಿದ್ದಂತೆ ತಿಳುವಳಿಕೆ ಯಾದ್ದರಿಂದ ಅವರು ಪಕ್ಷಾತೀತರಾದರು. ಅಪರಿಮಿತ ನಿಲುವಿನಲ್ಲಿ ನಿಂತು ತಮ್ಮ ಹೃದಯದಿಂದ ಹೊರ ಹೊಮ್ಮಿದ ಸ್ವಾನುಭವದ ಸುಧೆಯುಳ್ಳ ವಚನ ಸಾಹಿತ್ಯವೆಂಬ ಹೆಸರಿನಿಂದ ಸಕಲರಿಗೂ ವೇದ್ಯ ವಾಗುವಂತೆ ಬರೆದರಲ್ಲ ? ಸಕಲ ಧರ್ಮದವರು ಇದ್ದಾರೆ. ಅವರಲ್ಲಿ ಅಂಬಿಗರ ಚೌಡಯ್ಯ , ಮಾದರ ಚೆನ್ನಯ್ಯ , ಡೋಹರ ಕಕ್ಕಯ್ಯ , ಹಡಪದ ಅಪ್ಪಣ್ಣ , ಕಿನ್ನರಿ ಬೊಮ್ಮಯ್ಯ , ಮಡಿವಾಳ ಮಾಚಯ್ಯ ತಂದೆ ಮದ್ದಲಿಗೆಯ ಅಲ್ಲಮಪ್ರಭು ಇದಲ್ಲದೆ ಶರಣೀಯರಾದ ಹಡಪದ ಲಿಂಗಮ್ಮ , ಅಮುಗೆಯ ರಾಯಮ್ಮ , ಸತ್ಯಕ್ಕ , ಇವ ರುಗಳ ಶರಣ ಸತಿಯ ರೆನಿಸಿಕೊಂಡ ನೀಲಾಂಬಿಕೆ, ಅಕ್ಕಮಹಾದೇವಿ ಇನ್ನು ಅನೇಕ ಶರಣಿ ಯರು ಬೇರೆ ಬೇರೆ ಧರ್ಮದವ ರಾಗಿದ್ದರೂ ಲಿಂಗದರುವುಳ್ಳವ ರಾದುದರಿಂದ ಪಕ್ಷಾತೀತ ನಿಲುವುಳ್ಳ ತತ್ವ ಸಿದ್ಧಮಾಡಿ ತೋರಿಸಿದುದಲ್ಲದೆ ನಿಸ್ಸೀಮತ್ವದ ನಿಜ ಧಾಮವೆ ಲಿಂಗದರಿವು ಅರಿಯಲಿಲ್ಲದ ಅರುವಿನ ಇರವು ಎಂದು ತಮ್ಮ ಪ್ರಸಾದ ವಾಣಿಯಿಂದ ಮುಕ್ತದ್ವಾರ ತಿಳಿಸಿ ಕೊಟ್ಟರು .

ಅಂಗದ ಮೇಲಣ ಲಿಂಗ ಹಿಂಗಿದಾತ ಭವಿ , ಅಂಗದ ಮೇಲಣ ಲಿಂಗ ಹಿಂಗಿದಾತ ಭಕ್ತರೆನ್ನುವ ಭಾವಿಕರು ಭಾವಾಚಾರ ದವರು . ಇವರು ಇದುವೆ ನಮ್ಮ ವೀರಶೈವ ಮತದ ಕಟ್ಟಾನಿಯಮವೆಂದು ಈ ಪೂಜಾಲಿಂಗವ ಪೂಜಿಸುವದೆ ಕೈವಲ್ಯವೆಂದು ಲಿಂಗ ವರಿತು ಲಿಂಗ ದಲ್ಲಿ ಲೀಯವಾದ ಮಹಾಂತರಿಗೂ, ಲಿಂಗೈಕ್ಯರಿಗೂ ಮಹತ್ವಕೊಡದೆ ಅವರಿಗೆ ಲಿಂಗ ವಿಲ್ಲದ್ದ ರಿಂದ ಭವಿಗಳು. ಅವರು ಕೂಡಾ ನಮ್ಮಿಂದ ಲಿಂಗ ಧರಿಸಿಕೊಂಡಾಗ ಮುಕ್ತರು. ಇಲ್ಲದಿದ್ದರೆ ಭವ ಭವಾಂತರದಲ್ಲಿ ಬರುವುದು ತಪ್ಪದೆನ್ನುವಷ್ಟು ಮತಿವುಳ್ಳವರಾಗಿ ತಮ್ಮದಾದ ಪೂಜಾ ಲಿಂಗವ ಪೂಜಿಸುವ ಕ್ರಿಯಾಚಾರ ಶ್ರೇಷ್ಟ ಮಾಡಿಕೊಳ್ಳುವುದು ನೋಡಿದರೆ ಗುರುವಿಂಗೆ ಗುರುವಾಗಿಹ ಗುರುಲಿಂಗ ದರ್ಶನವಿಲ್ಲ . ಲಿಂಗಕ್ಕೆ ಲಿಂಗವಾಗಿಹ ಸ್ವಯ ಲಿಂಗದರಿವು ಇಲ್ಲ, ಶರಣರ ದರ್ಶನವಿಲ್ಲ ಲಿಂಗೈಕ್ಕೆ ಮಹಾಂತರುಗಳ ಇವರೇನು ಬಲ್ಲರು ಇಂದು ಹೇಳಿಹರು . ಇದನ್ನು ಕಂಡೆ ಅಂಗದೊಳಗೆ ಬೆರಸಿಪ್ಪ ಲಿಂಗದ ಹೊಲಬ ನಾರು ಅರಿಯರು ಆ ಲಿಂಗವಿಲ್ಲದೆ ಒಂದು ಕ್ಷಣ ಒಂದಂಗ ಸುಳಿವುದೆ ?

ಅಂಗದ ಮೇಲೆ ಲಿಂಗ ಧರಿಸುವ ಶ್ರದ್ಧಾವಂತರು ನಿಷ್ಠಾವಂತರು ಭಕ್ತರು ಇರಬ ಹುದು, ಲಿಂಗಾರ್ಚನೆ ಮಾಡುವ ಕ್ರಿಯಾಜ್ಞಾನವುಳ್ಳವರು ಇರಬಹುದು. ಅಂಗದೊಳಗೆ ಬೆರ ಸಿಪ್ಪ ಲಿಂಗದಿರುವ ತಿಳಿಯುವ ಜ್ಞಾನವಿದೆಯಾ ? ತಿಳಿಯದಿದ್ದರೆ ಇಬ್ಬರ ಮಧ್ಯದಲ್ಲಿದ್ದ ಸ್ವಯಂ ಜೋತಿ ಲಿಂಗವ ಅರಿತಿರುವರಾ ? ಅರಿತಿದ್ದರೆ ಅಂಗದ ಮೇಲೆ ಲಿಂಗ ಧರಿ ಸಿದವರಷ್ಟೆ ಲಿಂಗಾಯತರು ಭಕ್ತರು ಇನ್ನೂಳಿದವರು ಭವಿಗಳು ಎಂಬ ಭಿನ್ನ ಜ್ಞಾನಿಗಳು ಆಗು ತ್ತಿದ್ದಿಲ್ಲ ಅಖಂಡಿತನ ಘನ ಪೂರ್ಣವಪ್ಪ ತಮ್ಮಿರುವೆ ಅರಿವು ಎಂದರಿತ ಲಿಂಗಜ್ಞಾನಿಗೆ ಅಂಗದ ಮೇಲೆ ಲಿಂಗ ಧರಿಸಿದವರು ಲಿಂಗ ಧರಿಸದವರೆಂಬ ಖಂಡಿತ ಜ್ಞಾನ ವಿರಬಹುದೆ ? ಲಿಂಗದಿರುವು ಪರಿಪೂರ್ಣ ವಿರುವಲ್ಲಿ ಆ ಲಿಂಗವಿಲ್ಲದೆ ಒಂದು ಕ್ಷಣ ಒಂದಂಗ ಸುಳಿ ವುದೆ ?

ಇಲ್ಲಿ ಲಿಂಗ ಧರಿಸಿದವರ ವಿಚಾರ ಮಾಡ ಬೇಕಾದುದು ಮುಖ್ಯವಾಗಿದೆ. ಅಂಗಾಂಗಗಳ ಸುಳಿದಾಟ ಅಂಗದೊಳಗೆ ಲಿಂಗ ಬೆರಸಿದ್ದುದರಿಂದಲ್ಲವೆ ? ಪೂಜಾ ಲಿಂಗವ ಧರಿಸಿಕೊಂಡ ಲಿಂಗವಂತರಿಗಷ್ಟೆ ಅಂಗಾಂಗಳು ಚರಿಸ್ಯಾಡುವವು ಲಿಂಗ ಧರಿಸಿ ಕೊಳ್ಳದವರ ಅಂಗಾಗಗಳು ಚರಿಸ್ಯಾಡುವದಿಲ್ಲವೆ ? ಎಂಬುದು ನಿಮ್ಮೊಳಗೆ ನೀವೆ ತಿಳಿದು ನೋಡಿ .

ಈ ಚೈತನ್ಯ ಲಿಂಗ ಸೀಮಿತ ಉಳ್ಳುದೆ ? ಅರಿಯದವರಿಗೆ ಲಿಂಗ ಸೀಮಿತವಾಗಿದ್ದರೂ ಅದರ ಅರಿವು ಇರುವು ನಿಸ್ಸೀಮ ವಾಗಿದೆ. ಮಾನವ ಶರೀರದಲ್ಲೊಂದೆ ಲಿಂಗವಿದೆ ಎನ್ನು ವಂತಿಲ್ಲ . ಸ್ಥಾವರ ಜಂಗಮದೊಳಗೆಲ್ಲ ಲಿಂಗವು ಭರಿತವು, ಜಂಗಮ ದೊಳಗೂ ಲಿಂಗವು ಭರಿತವು ಇದು ಕಾರಣ ಲಿಂಗವಿಲ್ಲದ ಸ್ಥಾನವಿಲ್ಲ ಲಿಂಗವಿಲ್ಲದ ಶರೀರಗಳು ಇಲ್ಲದ್ದರಿಂದ ಸಕಲವು ಲಿಂಗಕಾಯ, ಚೈತನ್ಯ ಕಾಯ, ಅಸ್ತಿ ಭಾತಿ ಪ್ರೀಯ ತತ್ವದಿಂದ ಪ್ರಕಾಶಿಸುವ ಕಾಯವೆಂದು ಸಿದ್ಧವಾಗುವುದು .

ಅಂಗದೊಳಗಣ ಲಿಂಗ ಹಿಂಗದೆ ಆರಾಧಿಸ ಬಲ್ಲರೆ ಹಿಂಗುವುದು ಭವ ಮಾಲೆ ಸೌರಾಷ್ಟ್ರ ಸೋಮೇಶ್ವರ : ಎಂಬ ಮಹಾತ್ಮರ ಸಂದೇಶ ಈ ಭಾವೀಕ ಲಿಂಗವಂತರು ಕೇಳಿಲ್ಲ ವೆನ್ನಬೇಕೆ ? ತಾವು ಇಷ್ಟು ಕಾಲ ಅಂಗದ ಮೇಲೆ ಲಿಂಗ ಧರಿಸಿ ನಿತ್ಯ ಲಿಂಗಾರ್ಚನೆ ಮಾಡಿ ತಮ್ಮ ಹೃದಯವನ್ನಾದರೂ ನೋಡಿಕೊಂಡುರುವಿರಾ ? ಹುಟ್ಟು ಸಾವುಗಳಿಂದ

ಬಿಡುಗಡೆಯಾಗಿ ನಿರ್ಭೀತ ತತ್ವವುಳ್ಳ ಲಿಂಗದರಿವು ತಮ್ಮಂತರಂಗದಲ್ಲಿ ಪ್ರಜ್ವಲಿಸುತ್ತಿದೆಯೇ ಎಂಬುದು ತಮಗೆ ತಾವೇ ಅರಿತಿರುವಿರಾ ? ಪೂರ್ವಿಕರು ಹಿಂದಿನಿಂದ ಹೀಗೇಯೆ ಲಿಂಗಾರ್ಚನೆ ಮಾಡುತ್ತಾ ಬಂದಿರುವರು. ಅವರು ಮಾಡಿದಂತೆ ನಾವು ಮಾಡುವುದೆಂದು ಒಬ್ಬರನ್ನೊಬ್ಬರು ನೋಡಿ ಮಾಡುವ ಸಂಪ್ರದಾಯವಂತರು ಬಹಳಷ್ಟಿದ್ದಾರೆ.

ಮಹಾತ್ಮರ ಸಂದೇಶದಂತೆ ಅಂಗದೊಳಗಣ ಲಿಂಗ ಹಿಂಗದೆ ಆರಾಧಿಸಬಲ್ಲರೆ ಹಿಂಗುವುದು ಭವಮಾಲೆ. ಭವಮಾಲೆ ಪರಿಹರಿಸಲೋಸುಗ ಅಂಗದೊಳಗಣ ಲಿಂಗ ಹಿಂಗದೇ ಆರಾಧಿಸುವುದು ತಿಳಿಯಬೇಕು ಎಂದು ಹೇಳಿದರಲ್ಲದೆ ಅಂಗದ ಮೇಲೆ ಲಿಂಗ ಹಿಂಗದೇ ಧರಿಸಿದರೆ ಹಿಂಗುವುದು ಭವಮಾಲೆ ಎಂದು ಬರೆಯಲಿಲ್ಲ, ಹೇಳಲಿಲ್ಲ, ಲಿಂಗ ತತ್ವ ತಿಳಿಯುವುದು ಅವಶ್ಯಕ. ತಿಳಿದು ಲಿಂಗದಲ್ಲಿ ಲೀಯವಾಗಬೇಕು ಎಂದು ಹೇಳಿಹರು.

ಅಂಗದೊಳಗಣ ಎಡಬಿಡದೇ ಲಿಂಗ ಪೂಜಿಸುವುದು ಹೇಗೆ ? ಅಂಗದೊಳಗಣ ಲಿಂಗವೆಂದರೆ ಗುರುಕರುಣೆಯಿಂದ ಭಕ್ತರ ಕರಕಮಲದೊಳಗಿದ್ದ ಲಿಂಗ, ಲಿಂಗವದು ಅರುವು; ಜ್ಞಾನಸ್ವರೂಪ. ಚೈತನ್ಯ ಅರುಸ್ವರೂಪ ಲಿಂಗವ ಅರುವಿನಿಂದ ಪೂಜಿಸಬೇಕು. ಲಿಂಗದರುವು ತನ್ನ ಇರುವು ಒಂದಾದುದು ತನಗದು ವಿಧಿತವಾದುದೇ ಪೂಜಿಸಿದುದು. ಇದು ಲಿಂಗಾಂಗ ಸಮರಸದ ಚಿನ್ಹ, ಲಿಂಗಾಂಗ ಒಂದಾದ ಚಿನ್ಹೆ. ಲಿಂಗ ಅಂಗ ಒಂದಾಗಬೇಕಾದರೆ ಲಿಂಗಾಂಗ ಸಮರಸ ಜ್ಞಾನದಿಂದ ಲಿಂಗ ತಾನು ಒಂದೆಂಬುದು ತನ್ನಿಂದ ತನಗೆ ವೇದ್ಯವಾಗಬೇಕು. ಇಂತಪ್ಪ ಸ್ವಾನುಭವಿಗಳೇ ಅಂಗದೊಳಗಣ ಲಿಂಗ ಹಿಂಗದೆ ಆರಾಧಿಸಬಲ್ಲವರು. ಅವರಲ್ಲಿ ಭವಮಾಲೆ ಹಿಂಗುವುದು.

ಅರು ಹೃದಯವಾದವರ ದಿವ್ಯದೃಷ್ಟಿಯಲ್ಲಿ ತನಗೊಂದು ಹುಟ್ಟು ಸಾವುಗಳಿಲ್ಲ ಎಂಬುದಿಲ್ಲ. ಅವರಿಗೆ ಭವವೆಂಬುದು ಹುಸಿಯಾಗಿದೆ. ಅದುವೇ ಹುಸಿಯಾಗಿರುವಲ್ಲಿ ವಾಸನೆಯಿಲ್ಲ, ಭಾವ ಇಲ್ಲ, ನೆನಹು ಇಲ್ಲ, ಅಖಂಡಿತ ಘನ ಪರಿಪೂರ್ಣ ತನ್ನಿರುವು ಅರಿವು ಎಂದರಿದ ಲಿಂಗ ಜ್ಞಾನಿಗೆ ಭವಮಾಲೆ ಇಲ್ಲವೆಂಬುದು ತನ್ನಿಂದ ತನಗದು ವೇದ್ಯವಾಗಿಹುದು. ಇಂತಪ್ಪ ಮಹಾದರಿವು ಅರಿತು ಅಂಗದೊಳಗಣ ಲಿಂಗವ ಹಿಂಗದೇ ಆರಾಧಿಸಬಲ್ಲರೆ ಹಿಂಗುವುದು ಭವಮಾಲೆ ಸೌರಾಷ್ಟ್ರ ಸೋಮೇಶ್ವರ ಎಂದು ಹೇಳಿಹರು.

ವಚನ - 12

ಭವಿಯ ಕಳೆದೆವೆಂಬ ಮರುಳು ಜನಂಗಳು ನೀವು ಕೇಳಿರೆ ;
ಭವಿಯಲ್ಲದ ನಿಮ್ಮ ತನುಗುಣಾದಿಗಳು ?
ಭವಿಯಲ್ಲದ ನಿಮ್ಮ ಮನಗುಣಾದಿಗಳು ?
ಭಯವಿಲ್ಲದ ನಿಮ್ಮ ಪ್ರಾಣಗುಣಾದಿಗಳು ?
ಇವರೆಲ್ಲರೂ ಭವಿಯ ಹಿಡಿದು ಭವಭಾರಿಗಳಾದರು.
ನಾನು ಭವಿಯ ಪೂಜಿಸಿ ಭವಂ ನಾಸ್ತಿಯಾದೆನು ಗುಹೇಶ್ವರಾ.

ತಾತ್ಪರ್ಯ : ಭವಿಯ ಕಳೆದೆವೆಂಬ ಮರುಳ ಜನಗಳು ನೀವು ಕೇಳಿರೆ ? ಭವಿಯಲ್ಲವೇ ನಿಮ್ಮ ತನು ಗುಣಾದಿಗಳು : ಭವಿಯ ಕಳೆಯಲು ಅಂಗದ ಮೇಲೆ ಲಿಂಗವ ಧರಿಸಿ

ಪೂಜಿಸಿದಾಕ್ಷಣ ಲಿಂಗಾರ್ಚನೆ ಮಾಡಿದಾಕ್ಷಣ ಭಕ್ತರಾದಿರಾ ? ಭವಿತನ ಕಳೆದು ಕೊಂಡಿರಾ ?

ಓ ! ಅಪ್ಪಯ್ಯ ಗಳಿರಾ ? ಅಣ್ಣಯ್ಯಗಳಿರಾ ? ಪೂಜಾಲಿಂಗವ ಧರಿಸಿ ಪೂಜಿಸಿದಾಕ್ಷಣ, ನಮ್ಮ ಹುಟ್ಟು ಸಾವುಗಳು ಇಲ್ಲವಾಗಿ, ಭಕ್ತರಾದೆವೆಂಬುದು ಇದೊಂದು ಭ್ರಾಂತಿ. ಅಂಗದಮೇಲೆ ಲಿಂಗ ಧರಿಸಿ ಲಿಂಗ ಪೂಜಿಸುವಿರೆಂದಲ್ಲಿ ನಿಮ್ಮ ತನು ಗುಣಾದಿಗಳು ಲಿಂಗದ ಲಿಂಗವಾಗಿದೆಯೊ ? ತೋರಿಕೆಯ ತನುಭಾವ ಹೋಗಿ ತೋರದಡಗದ ಲಿಂಗ ತನುವಾಗಿದೆಯೊ ? ರೂಪ ನಿರೂಪ ವಾಗಿದೆಯೊ ?

ಷಡ್ವಿಕಾರ ಭಾವ ಹೋಗಿ ನಿರ್ವಿಕಾರ ತನುವಾಗಿದೆಯೊ ? ಭ್ರಮ ತನು ಭಾವ ಜನ್ಮಕ್ಕೆ ಕಾರಣ ; ಲಿಂಗ ಭಾವವದು ಭರಿತ ಭಾವ ಭಾವಕ್ಕಗಮ್ಯವಾದ ನಿರ್ಭಾವ ಜನ್ಮಕ್ಕೆ ಕಾಡು ಗಿಚ್ಚು, ತೆರಹಿಲ್ಲದ ಲಿಂಗ ಭರಿತವೆಂಬ ಭಾವ ಘಟ್ಟಿ ಗೊಳ್ಳಬೇಕು.

ಭವಿಯಲ್ಲವೆ ? ನಿಮ್ಮ ಮನ ಗುಣಾದಿಗಳು, ನಿಮ್ಮ ಮನ ತೆರಹಿಲ್ಲದ ಲಿಂಗಭರಿತವೆಂಬ ಗುರುಕಾರುಣ್ಯವ ಅರಿದರಿದು ಘನ ಮನ ವಾಗಿದೆಯೊ ? ತನ್ನ ಪೂರ್ವಾಶ್ರಯ ಬಿಟ್ಟು ತನ್ನ ನಿಜ ದಿರುವಾಗಿಹ ಕೇವಲ ಜೋತಿಯಲ್ಲಿ ಒಂದೆಯಾಗಿದೆಯೊ ? ಒಂದಾದಲ್ಲಿ ಮನವು ತನ್ನ ಸಂಕಲ್ಪ ವಿಕಲ್ಪವ ಮರೆತು ಸ್ವಯಂ ಜ್ಯೋತಿ ಲಿಂಗ ವಾಗಿದೆಯೊ ? ಮನವು ಘನ ಮನವಾಗದಿದ್ದಲ್ಲಿ ಲಿಂಗ ಪೂಜಿಸಿ ಫಲವೇನು ? ಪ್ರತಿದಿನ ಪೂಜಾ ಲಿಂಗವ ಪೂಜಿಸಿದಲ್ಲಿ ಇದರಿಂದ ಅಚಿಂತ್ಯ ಪದ ಪ್ರಾಪ್ತ ವಾಯಿತೆ ?

ಲಿಂಗವ ಪೂಜಿಸಿದ ಮೇಲೆ ಮನದ ಸಂಕಲ್ಪ ವಿಕಲ್ಪ ಇಲ್ಲ ವಾಗಬೇಕು. ಇಲ್ಲವೆಂಬುದು ಇಲ್ಲ ವಾಗಬೇಕು. ಈ ಇಲ್ಲವೆಂಬುದು ಇದ್ದಲ್ಲಿ ಅಲ್ಲಿ ಮನದ ಪೂರ್ವಾಶ್ರಯ ಇನ್ನು ನಷ್ಟವಾಗಿಲ್ಲವೆಂದು ತಿಳಿಯುವದು. ಮನ ನಷ್ಟವಾದಲ್ಲಿ ಶೋಕ ವೇತರದು ? ಮೋಹ ವೇತ ರದು ? ರಾಗ ವೇತರದು ? ದ್ವೇಷ ವೇತರದು ? ಅಲ್ಲಿ ಚಿಂತೆ ಭಯಕ್ಕಾದರೂ ಇಂಬುಂಟೆ ? ಆಗ ತೆರಹಿಲ್ಲದ ಲಿಂಗ ಭರಿತ ತಾನೆಂಬುದು ತನ್ನಿಂದ ತನಗದು ವಿದಿತವಾಗುವುದು ಇದು ಭವಿತನ ಕಳಕೊಂಡು ಭಕ್ತನಾದ ಚಿನ್ಹ .ಭಕ್ತನಾದಲ್ಲಿ ತನ್ನ ಕರಣಂಗಳು ಲಿಂಗಕಿರಣಂಳಾಗಬೇಕು .

ಭವಿ ಯಲ್ಲವೆ ? ನಿಮ್ಮ ಪ್ರಾಣ ಗುಣಾದಿಗಳು. ನಿಮ್ಮ ಪ್ರಾಣ ಲಿಂಗ ಪೂಜಿಸಿದಲ್ಲಿ ಲಿಂಗ ಪ್ರಾಣಿಯಾಗಬೇಕು. ಪಂಚ ಪ್ರಾಣವೆಂಬ ಜಡಭಾವ ಹೋಗಿ ಚೈತನ್ಯ ಭವಿಯಾಗುವುದು. ಇದು ಜೀವ ಪರಮ ರೊಂದಾದುದು , ತತ್ವಮಸಿ ಹೊರಗನೆ ಬಳಸದೆ ನಿತ್ಯ ನಿರಂಜನ ತಾನೆಂದರಿತ ಚಿನ್ಹ . ನಿತ್ಯ ನಿರಂಜನ ತಾನಾದಲ್ಲಿ ಪಂಚ ಪ್ರಾಣವೆಂಬುದು ಕೆಡಬೇಕು. ಕೆಡದಿದ್ದಲ್ಲಿ ಲಿಂಗ ಪೂಜಿಸಿದರೂ ಭ್ರಾಂತಿ ನಷ್ಟವಾಗಿಲ್ಲ ವೆಂದಲ್ಲಿ ಫಲ ವಾವುದು, ಪದವಾವುದು ?

ಲಿಂಗ ಪೂಜಿಸಿದಲ್ಲಿ ಲಿಂಗ ಅಂಗ ಒಂದಾಗಬೇಕು. ಇದು ಗುರುಕೊಟ್ಟ ಲಿಂಗವರಿತ ಹಿರಿಮೆಯು, ಲಿಂಗ ವರಿಯದಿದ್ದಲ್ಲಿ ಪ್ರಾಣವೆಂಬ ಭಾವ ಹೋಗದು. ಆರು ಅರುವ ಅರಿಯ ಹೋಗಿಹರು ಅರಿದರುಹಿಸಿ ಕೊಂಬುದಕ್ಕೆ ಮೀರಿದ ಘನವಾಗಿಹ ಅರಿಯಬಾರದ ಘನವ ಅರಿಯ ಹೋಗಿಹರು ; ಅವರು ಪ್ರಾಣವೆಂಬ ಜಡಭಾವ ಅರಿಯದಂತಿಪ್ಪರು .

ಅಂತರಂಗ ಪ್ರಾಣವೆಂದು ಹಿಡಿದು ಬಹಿರಂಗ ತ್ರಿಕಾಲ ಪೂಜಾಲಿಂಗ ಪೂಜಿಸಿದ

ಮಾತ್ರಕ್ಕೆ ಪ್ರಾಣಲಿಂಗಿಯಾಗನು ಇವರೆಲ್ಲರು ಭವಿಗಳ ಹಿಡಿದವರು ; ಜಡವ ಹಿಡಿದವರು ನಾಮ ರೂಪಕ್ಕೆ ಒಪ್ಪಿದವರು .ಇದು ಕಾರಣ ಭವಿಗಳ ಹಿಡಿದು ಭವ ಭಾರಿಗಳಾದರು ನಾನು ಭವಿಯ ಪೂಜಿಸಿ ಭವಂ ನಾಸ್ತಿ ಯಾದೆನು ಗುಹೇಶ್ವರಾ.

ಅಂಗದ ಮೇಲೆ ಲಿಂಗ ಧರಿಸಿದ ಲಿಂಗವಂತರು ಲಿಂಗವ ಪೂಜಿಸಿ ಭವಿಯ ಕಳೆದು ಭಕ್ತರಾದೆವೆಂದು ಹೇಳಿಕೊಳ್ಳುವವರು ನಾಮರೂಪ ಜಡಭಾವ ಹಿಡಿದು ಭವ ಭಾರಿಗಳಾದರು. ಇವರು ಭವಿ ಎಂಬ ತನು ಮನ ; ಪ್ರಾಣವೆಂಬ ಕಲ್ಪಿತವ ಹಿಡಿದರಲ್ಲದೆ ಕಲ್ಪಿತ ರಹಿತವಾದ ಲಿಂಗವ ಹಿಡಿಯಲಿಲ್ಲ . ಹಿಡಿಯದ್ದರಿಂದ ಅಖಂಡಿತೆ ಘನ ಪೂರ್ಣವಾಗಿಪ್ಪ ಪರಾನಂದ ಮಯ ವಾಗಿಹ ಜ್ಞಾನ ಸ್ವರೂಪ ವಾಗಿರುವ ಸಕಲರ ಇರುವಾಗಿಹ ಲಿಂಗ ತನಗಿಂತ ಬೇರಾಗಿ ಕಂಡು ಕುರುಹಾಗಿ ಕಂಡಿತು . ಲಿಂಗ ಕುರುಹಾಗಿ ಕಂಡುದು ಲಿಂಗಾಗ ಸಮರಸ ಜ್ಞಾನ ತಿಳಿಯದವರ ಪ್ರತಿಫಲವು. ಇದು ಕಾರಣ ಪ್ರತಿಯೊಬ್ಬರಿಗೂ ಲಿಂಗಾಂಗ ಸಮರಸಜ್ಞಾನ ಅವಶ್ಯವಾಗಿ ಬೇಕು. ಇದನ್ನು ಲಿಂಗವರಿತ ಮಹಾಂತನಿಂದ ತಿಳಿಯುವದು . ಇದಾಗ ದಿದ್ದಲ್ಲಿ ಘನ ಚೈತನ್ಯ ಜಂಗಮನ ಸನ್ನಿಧಿಗೆ ಹೋದಲ್ಲಿ ಅಲ್ಲಿ ಜ್ಞಾನ ದೀಕ್ಷೆ ದೊರೆಯುವದು. ಆಗ ತನ್ನನ್ನು ಲಿಂಗವನ್ನು ತಿಳಿಯುವ ಅನುವ ಅನುಗ್ರಹಿಸಿದಲ್ಲಿ ಅಂಗ ಕಿರಣಂಗಳು ಹೋಗಿ , ಲಿಂಗ ಕಿರಣಂಗಳಾಗುವವು . ಆಗ ಭಕ್ತರಾದವರು ತನು ,ಭಾವ , ಮನದ ಸಂಕಲ್ಪ ವಿಕಲ್ಪ ಪ್ರಾಣದ ಭಾವ ಹಿಡಿಯರು . ಏಕೆಂದರೆ ಭಕ್ತ ಭಾವಕ್ಕಗಮ್ಯ ವಾಗಿಹ ಅರುವಿಂಗರು ವಾಗಿಹ ಲಿಂಗವರಿತು ತಾನು ಭವಕ್ಕಗಮ್ಯ ನಾಗುವನು . ಇಂತಪ್ಪ ಮಹಾನುಭವ ವರಿಯದೆ ಇಷ್ಟಲಿಂಗ ತ್ರಿಕಾಲ ಪೂಜಿಸಲಿ . ಪೂಜಿಸಿದರೂ ತನು,ಮನ, ಪ್ರಾಣಂಗಳ ಭಾವ ಹೋಗದು. ಹೋಗದ್ದರಿಂದ ಇವರು ಭವ ಭಾರಿಗಳಾದರು .

ನಾನು ಭವಿಯ ಪೂಜಿಸಿ, ಭವಂ ನಾಸ್ತಿ ಯಾದೆನು ಗುಹೇಶ್ವರಾ : ನಾನು ಭವಿಯ ಪೂಜಿಸಿ ಭವಂನಾಸ್ತಿಯಾದೆನು ಎಂದು ಪ್ರಭುದೇವ ಹೇಳಿದುದು ಅತಿ ಗುಟ್ಟು ಆದುದು. ಭವಿ ? ಅಂಗದೊಳಗೆ ಬೆರಸಿಪ್ಪ ಲಿಂಗ ಇದು ಭವಿ , ಇದು ಒಳ ಹೊರಗೆನ್ನದೆ ಪ್ರಜ್ವಲಿಸುವ ವ್ಯಾಪಕ ಲಿಂಗ , ಅಖಂಡ ಲಿಂಗ ,ಚೈತನ್ಯ ಲಿಂಗವ ಆರು ಅರಿಯ ಹೋಗಿಹರು ಅವರು ತನ್ನಲ್ಲಿ ತಾನೆ ಸ್ವಯಂಜ್ಯೋತಿ ಎಂಬುದು ತನ್ನಿಂದ ತನಗದು ವೇದ್ಯವಾದುದರಿಂದ ಭವ ಸುಳ್ಳಾಯಿತು, ಇಲ್ಲವಾಯಿತು ಎಂದು ಪ್ರಭು ಹೇಳಿದುದು ಎಂದು ತಿಳಿವುದು .

ವಚನ - 13

ಭವಿಯ ಕಳೆದೆಹೆವೆಂಬ ಅಪ್ರಮಾಣಿಗಳು ನೀವು ಕೇಳಿರೆ,
ಭವಿಯ ಕಳೆದೆಹೆವೆಂಬ ಭವಭಾರಿಗಳು ನೀವು ಕೇಳಿರೆ ;
ಭವಿಗೆ ಕೊಡಲಾಗದೆಂಬ ಭಕ್ತನ ನುಡಿಯ ಕೇಳಲಾಗದು.
ನಾನು ಭವಿವಿಡಿದು ಭಕ್ತಿಯಿಂದ ಸುಖಿಯಾದೆ ಗುಹೇಶ್ವರಾ !!

ತಾತ್ಪರ್ಯ : ಭವಿಯ ಕಳೆದೆವೆಂಬ ಅಪ್ರಮಾಣಿಕರು ನೀವು ಕೇಳಿರೆ ? ಭವಿಯ ಕಳದೆವೆಂಬ ಭವ ಭಾರಿಗಳು ನೀವು ಕೇಳಿರೆ ? ಭವಿಗೆ ಕೂಡಲಾಗದೆಂಬ ಭಕ್ತರ ಮಾತು ಕೇಳಲಾಗದು : ಭವಿಯ ಕಳೆದೆ ವೆಂಬುವವರೆಲ್ಲರು ಅಪ್ರಮಾಣಿಕರು . ನೀವು ನಂಬುಗೆಯಿ

ಲ್ಲದವರು, ವಂಚಕರು ನೀವು ಕೇಳಿರೆ ? ಭವಿಯ ಕಳೆದೆ ವೆಂಬುವವರೆಲ್ಲರು ನಾವು ಭವ ಭಾರಿಗಳು ನೀವು ಕೇಳಿರೆ ? ಭವಿಗೆ ಕೊಡಲಾಗದೆಂಬ ಭಕ್ತನ ಮಾತು ಕೇಳಲಾಗದು. ನೀವು ಭಕ್ತರಾಗಿ ಭವಿಗೆ ಕೊಡಲಾಗದು ಎನ್ನುವವರ ಮಾತು ಕೇಳಲಾಗದು .

ಭಕ್ತರಾಗಿರುವಿರಿ ಎನ್ನುವಿರಿ ; ಭಕ್ತರೆಂದರೆ ಯಾರು ? ಭಕ್ತನ ಪರಿಜ್ಞಾನವಾದರೂ ನಿನಗಿದೆಯಾ ? ಭಕ್ತನ ಭರಿ ತಭಾವವಾದರೂ ನಿಮ್ಮಲ್ಲಿ ಇದೆಯಾ ? ಭಕ್ತನ ಭಕ್ತಿ ಯಾದರೂ ನಿಮ್ಮಲ್ಲಿ ಇದೆಯಾ ? ಇವಾವವು ನಿಮ್ಮಲ್ಲಿ ಇರದಿದ್ದಲ್ಲಿ ನೀವು ಅಪ್ರಮಾಣಿಕರ ಲ್ಲವೆ ? ಭರಿತ ಭಾವದವ ರಾಗಿದ್ದಲ್ಲಿ ನಿಮ್ಮ ಭವಿತನ ಹೋಗಿದೆಯಾ ? ಭವಿತನ ಕಳ ಕೊಳ್ಳದೆ ಕಳೆದೆವೆಂಬುವವರು ನೀವು ಅಪ್ರಮಾಣಿಕರಲ್ಲವೆ ? ನಿಮ್ಮನ್ನು ನೀವೆ ನೋಡಿಕೊಳ್ಳಿ .

ಭಕ್ತ ಲಕ್ಷಣ, ಭರಿತ ಭಾವದ ಲಕ್ಷಣ. ಅಖಂಡ ಭಾವ, ಅಖಂಡ ಜ್ಞಾನ, ಅಖಂಡಾ ನಂದ ; ಇವು ಭಕ್ತನ ಸಂಪತ್ತು. ಅಕ್ಷಯ ಸಂಪತ್ತು. ಭಕ್ತ ರಾದಲ್ಲಿ ಬಸವರಸರ ಭಕ್ತಿ ಅಳವ ಡಿಸಿ ಕೊಂಡಿರುವಿರಾ ? ನೀವು ದಾಸೋಹ ಮೂರ್ತಿಗಳೆ ? ಗುರುವಿನ ಕೈಯಲ್ಲಿ ಆನು ಸತ್ತು ಹುಟ್ಟಿದವರೆ ? ಅಜಾತರು, ಆನು ನೀನೆಂಬ ಸಂದಳಿದವರು .

ಓ ! ಅಣ್ಣಯ್ಯ ಗಳಿರಾ ? ನೀವು ಭಕ್ತರಾದಲ್ಲಿ ಬಸವಣ್ಣನವರಂತೆ ಗುರು, ತನು ಗುರುವಿಂಗಿತ್ತು ಗುರುವಾಗಿರುವಿರಾ ? ಮನ ಲಿಂಗಕಿಕ್ಕಿ ಸ್ವಯ ಲಿಂಗ ವಾಗಿರುವಿರಾ ? ಧನ ಜಂಗಮಕಿಕ್ಕಿ ಭವಕ್ಕಗಮ್ಯ ರಾಗಿರುವಿರಾ ? ಲಿಂಗ ಒಂದಾಗಿರ್ದ ಜಂಗಮ ತತ್ವ ಅಳವಟ್ಟಿದೆಯಾ ?

ತನು, ಮನ, ಧನ ವೆಂಬಿವು ಗುಹೇಶ್ವ ಲಿಂಗದ ಸೊಮ್ಮು ಆಗಿದೆಯಾ ? ನೀವು ಭವಿ ಕಳೆದು ಭಕ್ತರಾಗಿರುವೆವು ಎನ್ನುವಿರಿ ನೀವು ಭವಿ ಕಳೆದು ಭಕ್ತರಾಗಿಹ ಪರಿ ಆವುದು?; ಬಸವಣ್ಣನವರಂತೆ ಭಕ್ತಿಯೆ ಲಿಂಗ ಪೂಜೆಯಾಗಿ ಲಿಂಗದಲ್ಲಿ ಸಮರಸ ವಾಗಿರುವಿರಾ? ಅಥವಾ ಅಲ್ಲಮರಂತೆ ವೈರಾಗ್ಯವೆ ಲಿಂಗ ಪೂಜೆಯಾಗಿ; ಲಿಂಗದಲ್ಲಿ ಲೀಯವಾಗಿರುವಿರಾ ? ಜ್ಞಾನ ಕ್ರಿಯೆಯೆ ಲಿಂಗ ಪೂಜೆಯಾಗಿ ಚೆನ್ನಬಸವಣ್ಣನವರಂತೆ ಲಿಂಗದಲ್ಲಿ ಬೆರತು ಲಿಂಗವಾಗಿ ರುವಿರಾ ? ಈ ಮೂರರಲ್ಲಿ ಒಂದಾದರೂ ನೀವು ಅಳವಡಿಸಿ ಕೊಂಡಿರುವಿರಾ ? ಅಳವಡಿಸಿ ಕೊಳ್ಳದಿದ್ದಲ್ಲಿ ನೀವು ಭವಿ ಕಳೆದು ಭಕ್ತರಾಗಿರುವೆವು ಎಂಬುದು ನಿಮ್ಮ ಅಪ್ರಮಾಣಿಕತನ ವಲ್ಲವೆ ? ನಿಮ್ಮ ಹೃದಯ ನೀವೆ ನೋಡಿಕೊಳ್ಳಿ, ನೀವು ಭವ ಭಾರಿಗಳಾಗಲಿಲ್ಲವೆ ? ನಿಮ್ಮನ್ನು ನೀವೆ ತಿಳಿದು ನೋಡಿ .

ನೀವು ಭೂ ದೇವಿಗೆ ಭಾರಕರು, ಸರ್ವೇಶ್ವರನ ಲೀಲೆಗೂ ವಂಚಕರು. ನಿಮ್ಮ ಹುಟ್ಟು ಸಾವುಗಳಿಗೆ ಗಣನೆಯಿಲ್ಲ . ಏಕಂದರೆ ಭವಿತನ ಕಳೆಯದ ಭೂ ಭಾರಿಗಳು ಭ್ರಾಂತರು. ಅರಿಯದೆ ಭವಿಗೆ ಕೊಡಲಾಗದು ಎನ್ನುವಿರಿ, ಹಾಗಾದರೆ ಭವಿ ಯಾರು ? ಅಂಗದ ಮೇಲೆ ಲಿಂಗ ವಿಲ್ಲದವರು ಭವಿಗಳು ಎನ್ನುವಿರಲ್ಲವೆ ? ಗುರುವಿನಿಂದ ಅನುಗ್ರಹಿ ಸಿದ ಲಿಂಗದಿರುವ ಕಂಡಿರುವಿರಾ ? ನೀವು ಕಂಡುದು ಕುರುಹು ಅಲ್ಲವೆ ? ಕುರುಹೆ ಲಿಂಗ ವೆಂದು ತಿಳಿದಿರುವಿರಿ ಅಲ್ಲವೆ ? ನೀವು ತಿಳಿದುಕೊಂಡ ಲಿಂಗಯ್ಯನ ಶರೀರದ ಮೇಲೆ ಲಿಂಗ ವಿದೆಯಾ ? ಲಿಂಗವಿಲ್ಲದಿರುವಾಗ ಲಿಂಗವದು ಭವಿಯಾಯಿತ್ತು. ನೀವು ಪ್ರತಿ ದಿನ ಲಿಂಗ ದೇವನಿಗೆ ನೈವೇದ್ಯಮಾಡಿ ಪ್ರಸಾದ ತೆಗೆದು ಕೊಳ್ಳುವಿರಿ ಅದು ಲಿಂಗ ವಿಲ್ಲದ ಭವಿಗೆ ಕೊಟ್ಟಂತಾಗಲಿಲ್ಲವೆ ? ನೀವುಗಳು , ಭವಿಗೆ ಕೊಡಲಾಗದು ಎನ್ನುವವರು ತನ್ನ ಎದೆಯ

ಮೆಇಲೆ ಲಿಂಗ ವಿಲ್ಲದ ಭವಿಗೆ ನೀವು ದಿನ ನಿತ್ಯ ಎಡೆ ಕೊಡುತ್ತಿರುವದು ನೋಡಿದರೆ ನೀವೆ ಅಪ್ರಮಾಣಿಕ ರಲ್ಲವೆ ?

ಇದು ಕಾರಣ ನಾನು ಭವಿ ವಿಡಿದು ಭಕ್ತಿಯಿಂದ ಸುಖಿಯಾದೆ ಗುಹೇಶ್ವರಾ. ನಾನು ಭವಿ ವಿಡಿದುದು, ಲಿಂಗ ವಿಡಿದುದು, ಗುರುಕರುಣಿಸಿದುದು ಕುರುಹೆಂದು ತಿಳಿಯ ಲಿಲ್ಲ ಅದು ನಿರೂಪ. ಎನ್ನರುವಿನ ವಿಶ್ರಾಮ. ಅರಿಯಲಿಲ್ಲದ ಅರುವೆಂದು ವಿಡಿದು ಕುರು ಹೆಂದು ಅರಿಯಲಿಲ್ಲ, ಎನ್ನ ಮನದ ಮಹಿಮನೆಂದು ಸ್ವೀಕರಿಸಿದರೆ ಅದು ನಿಜದ ಎನ್ನ ನಿಕ್ಷೇಪವಾಗಿ ಸುಖದ ಸುಖವಾಗಿ ನನ್ನಲ್ಲಿ ನಾನು ಏಕವಾದೆ. ಅದುವೆ ಆದೆ ಎಂದು ಲಿಂಗ ವೆಂಬ ಭವಿಯ ವಿಡಿದು ಲಿಂಗ ಒಂದಾಗಿರ್ದ ಜಂಗಮವೆಂಬ ಭವಿಯ ವಿಡಿದು ಭಕ್ತಿ ಯಿಂದ ಸಮರಸವಾದೆ ಸುಖವೆ ಆದೆ. ಭವಿ ಎಂಬುವ ಪ್ರಭುವಿನ ದೃಷ್ಠಿ ನಿಷ್ಕಳಂಕ ದೃಷ್ಠಿ . ಭವಿ ಎಂದರೆ ಲಿಂಗ ಲಿಂಗವದು ನಿಷ್ಕಳಂಕ . ನಿಷ್ಕಳಂಕವದು ಕೇವಲ ಜ್ಞಾನ ಸ್ವರೂಪ ಸತ್ಯಜ್ಞಾನಾನಂದ, ಪರಾನಂದ, ಅಮಲಾನಂದ, ಅಚಲಾನಂದ, ಪೂರ್ಣಾ ನಂದವೆಂಬುದು ಭವಿಯಾದುದು. ಅಂತಪ್ಪ ಭವಿ ವಿಡಿದು ಭಕ್ತಿಯಿಂದ ಸುಖಿಯಾದೆ ಗುಹೇ ಶ್ವರಾ ಎಂದು ಹೇಳಿಹರು .

ವಚನ - 14

ಭವಿಯೊಂದು ಕುಲ, ಭಕ್ತನೊಂದು ಕುಲ ವೆಂಬರು,
ಭಕ್ತ ನೆಂತಿಪ್ಪ, ಭವಿ ಎಂತಿಪ್ಪ ನೆಂದಡೆ ಆರು ಅರಿಯರು.
ಇದು ಬಲ್ಲವರು ತಿಳಿದುನೋಡಿ.
ಭಕ್ತ ನೆಂದರೆ ಅಂಗ, ಭವಿ ಎಂದರೆ ಲಿಂಗ.
ಈ ಎರಡರ ಸಕೀಲ ಸಂಬಂಧವ ನರಿದರೆ
ಆತನೆ ನಮ್ಮ ಬಸವಪ್ರಿಯ ಕೂಡಲ ಚೆನ್ನಬಸವಣ್ಣ .

ತಾತ್ಪರ್ಯ : ಭವಿಯೊಂದು ಕುಲ, ಭಕ್ತನೊಂದು ಕುಲವೆಂಬರು, ಭಕ್ತ ನೆಂತಿಪ್ಪ ಭವಿ ಎಂತಿಪ್ಪ ನೆಂದಡೆ ಆರು ಅರಿಯರು : ಅರಿಯದವರಲ್ಲಿ ಕುಲಗಳು ಕಾಣುವುದು ಸಹಜವು, ಅರಿತವರಲ್ಲಿ ಕುಲಗಳು ಕಾಣುವದಿದು ಆಶ್ಚರ್ಯ.

ಲಿಂಗದೇವನ ಪೂಜಿಸುವವರಲ್ಲಿಯೆ ಕುಲ ಹುಡುಕುವದು ಕಂಡು ಇದಾರಿಗೆ ಹೇಳುವದು ? ಲಿಂಗದೇವನ ಪೂಜಿಸುವ ಭಕ್ತರಲ್ಲಿಯು ಕುಲಗಳ ಹುಡಿಕಿ ತಮ್ಮ ತಮ್ಮೊಳಗೆ ಮೇಲು ಕೀಳಾಗಿ ಕಾಣುತ್ತಾರೆ. ಹಾಗೆ ಜಂಗಮಯ್ಯಗಳು ಕೂಡಾ ಒಂದೆ ಲಿಂಗದೇವನ ಪೂಜಿಸಿ ಮಠದಯ್ಯ ಹೆಚ್ಚಂತೆ, ಮಠಪತಿ ಕಡಿಮೆಯಂತೆ ಅದರಲ್ಲಿ ಗುರುವರ್ಗವು ಹೆಚ್ಚಂತೆ, ಶಿಷ್ಯವರ್ಗವು ಕಡಿಮೆಯಂತೆ ಹೀಗೆ ತಮ್ಮ ತಮ್ಮೊಳಗೆ ಕುಲಗಳು ಕಾಣುತ್ತಿರುವರು ಎಂದಲ್ಲಿ ಸೂರ್ಯನ ಬೆಳಕಿನಲ್ಲಿ ಕತ್ತಲೆ ಕಂಡುದಾಗಿದೆ. ಇದನ್ನು ಕಂಡು ಶರಣ ಭವಿ ಎಂತಿಪ್ಪ , ಭಕ್ತನೆಂತಿಪ್ಪ ನೆಂದಡೆ ಆರು ಅರಿಯರಲ್ಲಾ ಎಂದು ಪ್ರಶ್ನಿಸಿ ತಾನೆ ಅದರ ಉತ್ತರವ ತಿಳಿಸಿ ಹನು .

ಭವಿ ಎಂತಿಪ್ಪ ಭಕ್ತ ಎಂತಿಪ್ಪ ನೆಂದರೆ ಭಕ್ತ ನೆಂದರೆ ಅಂಗ . ಭವಿ ಎಂದೆರೆ ಲಿಂಗ .

ಈ ಎರಡರ ಸಕೀಲ ಸಂಬಂಧ ವರಿತರೆ ಆತನೆ ನಮ್ಮ ಬಸವಪ್ರಿಯ ಚನ್ನಬಸವಣ್ಣ . ಭಕ್ತನೆಂದರೆ ಚಿದಂಗ , ಭವಿ ಎಂದರೆ ಚಿಲ್ಲಿಂಗ , ಚಿನ್ಮಯ ಲಿಂಗ . ಭಕ್ತ ನೆಂದರೆ ನದಿ ಭವಿ ಎಂದರೆ ಸಾಗರ . ಸಾಗರಕ್ಕೆ ಸೀಮಿತ ಉಂಟೆ ? ಸಾಗರದೊಳ ಸಮರಸವಾದ ನದಿಗೂ ಸಂಕೇತ ಉಂಟೆ ?

''ನೆಲನೊಂದೆ ಹೊಲೆಗೇರಿ ಶಿವಾಲಯಕ್ಕೆ , ಜಲ ಒಂದೆ ಶೌಚಾ ಚಮನಕ್ಕೆ , ತನ್ನ ತಾನರಿದ ಶರಣಂಗೆ ಕುಲವೊಂದೆ '' ಅಖಂಡ ವಸ್ತುವಿನಲ್ಲಿ . ತುಂಡು ತುಂಡು ಮಾಡುವದು ಹೇಗೆ ? ಶಿವಾಲಯಕ್ಕೂ ಹೊಲಗೇರಿಗೂ ಸಮವಾಗಿರುವ ನೆಲ ಒಂದೆ ಅದನಾರು ಅರಿಯರಲ್ಲ. ಶೌಚಕ್ಕೂ , ಸ್ನಾನಕ್ಕೂ , ಅಭಿಷೇಕಕ್ಕೆ ಒಂದೆ ಆದ ಜಲವ ಆರೂ ಅರಿಯರಲ್ಲ . ಭವಿಯೊಂದು ಕುಲ, ಭಕ್ತನೊಂದು ಕುಲವ ಮಾಡುವ ಅಣ್ಣಗಳಿರಾ ? ಭವಿ ಹೇಗಿದ್ದಾನೆ ? ಭಕ್ತ ಹೇಗಿದ್ದಾನೆ ? ಇವರ ಇರವು ಅರಿತಿರುವಿರಾ ? ಕುಲವಿಲ್ಲದವರಲ್ಲಿ ಕುಲವ ಹುಡುಕುವುದೆ ? ಗುಣಾತೀತನಲ್ಲಿ ಗುಣವ ಹುಡುಕುವುದೆ ? ಭವಕ್ಕಗಮ್ಯವಾದುದರಲ್ಲಿ ಭಾವಂಗಳ ಕಲ್ಪಿಸುವದೆ? ಇದು ಸರಿಯಾಗದು ಬಲ್ಲವರು ತಿಳಿದುನೋಡಿ .

ಭಕ್ತನೆಂದರೆ ಅಂಗ , ಭವಿ ಎಂದರೆ ಲಿಂಗ : ಈ ಅಂಗ ಲಿಂಗದಲ್ಲಿ ಭೇದ ಮಾಡಬಹುದೆ ? ಅಜಾತ ತತ್ವದಲ್ಲಿ ಜಾತಿಯ ಕಲ್ಪಿಸ ಬಹುದೆ ? ಗಟ್ಟಿತುಪ್ಪ ತಿಳಿದುಪ್ಪಕ್ಕೆ ಭೇದವುಂಟೆ ? ದೀಪಕ್ಕೆ ದೀಪ್ತಿಗೆ ಭೇದ ಉಂಟೆ ? ಅಂಗಕ್ಕೆ ಭೇದ ಉಂಟೆ ? ಎನ್ನಂಗವನು ಶ್ರೀಗುರು ಮಂತ್ರಮಾಡಿ ತೋರಿದನಾಗಿ ಸಾವಯವ ನಿರವಯಕ್ಕೆ ಬೇಧವಿಲ್ಲವಯ್ಯ ಚೆನ್ನಮಲ್ಲಿಕಾರ್ಜುನ. ಘಟ್ಟಿದುಪ್ಪ ತಿಳಿದುಪ್ಪಕ್ಕೆ ಬೇದವೆ ಅಯ್ಯಾ ಅದು ತಿಳಿಯಾದರೇನು ಘಟ್ಟಿಯಾದರೇನು ? ಇವೆರಡು ತುಪ್ಪವಲ್ಲದೆ ಅನ್ಯವೆ ? ಎರಡು ಶಕ್ತಿಯುಕ್ತವಲ್ಲದೆ ಅನ್ಯವೆ ? ಹಾಗೆ ಅಂಗಕ್ಕೂ ಲಿಂಗಕ್ಕೂ ಬೇದವೆ ? ಘಟ್ಟಿದುಪ್ಪದಂತೆ ಅಂಗ . ತಿಳಿದುಪ್ಪದಂತೆ ಲಿಂಗ . ಭವಿ ಎಂದರೆ ತಿಳಿದುಪ್ಪ . ಭಕ್ತನೆಂದರೆ ಘಟ್ಟಿದುಪ್ಪ . ಭಕ್ತನೆಂದರೆ ವಾರಿಕಲ್ಲು , ಭವಿ ಎಂದರೆ ವಾರಿ . ವಾರಿ ಕಲ್ಲಿಗೂ ವಾರಿಗೂ ಭೇದವೆ ಅಯ್ಯಾ ? .

ದೀಪಕ್ಕೆ ದೀಪ್ತಿಗೆ ಬೇಧ ಉಂಟೆ ? ದೀಪ ಬೇರೆ ಅದರ ಕಾಂತಿ ಬೇರೆಯೆ ? ಭವಿ ಎಂದರೆ ದೀಪ , ಭಕ್ತ ನೆಂದರೆ ದೀಪ್ತಿ . ಭವಿ ಎಂದರೆ ಪ್ರಕಾಶ , ಭಕ್ತ ನೆಂದರೆ ಕಾಂತಿ ಕಿರಣ ಬೇರೆಯೆ ಹಾಗೆ . ಅಂಗಕ್ಕೂ ಆತ್ಮಕ್ಕೂ ಬೇಧವುಂಟೆ ? ಅಂಗ ಬೇರೆ , ಆತ್ಮ ಬೇರೆಯೆ ? ಭವಿ ಎಂದರೆ ಆತ್ಮ ಭಕ್ತ ನೆಂದರೆ ಅಂಗ , ಅಂಗಕ್ಕೂ ಆತ್ಮಕ್ಕೂ ಭೇದವೆ ಅಯ್ಯಾ .

''ಎನ್ನಂಗವನು ಶ್ರೀಗುರು ಮಂತ್ರಮಾಡಿ ತೋರಿದನಾಗಿ ಸಾವಯವ ನಿರವಯಕ್ಕೆ ಭೇದ ವಿಲ್ಲವಯ್ಯ ಚೆನ್ನಮಲ್ಲಿಕಾರ್ಜುನ .'' ಎನ್ನಂಗವನು ಶ್ರೀಗುರು ಮಂತ್ರಮಾಡಿ ತೋರಿದುದ ನೇನೆಂಬೆ ಶ್ರೀಗುರು ಕರುಣೆ ಅಪಾರ. ಅದಕ್ಕೆ ಭಾಷೆ ಸಿಗವು ; ದೊರೆಯವು . ಧ್ವನಿಯ ಮರೆಯಲ್ಲಿದ್ದುದ ತೋರಿದನೆ ? ಏನೆಂದನ್ನದ ಮುನ್ನ ತಾನೆ ಆದುದು ತೋರಿದನೆ ? ಎನ್ನಂಗವ ಮಂತ್ರಮಾಡಿ ತೋರಿದುದರಿಂದ ಸಾವಯವ ವೆಂದರೂ ಏನಗೆ , ನಿರವಯುವ ನೆಂದರೂ ಎನಗೆ . ಅಂಗ ನೆಂದರೆ ನೆನಗೆ ಲಿಂಗ ವೆಂದರೂ ಎನಗೆ , ಭವಿ ಎಂದರೂ ಎನಗೆ , ಭಕ್ತ ನೆಂದರೂ ಎನಗೆ . ಜೀವ ನೆಂದರೆ ಎನಗೆ , ಶಿವ ನೆಂದರೂ ಎನಗೆ . ಎನ್ನಂಗವನು

ಶ್ರೀಗುರು ಮಂತ್ರಮಾಡಿದ ಭಾಗ್ಯ ಅದಾರಿಗೆ ? ಶ್ರೀಗುರು ಒಲಿತವರಿಗೆ. ಒಲಿತ ಚಿನ್ಹವೆಂದರೆ ತನ್ನಂತರಂಗದಲ್ಲಿ ಗುರು ಲಿಂಗದುದಯ ಚಿನ್ಹ ನೋಡಾ .

ಇವನ ಕಂಡು ತಮದಂತಾಯಿತ್ತೆನ್ನ ಗುರುವಿನಪದೇಶ . ಇವನ ಕಂಡು ವಾಯುವಿನ ಕೈಯಲ್ಲಿ ದೀಪ ಸೊಡರು ಸಿಕ್ಕಂತಾಯಿತ್ತೆನ್ನ ಗುರುವಿನ ಉಪದೇಶ. ಉರಿವ ಶಿಖೆಯ ಕರ್ಪುರ ವಡಗಿದಂತಾಯಿತ್ತೆನ್ನ ಗುರುವಿನುಪದೇಶ ಸೌರಾಷ್ಟ್ರಸೋಮೇಶ್ವರಾ.''

ಗುರು ಲಿಂಗದುದಯವ ಕಂಡು ಉಪದೇಶರೂಪ ಗುರುತನ ಕಿರಿದಾಯಿತ್ತು . ಗುರುಲಿಂಗ ದುದಯಕಂಡು ಗಾಳಿಯ ಕೈಯಲ್ಲಿ ಶಿಕ್ಕ ಬೆಳಕಿನಂತಾಯಿತ್ತು. ಗುರುವಿನುಪ ದೇಶ , ಉರಿವ ಶಿಖೆಯಲ್ಲಿ ಸಿಕ್ಕ ಕರ್ಪುರದ ಗತಿಯಂತೆ ಗುರುಲಿಂಗದುದಯವಾಗಿ , ಗುರುತನವೆಂಬ ಉಪದೇಶ ನಷ್ಟ ವಾಯಿತ್ತು. ಹಾಗೆ ಎನ್ನಂಗವ ಶ್ರೀಗುರು ಮಂತ್ರಮಾಡಿ ದುದು ಉಪಮಿಸಲಳವಲ್ಲ. ಎನ್ನಂಗವ ಮಂತ್ರ ಮಾಡಿದುದು ಕಿವಿಗೆ ಕೇಳದ ಮಂತ್ರ , ಕೈಯಿಂದ ಮುಟ್ಟದ ಅಂಗ , ಕಣ್ಣಿಗೆ ಕಾಣದ ಅಂಗ , ನುಡಿಗೆಡೆ ಗೊಡದ ಅಂಗ , ನಿಶಬ್ದ ವೇದಿಗಳಿಗೆ ಕಾಣುವ ಅಂಗ , ಲಿಂಗ ವೆಂದಲ್ಲಿಯೆ ತಪ್ಪಿದ ಲಿಂಗ ,ಹಿಡಿವ ಕೈಗಳಿಗೆ ಸಿಲುಕದ ಲಿಂಗ . ''ಹಿಡಿವ ಕೈಯಿ ಕತ್ತಲು ನೋಡುವ ಕಂಗಳು ಕತ್ತಲು , ನೆನವ ಮನ ಕತ್ತಲು , ಕತ್ತಲೆ ಎಂಬುದು ಇತ್ತಲೆಯಯ್ಯಾ ಗುಹೇಶ್ವರ ನೆಂಬುದು ಅತ್ತಲೆಯಯ್ಯಾ .''

ಎಲ್ಲಿಯವರೆಗೆ ತಾನು ಕಲ್ಪಿತನಾಗಿಹನು ಅಲ್ಲಿಯ ವರೆಗೆ ತನ್ನ ಲಿಂಗವೆ ಹಿಡಿಯಲಿ , ನೋಡಲಿ , ನೆನೆಯಲಿ , ಮರುವಿನಲ್ಲಿ , ಭ್ರಾಂತಿಯಲ್ಲಿರುವ ಕಲ್ಪಿತ ಕಲ್ಪನಾರಹಿತನ ಪೂಜೆ ಅದೆಂತು ಸಾಧ್ಯ ಇದು ಕಾರಣ ಕಲ್ಪಿತನ ಪೂಜೆ ಇತ್ತಲೆ. ನೋಟ , ನೆನಹು ಇತ್ತಲೆ. ಗುಹೇಶ್ವರ ಅತ್ತಲೆ. ಎಂದು ಹೇಳಿಹರು .

ಭಕ್ತ ನೆಂದರೆ ಅಂಗ , ಭವಿ ಎಂದರೆ ಲಿಂಗ. ಈ ಎರಡರೆ ಸಕೀಲ ಸಂಬಂಧವ ನರಿ ತರೆ ಆತನೆ ನಮ್ಮ ಬಸವ ಪ್ರಿಯ ಕೂಡಲ ಚೆನ್ನಬಸವಣ್ಣ : ಅಂಗ ಲಿಂಗ ಈ ಎರಡರ ಗುಟ್ಟು ಸಂಬಂಧ ಅರಿತರೆ ಆತನೆ ನಮ್ಮ ಬಸವಪ್ರಿಯ ಚೆನ್ನಬಸವಣ್ಣ . ಅಂಗ ಲಿಂಗ ಈ ಎರಡು ಧ್ವನಿಯ ಮರೆಯಲ್ಲಿದ್ದು ಆರು ಅರಿತಿಹರು . ಈ ಎರಡರ ಗುಟ್ಟು ಸಂಬಂಧ ಅರಿ ತವನು ಧ್ವನಿಯ ಮರೆಯಲ್ಲಿದ್ದುದ ಅರಿತವರು . ಅಂಗನೆಂಬ ಧ್ವನಿ ಆಗದವನು , ಲಿಂಗ ನೆಂಬ ಧ್ವನಿ ಆಗದವನು, ಏನೊಂದಾಗದ ಘನನೆ ನಮ್ಮ ಬಸವ ಪ್ರಿಯ ಕೂಡಲ ಚೆನ್ನ ಬಸ ವಣ್ಣನೆಂದು ಹೇಳಿಹರು .

ವಚನ - 15

ಬೆಟ್ಟಕ್ಕೆ ಚಳಿಯಾದಡೆ ಏನ ಹೊದಿಸುವರಯ್ಯಾ ?
ಬಯಲು ಬತ್ತಲೆ ಇದ್ದಡೆ ಏನನುಡಿಸುವರಯ್ಯಾ ?
ಭಕ್ತನು ಭವಿಯಾದಡೆ ಅದೇನನುಪಮಿಸುವರಯ್ಯಾ ಗುಹೇಶ್ವರಾ ?

ತಾತ್ಪರ್ಯ : ಬೆಟ್ಟಕ್ಕೆ ಚಳಿಯಾದಡೆ ಏನ ಹೊದಿಸುವರಯ್ಯ : ಸಣ್ಣ ವಸ್ತುವಿಗೆ ಏನ ನ್ನಾದರೂ ಹೊದಿಸ ಬಹುದು , ಮನೆ ಸೋರಿದರೂ ಏನನ್ನಾದರೂ ಹೊದಿಸಬಹುದು , ಚಳಿಗಾಲದಲ್ಲಿ ಮಾನವನಿಗಾಗಲಿ , ಪಶುಗಳಿಗಾಗಲಿ , ಚಳಿ ಹಿಡಿದಲ್ಲಿ ಏನನ್ನಾದರೂ ಹೊದಿ

ಸಬಹುದು . ಮನೆ ಮಠಗಳಲ್ಲಾಗಲಿ ಅದರೊಳಗೆ ಹೋಗಿ ಚಳಿ ಕಳ ಕೊಳ್ಳಬಹುದು .

ಬೆಟ್ಟಕ್ಕೆ ಚಳಿಯಾದಡೆ ಏನ ಹೊದಿಸುವದು ? ಬೆಟ್ಟ ವೆಂದರೆ ದೊಡ್ಡದು, ಘನ ವಾದುದು. ಅದಕ್ಕೆ ಚಳಿಯಾದಡೆ ಏನ ಹೊದಿಸುವದು ? ಹಿಮಾಲಯದಲ್ಲಿ ವಾಸವಾಗಿಹ ತಪಸ್ವಿಗಳು , ತ್ಯಾಗಿಗಳು , ಸನ್ಯಾಸಿಗಳು , ಋಷಿಗಳು ಚಳಿಗಾಲದಲ್ಲಿ ಗವಿಗಳಲ್ಲಿ ಗುಹೆ ಗಳಲಿದ್ದು ಚಳಿಕಳೆದು ಕೊಳ್ಳುವರು . ಹಿಮಾಲಯ ಪರ್ವತಕ್ಕೆ ಚಳಿಯಾದಡೆ ಏನಹೊದಿಸು ವರಯ್ಯ . ಅದಕ್ಕೆ ಹೊದಿಸಲು ಸಾಧನೆಯೆ ಅಸಾಧ್ಯ ವಿರುವಲ್ಲಿ ಬೆಟ್ಟಕ್ಕೆ ಚಳಿಯಾದರೆ ಏನ ಹೊದಿಸುವರಯ್ಯ ಎಂದು ಪ್ರಶ್ನಿಸಿಹರು .

ಬಯಲು ಬತ್ತಲೆ ಇದ್ದರೆ ಏನ ನುಡಿಸುವದಯ್ಯ : ಬಯಲೆಂದು ಬಹು ಜನರು ನುಡಿಯುತ್ತಾರೆ ಆದರ ಇರುವಿಕೆ ತಿಳಿದವರು ಸ್ವಲ್ಪ ಜನ ಇರುವರು. ಬಯಲೆಂಬುದು ಘಟದಗಲ , ಮಠದಗಲ , ಮನೆ ಅಗಲ , ಗ್ರಾಮದಗಲ , ಪಟ್ಟಣದಗಲ , ದೇಶದಗಲ , ವಿದೇಶ ದಗಲ , ವಿಶ್ವದಗಲ , ಮಹದಗಲ ವಿರುವಲ್ಲಿ ಘಟ ಅದರೊಳಗೆ. ಮನೆ , ಮಠ ಅದರೊಳಗೆ. ನರ ನಗರ ಅದರೊಳಗೆ. ದೇಶ ವಿದೇಶ ಅದರೊಳಗೆ . ವಿಶ್ವ ಅದರೊಳಗೆ ಚತುರ್ದಶ ಭುವನ ಅದರ ಗರ್ಭದಲ್ಲಿರುವಾಗ ಅದು ಬತ್ತಲೆ ಇದ್ದರೆ ಏನನುಡಿಸುವದು . ಬಯಲು ಇರುವದು ಬತ್ತಲೆ ,ಪಂಚ ಭೂತದಲ್ಲಿ ಪೃಥ್ವಿಕ್ಕಿಂತ ಜಲ ಸೂಕ್ಷ್ಮ . ಜಲಕ್ಕಿಂತ ಅಗ್ನಿ ಸೂಕ್ಷ್ಮ , ಅಗ್ನಿಕ್ಕಿಂತ ವಾಯು ಸೂಕ್ಷ್ಮ , ವಾಯುವಿಗಿಂತ ಆಕಾಶ ಅಥವಾ ಬಯಲು ಅತ್ಯಂತ ಸೂಕ್ಷ್ಮವಾದುದು . ಪೃಥ್ವಿ , ಜಲ ,ಅಗ್ನಿ , ಒಂದಕ್ಕಿಂತ ಒಂದು ಸೂಕ್ಷ್ಮವಾದರೂ ಕಣ್ಣಿಗೆ ಗೋಚರ ವಾಗುತ್ತವೆ . ವಾಯು ಕಣ್ಣಿಗೆ ಕಾಣಿಸುವದಿಲ್ಲ ವೆಂದರೂ ಅದರ ಸ್ಪರ್ಶ ಧರ್ಮ ದಿಂದ ಗೋಚರವಾಗುತ್ತದೆ . ವಾಯುಕ್ಕಿಂತಲೂ ಆಕಾಶ ಅತಿ ಸೂಕ್ಷ್ಮ ವಾದುದರಿಂದ ಕಣ್ಣಿಗೆ ಗೋಚರವಾಗುವದಿಲ್ಲ . ಅದರ ಇರುವಿಕೆ ಬತ್ತಲೆ ಇರುವಿಕೆ ಇರುವಾಗ, ಅದಕ್ಕೆ ಏನ ನುಡಿ ಸುವದು ಎಂದು ಹೇಳಿಹರು .

ಭಕ್ತನು ಭವಿಯಾದರೆ ಏನನುಪಮಿಸುವದಯ್ಯ: ಮಾನವ ಏನಾದರೂ ಆಗಲಿ ಉಪಮಿಸಬಹುದು . ಮರವರುವಿನಿಂದುಕ್ತನಾಗಿ ಏನಾದರೂ ಆಗಲಿ ಉಪಮಿಸಬಸುದು .ನುಡಿಗೊಳ ಪಟ್ಟಲ್ಲಿ ನುಡಿದು ಹೇಳಬಹುದು ಉಪಮಿಸಬಹುದು. ಮರವುಳ್ಳವನಾದರೆ ಉಪಮಿಸಬಹುದು ಅರುವುಳ್ಳವನಾದರೂ ಉಪಮಿಸಬಹುದು .

ಭಕ್ತನು ಭವಿಯಾದಲ್ಲಿ ಏನ ಉಪಮಿಸುವದಯ್ಯ ? "ಭಕ್ತಂಗೆ ಉತ್ಪತ್ತಿಯಿಲ್ಲ . ಉತ್ಪತ್ತಿ ಇಲ್ಲಾಗಿ ಸ್ಥಿತಿ ಇಲ್ಲ ಸ್ಥಿತಿ ಇಲ್ಲಾಗಿ ಲಯವಿಲ್ಲ . ಲಯ ವಿಲ್ಲಾಗಿ ಮುನ್ನೆಲ್ಲಿಂದ ಬಂದ ನಲ್ಲಿಗೆ ಹೋಗಿ ನಿತ್ಯ ನಾಗಿಪ್ಪನಯ್ಯ ಗಿಹೇಶ್ವರನಲ್ಲಿ ಬಸವಣ್ಣ, ಅನಿತ್ಯವಾದಲ್ಲಿ ಉತ್ಪತ್ತಿ ಉಂಟು ಸ್ಥಿತಿ ಉಂಟು , ಲಯ ಉಂಟು . ನಿತ್ಯನಾದವಂಗೆ ಅಂದು ನಿತ್ಯ ಇಂದು ನಿತ್ಯ ಎಂದೆಂದೂ ನಿತ್ಯ . ನಿತ್ಯ ಇದ್ದಂತಿರುವ ಘನ. ಏನೆಂದೆನ್ನದ ಮುನ್ನ ತಾನೆ ಆದ ಘನ . ಧ್ವನಿಯ ಮರೆಯಲ್ಲಿದ್ದ ಘನ , ಅದು ನಿತ್ಯ ನಿರಂಜನ ತಾನೆಂದರಿತ ಘನ , ಅದು ಮಹವು, ತನ್ನಿಂದ ತಾನೆ ಆದ ಸ್ವಯಂಭು ತೆರೆಹಿಲ್ಲದಭವ ನುಡಿಗೆಡೆಗೊಡದಿಂದ ಬಂದ ಮತ್ತು ತೆರಹಿಲ್ಲದಭವ ನಡಿಗೆಡೆ ಗೊಡದ ಮಹದಿರುವ ತನ್ನಿರುವೆಂದರಿತವನು ಭಕ್ತನು ಭವಿ ಯಾದರೆ ಏನನುಪಮಿಸುವದಯ್ಯಾ.

ಕೆಲಬರು ಭಕ್ತಂಗೆ ಬೇರೆ ಅರ್ಥ ಮಾಡುವರುಂಟು, ನಾವು ವಚನ ಸಾಹಿತ್ಯದಿಂದ ತಿಳಿದರೆ ಸರಿಯಾದ ಜ್ಞಾನ ಸಿಗುವದು. ಬಿಟ್ಟು ಮಹೇಶನಾದೆ ನೆಂಬುದು ಅರುಹಿನ ಕೇಡು, ಹಿಡಿದ ಭಕ್ತನಾದೆನೆಂಬುದು ನಿಜದ ಕೇಡು, ಬಿಡುವದು ಹಿಡಿವುದು ಮನ ಕಲ್ಪಿತ ವಲ್ಲದೆ ಕಲ್ಪನಾರಹಿತ ಭಕ್ತ ಮಹೇಶ್ವರರಲ್ಲಿ ಪ್ಪುದೇನಯ್ಯ ಕಪಿಲಸಿದ್ಧ ಮಲಿಕಾರ್ಜುನ.

ಎಲ್ಲಿಯವರೆಗೆ ಕಲ್ಪಿತಕ್ಕೆ ಒಪ್ಪಿಕೊಂಡಿರುವರು ಅವರು ಮನದ ಕಾರ್ಯಕ್ಕೆ ಒಪ್ಪಿದವರು. ಬಿಟ್ಟು ಮಹೇಶನಾದುದು ಮನವು, ಹಿಡಿದು ಭಕ್ತನಾದುದು ಮನವೆ. ಮನವು ಒಮ್ಮೆ ಉಪಾಧಿಯಿಂದುಕ್ತವಾಗಿ ಕಲ್ಪಿತವಾಗಿ ಕಲ್ಪಿತಕ್ಕೆ ಒಪ್ಪಿ ಮರವುಳ್ಳದ್ದೆನಿಸುವದು. ಪುನಃ ಉಪಾಧಿ ರಹಿತವಾಗಿ ಅರುವಿನ ಕಲ್ಪಿತಕ್ಕೆ ಒಪ್ಪಿ ಅರು ಸ್ವರೂಪ ವೆನಿಸಿಕೊಳ್ಳುವದು. ಹೀಗಾಗಿ ಕಲ್ಪಿತನಾಗಿ ಗುರುಪಾದವಾಗಲಿ ಲಿಂಗ ವಾಗಲಿ ಹಿಡಿದು ಭಕ್ತನೆನಸಿ ಕೊಳ್ಳುವದು ಮನವು ವಿವೇಕ ವೈರಾಗ್ಯದಿಂದುಕ್ತನಾಗಿ ಪೂರ್ವಾಶ್ರಯ ತ್ಯಜಿಸಿ ಅರುವಿನ ಶ್ರವಣಾದಿಗಳಿಂದುಕ್ತನಾಗಿ ಮಹೇಶ್ವರನ ನೆನಿಸಿಕೊಂಡಿಹುದು ಮನವು ಭಕ್ತನಾಗಲಿ ಮಹೇಶ್ವರನಾಗಲಿ , ಮನರೂಪಿ ಕಲ್ಪಿತಕ್ಕೆ ಒಪ್ಪಿದವರಾದ್ದರಿಂದ ಬಿಟ್ಟು ಮಹೇಶರನಾದರೂ ಅರುವ ಅರಿಯಲಿಲ್ಲ . ಅರುವಿಂಗ ರುವಾಗಿಹ ತನ್ನ ಮಹದಿರುವ ತನ್ನೊಳಗೆ ಪ್ರಜ್ವಲಿಸಲಿಲ್ಲ .ಹಿಡಿದು ಭಕ್ತನಾದರೂ ಮನರೂಪಿ ಕಲ್ಪಿತಕ್ಕೆ ಒಪ್ಪಿ ತನ್ನ ನಿಜದಿರುವು ತಿಳಿಯದೆ ನಿಜದಿಂದ ದೂರಾದನು. ಇದು ಕಾರಣ ಭಕ್ತನು ಭವಿಯಾದರೆ ಏನ ನುಪಮಿಸುದವಯ್ಯ ಗುಹೇಶ್ವರಾ .

ಭಕ್ತನು ಮನ ನಷ್ಟ ಮಾಡಿದಲ್ಲಿ ಉಪಾಮಾತೀತ ನೋಡಯ್ಯ. ಶಬ್ದ ಸಂದಣಿಗೆ ನಿಲುಕದ ಮಹಾಂತನೆ ಭಕ್ತನು ಭವಿಯಾದುದು, ಕಲ್ಪಿತನು ಕಲ್ಪನಾರಹಿತನಾದುದು, ಭಾವಿ ಕನು ಭಾವಕ್ಕಗಮ್ಯನಾದುದು, ಚಿಂತನವುಳ್ಳವನು ಅಚಿಂತ್ಯ ಪದವುಳ್ಳನಾದುದು . ಭಕ್ತನು ಭವಿಯಾದರೆ ಏನ ಉಪಮಿಸುವೆನಯ್ಯ ಎಂದು ಹೇಳಿಹರು .

ವಚನ - 16

ಅಂಗದ ಮೇಲಣ ಲಿಂಗವು ಲಿಂಗವಲ್ಲ , ಮನದ ಮೇಲಣ ಲಿಂಗವು ಲಿಂಗವಲ್ಲ
ಭಾವದ ಮೇಲಣ ಲಿಂಗವು ಲಿಂಗವಲ್ಲ , ಅಂಗದ ಮೇಲಣ ಲಿಂಗ ವ್ಯವಹಾರ
ಮನದ ಮೇಲಣ ಲಿಂಗ ಸಂಕಲ್ಪ , ಭಾವದ ಮೇಲಣ ಲಿಂಗ ಭ್ರಾಂತು
ತತ್ವ, ಆಳಿನ ಆಳು ಅರಸ ನಪ್ಪನೆ ? ಆಳ ನಾಳುವನರಸನಲ್ಲದೆ ,
ಅಂಗ, ಪ್ರಾಣ ಭಾವಂಗಳ ನೊಳಕೊಂಡಿರ್ಪುದೆ ಲಿಂಗಕಾಣ
ಮಸಣಯ್ಯ ಪ್ರಿಯ ಗಜೇಶ್ವರಾ.

ತಾತ್ಪರ್ಯ : ಬಹು ಲಿಂಗಾರ್ಚರು ಲಿಂಗ ವರಿಯದವರು ಇದ್ದಾರೆ ಲಿಂಗವರಿತವರು ಸಿಕ್ಕುವದು ವಿರಳ. ಲಿಂಗವರಿಯದ್ದರಿಂದ ಲಿಂಗ ತಪ್ಪಾಗಿ ತಿಳಿದು ಕೊಂಡವರೆ ಬಹಳ. ಅದು ಅರುವಿನ ಸಂಜ್ಞೆ ಎಂದು ತಿಳಿದ ಜನ ಬಹಳ ಕಡಿಮೆ .

ಅಂಗದ ಮೇಲಣ ಲಿಂಗವು ಲಿಂಗವಲ್ಲ : ಅಂಗದ ಆವ ಸ್ಥಾನದಲ್ಲಿ ಹಾಕಿರುವ ಲಿಂಗವು ಲಿಂಗವಾಗದು, ಲಿಂಗ ವೆಂದರೆ ಜ್ಞಾನ ಸ್ವರೂಪ ಗುರುಕರುಣಿಸಿದ ಜ್ಞಾನಾಮೃತ. ಅದನ್ನು ಅಂಗದ ಮೇಲೆ ಧರಿಸುವದಾದರೂ ಹೇಗೆ ? ಲಿಂಗವು ಕುರುಹು ಅಲ್ಲ, ಸಾಕಾರವಲ್ಲ,

ನಿರಾಕಾರವಲ್ಲ, ಜಡವಲ್ಲ, ಅಜಡವಲ್ಲ, ಏನೊಂದಾಗದ ಚೈತನ್ಯ, ನಿಷ್ಕಳಂಕ ಅದೆಂತು, ಅಂಗದ ಮೇಲಣ ಲಿಂಗವಾಗುವುದು.

ಮನದ ಮೇಲಣ ಲಿಂಗವು ಲಿಂಗವಾಗದು : ಏಕೆಂದರೆ ಮನದ ಮೇಲೆ ಲಿಂಗ ಧರಿಸಲು ಬರುವುದೆ ? ಮನವೆಂಬುದು ಪುಸಿ, ಕಲ್ಪನೆ. ಪುಸಿಯ ಮೇಲೆ ದಿಟವ ಕಟ್ಟುವದದೆಂತು ? ಮನವದು ಸಂಕಲ್ಪ. ಅದು ಅಕಲ್ಪಿತವ ಧರಿಸುವದೆಂತು ? ಭಾವದ ಮೇಲಣ ಲಿಂಗವು ಲಿಂಗವಲ್ಲ, ಭವಕ್ಕಗಮ್ಯವಾದುದು ಭಾವಕ್ಕೊಳ ಪಡಬಹುದೇ ? ಲಿಂಗವು ವಾಙ್ಮನೋತೀತವಾದ್ದರಿಂದ ಅಂಗದ ಮೇಲಣ ಲಿಂಗ ವ್ಯವಹಾರವೆಂದು ಹೇಳಿಹರು.

ಬಹಳಷ್ಟು ಲಿಂಗವಂತರಿಗೆ ಲಿಂಗ ಸಕೀಲ ಸಂಯೋಗದ ಗುಟ್ಟು ಅರಿಯುವ ಭಾಗ್ಯವಿಲ್ಲದುದರಿಂದ ಅಂಗದ ಮೇಲಣ ಲಿಂಗವಾಯಿತ್ತಲ್ಲದೆ ಅಂಗದೊಳಗೆ ಬೆರಸಿಪ್ಪ ಲಿಂಗದಿರುವ ತಿಳಿಯದಾಯಿತ್ತು. ಅದಕ್ಕಾಗಿ ಇದು ಪೂಜಾಲಿಂಗ ವಾಯಿತ್ತು. ಲಿಂಗ ಧರಿಸಿಕೊಳ್ಳುವುದು ಪ್ರತಿನಿತ್ಯ ಪೂಜಾ ಪಾಠ ಮಾಡುವುದು. ಒಬ್ಬರನ್ನೊಬ್ಬರು ಕಂಡು ಮಾಡುವದರಿಂದ ಇದು ಒಂದು ವ್ಯವಹಾರದ ಲಿಂಗವಾಯಿತ್ತು. ಈ ವ್ಯವಹಾರವುಳ್ಳ ಲಿಂಗವು ಲಿಂಗವಂತರಿಗೆ ಲಿಂಗವೆಂದು ತಿಳಿದಿರುವಾಗ, ಅಂಗದೊಳಗೆ ಬೆರೆಸಿಪ್ಪ ಲಿಂಗ ಅದಾರು ಬಲ್ಲರು? ನಿರವಯ ಲಿಂಗ, ನಿರೂಪಲಿಂಗ ಪೂಜೆಗೊಳಪಡಬಹುದೆ ? ಅರಿಯದ್ದರಿಂದ ಅಂಗೈಯಲ್ಲಿ ಸ್ವಯಂಜ್ಯೋತಿ ಲಿಂಗ ಪ್ರಜ್ವಲಿಸಿದರೂ ಅದರ ಘನವ ತಿಳಿಯಲಿಲ್ಲ ಇದು ಕಾರಣ ಪೂಜೆ ಮಾಡಿಸಿಕೊಳ್ಳುವ ಪೂಜಾಲಿಂಗವಾಯಿತ್ತು. ತಾನು ಪೂಜೆ ಮಾಡುವ ಭಕ್ತನಾದ, ಭಕ್ತನಾಗಿ ಲಿಂಗಯ್ಯನನ್ನು ಫಲಪದಂಗಳ ಬೇಡುವವನಾದ. ಲಿಂಗಯ್ಯನು ಭಕ್ತರು ಬೇಡಿದ ಇಷ್ಟಾರ್ಥಗಳ ಪೂರೈಸುವ ದೇವನಾದಲ್ಲಿ ವ್ಯವಹಾರಿಕ ಲಿಂಗವಾಯಿತು.

ಮನದ ಮೇಲಣ ಲಿಂಗ : ಸಂಕಲ್ಪ ಮನವದು ಲಿಂಗಾನುಸಂದಾನ ಮಾಡುವ ಸಂಕಲ್ಪವುಳ್ಳದ್ದಾದರೂ ಅದು ಕಲ್ಪಿತಕ್ಕೆ ಒಳಪಟ್ಟಿತಲ್ಲದೆ ಅಕಲ್ಪಿತ ಘನವರಿಯಲಿಲ್ಲ, ಇಲ್ಲದುದ ಸಂಕಲ್ಪ ಇಲ್ಲವಾಗಲಿಲ್ಲ, ಇದ್ದ ತನ್ನ ನಿಜದಿರುವು ತನ್ನಿಂದ ತನಗೆ ವಿದಿತವಾಗದ್ದಾಗಿ ಮನವಾಯಿತ್ತಲ್ಲದೆ ಕೇವಲ ಜ್ಯೋತಿ ವರ್ಣಾತೀತವಾಗಲಿಲ್ಲ, ಇದು ಕಾರಣ ತನ್ನ ಪೂರ್ವ ಸ್ವಭಾವವುಳ್ಳ ಸಂಕಲ್ಪ, ವಿಕಲ್ಪ ಕೆಡಲಿಲ್ಲ. ಇಲ್ಲದುದ ಕಲ್ಪಿಸುವದೆ ಸಂಕಲ್ಪ, ಇದ್ದುದ ನರಿಯದಿಹುದೆ ವಿಕಲ್ಪ, ಇದು ಮನದ ಸ್ವಭಾವ, ಇದು ತನ್ನ ನಿಜವ ಮರೆತ ಸ್ವಭಾವ. ಇದು ಮನದ ವಿಪರೀತ, ಈ ವಿಪರೀತ ಸ್ವಭಾವ ಕೆಡುವದಕ್ಕಾಗಿ ಶ್ರೀಗುರು ಲಿಂಗವ ಕೊಟ್ಟದ್ದು, ಇದು ಮನದ ನಿಜದ ನಿಧಿ, ಇದರಿಂದ ತೆರಹಿಲ್ಲದ ವಿಶ್ರಾಂತಿ, ಸುಖದ ಸುಖವು ಕರಗತವು. ಇಂತಪ್ಪ ಗುರುಕಾರುಣ್ಯ ತನ್ನ ಕರಕಮಲದಲ್ಲಿ ಬೆಳಗುತ್ತಿದ್ದರೂ ಮನವು ತನ್ನ ಪೂರ್ವ ಸ್ವಭಾವ ಬಿಡದ್ದರಿಂದ ಸಂಕಲ್ಪಕ್ಕೊಳಪಟ್ಟಿತ್ತಲ್ಲದೆ ಅಕಲ್ಪಿತ ಘನವಾಗಲಿಲ್ಲವಾದ್ದರಿಂದ ಮನದ ಮೇಲಣ ಲಿಂಗ ಸಂಕಲ್ಪ ವೆಂದು ಹೇಳಿಹರು .

ಭಾವದ ಮೇಲಣ ಲಿಂಗ : ಭ್ರಾಂತು. ಬಹು ಭಾವಿಕರು ಲಿಂಗ ಲಿಂಗ ಎಂದು ಭಾವಿಸುವವರಾಗಿಹರು, ಇವರ ಭಾವಿಕತನ ಭ್ರಾಂತಿಗೆ ಕಾರಣವಲ್ಲದೆ ಭ್ರಾಂತಿ ನಷ್ಟವಾಗಲು ಕಾರಣವಾಗಲಿಲ್ಲ, ಏಕೆಂದರೆ ಭಾವಕ್ಕಗಮ್ಯವಾದ ತತ್ವ ಅದು. ಭಾವ ಅಭಾವಗಳಿಗತೀತ ವಾದುದು ಭಾವಿಸುವದದೆಂತು ? ಅದು ವಾಕ್ಕಾತೀತವು, ಭಾವಾತೀತವು, ಅರಿದರುಹಿಸಿ ಕೊಂಬುದಕ್ಕೆ ಮೀರಿದ ಘನವಾಗಿರುವಲ್ಲಿ ನುಡಿಗಳಿಗೊಳ ಪಡಿಸುವದದೆಂತು ?

ಕಲ್ಪಿಸುವದದೆಂತು ? ನೆನೆಯುವದದೆಂತು ? ಭಾವಿಸುವ ದದೆಂತು ? ಇದು ಕಾರಣ ಭಾವದ ಮೇಲಣ ಲಿಂಗ ಭ್ರಾಂತು ಎಂದು ಹೇಳಿಹರು.

ಲಿಂಗವೆಂದರೆ ತತ್ವ, ಸತ್ಯಜ್ಞಾನಾನಂದ. ಇದು ಆಳಿನಾಳು ಆಗಬಹುದೆ ? ಅರಸನು ಆಳಿನಾಳು ಅವನೆಂತು ಆಗುವನು ? ಆಳುಗಳನ್ನು ಆಳುವವನು ಅರಸನು ಇರುವಲ್ಲಿ ಆಳಿನಾಳು ಆಗನು, ತತ್ವ ದೃಷ್ಟಿಯುಳ್ಳ ಮಹಾಂತ ಅವನು ಅರಸ. ಸ್ವಾರ್ತಾನಂದದ ಸಾಮ್ರಾಟ ಸಚ್ಚಿದ್ರೂಪಿ ಅರಸ. ಸತ್ಯಜ್ಞಾನಾನಂದ ರೂಪಿ ಅರಸ. ಚೈತನ್ಯರೂಪಿ ಅರಸ. ಅರಿಯಲಿಲ್ಲದ ಅರುವು ಅದು ಅರಸ. ಆ ಅರಸಿಕೊಳ್ಳುವ ತನು ಇಂದ್ರಿ, ಪ್ರಾಣ ಕರಣಂಗಳೆಂಬ ಆಳಿನಾಳು ಆಗನು. ಇತ್ತ ಅರಿವ ದೃಕ್ ಸಾಕ್ಷಿ ಅಸಂಗನೆಂಬ ಆತ್ಮಭಾವರೂಪ ಆಳು ಆಗನು ಇದು ಕಾರಣ ವಾಣಿ ಕಾರ್ಯವಾಗಿಹ ನುಡಿಯು ಆಗನು. ಇಂದ್ರಿಯಂಗಳ ಶುಭಾ ಶುಭ ಕ್ರಿಯೆಯು ಆಗನು, ಪ್ರಾಣದ ಕಾರ್ಯವು ಆಗನು, ಕರಣಂಗಳ ಕಾರ್ಯವು ಆಗನು. ಇವುಗಳಿಗೆ ಕಾರಣವಾದ ಪ್ರಕೃತಿ ಆಗನು, ಪ್ರಕೃತಿ ಕ್ರಿಯೆ ಆಗನು. ಏನೊಂದಾಗದ ತೆರಹಿಲ್ಲದಭವ ನುಡಿಗೆಡೆ ಗೊಡದವನೆ ಅರಸನು. ಕಲ್ಪನಾರಹಿತನೆ ಅರಸನು. ಕಲ್ಪಿತನೆಂಬ ಆಳು ಆಗನು, ಕಲ್ಪಿತನ ಕಾರ್ಯವಾಗಿಹ ಆಳಿನ ಆಳು ಆಗನು ಎಂದು ಹೇಳಿಹರು .

ಅಂಗ ಪ್ರಾಣ ಭಾವಂಗಳ ನೊಳಕೊಂಡಿರ್ಪುದೆ ಲಿಂಗ ಕಾಣಾ ಮಸಣಯ್ಯಪ್ರಿಯ ಗಜೇಶ್ವರಾ : ಲಿಂಗವೆಂಬುದು ಹೊರಗೆ ಕಾಣಿಸಿಕೊಳ್ಳುವ ಲಿಂಗವಲ್ಲ, ಅಂಗದೊಳು ಒಳಕೊಂಡಿರ್ಪುದೆ ಲಿಂಗ. ಕುಸುಮದಲ್ಲಿ ಸುಂಗಧ. ಹಾಗೆ ಕುಸುಮಂಗಳೋಳ್ ಸುಗಂಧ ಒಳಕೊಂಡಿರ್ಪುದೆ ಲಿಂಗ, ಹಾಲೊಳಗೆ ಹೇಗೆ ಮಾಧುರ್ಯ ಒಳಕೊಂಡಿರ್ಪುದು ಹಾಗೆ ತನುವಿನೊಳಗೆ ತನು ಒಳಕೊಂಡಿರ್ಪುದೆ ಲಿಂಗ. ಪ್ರಾಣದೊಳಗೆ ಪ್ರಾಣವಾಗಿ ಒಳಕೊಂಡಿರ್ಪುದು ಲಿಂಗ, ಮನದೊಳಗೆ ಮನವಾಗಿ ಒಳಕೊಂಡಿರ್ಪುದು ಲಿಂಗ, ಜೀವ ದೊಳಗೆ ಜೀವವಾಗಿ ಒಳಕೊಂಡಿರ್ಪುದು ಲಿಂಗ, ಭಾವದೊಳಗೆ ಭರಿತವಾಗಿ ಒಳಕೊಂಡಿರ್ಪುದು ಲಿಂಗ, ಕಣ್ಣಿನೊಳಗೆ ಕಣ್ಣಾಗಿ ಒಳಕೊಂಡಿರ್ಪುದು ಲಿಂಗ, ಕಿವಿಯೊಳಗೆ ಕಿವಿಯಾಗಿ ಒಳಕೊಂಡಿರ್ಪುದು ಲಿಂಗ. ಘ್ರಾಣ ದೊಳಗೆ ಘ್ರಾಣವಾಗಿ ಒಳಕೊಂಡಿರ್ಪುದು ಲಿಂಗ. ರಸದೊಳಗೆ ರಸವಾಗಿ ಒಳಕೊಂಡಿರ್ಪುದು ಲಿಂಗ. ತ್ವಕ್ಕಿನೊಳಗೆ ತ್ವಕ್ಕಾಗಿ ಒಳಕೊಂಡಿ ರ್ಪುದು ಲಿಂಗ, ರೂಪದೊಳಗೆ ರೂಪವಾಗಿ, ಶಬ್ದದೊಳಗೆ ಶಬ್ದವಾಗಿ, ಸ್ಪರ್ಶದೊಳಗೆ ಸ್ಪರ್ಶವಾಗಿ, ಗಂಧದೊಳಗೆ ಗಂಧವಾಗಿ ಒಳಕೊಂಡಿರ್ಪುದು ಲಿಂಗ. ಇಂತಪ್ಪ ಘನಕ್ಕೆ ಘನವಾದ ಮಹಾಲಿಂಗವು ಒಳ ಹೊರಗೆನ್ನದೆ ಭರಿತವಾದುದರಿಂದ ನಿರಂತರವಾಗಿರುವ ಮಂಗಳಮಯ ಪರಮ ಸತ್ಯವು. ಇದು ಸಕಲರ ಇರುವು. ಅರಿಯುವುಡೆ ತಾನೆ. ಇದುವೆ ಸ್ವಯಲಿಂಗ ಕಾಣಾ ಮಸಣಯ್ಯ ಪ್ರಿಯ ಗಜೇಶ್ವರ.

ಅಂಗದೊಳಗೆ ಲಿಂಗ ಬೆರಸಿರ್ಪುದಲ್ಲದೆ ಲಿಂಗದೊಳಗೆ ಅಂಗ ಬೆರತಿಲ್ಲ, ಪ್ರಾಣ ಮನ ಭಾವ ಇವಾವು ಲಿಂಗದೊಳಗೆ ಬೆರತಿಲ್ಲ, ಇಲ್ಲದ ಮಾಯಿಕವು ಇದ್ದ ನಿರ್ಮಾಯ ನಿರಂತರವಾಗಿರುವ ಮಂಗಳಮಯದಲ್ಲಿ ಬೆರೆಯುವದಾದರೂ ಅದೆಂತು ? ಇಲ್ಲದುದು ಇಲ್ಲವೆ ಇಲ್ಲ, ಇದ್ದುದು ನಿರಂತರ. ಅರಿವುಡೆ ತಾನೆ ನಿರಂತರವಾಗಿರುವ ಮಂಗಳಮಯ ಸಚ್ಚಿದ್ಘನ. ಅರಿಯದೆ ದಿಗಂಬರಿಯಾಗಿ ತಿರುಗಿದಡೇನು ? ತಲೆ ಬೋಳಾದರೇನು ? ತಲೆ ಜಡೆಗಟ್ಟಿದರೇನು ಹೇಗಿದ್ದರೇನು ? ಅರಿವೆ ಮುಖ್ಯ, ಅರುವಿಂಗೆ ಪರಿಶುದ್ಧ ಹೃದಯವೆ ಮುಖ್ಯವಾದುದು. ಇವೆರಡು ಇಲ್ಲದಿದ್ದರೆ ಮನೆ ಬಿಟ್ಟರಿಲ್ಲ, ಕಾಡು ಹೊಕ್ಕರಿಲ್ಲ, ಕಂದ

ಮೂಲಗಳ ಸೇವಿಸಿದರಿಲ್ಲ, ಉಗ್ರತಪವ ಮಾಡಿದರಿಲ್ಲ, ಜಿತೇಂದ್ರಿಯಾಗಿ ಅಣಿಮಾದಿ ಸಿದ್ಧಿಗಳ ಪಡೆದರಿಲ್ಲ, ತಾನಾರೆಂದರಿಯಲು ಅರುವೆ ಪ್ರಧಾನವು.

ವಚನ - 17

ಬತ್ತಲೆ ಇದ್ದವರೆಲ್ಲ ಕತ್ತೆಯ ಮರಿಗಳು .
ತಲೆಯ ಬೋಳಾದವರೆಲ್ಲ ಮುಂಡೆಯ ಮಕ್ಕಳು .
ತಲೆಯ ಜಡೆಗಟ್ಟಿದವರೆಲ್ಲ ಹೊಲೆಯರ ಸಂತಾನ .
ಆವ ಪ್ರಕಾರವಾದಡೇನು ? ಅರಿವೆ ಮುಖ್ಯವಯ್ಯ .
ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗದಲ್ಲಿ .

ತಾತ್ಪರ್ಯ : ಬತ್ತಲೆ ಇದ್ದವರೆಲ್ಲ ಕತ್ತೆಯ ಮರಿಗಳು . ತಲೆಯ ಬೋಳಾದವರೆಲ್ಲ ಮುಂಡೆಯ ಮಕ್ಕಳು . ತಲೆಯ ಜಡೆಗಟ್ಟಿದವರೆಲ್ಲ ಹೊಲೆಯರ ಸಂತಾನ :

ಕೆಲವು ಆಶ್ರಮವಾಸಿಗಳು ಸನ್ಯಾಸಿಗಳು ಬತ್ತಲೆಯಾಗಿದ್ದರೆ. ಕೆಲಬರು ತಲೆಬೋಳಿಸಿಕೊಂಡವರು ಇದ್ದಾರೆ. ಇನ್ನು ಕೆಲಬರು ಜಡೆಗಟ್ಟಿದವರು ಇದ್ದಾರೆ. ಇಂತಹ ಬಹಿರಾಚಾರವ ಕಂಡು ಆದಿ ಪುರಾತನರು , ಶರಣರು ಜರೆದಿದ್ದಾರೆ. ತಿರಸ್ಕರಿಸಿದ್ದಾರೆ.

ಬತ್ತಲೆ ಇದ್ದವರು ಜ್ಞಾನ ಶೂನ್ಯರು, ಇವರು ಕತ್ತೆಯ ಮರಿಗಳು . ತಲೆ ಬೋಳಾದವರು ಇವರು ವಿಧವೆಯ ಸಾಂಪ್ರದಾಯದವರು. ತಲೆಯ ಜಡೆಗಟ್ಟಿದವರು ಹೊಲೆಯರ ಸಂತಾನ . ಇವರಿಗೆ ಲಿಂಗಾಂಗ ಸಮರಸ ಜ್ಞಾನವಿಲ್ಲದ್ದರಿಂದ ಕೆಲಬರು ಕತ್ತೆಯ ಮರಿಗಳು, ಕೆಲಬರು ವಿಧವೆಯರ ಮಕ್ಕಳು, ಕೆಲಬರು ಹೊಲೆಯರ ಸಂತಾನ.

ಆವ ಪ್ರಕಾರವಿದ್ದಡೇನು ? ಅರಿವೇ ಮುಖ್ಯವಯ್ಯ. ದೇಹ ಹೇಗಿದ್ದರೇನು ಅದು ದಿಗಂಬರೆಯಾಗಿರಲಿ, ತಲೆಬೋಳಾಗಿರಲಿ , ತಲೆ ಜಡೆಗಟ್ಟಿದರೇನು ? ಅರುವೆ ಪ್ರಧಾನ. ಅರುವಿಲ್ಲದಿರೆ ಅದು ಹೇಗಿದ್ದರೂ ನಿಷ್ಪ್ರಯೋಜಕ.

ಅರುವೆಂದರೆ ತಾನಾರೆಂಬ ಅರಿವು. ಅರುವೆ ತಾನಿದ್ದರೂ ಅರುವರಿಯದೆ, ತಾನಾಗದ ತನ್ನದಾಗದ ದೇಹವನ್ನು ಬತ್ತಲೆ ಮಾಡಿ ತಿರುಗಿಸಿದರೆ , ಅದರಿಂದ ತಾನು ಅರು ಸ್ವರೂಪದವರೆಂಬ ಜ್ಞಾನೋದಯವಾಗುವುದೆ ? ತಲೆಯ ಬೋಳಿಸಿ ಮುಂಡವ ಮಾಡಿದರೇನು? ದೇಹ ಭಾವ ನಿರಸನವಾಯಿತೆ ? ಚಿತ್ ಸ್ವರೂಪ ತಾನೆಂಬ ಜ್ಞಾನೋದಯವಾಯಿತೆ ? ತಲೆಯ ಮೇಲಿನ ಕೂದಲು ಜಡೆ ಗಟ್ಟಿದರೇನಾಯಿತು ? ಇದರಿಂದ ಅರುಹು ಅರುಹಿಸಿಕೊಂಬುವುದಕ್ಕೆ ಮೀರಿದ ಘನ ತಾನೆಂಬ ಅರಿವಾಯಿತೆ ? ಇದು ಕಾರಣ ಅರುವೆ ಮುಖ್ಯವಯ್ಯ.

ಜ್ಞಾನದಿಂದ ಅಜ್ಞಾನದ ಕೇಡು . ದೇಹ ಭಾವದ ಕೇಡು. ಪ್ರಪಂಚದ ಕೇಡು. ಭವದ ಕೇಡು. ತ್ರಿವಿಧ ಕರ್ಮದ ಕೇಡು. ಜ್ಞಾನದಿಂದ ಅತ್ಯಂತ ದುಖಃ ನಿವೃತ್ತಿ. ಪರಮಾನಂದ ಪ್ರಾಪ್ತ ರೂಪ ಪ್ರಾಪ್ತಿ. ಜ್ಞಾನದಿಂದ ನಿಸ್ಸಂಗತ್ವ, ನಿರ್ಮೋಹತ್ವ, ನಿರ್ಭಯತ್ವ, ಅಮರತ್ವ ಸ್ವತಃ ಸಿದ್ಧಿಯು. ಜ್ಞಾನದಿಂದ ಜೀವನ್ಮುಕ್ತಿ, ವಿದೇಹ ಮುಕ್ತಿ. ಜ್ಞಾನವದು ಜೀವ ಬ್ರಹ್ಮರೇಕತ್ವ. ಜ್ಞಾನವದು ಸತ್ಯಜ್ಞಾನಮನಂತ ಬ್ರಹ್ಮ. ಇಂತಪ್ಪ ಜ್ಞಾನಕ್ಕೆ ಆಚಾರವೆ ಪ್ರಾಣ.

ಮಾನವನಿಗೆ ಶುದ್ಧ ಜ್ಞಾನೋದಯವಾಗಬೇಕಾದರೆ ಪರಿಶುದ್ಧ ಹೃದಯವೆ ಮುಖ್ಯವು.

''ಹೃದಯ ಪರಿಶುದ್ಧವಾಗಲು ವಿಶ್ವಾಸವೆ ಭಕ್ತಿ. ಗುರು, ಲಿಂಗ, ಜಂಗಮ ಒಂದೆಂದರಿವುದೆ ಜ್ಞಾನ. ನಿರ್ವಂಚನೆಯ ವೈರಾಗ್ಯ ಪ್ರಸಾದವೆ ಮುಕ್ತಿ, ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.'' ಪರಿಶುದ್ಧ ಹೃದಯವಾಗಲು ಗುರು, ಲಿಂಗ, ಜಂಗಮದಲ್ಲಿ ಅಪಾರ ವಿಶ್ವಾಸವೆ ಮುಖ್ಯ. ಅಪಾರ ವಿಶ್ವಾಸ ದೃಢತೆಗೊಂಡಂತೆ ಭಕ್ತಿ ಹೆಚ್ಚುವುದು. ಇದು ಹೇಗೆ ? ಹೇಗೆ ತನ್ನಲ್ಲಿ ಬೆಳೆಯುತ್ತದೆ ಹಾಗೆ. ಹಾಗೆ ಗುರು, ಲಿಂಗ, ಜಂಗಮ ಒಂದೆಂದರಿಯುವ ಜ್ಞಾನ ನಿರ್ವಂಚನೆಯ ವೈರಾಗ್ಯ ಪ್ರಸಾದವೆ ಮುಕ್ತಿ ಎಂಬ ಮಹಾತ್ಮರ ಮಹಾನುಭವದಂತೆ ಗುರುವಿನನುವಿನ ಸಂಜ್ಞೆಯಂತೆ ತನ್ನಲ್ಲಿಯೆ ನೋಡುವನು. ಲಿಂಗದಿರುವಿನಲ್ಲಿ ಜಂಗಮದ ನಿಲುವಿನಲ್ಲಿ, ನಿರ್ವಂಚನೆಯುಳ್ಳವನಾದುದೆ ಆಚಾರ. ಈ ಆಚಾರವಿದ್ದಲ್ಲಿಯೆ ಜ್ಞಾನವು ತಾನಾಗಿಯೆ ಬೆಳಗುವುದು. ಅರು ಹೃದಯ ಮಾಡುವುದೆ ಆಚಾರ. ಇದು ಅಕಳಂಕ ಆಚಾರ ಹೃದಯವು ಅರುವಿನ ಘನತ್ವದಿಂದುಕ್ತವಾದುದೆ ಆಚಾರ. ತಾನು ಸಹಿತ ಸಕಲವು ಸಚ್ಚಿದಾನಂದವೆಂದು ಭಾವಿಸುವದೆ ಆಚಾರ. ಅಂಗವು ಸಚ್ಚಿದಾನಂದ, ಸಚ್ಚಿದಾನಂದ ಸಕಲವು ಸಚ್ಚಿದಾನಂದವೆಂಬ ಭರಿತ ಭಾವವುಳ್ಳವರಾದುದೆ ಆಚಾರ. ದಾಸೋಹಂ ಭಾವಿಯಾಗಿದ್ದುದೆ ಆಚಾರ. ಇದುವೆ ಮಾನವನ ಪ್ರಾಣವು, ಬದುಕುವಿಕೆಯು. ರಾಮೇಶ್ವರ ಲಿಂಗ ನಿರಂತರ. ಗುರು ಶಿಷ್ಯರ ಸಾಂಪ್ರದಾಯವಿದೆ. ತಾನಾರೆಂದು ತಿಳಿಯುವ ತಿಳಿಸುವ ಗುರು ಶಿಷ್ಯರು, ಜಿಜ್ಞಾಸುಗಳು ಶಿಕ್ಕುವುದು ವಿರಳ. ಸಿಕ್ಕರೂ ನೇರವಾಗಿ ಗುರುವಾದವರು ಶಿಷ್ಯಂಗೆ ಸ್ವರೂಪ ಜ್ಞಾನ ಮಾಡಿಕೊಡುವವರು ಅತಿ ವಿರಳವಾಗಿಹರು.

ವಚನ - 18

ಎನ್ನ ನರಯಿಸದಿರುವೆ, ಎನ್ನನರಿಯಿಸು . ನಿನ್ನ ಅರಿಯಿಸಬೇಡ,
ಎನ್ನನರಿಯದವ ನಿನ್ನ ಅರಿಯ, ಎನ್ನ ನರಸದೆ ನಿನ್ನ ನರಿಯಿಸಿದೊಡೆ
ನೀನೆನಗೆ ಗುರುವಲ್ಲ. ನಾ ನಿನಗೆ ಶಿಷ್ಯನಲ್ಲ .
ಎನ್ನನರಿಯಿಸಿದೊಡೆ ನೀನೆನಗೆ ಗುರು. ನಾನಿನಗೆ ಶಿಷ್ಯ.
ಮಸಣಯ್ಯ ಪ್ರಿಯ ಗಜೇಶ್ವರ .

ತಾತ್ಪರ್ಯ : ಎನ್ನನರಯಿಸದಿರುವೆ, ಎನ್ನನರಿಯಿಸು . ನಿನ್ನ ಅರಿಯಿಸಬೇಡ, ಎನ್ನನರಿಯದವ ನಿನ್ನ ಅರಿಯ, ಎನ್ನ ನರಸದೆ ನಿನ್ನ ನರಿಯಿಸಿದೊಡೆ ನೀನೆನಗೆ ಗುರುವಲ್ಲ. ನಾ ನಿನಗೆ ಶಿಷ್ಯನಲ್ಲ :

ಇಂತಹ ಗುರುವಿನಲ್ಲಿ ಶಿಷ್ಯ ಸಂಬಂಧದವರು ಅದೆಷ್ಟು ಇರಬಹುದು. ಅಧುನಿಕ ಸಮಯದಲ್ಲಿ ತಾವಾರೆಂದು ತಿಳಿಯದ ಗುರುಗಳಿಗೆ ಗುರುಗಳೆಂದು ಕೊಂಡಾಡುವ ಶಿಷ್ಯವೃಂದವು ಬಹಳವಿದೆ. ಗುರುಶಿಷ್ಯ ಸಂಬಂಧವೆಂದರೆ ಗುರು ಘನನನ್ನು ಅರಿಯುವ , ಅರಸುವ ಸಂಬಂಧವಲ್ಲ. ತಾನಾರು ? ತನ್ನನ್ನು ಅರಿಯುವ ಸಂಬಂಧ. ಗುರುವಾದವರು ಶಿಷ್ಯರಾದವರಿಗೆ ಸ್ವರೂಪ ತಿಳಿಸುವ ಸಂಬಂಧ . ಈ ಸಂಬಂಧ ನಿಜ ಸಂಬಂಧ. ಇಂತಹ

ಗುರು ಶಿಷ್ಯ ಸಾಂಪ್ರದಾಯ ಸಂಬಂಧವುಳ್ಳ ಜನ ಎಷ್ಟು ಸಿಕ್ಕಬಹುದು ? ಸಿಕ್ಕರೂ ವಿರಳ.

ಆಧ್ಯಾತ್ಮ ಸಾಂಪ್ರದಾಯದಲ್ಲಿ , ದ್ವೈತ ಸಾಂಪ್ರದಾಯ , ವಿಶಿಷ್ಟಾದ್ವೈತ ಸಾಂಪ್ರದಾಯ, ಅದ್ವೈತ ಸಾಂಪ್ರದಾಯ , ಶಕ್ತಿ ವಿಶಿಷ್ಟಾದ್ವೈತವೆಂದು ಹೇಳುವ ಸಾಂಪ್ರದಾಯ ಸಂಪನ್ನರು ಸಿಕ್ಕಬಹುದು. ಅನುಪಮ ಸಾಂಪ್ರದಾಯ. ಇಂಥ ನಾ ನೀನೆಂಬುದಕ್ಕೆಡೆಗೊಡದ ಸಾಂಪ್ರದಾಯ ನಿಸ್ಸೀಮ ಸಾಂಪ್ರದಾಯ. ಸಮ ತತ್ವ ತಿಳಿಸುವ ಸಾಂಪ್ರದಾಯ. ಗುರು ಶಿಷ್ಯರು ಸಿಕ್ಕುವದು ವಿರಳ. ಇದನ್ನು ಕಂಡೆ. ಎನ್ನನರಯಿಸದಿರುವೆ ಎನ್ನನರಯಿಸು ಎಂದು ಶ್ರೀ ಗುರುವಿಂಗೆ ಪ್ರಾರ್ಥಿಸಿಹರು.

ಓ ಗುರುದೇವ ನಾನಾರೆಂದು ನನಗೆ ತಿಳಿಯಿಸದಿರುವೆ, ನನ್ನ ಸ್ವರೂಪವ ತಿಳಿಯಿಸು ಎಂದು ಕೇಳುವವರು ಸಿಕ್ಕುವದು ದುರ್ಲಭ ಇರಬಹುದು. ಎಲ್ಲೋ ಒಬ್ಬ ಉತ್ತಮ ಜಿಜ್ಞಾಸು ತಾನಾರೆಂದು ತನ್ನನರಿಯದೆ ಓದಿದಡೇನು ? ಏನ ಹೇಳಿದಡೇನು ? ಏನ ಕೇಳಿದಡೇನು ?, ಎಷ್ಟೋದಿವಸ ತತ್ವಮಸ್ಯಾದಿ ಮಹಾ ವಾಕ್ಯಗಳ ಶ್ರವಣ, ಮನನ, ಮಾಡಿದರೇನು ? ತನ್ನ ಅರಿತನೆ ? ಲಿಂಗಾರ್ಚನೆ ಮಾಡಿದರೇನು ? ಜಂಗಮ ತೃಪ್ತಿ ಮಾಡಿದರೇನು ? ತಾನಾರೆಂದು ತನ್ನ ಅರಿಯಬಾರದ ಘನದಿರುವ ಅರಿತನೆ ? ಅರಿಯದಿದ್ದಲ್ಲಿ ನಿಷ್ಪ್ರಯೋಜಕವಲ್ಲವೆ ?.

ಓ ಗುರು ಘನನೇ, ನಿನ್ನ ಅರಿಯಿಸಬೇಡ. ಎನ್ನ ಅರಿಯದೆ ನಿನ್ನ ಅರಿಯೆ. ಓ ದೇವ ದೇವನೆ ? ನಿನ್ನ ಘನತ್ವ ತಿಳಿಸಬೇಡ. ನಿನ್ನ ಘನತ್ವ ಕೇಳಿದರೆ ನನ್ನ ನಾನು ತಿಳಿದಂತಾಯಿತೆ ? ನನ್ನ ನಾನು ತಿಳಿಯದವ ನಿನ್ನ ಹೇಗೆ ತಿಳಿಯುವೆ. ಇದು ಕಾರಣ ನನ್ನ ತಿಳಿಯಿಸು. ಓ ನನ್ನಯ್ಯ ನನ್ನ ಹೃದಯ ದೋಷವ ಬಿಚ್ಚಿ ಹೇಳಿಕೊಂಡರೂ ನೀನು ನನ್ನ ಸ್ವರೂಪ ತಿಳಿಸದೆ ನಿನ್ನ ಘನತ್ವ ಹೇಳುವಿಯಾದಡೆ, ನೀನನಗೆ ಗುರುವಲ್ಲ. ನಾ ನೀನಗೆ ಶಿಷ್ಯನಲ್ಲನೆಂದು ನಿಷ್ಠುರವಾಗಿ ಹೇಳಿಹನು.

ಎನ್ನ ನರಿಯಿಸಿದೊಡೆ ನೀನೆನಗೆ ಗುರು. ನಾ ನಿನಗೆ ಶಿಷ್ಯ ಮಸಣಯ್ಯಪ್ರಿಯ ಗಜೇಶ್ವರಾ ಎಂದು ಪ್ರಾರ್ಥಿಸಿದುದು ನೋಡಿದಡೆ, ನನ್ನ ಸ್ವರೂಪ ತಿಳಿಸಿದುದೆ ನನಗೆ ನಿನ್ನ ಗುರುತನ. ನನ್ನ ನಾ ತಿಳಿದುದು ನಿನ್ನಲ್ಲಿ ನನ್ನ ಶಿಷ್ಯತ್ವ ಎಂದು ಹೇಳಿಕೊಂಡಿಹನೆಂದಲ್ಲಿ ಸ್ವಸ್ವರೂಪ ಹೇಗೆ ತಿಳಿಸಬೇಕು. ಸ್ವಸ್ವರೂಪ ತಿಳಿಸುವ ಪರಿ ಆವುದು ?

ಎಲ್ಲಿ ಮನಸ್ಸು ಮತ್ತು ವಾಕ್ ಅರಿಯಲು ಅಶಕ್ತವಾಗಿವೆಯೋ ಅಲ್ಲಿ ಗುರುವಿನಿಂದ ಉಪದೇಶವನ್ನು ಪಡೆಯುವುದು ಹೇಗೆ ? ಇದನ್ನು ಬೋಧಿಸದ ಗುರು, ಕಲಿತುಕೊಂಡ ಶಿಷ್ಯ ಇವರಿಬ್ಬರು ಸಮಪ್ರಕಾಶ ಮಾನವಾದ ತತ್ವ ತಿಳಿದುಕೊಂಡಿರುವರು. ನರರಿಗೆಯ್ದ ಗುರುವಪ್ಪ. ಹಿರಿಯರು ಕೇಳಿರೆ ? ನಿಮ್ಮ ಗುರುತನ ಕೆಟ್ಟು ಶಿಷ್ಯರ ಶಿಷ್ಯತನ ಕೆಡಿಸಬಲ್ಲಡೆ ಅವರ ಹಿರಿಯರೆಂಬೆ. ಕೂಡಲ ಚೆನ್ನ ಸಂಗಮದೇವ. ಆರು ಧ್ವನಿಯ ಮರೆಯಲ್ಲಿದ್ದು ಕಂಡು ಶಬ್ದವ ನಷ್ಟ ಮಾಡಿಹರು. ಮನದ ನಿಜದಿರುವ ಕಂಡು ಮನದ ಸಂಕಲ್ಪ ವಿಕಲ್ಪ ನಷ್ಟ ಮಾಡಿಹರು. ಅವರು ಸಮ ಪ್ರಕಾಶ ಮಾನವಾದ ತತ್ವ ತಿಳಿದಿಹರು. ಅಂಥಹರೆ ಗುರುವೆಂಬ ಪ್ರತಿಭಾವವವಿಲ್ಲದ ಶಿಷ್ಯ. ಶಿಷ್ಯನೆಂಬ ಪ್ರತಿಭಾವವಿಲ್ಲದ ಗುರು. ಏನೆಂಬೆ ಏನೆಂಬೆ ? ಎರಡಿಲ್ಲದ ಘನವ. ಏನೆಂಬೆನೇನೆಂಬೆ ಎರಡೊಂದಾದ ಘನವ ಕೂಡಲ ಚೆನ್ನ ಸಂಗಮದೇವಾ ಗುರು ಶಿಷ್ಯ ಸಂಬಂಧ ಅಪೂರ್ವ.

ಗುರು ಶಿಷ್ಯರೆಂಬ ಪ್ರತಿಭಾವ ನಷ್ಟವಾಗಬೇಕಾದರೆ ಇಬ್ಬರ ಮಧ್ಯದಲ್ಲಿದ್ದ ವಸ್ತು ಅದು

ಗುರುವಿನ ಗುರು ತಮ್ಮ ಅಂತರಂಗದಲ್ಲಿ ಗುರುಲಿಂಗವ ಕಂಡು ಗುರುವಿನ ಬೋಧ ರೂಪ ಧ್ವನಿಯು ನಷ್ಟವಾಗಿಹುದು. ಇತ್ತ ಶಿಷ್ಯನ ಅಬೋಧ ರೂಪ ಧ್ವನಿಯು ನಷ್ಟವಾಗಿ ಧ್ವನಿಯ ಮರೆಯಲ್ಲಿದ್ದುದ ಕಂಡು ಏನೆಂದೆನ್ನದ ಮುನ್ನ ತಾನೇ ಆದ ಮಹದಿರುವು ಕಂಡು, ಈರ್ವರು ತೆರಹಿಲ್ಲದ ಭವ ನುಡಿಗೆಡೆಗೊಡದ ವಾಕ್, ಅದೇನು ಕಥನ ಮಾಡುವುದು. ಮನಸ್ಸು ಅದೆಂತು ಅರಿಯುವುದು ? ಇದು ಕಾರಣ ಗುರು ಶಿಷ್ಯರ ನುಡಿಗಳು ನಷ್ಟ, ಮನ ನಷ್ಟ , ನೆನಹು ನಷ್ಟ, ಭಾವ ನಷ್ಟ, ಜ್ಞಾನ ನಷ್ಟವಾಗಿ ನಾನೀನೆಂಬುದು ನಷ್ಟವಾಗಿ ನಿಶ್ಚಬ್ದವೇದಿ ಗಳಾದುದರಿಂದ ಎರಡಿಲ್ಲದ ಘನವನೇನೆಂಬೆ ? ಎರಡೊಂದಿದ್ದುದನೇನೆಂಬೆ ? ಎಂದು ಹೇಳಿಹರು.

ಗುರು ಶಿಷ್ಯರು ಶಬ್ದ ನಷ್ಟ ಮಾಡಿದ ನಿಶಃಬ್ಧವೇದಿಗಳು . ತಮ್ಮ ತಮ್ಮ ಉಪಾಧಿ ನಷ್ಟ ಮಾಡಿದ ನಿರುಪಾಧಿಗಳು, ನಿರ್ಮಾಯರು. ''ಸಮತೆ ಸಯವಾದ ಶರಣಂಗೆ ಅರಿವು ಮರೆಯಲುಂಟೆ ? ಉಪಮೆ ನಿಸ್ಥಲವಾದ ಶರಣಂಗೆ ಶಬ್ಧ ಸಂದಣಿಯುಂಟೆ ? ಅಖಂಡಿತ ಲಿಂಗಕ್ಕೆ ಅಪ್ರಮಾಣ ಶರಣಂಗೆ ಸೀಮೆ ಸಂಬಂಧವೆಂಬ ಸಂಕಲ್ಪವುಂಟೆ ? ಇದು ಕಾರಣ ಕೂಡಲಚನ್ನಸಂಗಯ್ಯ ನಿಮ್ಮ ಶರಣಂಗೆ ಭವವಿಲ್ಲ, ಬಂಧನವಿಲ್ಲ.'' ಸಮತೆ ತಾನಾದ ಶರಣಂಗೆ ಸಮಪ್ರಕಾಶಮಾನವಾದ ತತ್ವವೆಂಬ ಅರಿವು ಮರೆಯಬಹುದೆ ? ಸಕಲ ಧ್ವನಿಯ ಮರೆಯಲ್ಲಿ ತನ್ನ ಕಂಡ ಶರಣ ಉಪಮೆಗಳ ನಷ್ಟವಾದ ಉಪಮಾತೀತ. ಈ ಮಹಾಂತನ ಉಪಮಿಸಲು ಶಬ್ಧಗಳೆಲ್ಲಿಂದ ತರುವದು. ನುಡಿಗೆಡೆಗೊಡದವಂಗೆ ನುಡಿಗೆ ಅವಕಾಶವುಂಟೆ ? ನುಡಿಗೆ ಅವಕಾಶ ಕೊಡದವನ ಇರುವಿಂಗೆ ಅದಾವ ಶೃತಿ ಪ್ರಮಾಣ ತರುವುದು ? ಅದಾವ ಬ್ರಹ್ಮ ಸೂತ್ರ ತರುವುದು ? ಬ್ರಹ್ಮವದು ನಿಶಃಬ್ಧ ಬ್ರಹ್ಮವು . ಅದು ಕೂಗಳತೆಗೆ ಸಿಕ್ಕುವುದಿಲ್ಲವೆಂದಲ್ಲಿ ತಾನು ಮಾತಾಡದ ಘನನಾಗಿರುವುದರಿಂದ ಅಖಂಡಿತ ಲಿಂಗ ತಾನೆ. ಅಪ್ರಮಾಣ ಶರಣ ತಾನೆ. ನಿಸ್ಸೀಮದಲ್ಲಿ ಸೀಮಿತವದೆಂತು ಶರಣಂಗೆ ಭವವಿಲ್ಲ. ಬಂಧನವಿಲ್ಲ. ಸಮತೆಯೆ ತಾನಾದವಂಗೆ ಭವವಿಲ್ಲ, ಬಂಧನವಿಲ್ಲ. ಸಮಪ್ರಕಾಶವದು ನುಡಿಗೆಡೆಗೊಡದ ಘನ. ಸಮಪ್ರಕಾಶ ಮಾನವಾದುದು ತತ್ವ ಇದು ವಾಕ್, ಮನ ನಷ್ಟಮಾಡಿ ತನ್ನ ನೋಡಿದ ಇರುವು ಇದು ಮರವರುವು ನಷ್ಟ ಮಾಡಿದವರ ಇರವು. ಅರಿವ ಅರುಹಿಸಿಕೊಂಬ ಈ ಉಭಯಂಗಳ ನಷ್ಟ ಮಾಡಿ ಅರಿಯಲಿಲ್ಲದ ಅರುವೆ ತನ್ನಿರುವು ಆದವರ ತತ್ವ. ಇದುವೆ ಶಬ್ಧದ ಮರೆಯಲ್ಲಿದ್ದುದು. ಇದುವೆ ಏನೆಂದೆನ್ನದ ಮುನ್ನ ತಾನೇ ಆದ ತತ್ವ. ಇಂತಪ್ಪ ಎನ್ನ ಮಹದಿರುವು ತಿಳಿಸಿದೊಡೆ ಗುರುವೆನ್ನದ ಗುರು ಘನ ನೀನೆ. ಶಿಷ್ಯವೆನ್ನದ ಶಿಷ್ಯ ನಾನೆ. ನಮ್ಮಿಬ್ಬರ ಸಂಬಂಧ ಅಪೂರ್ವಿಕವೆಂದು ಹೇಳಿಹರು.

ವಚನ - 19

ಜ್ಞಾನ ಮೂಲ ಗುರುಸೇವೆ ಎಂಬೆನು,
ಐಶ್ವರ್ಯಮೂಲ ಲಿಂಗಾರ್ಚನೆ ಎಂಬೆನು,
ಮೋಕ್ಷಮೂಲ ಘಟ ಸಂತೃಪ್ತಿ ಎಂಬೆನು ಅಜಗಣ್ಣ ಲಿಂಗವೆ

ತಾತ್ಪರ್ಯ : ಜ್ಞಾನಮೂಲ ಗುರುಸೇವೆ ಎಂಬೆನು : ಜ್ಞಾನೋದಯವಾಗಲು

ಗುರುಸೇವೆಯೆ ಮುಖ್ಯವು. ಆರು ಗುರು ಸೇವೆಯಲ್ಲಿ ನಿರತರು, ಅವರ ಹೃದಯದಲ್ಲಿಯೆ ಜ್ಞಾನದ ನಿವಾಸ. ಆರಲ್ಲಿ ಗುರು ಭಕ್ತಿ ನೆಲೆಗೊಂಡಿದೆ ಅವರಲ್ಲಿ ಜ್ಞಾನವು ನೆಲೆಗೊಂಡಿದೆ.

ಗುರು ಸೇವೆ ಮಾಡದ ಜ್ಞಾನ ಬರಡು ಜ್ಞಾನ, ಕುರುಡ ಜ್ಞಾನ, ತನ್ನ ತಾ ತಿಳಿಯದ ಜ್ಞಾನ, ಇವರು ಶಬ್ದವೇದಿಗಳು ನಿಃಶಬ್ದವೇದ ಅವರಿಗೆ ತಿಳಿಯದು. ಗುರುಸೇವೆ ಮಾಡಿದ ಪುಣ್ಯದ ಫಲದ್ರೂಪ ನಿಃಶಬ್ದ ವೇದಿಯಾಗುವದು.

ಗುರುಸೇವೆ ಮಾಡಿದ ಪುಣ್ಯಪುರಷರಲ್ಲಿ ಜ್ಞಾನದೇವ, ಕಬೀರದಾಸ, ರಾಮದಾಸ, ರಾಮತೀರ್ಥರು, ಸಿದ್ಧಾರೂಡರು, ಬಸವಣ್ಣ , ಚೆನ್ನಬಸವಣ್ಣ , ಸಿದ್ಧರಾಮ ಶಿವಯೋಗಿ, ನೀಲಾಂಬಿಕೆ, ಅಕ್ಕನಾಗಮ್ಮ, ಅಮುಗೆಯ ರಾಯಮ್ಮ , ಸತ್ಯಕ್ಕ, ಅಕ್ಕಮಹಾದೇವಿ, ಮುಕ್ತಾಯಕ್ಕ ಇನ್ನು ಅನೇಕ ಶರಣರು ಗುರುಸೇವೆಯ ದಾಸೋಹ ಮೂರ್ತಿಗಳು. ಇವರು ಗುರು ಭಕ್ತಿಯಲ್ಲಿ ದುರಂಧರರು. ಗುರುಸೇವೆಗಾಗಿ, ಗುರು ತತ್ವಕ್ಕಾಗಿ, ತಮ್ಮ ತನು, ಮನ, ಧನ ಮೀಸಲವಾಗಿಟ್ಟವರು ಸಾಕ್ಷಾತ್ಕಾರವಂತರು .

ಸಾಕ್ಷಾತ್ಕಾರ ವೆಂಬುದು ಸ್ವರೂಪ ಸಾಕ್ಷಾತ್ಕಾರ, ತನ್ನ ಸಾಕ್ಷಾತ್ಕಾರ ಅದು ನಿರಂತರ. ಅಲ್ಲಿ ಬೋಧವು ಇಲ್ಲ, ಅಬೋಧವೂ ಇಲ್ಲ, ಬೋಧಾ ಬೋಧ ಮಿಶ್ರಣವು ಇಲ್ಲ . ಆರಿಗೆ ಇಂತಹ ಜ್ಞಾನ ಲಭ್ಯವಾಗಿದೆ ಅದು ತನಗಿಂತ ಅನ್ಯವಾದುದಲ್ಲ, ತಾನೆ ಅನುಪಮ, ಗುರುಸೇವೆಯಿಂದ ದೊರೆಯುವ ಜ್ಞಾನ. ಸತ್ತ ಗುರುವಿನ ಕಾರುಣ್ಯ, ಸತ್ತಕೊಂಬ ಶಿಷ್ಯಂಗೆ ಪ್ರಾಪ್ತವಾಗುವ ಜ್ಞಾನ. ಇದು ಬೋಧಕ್ಕೆ ಮೀರಿದ ಜ್ಞಾನ, ನಾನೀನೆನ್ನದಿಹ ಜ್ಞಾನ, ಶಬ್ದಮುಗ್ದ ಜ್ಞಾನ, ತಾನಾರೆಂದರಿತ ಅರಿವು. ಇದು ಗುರುಸೇವೆ ಮಾಡಿದ ಪುಣ್ಯ ಪುರುಷರಲ್ಲುದಯಿಸುವ ಜ್ಞಾನ. ಇದು ಕಾರಣ ಗುರುಸೇವೆ ಅವಶ್ಯಕವಾದುದು ಜ್ಞಾನಮೂಲ ಗುರುಸೇವೆ ಎಂಬೆನು ಎಂದು ಹೇಳಿಹರು .

ಐಶ್ವರ್ಯ ಮೂಲ ಲಿಂಗಾರ್ಚನೆ ಎಂಬೆನು : ಬಹು ಲಿಂಗಾರ್ಚಕರು ಐಶ್ವರ್ಯಮೂಲ ಲಿಂಗಾರ್ಚನೆ ಎಂದು ಅನಿತ್ಯವಾದ ಐಶ್ವರ್ಯ ಪ್ರಾಪ್ತಿಗಾಗಿ ಲಿಂಗ ಪೂಜಿಸುವವರಾಗಿಹರು. ಉಪಾಸಕರು ತಮ್ಮ ತಮ್ಮ ಇಷ್ಟದೇವರ ಉಪಾಸನೆಯ ಮಾಡಿ ಬ್ರಹ್ಮ ಪದವಿ, ವಿಷ್ಣು ಪದವಿ, ರುದ್ರ ಪದವಿ, ಇದಲ್ಲದೆ ಇಹಲೋಕದ ರಾಜ್ಯ ಭೋಗ ಅಷ್ಟೈಶ್ವರ್ಯ ಪಡೆಯಲು ಪೂಜಿಸುವದೆ ಲಿಂಗಾರ್ಚನೆ ಎಂದು ತಿಳಿದು ಉಪಾಸನೆ ಮಾಡುವವರಾಗಿಹರು.

ಬಸವಾದಿ ಪ್ರಮಥರಾಗಿಹ ಶರಣ ಶರಣೆಯರು ಅನಿತ್ಯವಾದ ವಿಷಯ ಭೋಗಕ್ಕಾಗಿ ಐಶ್ವರ್ಯ ಮೂಲ, ಲಿಂಗಾರ್ಚನೆ ಎನಲಿಲ್ಲ . ಅವರ ಲಿಂಗಾರ್ಚನೆ ಜ್ಞಾನಜ್ಞೇಯ ಒಂದಾದ ಲಿಂಗಾರ್ಚನೆ ಲಿಂಗ ಲಿಂಗದರಿವು, ತಾನು ಒಂದಾದ ಲಿಂಗಾರ್ಚನೆ, ನೋಡಿ ನೋಡದ ನೋಟವಾದ, ಕೂಡಿ ಕೂಡದಗಲದ ನಿಲವು ಆಗಿಹ ಲಿಂಗಾರ್ಚನೆ. ಅರಿಯಲಿಲ್ಲದ ಅರುವಾಗಿಹ ಲಿಂಗಾರ್ಚನೆ, ತಾನೆ ಅರಿಯಲಿಲ್ಲದ ಅರುವಾಗಿಹ ಅರುವಿನ ವಿಶ್ರಾಮ. ಇದು ನಿಜಸುಖದಲ್ಲಿ ನಿಂದ ನಿಜಧಾಮ.. ಇಂತಪ್ಪ ಐಶ್ವರ್ಯಕ್ಕೆ ಮೂಲ ಲಿಂಗಾರ್ಚನೆ ಎಂದು ಹೇಳಿಹರು.

''ಅಂಗವೆ ಲಿಂಗ ಲಿಂಗವೆ ಅಂಗ ವೆಂದರಿದ ಬಳಿಕ ಅಲ್ಲಿಯೆ ಕೂಡಲ ಚೆನ್ನಸಂಗಯ್ಯ'' ನಿರಂತರ ವಲ್ಲಿಯೆ ಇದು ಲಿಂಗ ಅಂಗ ಒಂದಾದ ಲಿಂಗಾರ್ಚನೆ, ಇದು ಐಶ್ವರ್ಯದ

ಮೂಲವಾಗಿದೆ. ಈ ಐಶ್ವರ್ಯ ಕಾಮನೆ ಇಲ್ಲದ ಐಶ್ವರ್ಯ, ಪ್ರಲೋಭನೆ ಇಲ್ಲದ ಐಶ್ವರ್ಯ, ಇದು ಅಖಂಡವಾಗಿರುವ ಜ್ಞಾನೈಶ್ವರ್ಯ, ಇದು ಲಿಂಗಾಂಗ ಸಾಮರಸ್ಯ ಜ್ಞಾನದಿಂದುಕ್ತವಾದ ಐಶ್ವರ್ಯ. ಲಿಂಗವರಿತ ಲಿಂಗಾಂಗಿಗಳ ಜ್ಞಾನದ ಸಿರಿ, ಶರಣ ಶರಣೆಯರ ಹೃದಯದ ಸಿರಿ, ಅರುಹೃದಯ ವಾದವರ ಸಿರಿ.

''ಭೂಮಿ ನಿನ್ನದಲ್ಲ, ಹೇಮವು ನಿನ್ನದಲ್ಲ, ಕಾಮಿನಿಯು ನಿನ್ನವಳಲ್ಲ, ನಿನ್ನೊಡವೆಯೆಂಬುದು ಜ್ಞಾನರತ್ನ ಆ ರತ್ನವ ಕೆಡಗೊಡದೆ ಅಲಂಕರಿಸಿದೆಯಾದೊಡೆ ಗುಹೇಶ್ವರ ಲಿಂಗದಲ್ಲಿ ನಿನಗಿಂತ ಸಿರಿವಂತರು ಅನ್ಯರಿಲ್ಲ'' ಪ್ರಭುವಿನ ಸಂದೇಶದಂತೆ ಇದು ಜ್ಞಾನರತ್ನ, ಅಕ್ಷಯ ಸುಖರೂಪಿ ರತ್ನ, ನಿಜೈಕ್ಯ ನೆಲೆಗೊಂಡ ನಿಲುವುಳ್ಳವರ ರತ್ನ, ಈ ಐಶ್ವರ್ಯದ ಮೂಲ ಲಿಂಗಾರ್ಚನೆ ಎಂದು ಸೂಚಿಸಿದುದು ನೋಡಿದಡೆ ಲಿಂಗಾರ್ಚನೆಯ ಘನತ್ವ, ಲಿಂಗ ಅಂಗ, ಒಂದಾದ ಗಂಭೀರತ್ವವು ಇಲ್ಲಿ ಪ್ರಜ್ವಲಿಸುವದಾಗಿದೆ.

ಮೋಕ್ಷಮೂಲ ಘಟ ಸಂತೃಪ್ತಿ ಎಂಬೆನು : ಘಟದ ಸಂತೃಪ್ತಿಯೆ ಮೋಕ್ಷ ಸಂತೃಪ್ತಿಯೆಂಬುದು ತೃಪ್ತರೂಪಿ ತೃಪ್ತಿ, ನಿರಂಕುಶ ತೃಪ್ತಿ, ಈ ಸಂತೃಪ್ತಿ ತನ್ನ ತಾನರಿತ ಘಟದಲ್ಲಿ ಪ್ರಕಟವಾದ ಸಂತೃಪ್ತಿ, ಇದು ಪರತತ್ವ ನಿಜ ಸಂಯುಕ್ತರ ನಾ ನೀನೆನ್ನದಿಹ ಶಬ್ದ ಸುಖಿಗಳ ಸಂತೃಪ್ತಿ. ಇದು ಸವೆಯದ ಸುಖ, ಬೇಸರವಾಗದ ಸುಖ, ನಿಷ್ಕಳಂಕ ಸುಖ, ಇಲ್ಲಿ ಉಪಾಧಿಕ ಮನ, ಉಪಾಧಿರಹಿತ ನಿಂದ ಲಿಂಗೋದ್ಭವ ಪ್ರಜ್ವಲಿಸಿದ ಘಟ, ಗುಹೇಶ್ವರ ಲಿಂಗ ತಾನಾಗಿ ಬೆಳಗುವ ಘಟ. ಅದು ಸಂತೃಪ್ತಿಯ ಘಟ, ನಿರ್ದೇಹಿ ಘಟ, ಪೂರ್ಣಾನಂದಮಯ ಘಟ, ಘನಗಂಭೀರ ಮಹಾಘನದಲ್ಲಿ ಘನಕ್ಕೆ ಘನವಾಗಿ ನಿಂತ ಘಟ. ಕೂಡಲ ಸಂಗನೆಂಬ ಬೆಳಗಿನೊಳಗೆ ಬೆಳಗಾಗಿರ್ದು ಶಬ್ದ ಮುಗ್ಧವಾದ ಘಟ. ಈ ಘಟದಲ್ಲಿಯೆ ಸಂತೃಪ್ತಿ, ಕಾರಣ ಮೋಕ್ಷಮೂಲ ಘಟ ಸಂತೃಪ್ತಿಯೆಂಬೆನು ಅಜಗಣ್ಣ ಲಿಂಗವೆ . ಘಟವಿದ್ದಾಗ ಗುರುಸೇವೆ, ಘಟವಿದ್ದಾಗ ಲಿಂಗಾರ್ಚನೆ ಘಟವಿದ್ದಾಗ ಸಂತೃಪ್ತಿ. ಘಟದ ಸದುಪಯೋಗ ವಾಗುವದು ಗುರುಸೇವೆಯಿಂದ ಲಿಂಗ ತಾನು ಒಂದಾಗುವ ಲಿಂಗಾರ್ಚನೆ ಯಿಂದ ಘಟ ಸಂತೃಪ್ತಿಯೆ ಘಟದ ಸಾರ್ಥಕತೆ ಎಂದು ಹೇಳಿಹರು .

ವಚನ - 20

ಹೊನ್ನು ಬಿಟ್ಟು ಲಿಂಗವ ನೊಲಿಸ ಬೇಕೆಂಬರು,
ಹೊನ್ನಿಂಗೆಯೂ ಲಿಂಗಕ್ಕೆಯೂ ವಿರೋಧವೆ ?
ಹೆಣ್ಣು ಬಿಟ್ಟು ಲಿಂಗವ ನೊಲಿಸಬೇಕೆಂಬರು,
ಹೆಣ್ಣಿಂಗೆಯೂ ಲಿಂಗಕ್ಕೆಯೂ ವಿರೋಧವೆ ?
ಮಣ್ಣು ಬಿಟ್ಟು ಲಿಂಗವ ನೊಲಿಸಬೇಕೆಂಬರು,
ಮಣ್ಣಿಂಗೆಯೂ ಲಿಂಗಕ್ಕೆಯೂ ವಿರೋಧವೆ ?
ಅಂಗವ ಬಿಟ್ಟು ಲಿಂಗವ ನೊಲಿಸಬೇಕೆಂಬರು,
ಅಂಗಕ್ಕೆಯೂ ಲಿಂಗಕ್ಕೆಯೂ ವಿರೋಧವೆ ?
ಇಂದ್ರಿಯಂಗಳ ಬಿಟ್ಟು ಲಿಂಗವ ನೊಲಿಸಬೇಕೆಂಬರು,
ಇಂದ್ರಿಯಂಗಳಿಗೂ ಲಿಂಗಕ್ಕೂ ವಿರೋಧವೆ ?

ಜಗವ ಬಿಟ್ಟು ಲಿಂಗವ ನೊಲಿಸಬೇಕೆಂಬರು,
ಜಗಕ್ಕೆಯೂ ಲಿಂಗಕ್ಕೆಯೂ ವಿರೋಧವೆ ?
ಇದು ಕಾರಣ ಪರಂಜ್ಯೋತಿ, ಪರಮ ಕರುಣಿ, ಪರಮ ಶಾಂತನೆಂಬ ಲಿಂಗವು
ಕೋಪದ ಮುನಿಸ ನರಿದಡೆ ಕಾಣಬಹುದು,
ಅರುವಿಂದ ಕಂಡೊದಗಿದ ಸುಖವು ಮಸಣಯ್ಯಪ್ರಿಯ ಗಜೇಶ್ವರಾ.

ತಾತ್ಪರ್ಯ : ಹೊನ್ನು ಬಿಟ್ಟು ಲಿಂಗವ ನೊಲಿಸಬೇಕೆಂಬರು, ಹೊನ್ನಿಂಗೆಯೂ ಲಿಂಗಕ್ಕೆಯೂ ವಿರೋಧವೆ: ಕೆಲಬರು ಹೊನ್ನು ಮುಟ್ಟಬಾರದು ಸಂಗ್ರಹ ಬುದ್ದಿಗೆ ಈಡು ಮಾಡುವುದು, ನಿರಾಶೆಯೆ ಈಶನ ಒಲುಮೆ. ಇದು ಕಾರಣ ಹೊನ್ನು ಬಿಟ್ಟರೆ ಲಿಂಗ ಒಲಿಯುವದು ಎನ್ನುವವರು ಲಿಂಗಜ್ಞಾನವಿಲ್ಲದವರು, ಲಿಂಗವರಿಯದವರು ಗುರುದರ್ಶನವಿಲ್ಲದವರು. ಅರುವ ಅರಿಯ ಹೇಳಿ ಸದ್ಗುರುನಾಥ ವೇದ ವೇದಾಂತಗಳಿಗೆ ಅಸಾಧ್ಯವಾದ ಅನುಪಮ ಲಿಂಗವ ಕೊಟ್ಟರು. ಅರಿಯ ಹೋದವರು ಶರಣರು. ಗುರು ಕಾರುಣ್ಯವ ಅರಿಯಹೋಗಿ ಹೊನ್ನು ಬಿಟ್ಟು ಲಿಂಗವ ನೊಲಿಸಬೇಕೆಂಬಿರಿ ಹೊನ್ನಿಂಗೆಯೂ, ಲಿಂಗಕ್ಕೆಯೂ,ವಿರೋಧವೆ ? ಲಿಂಗವದು ತೆರಹಿಲ್ಲದ ಲಿಂಗ ಭರಿತವಾಗಿರುವಲ್ಲಿ , ಹೊನ್ನು ಇದ್ದಲ್ಲಿ ಲಿಂಗವಿರುವದಿಲ್ಲವೆ ? ಲಿಂಗವಿಲ್ಲದ ಸ್ಥಾನವುಂಟೆ ? ''ಲಿಂಗಕ್ಕೆ ಕಡೆಯಿಲ್ಲ , ಲಿಂಗಕ್ಕೆ ಎಡೆಯಿಲ್ಲ, ಲಿಂಗದೊಳಗೆ ಜಗವಿಹುದು ಲಿಂಗಬಿಟ್ಟು ಹಿಂಗಿದವರಾರು ಸರ್ವಜ್ಞ.'' ಸರ್ವಜ್ಞನ ವಚನ ನೋಡುವಡೆ ಜಡಚೇತನ ರೂಪಿ ಜಗವೆಲ್ಲವು ಲಿಂಗದೊಳಗೆ ಇರುವಲ್ಲಿ ಹೊನ್ನೆಂಬುದು ಲಿಂಗ. ಬಂಗಾರದಲ್ಲಿ ಕಡಗ ಕಂಕಣ ತಾಳಿ ಎಂಬುದು ಬಂಗಾರವಲ್ಲದನ್ಯವಿಲ್ಲ. ಕಡಗ ಕಂಕಣ ಮಾಂಗಲ್ಯ ಇಲ್ಲದುದು. ಇದ್ದುದು ಬಂಗಾರ. ಬಂಗಾರವೆಂದಾಗಲೂ ಬಂಗಾರವೆ. ಭ್ರಮದಿಂದ ಕಡಗ ಕಂಕಣ ಮಾಂಗಲ್ಯವೆಂದಾಗಲೂ ಬಂಗಾರವೆ. ಬಂಗಾರದ ದೃಷ್ಠಿಯಲ್ಲಿ ಬದಾಲಾವಣೆಯಿಲ್ಲ ಹಾಗೆ ಅರಿತ ಶರಣನ ದೃಷ್ಠಿಯಲ್ಲಿ ಹೊನ್ನಿಂಗೆಯೂ ಲಿಂಗಕ್ಕೆಯೂ ವಿರೋಧವಿಲ್ಲ. ಮಣ್ಣಿಂಗೆಯೂ ಲಿಂಗಕ್ಕೆಯೂ ವಿರೋಧವಿಲ್ಲ . ಹೆಣ್ಣಿಂಗೆಯೂ ಲಿಂಗಕ್ಕೆಯೂ ವಿರೋಧವಿಲ್ಲ. ಅಂಗಕ್ಕೆಯೂ ಲಿಂಗಕ್ಕೆಯೂ ವಿರೋಧವಿಲ್ಲ. ಇಂದ್ರಿಯಂಗಳಿಗೆಯೂ ಲಿಂಗಕ್ಕೆಯೂ ವಿರೋಧವಿಲ್ಲ. ಜಗಕ್ಕೆ ಲಿಂಗಕ್ಕೆಯೂ ವಿರೋಧವಿಲ್ಲ. ನಾಮರೂಪಂಗಳಿಂದ ಹೇಳಿಸಿಕೊಳ್ಳುವ ಹೊನ್ನಾಗಲಿ, ಹೆಣ್ಣಾಗಲಿ, ಮಣ್ಣಾಗಲಿ, ಅಂಗವಾಗಲಿ, ಇಂದ್ರಿಯಂಗಳಾಗಲಿ, ಜಗತ್ತೆ ಆಗಲಿ, ಇದು ಹುಸಿ ಲಿಂಗ ದಿಟ. ಭಾವ ಭಾವಿಸಲುಂಟೆ ? ಭಾವ ಭಾವಿಸಲಹರಿಯದು ಅದೇನು ಕಾರಣ ಭಾವದಲ್ಲಿ ಭರಿತವಾಗಿ, ಭರಿತ ತತ್ವ ಕಾಣದ್ದರಿಂದ ಭಾವರೂಪಿ ಹೊನ್ನು , ಹೆಣ್ಣು, ಮಣ್ಣು , ಅಂಗ, ಇಂದ್ರಿಯಂಗಳು, ಜಗತ್ತು ತೋರುತ್ತಿವೆ ಎಲ್ಲೆಲ್ಲೂ ಭರಿತ ತತ್ವವೆ ತುಂಬಿರುವಲ್ಲಿ ಹೊನ್ನು ಅದು ಭರಿತ. ಹೆಣ್ಣು ಅದು ಭರಿತ, ಮಣ್ಣು ಅದು ಭರಿತ ಅಂಗವದು ಭರಿತ, ಇಂದ್ರಿಯಂಗಳು ಭರಿತ, ಜಗತ್ತು ಭರಿತವಾಗಿರುವದರಿಂದ ಗುರು ಕಾರುಣ್ಯ ತೆರಹಿಲ್ಲದ ಲಿಂಗ ಭರಿತವೆಂದು ತೋರಿದ. 'ತೋರಬಾರದ ಘನವ ತೋರಿದಲ್ಲಿ ಹೇಳಲೆಂದೇನೂ ? ಹೇಳಬಾರದ ಘನ ತೋರಲೆಂದೇನೋ ? ಸರಸಂದಾನದ ಪರಿಯಲ್ಲ ಗುಹೇಶ್ವರ ಲಿಂಗವದು ಕಲ್ಪಿತವಲ್ಲ ನೋಡಾ ಗುಹೇಶ್ವರ ' ಲಿಂಗವದು ಅರಿಯಲಿಲ್ಲದ ಅರುವ ಶರಣರು ಸ್ವೀಕರಿಸಿ, ಅರುಹಿಸಿಕೊಂಬ ನಾಮ ರೂಪ ಆಭರಣ

ಪುಸಿ, ಬಂಜೆಯ ಮಗ, ಅರಿವ ದೃಕ್ ಸಾಕ್ಷಿ ಎಂಬುದು ಪುಸಿಯಾದ್ದರಿಂದ ಅರಿಯಲಿಲ್ಲ , ಅರಿಯಲಿಲ್ಲದ ಅರುವ ಅರಿತುದು ಮರೆಯಲಿಲ್ಲವಾದ್ದರಿಂದ ಲಿಂಗವದು ಪರಂಜ್ಯೋತಿ, ಪರಮ ಕರುಣಿ, ಪರಮ ಶಾಂತನೆಂದು ಸೂಚಿಸಿದರು. ನೋಡಿದಡೆ ಲಿಂಗವೆ ಪರಂಜ್ಯೋತಿ ಪರಮಕರುಣಿ ಪರಮಶಾಂತವಿರುವಲ್ಲಿ ಹೊನ್ನಿಂಗೆ, ಹೆಣ್ಣಿಂಗೆ, ಮಣ್ಣಿಂಗೆ ಅಂಗಕ್ಕೆ ಇಂದ್ರಿಯಂಗಳಿಗೆ ಜಗತ್ತಿಗೆ ವಿರೋಧವೇಕೆ ? ಸೂರ್ಯನ ಬೆಳಕಿಗೆ ಇವು ವಿರೋಧ ಮಾಡುವವೆ? ಅವನ ಬೆಳಕಿನಲ್ಲಿ ಸಕಲವು ಸಿದ್ಧವಾಗುವಲ್ಲಿ ವಿರೋಧವೇತರದು? ಲಿಂಗ ಜ್ಞಾನವಿಲ್ಲದ ವೈರಾಗ್ಯ ಪುರುಷರು ಹೇಳಿದ ವಿಷಯವಾಗಿರಬಹುದೆಂದು ಎನಿಸುವದು. ಅವರು ಗುರು ಕಾರುಣ್ಯರೂಪಿ ಅರಿಯಬಾರದ ಘನವ ಅರಿತವರಲ್ಲ, ಅವರಿಗೆ ಅರಿಯಲಿಲ್ಲದ ಅರುವನರುಹಿಸಿಸುವ ಶ್ರೀಗುರು ದೊರತಿಲ್ಲವಾದ್ದರಿಂದ ನಾಶ ಅವಿನಾಶವೆಂಬ ಪುರುಷಾರ್ಥಜ್ಞಾನಿಗಳಾಗಿರುವದರಿಂದ "ಹೊನ್ನು ಬಿಟ್ಟು ಲಿಂಗವ ನೊಲಿಸ ಬೇಕು, ಮಣ್ಣ ಬಿಟ್ಟು , ಹೆಣ್ಣು ಬಿಟ್ಟು , ಅಂಗಬಿಟ್ಟು , ಇಂದ್ರಿಯಂಗಳ ಬಿಟ್ಟು , ಜಗತ್ತು ಬಿಟ್ಟು ಲಿಂಗವ ನೊಲಿಸಿಕೊಳ್ಳುವರಾಗಿಹರಾಗಿ ಒಂದು ಬಿಟ್ಟು ಮತ್ತೊಂದು ಹಿಡಿಯುವವರಾಗಿಹರು. 'ಹಿಡಿಯಬಾರದು ಬಿಡಬಾರದು ಲಿಂಗೈಕ್ಯವ ಇನ್ನಾರಿಗೆ ಉಸರುವೆ ನಿಃಕಳಂಕ ಮಲ್ಲಿಕಾರ್ಜುನ" ಎಂದಂತೆ ಇಲ್ಲದ ನಾಮರೂಪ, ಕಲ್ಪಿತ ಹಿಡಿಯ ಬಾರದು, ಅದು ಹುಸಿಯೆಂದು, ಬಂಜಿ ಮಗನೆಂದು ತಿಳಿದು ಹಿಡಿಯ ಬಾರದು. ಪರಂಜ್ಯೋತಿ, ಪರಮ ಕರುಣಿ, ಪರಮ ಶಾಂತನೆಂಬುದು ಬಿಡಬಾರದು. ಇಲ್ಲದ ಬಂಜಿ ಮಗನ ರೂಪದಲ್ಲಿರುವ ಹೊನ್ನಿಗಾಗಲಿ, ಹೆಣ್ಣಿಗಾಗಲಿ, ಮಣ್ಣಿಗಾಗಲಿ, ಅಂಗಕ್ಕಾಗಲಿ, ಇಂದ್ರಿಯಂಗಳಿ ಗಾಗಲಿ, ಜಗತ್ತಿಗಾಗಲಿ, ಕೋಪಮಾಡುವದಿಲ್ಲ, ಮುನಿಸು ಮಾಡುವದಿಲ್ಲ, ಇತ್ತ ಪರಂಜ್ಯೋತಿ, ಸಕಲ ಜ್ಯೋತಿ, ಆವುದರಿಂದ ಸಿದ್ಧವಾಗುವವು ಅದುವೆ ಪರಂಜ್ಯೋತಿ. ಸ್ಥಾವರ ಜಂಗಮವೆಂಬ ಪರ ಪ್ರಕಾಶ ಸೂರ್ಯಚಂದ್ರ ತಾರಾ ಗಳೆಂಬ ಪರ ಪ್ರಕಾಶ. ಇತ್ತ ಗುರುದೇವನ ಹೆತ್ತರಿವು ಆದ ಪ್ರತ್ಯಗಾತ್ಮ ಸಾಕ್ಷಿ ಅನಂಗ ಸ್ವಯಂ ಪ್ರಕಾಶ ಜ್ಞಾನವು ಆವ ಬೆಳಕಿನಲ್ಲಿ ಸಿದ್ಧವಾಗುವುದು ಅದುವೆ ಪರಂಜ್ಯೋತಿ. ಅರಿದರಿದು ನೋಡಿದಲ್ಲಿ ಜ್ಯೋತಿಯು ತಾನಿರುವಲ್ಲಿ ಪರಂಜ್ಯೋತಿ ಎಂದು ಹೇಳಿದೆ.

ಅಂತಪ್ಪ ಪರಂಜ್ಯೋತಿಗೆ ಅದೇಕೆ ಕೋಪ, ಅದೇಕೆ ಮುನಿಸು ಪರಮ ಕರುಣಿಗಳ ಕಾಣಬಹುದು, ಕರುಣಿಗಳ ಕರುಣಾಮಯ ಪರಮ ಕರುಣಿಯು ಇದು ನಿರಂತರವಾಗಿಹ ಮಂಗಲಮಯ ಪರಮ ಸತ್ಯವೆ ಪರಮ ಕರುಣಿ ಯಾಗಿದೆ, ಸಮ ಸ್ವರೂಪವಾಗಿದೆ. ಅದುವೆ ಪರಮಶಾಂತ ಸ್ವರೂಪ ವಿರುವಲ್ಲಿ ಅದಕ್ಕೇಕೆ ? ಕೋಪ, ಮುನಿಸು ?

"ಆರು ಕೋಟಿ ಬ್ರಹ್ಮರು ಮಡಿವಲ್ಲಿ ನಾರಾಯಣಂಗೆ ಒಂದು ದಿನವಾಯಿತ್ತು. ನಾರಾಯಣರೊಂದು ಕೋಟಿ ಮಡಿವಲ್ಲಿ ರುದ್ರನ ಕಣ್ಣೆವೆ ಹಳಚಿತ್ತು, ಹಲವು ರುದ್ರಾವತಾರವಳಿದಲ್ಲಿ ಕೂಡಲ ಸಂಗಮದೇವ ಏನೊಂದೂ ಅರಿಯದೆ ಇದ್ದನು."

ಪರಂಜ್ಯೋತಿ, ಪರಮ ಕರುಣಿ, ಪರಮ ಶಾಂತನೆಂಬ ಲಿಂಗ, ಆರು ಕೋಟಿ ಬ್ರಹ್ಮರು ಮಡಿದರೂ ಪರಮ ಶಾಂತ. ಇತ್ತ ನಾರಾಯಣಂಗೊಂದು ದಿನವಾದರೇನು, ನಾರಾಯಣರೊಂದು ಕೋಟಿ ಮಡಿದರೂ ರುದ್ರನ ಕಣ್ಣು ತೆರೆದರೇನು ? ಹಲವು ರುದ್ರವತಾರವಳಿದರೇನು ? ಕೂಡಲ ಸಂಗಮದೇವನೆಂಬ ಪರಮ ಶಾಂತನೆಂಬ ಲಿಂಗ

ಏನೊಂದು ಅರಿಯದೆ ಇರುವಲ್ಲಿ ಲಿಂಗಕ್ಕೆ ಕೋಪ ವೇತರದು ? ಮುನಿಸು ಏತರದು ಎಂದು ಹೇಳಿಹರು .

ವಚನ - 21

> **ಸುಖವ ನರಿಯದ ಹೆಣ್ಣು ಸೂಳೆಯಾದಳು.**
> **ಲಿಂಗ ವರಿಯದಾತ ಶೀಲವಂತನಾದ.**
> **ಸುಖವಿಲ್ಲ ಸೂಳೆಗೆ ; ಪಥವಿಲ್ಲ ಶೀಲಕ್ಕೆ,**
> **ಮಾಡಲಾಗದು ನೇಮವ: ನೋಡಲಾಗದು ಶೀಲವ**
> **ಸತ್ ಸಹಜವೆ ಸತ್ಯಶೀಲ ನಮ್ಮ ಗುಹೇಶ್ವರನ ಅರಿಯ ಬಲ್ಲವಂಗೆ.**

ತಾತ್ಪರ್ಯ : ಸುಖವ ನರಿಯದ ಹೆಣ್ಣು ಸೂಳೆಯಾದಳು : ಸುಖವ ನರಿಯದ ಹೆಣ್ಣು ವ್ಯಭಿಚಾರದ ಹೆಣ್ಣು, ಇಂದ್ರಿಯ ಜನ್ಯ ವಿಷಯ ಸಂಯೋಗದಲ್ಲಿ ಸುಖವ ಕಾಣುವ ಹೆಣ್ಣು ಇದು ಸುಖವ ನರಿಯದ ಹೆಣ್ಣು, ಹೆಣ್ಣೆಂದರೆ ಮೊಲೆ ಮುಖದಿಂದುಕ್ತವಾದ ಹೆಣ್ಣಲ್ಲ, ಮನರೂಪಿ ಹೆಣ್ಣು, ಸುಖವ ನರಿಯದ ಮನರೂಪಿ ಹೆಣ್ಣು, ಮತ್ತೊಂದು ಸುಖವರಿತ ಮನರೂಪಿ ಹೆಣ್ಣು, ಸುಖವ ನರಿಯದ ಮನ, ಇದು ಅವಿದ್ಯೆಯಿಂದುಕ್ತವಾದ ಮನ, ಲಿಂಗಾಂಗ ಸಾಮರಸ್ಯ ವಿಲ್ಲದ ಮನ ಅನಿತ್ಯವಾದ ವಿಷಯ ಭೋಗವೆ ನಿತ್ಯವೆಂದು ತಿಳಿಯುವ ಮರವುಳ್ಳ ಮನ. ಈ ಮನ ಸುಖದ ಸಲುವಾಗಿ ಈ ಲೋಕದಿಂದ ಹಿಡಿದು ಬ್ರಹ್ಮ ಲೋಕದವರೆಗೂ ಸಂಚರಿಸುವ ಮನ. ಕ್ರಿಯೆ, ಉಪಾಸನೆ, ಸಕಾಮ, ತಪಸ್ಸು, ಫಲೇಚಾ ಇಟ್ಟುಕೊಂಡು ಚತುರ್ವಿಧ ಪದವಿಗಳ ಬಯಸುವದಾದ್ದರಿಂದ ಇದು ವ್ಯಭಿಚಾರಿ ಇದ್ದಂತೆ. ಸುಖದ ಸಲುವಾಗಿ ಅಲ್ಲ, ಭೋಗ ಸಲುವಾಗಿ ಸಂಚರಿಸುವದಾದ್ದರಿಂದ ಇದು ಸುಖವರಿಯದ್ದರಿಂದ ಸೂಳೆ ಎಂದು ಹೇಳಿದ್ದಾರೆ. ಇದು ಅಂಗವೆಂಬುದು ಅರಿಯಲಿಲ್ಲ, ಲಿಂಗವೆಂಬುದು ಅರಿಯಲಿಲ್ಲ, ಅರುವ ಅರಿಯಲಿಲ್ಲ, ಸುಖವಿಲ್ಲದುದರಲ್ಲಿ ಸುಖವ ಹುಡುಕುವದರಿಂದ ಸುಖವ ನರಿಯದ ಹೆಣ್ಣು ಸೂಳೆಯಾದಳು. ಇಲ್ಲಿ ಮೊಲೆ ಮುಖವ ಕಂಡು ಹೆಣ್ಣೆಂದು ಕರೆದಿರುವದಿಲ್ಲ, ಗಡ್ಡ ಮೀಸೆಗಳ ನೋಡಿ ಗಂಡೆಂದು ಹೇಳಿರುವದಿಲ್ಲ, ಸುಖ ವರಿಯದ ಬುದ್ಧಿ ಹೆಣ್ಣಾಗಿದೆ, ಸುಖ ವರಿತ ಬುದ್ಧಿ ಗಂಡಾಗಿದೆ.

ಲಿಂಗವರಿಯದಾತ ಶೀಲವಂತನಾದ : ಶೀಲವಂತನಾದ ಚಿನ್ಹವೆಂದರೆ ಲಿಂಗವರಿಯದ ಚಿನ್ಹ, ಚೈತನ್ಯ ವರಿಯದ ಚಿನ್ಹ, ತನ್ನ ತಾನರಿಯದ ಚಿನ್ಹ ದೇಹ, ಇಂದ್ರಿಯಂಗಳು, ಪ್ರಾಣ ಕರಣಂಗಳು, ತನ್ನವಾಗಿ ಶೀಲವಂತನಾದ .

ಸುಖವಿಲ್ಲ ಸೂಳೆಗೆ, ಪಥವಿಲ್ಲ ಶೀಲಕ್ಕೆ : ಸುಖವಿಲ್ಲದವರು ಸೂಳೆಯರು, ಈ ಸೂಳೆಗೆ ಸುಖವಿಲ್ಲ ಅದಾವ ಸುಖವಿಲ್ಲ, ನಿಜ ಸುಖದ ಸುಖವಿಲ್ಲ, ಸಚ್ಚಿದಾನಂದ ಸುಖವಿಲ್ಲ, ಲಿಂಗ, ಜಂಗಮ, ಪ್ರಸಾದದ ಸುಖವಿಲ್ಲ ಅಖಂಡಾನಂದವಿಲ್ಲ, ಅಚಿಂತ್ಯದ ದರ್ಶನ ವಿಲ್ಲದ್ದರಿಂದ ಸುಖವಿಲ್ಲ ಸೂಳೆಗೆ, ಪಥವಿಲ್ಲ ಶೀಲಕ್ಕೆ, ಪಥವಿಲ್ಲದಿರುವಲ್ಲಿ ಶೀಲವಿದೆ, ಶೀಲವಿದ್ದಲ್ಲಿ ಪಥವಿಲ್ಲ, ಪಥವಿದ್ದಲ್ಲಿ ಶೀಲವಿಲ್ಲ, ಪಥ ಅದಾವ ಪಥ ? ಜೀವ ಪರಮರ ಏಕತ್ವ ಪಥ, ಲಿಂಗಾಂಗ ಸಾಮರಸ್ಯಪಥ, ನಿತ್ಯ ನಿರಂಜನ ತಾನೆಂದರಿಯುವ ಪಥ, ಏನೆಂದೆನ್ನದ ಮುನ್ನ ತಾನೆ ಆದ

ಪಥ ಧ್ವನಿಯ ಮರೆಯಲ್ಲಿ ಕಂಡ ಪಥ, ಗುರುವಿಂಗೆ ಗುರುವಾಗಿಹ ಗುರುಲಿಂಗವರಿಯುವ ಪಥ, ಅಜಾತ ಪಥ, ಈ ಪಥವಿದ್ದಲ್ಲಿ ಶೀಲವಿಲ್ಲ.

ಮಾಡಲಾಗದು ನೇಮವ, ನೋಡಲಾಗದು ಶೀಲವ : ''ಪತ್ರಿನೇಮ ದವರೊಂದು ಕೋಟಿ ಲಿಂಗಾರ್ಚನೆಯ ನೇಮದವ ರೊಂದು ಕೋಟಿ, ಜಂಗಮ ತೃಪ್ತಿ ನೇಮದವರೊಂದು ಕೋಟಿ ತನ್ನ ತಾ ತಿಳಿಯು ನೇಮದವರೆ ವೀರಶೈವಾಗ್ರ ಗಣ್ಯರು ಕಪಿಲಸಿದ್ಧ ಮಲ್ಲಿಕಾರ್ಜನ''

ಶಿದ್ಧರಾಮ ಶಿಯೋಗಿಯ ಪ್ರಸಾದ ವಾಣಿಯಂತೆ ಪತ್ರೆ ನೇಮ ಮಾಡಲಾಗದು, ಲಿಂಗಾರ್ಚನೆ ನೇಮ ಮಾಡಲಾಗದು, ಜಂಗಮ ತೃಪ್ತಿ ನೇಮ ಮಾಡಲಾಗದು, ತನ್ನ ತಾ ತಿಳಿಯುವ ನೇಮ ಮಾಡುವದೆ ನೇಮದಲ್ಲಿ ಶ್ರೇಷ್ಠ ನೇಮವೆಂದು ತಿಳಿಯುವದು .

ನೋಡಲಾಗದು ಶೀಲವ : ನೋಡಲಾಗದ ಶೀಲ ಅದಾವ ಶೀಲ ? ಉಂಬಲ್ಲಿ ಉಡುವಲ್ಲಿ ಕ್ರಿಯೆ ಅಳಿಯುತ್ತೆಂಬರು, ಉಂಬಲ್ಲಿ, ಉಡುವಲ್ಲಿ ಶೀಲ ಮಾಡುವದು ನೋಡಲಾಗದು. ಕೊಂಬಲ್ಲಿ ಕೊಡುವಲ್ಲಿ ಕ್ರಿಯೆ ಅಳಿಯಿತ್ತೆಂದು ಶೀಲ ಮಾಡುವರು. ಇಂಥ ಶೀಲವ ನೋಡಲಾಗದು ಹೆಣ್ಣು ಕೊಡುವಲ್ಲಿ, ಗಂಡು ಕೊಂಬುವಲ್ಲಿ ಮತಾಚಾರ ಅಳಿಯಿತ್ತೆಂಬರು ಇಂತಪ್ಪ ವಿಚಾರ ಶೂನ್ಯ ಶೀಲವ ನೋಡಲಾಗದು.

ಇದಲ್ಲದೆ ಅಂಗದ ಮೇಲೆ ಲಿಂಗ ಹಿಂಗಿದಾತ ಭವಿಯೆಂದು ಈ ಭವಿಗೆ ಏನು ಕೊಡಲಾಗದೆಂದು ಶೀಲವ ಮಾಡುವರು. ಅಂಗದ ಮೇಲೆ ಲಿಂಗ ಹಿಂಗಿದಾತ ಭಕ್ತನೆಂದು ಕೊಂಬುವರು, ಕೊಡುವರು, ಉಂಬುವರು, ಉಡುವದು, ಮಾಡುವ ಶೀಲವ ನೋಡಲಾಗದು. ಇವರು ಅಂಗದೊಳಗೆ ಬೆರಸಿಪ್ಪ ಲಿಂಗದ ಹೊಲಬ ನರಿಯರು. ಇವರಿಗೆ ಭಕ್ತರಾರೆಂಬ ಜ್ಞಾನವಿಲ್ಲ, ಭವಿ ಆರೆಂಬ ಜ್ಞಾನವಿಲ್ಲದ ಶೀಲ ಇವರದಾದ್ದರಿಂದ ನೋಡಾಲಾಗದು ಶೀಲವೆಂದು ಪ್ರಭುದೇವ ಹೇಳಿದುದು.

ಸತ್ ಸಹಜವೆ ಸತ್ಯಶೀಲ ಗುಹೇಶ್ವರನ ಅರಿಯ ಬಲ್ಲವಂಗೆ : ಗುಹೇಶ್ವರನ ತಿಳಿಯ ಬಲ್ಲವರು ಅವರಿಗೆ ಸತ್ ಸಹಜವೆ ಸತ್ಯಶೀಲ. ಶೀಲವದು ಸಹಜ, ಸಹಜವದು ಸತ್ಯ, ಸತ್ ಸ್ವರೂಪವರಿತು ಸತ್ಯ ಸಹಜ ತಾನಾದುದು ಶೀಲ ಅಲ್ಲಿ ಸಹಜತ್ವ ನೆಲೆಗೊಂಡಿರುವದರಿಂದ ಸತ್ ಸಹಜವೆ ಸತ್ಯ ಶೀಲವೆಂದಿದ್ದಾರೆ.

ವಚನ - 22

ಅಂಗವೆಂದಡೆ ಅಜ್ಞಾನ
ಲಿಂಗವೆಂದಡೆ ಸುಜ್ಞಾನ
ಲಿಂಗವಿಡಿದು ಆಚರಿಸುವದಲ್ಲದೆ
ಅಂಗವಿಡಿದು ಆಚರಿಸ ಬಾರದು ಕಪಿಲಸಿದ್ಧ ಮಲ್ಲಿಕಾರ್ಜುನ

ತಾತ್ಪರ್ಯ : ಅಂಗವೆಂದಡೆ ಅಜ್ಞಾನ, ಲಿಂಗವೆಂದಡೆ ಸುಜ್ಞಾನ : ಅಂಗವೆಂಬ ಅಜ್ಞಾನ ಮರುವಿನಿಂದ ಬಂದುದು. ಲಿಂಗವೆಂಬ ಸುಜ್ಞಾನ ಶ್ರೀಗುರು ಕಾರುಣ್ಯದಿಂದ ಬಂದುದು, ಮೌನ ಮುದ್ರಿತದಿಂದ ಬಂದುದು.

ಅಂಗವೆಂಬುವವರೆಲ್ಲ ಅಜ್ಞಾನಿಗಳು, ಅಂಗ ದೃಷ್ಠಿ , ಅಂಗಭಾವ, ಅಂಗಾಭಿಮಾನ

ಇದು ಮರುವಿನ ಕಾರ್ಯ, ತನ್ನ ತಾ ಮರೆತವರ ಕಾರ್ಯ, ಅರುವ ಮರೆತವರ ಕಾರ್ಯ, ಲಿಂಗ ತಳಿಯದವರ ಕಾರ್ಯ, ಅಂಗವೆಂದರೆ ಅಜ್ಞಾನ, ಲಿಂಗವೆಂದಡೆ ಸುಜ್ಞಾನ ವೆಂದು ಹೇಳಿಹರು .

ಆವ ಹೃದಯದಲ್ಲಿ ಸುಜ್ಞಾನ ಬೆಳಗುತ್ತಿರುವದು ಅಲ್ಲಿ ಅಲ್ಲಿ ಲಿಂಗದೃಷ್ಠಿ , ಭರಿತ ಭಾವ , ಸದ್ ಜ್ಞಾನವೆ ಪ್ರಜ್ವಲಿಸುತ್ತಿರುವದು. ಅಂಗವು ಇಲ್ಲದುದು. ಲಿಂಗ ಇದ್ದುದು, ಇಲ್ಲದುದು. ಇದ್ದಂತಾದುದೆ ಅಜ್ಞಾನ. ಇಲ್ಲದ ಅಂಗ ಹುಟ್ಟಿದಂತಾಗಿ , ಇದ್ದಂತಾಗಿ , ಬದುಕಿ ದಂತಾಗಿ , ಸತ್ತಂತಾಗಿ ತೋರಿದುದೆ ಅಜ್ಞಾನ. ಷಡ್ವಿಕಾರವಾಗಿ ತೋರುವದೆ ಅಜ್ಞಾನ.

ಲಿಂಗವದು ನಿರಂತರ ಇದ್ದಂತಿದ್ದ ಘನ. ವೇದ ವೇದಾಂತಗಳಿಂದಲೂ ವರ್ಣಿಸಲು ಬಾರದ ಲಿಂಗ. ಅಂದು, ಇಂದು, ಎಂದೆಂದೂ ಇದ್ದಂತಿದ್ದ ಘನ. ಅಕಲ್ಪಿತ ಅಚಿಂತ್ಯವು ಇರುವಲ್ಲಿ ಇದನ್ನು ಹಾಗೆ ಹೀಗೆ ಎಂದು ಹೇಳುವದು , ಅರಿದರುಹಿಸಿಕೊಂಬುದಕ್ಕೂ ಮೀರಿದ ಘನವನ್ನು ನಿರ್ಣಯಿಸುವದಾದರೂ ಹೇಗೆ ? ಆವುದು ವಾಕ್ ಮನದಿಂದ ಕಲ್ಪಿ ಸಲು ಬಾರದುದು ಅದು ಲಿಂಗ . ಅದನ್ನು ವೇದ ವೇಧಿಸಲಿಲ್ಲ , ಶಾಸ್ತ್ರ ಸಾಧಿಸಲಿಲ್ಲ , ಪುರಾಣ ಪೂರೈಸಲಿಲ್ಲ. ಇದು ಕಾರಣ ಬಸವರಸರು ವೇದ ವೇದಾಂತಗಳಿಗೆ ಅಸಾಧ್ಯವಾದ ಅನುಪಮ ಲಿಂಗವ ತಂದುಕೊಟ್ಟನಯ್ಯ ಸದ್ಗುರು ಎನ್ನ ಕರಸ್ಥಲಕ್ಕೆ ಎಂದು ಕೊಂಡಾಡಿಹರು.

ಅನುಪಮ ಲಿಂಗದ ಅರಿವೆ ಸುಜ್ಞಾನ, ಇದು ಕಾರಣ ಲಿಂಗ ವಿಡಿದು ಆಚರಿಸುವರ ಲ್ಲದೆ, ಅಂಗ ವಿಡಿದು ಆಚರಿಸಲಾಗದು. ಲಿಂಗವಿಡಿದು ಆಚರಿಸುವ ಪರಿ ? ಲಿಂಗ ವಿಡಿದು ಲಿಂಗ ವರಿಯುವದು, ಅರುವಿಡಿದು ಅರುವರಿಯುವದರಿಂದ ಸಕಲ ಜಗತ್ತು ಪರಮಾತ್ಮ ಸ್ವರೂಪ ತಾನೆ, ತಾನೆ ಲಿಂಗ , ತಾನೆ ಸಕಲ, ತಾನೆ ನಿಃಕಳವೆಂಬುದು ತನ್ನಿಂದ ತನಗದು ವೇದ್ಯವು. ಆಗ ತಾನೆ ಅಭೇದ್ಯ ಸತ್ಯವಾದುದೆ ಸುಜ್ಞಾನ .

ಲಿಂಗ ವಿಡಿದಲ್ಲಿ ಲಿಂಗ ವರಿಯುವದು, ತಾನು ಲಿಂಗವಾದಲ್ಲಿ ತನ್ನ ತಾನರಿಯ ಬೇಕು. ತಾನು ಅರುವು ಇದ್ದಲ್ಲಿ ಅರುವ ಅರಿಯುವುದು, ತನ್ನ ಅರಿತರೆ ಸಕಲವು ಅರಿತರೆ ಸಕಲವು ಅರಿತಂತೆ, ತನ್ನನೊಂದೆ ಅರಿವುದು ತನ್ನ ಅರಿಯುಪದರ ಸಲುವಾಗಿ ಲಿಂಗ ವಿಡಿ ಯುವದು . ತನ್ನ ಅರಿತಲ್ಲಿ ಲಿಂಗವಿಡಿದು ಆಚರಿಸಿದಂತೆ ಇದು ಕಾರಣ ಲಿಂಗ ವಿಡಿದು ಆಚರಿಸುವದಲ್ಲದೆ ಅಂಗವಿಡಿದು ಆಚರಿಸಲಾಗದು ಎಂದು ಹೇಳಿಹರು.

ಲಿಂಗವಿಡಿದ ಆಚರಿಸಿದ ಮಹಾಂತನು ಅರುವಿನರುವು, ಅರಿಯದರುವು , ಶಬ್ದ ಮುಗ್ಧ ತಾನಾದವನು, ನುಡಿಗೆಡೆಗೊಡದವನು, ತಾನೆಂಬುದು ತನ್ನಿಂದ ತನಗದು ವಿದಿತವಾದ ವರು. ಅಂತಪ್ಪ ಮಹಾಂತನೆ ಲಿಂಗವಿಡಿದು ಆಚರಿಸಿದ ಸ್ವಯಾಚಾರಿಯು, ಅನಾಮಯ ವಾಗಿರುವ ನಿರ್ವಾಣಿ, ನಿಜಸುಖಿ. ಸ್ವಯ ಸುಖಿಯು. ಅವನೆಂತು ಅಂಗ ವಿಡಿದು ಆಚರಿ ಸುವನು ಆಚರಿಸಲಾರ ಎಂದು ಹೇಳಿಹರು.

ಅಂಗ ವಿಡಿದು ಆಚಾರ ಮಾಡುವವರು ಲಿಂಗವರಿಯದವರು, ಇವರು ಪೂಜಾ ಲಿಂಗ ವಿಡಿದವರು. ಲಿಂಗ ವರಿಯದ್ದರಿಂದ ಇಲ್ಲದ ಅಂಗ ಇದ್ದಂತಾಗಿರುವದರಿಂದ ಅಜ್ಞಾನಿ ಗಳು, ಅಂಗ ಬುದ್ಧಿ ಯುಳ್ಳವರಾಗಿ ಅಂಗ ಭಾವ, ಅಂಗಾಭಿಮಾನ ಬಲಗೊಂಡಲ್ಲಿ ಲಿಂಗವ ತಿಳಿಯಲು ಹೋದರೆ ಅದೆಂತು ಸಾಧ್ಯ ? ಇವರಿಗೆ ಅಂಗ ಸ್ವರೂಪ ತಿಳಿಯದು, ಲಿಂಗ ಸ್ವರೂಪ ತಿಳಿಯದು, ತಾನಾರೆಂಬುದು ತಿಳಿಯರು. ಕಾರಣ ಅಂಗ ವಿಡಿದು ಆಚರಿಸಲಾ

ಗದು ಎಂದು ಹೇಳಿದುದಲ್ಲದೆ, ಅಂಗ ವಿಡಿದವರಿಗೆ ಭಕ್ತಿಯು ಅಳವಡದು, ಜ್ಞಾನ ಕ್ರಿಯೆಯು ಅಳವಡದು, ವೈರಾಗ್ಯ ಅಳವಡದು, ಅನುಭಾವವು ಅಳವಡದು.

ಲಿಂಗ ವಿಡಿದವರಿಗೆ ಭಕ್ತಿಯು ಅಳವಡವುದು, ಜ್ಞಾನ ಕ್ರಿಯೆಯು ಅಳವಡುವುದು, ವೈರಾಗ್ಯವು ಅಳವಡುವುದಲ್ಲದೆ ಅನುಭಾವವು ಅಳವಡುವುದರಿಂದ ಲಿಂಗವಿಡಿಯಲು ಸುಜ್ಞಾನವು ಅವಶ್ಯಕವು.

ವಚನ - 23

ಭಕ್ತಿಯೆ ಲಿಂಗ ಪೂಜೆಯಾಗಿ ಅಳವಡಿಸಿಕೊಂಡ ಬಸವೇಶ,
ಜ್ಞಾನ ಕ್ರಿಯೆಯೆ ಲಿಂಗ ಪೂಜೆಯಾಗಿ ಅಳವಡಿಸಿಕೊಂಡ ಚೆನ್ನಬಸವೇಶ,
ವೈರಾಗ್ಯವೆ ಲಿಂಗ ಪೂಜೆಯಾಗಿ ಅಳವಡಿಸಿಕೊಂಡ ಅಲ್ಲಮೇಶ,
ಅನುಭಾವವೆ ಲಿಂಗ ಪೂಜೆಯಾಗಿ ಅಳವಡಿಸಿಕೊಂಡ ನಿಮ್ಮ ಬಾಲಕೇಶ
ಕಪಿಲಸಿದ್ಧ ಮಲ್ಲೇಶ, ವ್ಯೋಮಕೇಶ, ನಾಶಪಾಶ .

ತಾತ್ಪರ್ಯ : ಭಕ್ತಿಯೆ ಲಿಂಗ ಪೂಜೆಯಾಗಿ ಅಳವಡಿಸಿಕೊಂಡ ಬಸವೇಶ ; ಜ್ಞಾನಕ್ರಿಯೆಯೆ ಲಿಂಗ ಪೂಜೆಯಾಗಿ ಅಳವಡಿಸಿಕೊಂಡ ಚೆನ್ನಬಸವೇಶ. ಪೂಜಾಲಿಂಗದ ಲಿಂಗಾರ್ಚಕರ ಲಿಂಗ ಪೂಜೆ ಒಂದು ವಿಧವಾದರೆ, ಈ ಮಹಾಂತರ ಲಿಂಗ ಪೂಜೆಯ ಪರಿ ಬೇರೆ .

ಲಿಂಗಾರ್ಚಕರ ಲಿಂಗ ಪೂಜೆಗೆ ಮಡಿನೀರು, ಭಸ್ಮ, ಗಂಧ, ದೂಪ, ದೀಪ, ಪತ್ರಿ, ಪುಷ್ಪ , ಅಕ್ಷತೆ, ನೈವೇದ್ಯ ಇತ್ಯಾದಿಗಳು ಬೇಕಾಗುತ್ತವೆ . ಈ ಮಹಾಂತರ ಲಿಂಗ ಪೂಜೆಗೆ ಭಕ್ತಿ, ಭಕ್ತಿಯೆ ಲಿಂಗ ಪೂಜೆ ಯಾಗಿದೆ, ಜ್ಞಾನ ಕ್ರಿಯೆಯ ಲಿಂಗಪೂಜೆ ಯಾಗಿದೆ.

ಮಹಾಂತರ ಪೂಜೆಗೆ ಭಕ್ತಿಯೆ ಲಿಂಗ ಪೂಜೆಯಾಯಿತ್ತು , ಜ್ಞಾನ ಕ್ರಿಯಯೆ ಲಿಂಗ ಪೂಜೆ ಯಾಯಿತ್ತು , ಇವರ ಪೂಜೆಗೆ ಭಕ್ತಿಯೆ ಲಿಂಗ ಪೂಜೆಯಾಗಿ , ಅನುಪಮ ಲಿಂಗವ ಅಳವಡಿಸಿ ಕೊಂಡರು . ಇವರು ಲಿಂಗ ಬೇರೆ ತಾನು ಬೇರೆಂಬ ಭೇದ ಜ್ಞಾನಿಗಳಲ್ಲ , ಲಿಂಗವರಿತ ಲಿಂಗಾಗಿಂಗಳು ಸರ್ವಾಂಗ ಲಿಂಗಿಗಳು. ಇವರ ಭಕ್ತಿ, ಜ್ಞಾನ ಜ್ಞೇಯ ಒಂದಾದ ಭಕ್ತಿ, ಬಸವರಸರದು ಭಕ್ತಿಯ ಲಿಂಗ ಪೂಜೆಯಾದ್ದರಿಂದ ಲಿಂಗ ದರಿವು, ಲಿಂಗ ತಾನು ಒಂದಾದ ಭಕ್ತಿ, ತಾನಾರೆಂದು ತನ್ನನರಿತು ಸ್ವಯ ಲಿಂಗವೆ ತಾನಾದ ತನ್ನ ಭಕ್ತಿ .

ಬಸವರಸ ಭಕ್ತಿಗೆ ಉತ್ಪತ್ತಿ ಇಲ್ಲ , ಸ್ಥಿತಿ ಇಲ್ಲ , ಲಯವಿಲ್ಲ , ಮುನ್ನೆಲ್ಲಿಂದ ಬಂದ ನಲ್ಲಿಗೆ ಹೋಗಿ ನಿತ್ಯ ತಾನಾಗಿರ್ದ ಭಕ್ತಿ. ಸಂಯೋಗ ವಿಯೋಗ ವೆಂಬರಡಿಲ್ಲದ ನಿಜ ವರಿತು ನಿಜವೆನ್ನದೆ ಘನಕ್ಕೆ ಘನವಾಗಿರ್ದುದು. ಈ ಭಕ್ತಿಯೆ ಲಿಂಗ ಪೂಜೆಯಾಗಿ ಸ್ವಯ ಲಿಂಗವ ನಳವಡಿಸಿಕೊಂಡ ಘನ ಮಹಿಮ ಬಸವೇಶ.

ಜ್ಞಾನ ಕ್ರಿಯೆ ಲಿಂಗ ಪೂಜೆಯಾಗಿ ಅಳವಡಿಸಿಕೊಂಡ ಚೆನ್ನಬಸವೇಶ : ಜ್ಞಾನವದು ಅರವು. ಜ್ಞಾನ ಕ್ರಿಯೆ, ಅರುವಿನ ಕ್ರಿಯೆ, ಅರುವರಿಯುವ ಕ್ರಿಯೆ, ಇದು ಜ್ಞಾನಾಚಾರ, ಜ್ಞಾನ ವೆಂದರೆ ಜ್ಞಾನ ಸ್ವರೂಪ ಕ್ರಿಯೆ. ಜ್ಞಾನ ಸ್ವರೂಪ ವರಿಯುವದೆ ಜ್ಞಾನ ಕ್ರಿಯೆ. ಜ್ಞಾನ ತಾನಾರೆಂಬ ಜ್ಞಾನ, ತನ್ನ ತಾನರಿಯುವದೆ ಜ್ಞಾನ ಕ್ರಿಯೆ. ಜ್ಞಾನವದು ತರ್ಕವಲ್ಲ , ಯೋಗ್ಯವೂ ಅಲ್ಲ , ಸಮಾಧಿಯು ಅಲ್ಲ , ಗುರೂಪದೇಶವೂ ಅಲ್ಲ . ಅದು ಇದ್ದಂತಿರುವ

ಸಹಜ, ಅಚಿಂತ್ಯದಿರುವು ಅಕ್ರಿಯೆಯೆ ಜ್ಞಾನ ಕ್ರಿಯೆ. ತೆರಹಿಲ್ಲದ ನುಡಿ, ತೆರಹಿಲ್ಲದ ನಡೆ ತೆರಹಿಲ್ಲದ ವಿಶ್ರಾಮ ಇದು ಅರಿಯಲಿಲ್ಲದ ಅರುವೆ ತಾನಾದ ಅರುವಿನ ವಿಶ್ರಾಮವು. ಇಂತಪ್ಪ ಜ್ಞಾನ ಕ್ರಿಯೆ ಲಿಂಗ ಪೂಜೆ ಯಾಗಿ ಅಳವಡಿಸಿಕೊಂಡ ಚನ್ನಬಸವೇಶ.

ವೈರಾಗ್ಯವೆ ಲಿಂಗಪೂಜೆಯಾಗಿ ಅಳವಡಿಸಿಕೊಂಡ ಅಲ್ಲಮೇಶ : ಅಲ್ಲಮನ ವೈರಾಗ್ಯವೆ ಲಿಂಗ ಪೂಜೆ, ಯಾದುದನೇನೆಂಬೆ ? ಆನು ನೀನೆಂಬುದಿಲ್ಲವಾಗಿಹ ಲಿಂಗ ಪೂಜೆ ತಾನೆಂಬುದು ಇಲ್ಲವಾದುದೆ ಲಿಂಗ ಪೂಜೆ ತನ್ನ ತಾನರಿದುದೆ ಲಿಂಗ ಪೂಜೆ, ಇಲ್ಲಾದುದಿಲ್ಲಾಗಿ ಪರವಶವಾದ ಲಿಂಗ ಪೂಜೆ ಅನುವರಿತು ತನುವ ಮರೆದ ಲಿಂಗ ಪೂಜೆ ಭವಕ್ಕಿಂಬುಕೊಡದೆ ತಾ ಭರಿತನಾದುದು ಲಿಂಗ ಪೂಜೆ. ಇದು ಅರಿಯ ಬಾರದ ಘನ ವರಿತು ಅರಿಯದಂತಿದ್ದ ಲಿಂಗ ಪೂಜೆ. ಅರಿಸಿಕೊಂಬ ಅರಿವ ಈ ಉಭಯಂಗಳ ಭಾವ ನಷ್ಟಮಾಡಿ ಅರಿಯಲಿಲ್ಲದ ಅರುವೆ ತಾನಾದುದೆ ವೈರಾಗ್ಯವೆ ಲಿಂಗ ಪೂಜೆಯಾಗಿ ಅಳವಡಿಸಿಕೊಂಡ ಅಲ್ಲಮೇಶ.

ಅನುಭಾವವೆ ಲಿಂಗ ಪೂಜೆಯಾಗಿ ಅಳವಡಿಸಿಕೊಂಡ ಬಾಲಕೇಶ : ಇದು ಅಗಮ್ಯ, ಲಿಂಗವು ಅಗಮ್ಯ , ತಾನು ಆಗಮ್ಯ, ಅನು ಭಾವವು ಅಗಮ್ಯ, ಮೂರೊಂದಾದ ಅನುಭಾವವೆ ಲಿಂಗ ಪೂಜೆಯಾಗಿ ಅಳವಡಿಸಿಕೊಂಡ ಬಾಲಕೇಶ. "ಎನ್ನ ಅನುಭಾವದಗಮ್ಯವೆ, ಎನ್ನ ಅರುವಿನ ವಿಶ್ರಾಮವೆ , ಎನ್ನ ಭಾವದ ಬಯಕೆಯ ಎನ್ನ ನಿಜದ ನಿಲುವೆ, ಎನ್ನ ಪರಿಣಾಮದ ಮೇರೆವೆ ಎನ್ನ ಮನದ ಮಹಿಮನೇ ! ನಿಮ್ಮ ಸುಳಿಹು ಎತ್ತಲಡಿಗಿತ್ತು ಎಲೆ ಲಿಂಗವೆ ನಿಮ್ಮ ನಾಮವೆತ್ತ ನಿರ್ನಾಮವಾಯಿತ್ತು, ಎಲೆ ಪರಮ ಗುರುವೆ, ಕೂಡಲ ಚೆನ ಸಂಗಯ್ಯನಲ್ಲಿ ಉರಿಯುಂಡ ಕರ್ಪೂರದಂತಾದೆಯಲ್ಲ ಪ್ರಭುವೆ " ಓಹೊ ! ಅನುಭಾವ ಮೊದಲಿಲ್ಲದ ಅನುಭಾವ ಖಂಡಾಖಂಡ ಸಂಯೋಗ ವಿಲ್ಲದ ಅಖಂಡಿತನ ಅನುಭಾವ, ಕಲ್ಪಿತ ಪುರುಷರಾದವರಿಗೆ ನಿಲುಕದ ಅನುಭಾವ. ಇದು ಎನ್ನ ಅರುವಿನ ವಿಶ್ರಾಮವು, ಇದು ಒಳ ಹೊರಗಿಲ್ಲದ ಅನುವೆ ನೋಡಾ, ಇದು ಗುರುವಿಂಗೆ ಗುರುವಾದ ಅನುವು, ಲಿಂಗಕ್ಕೆ ಲಿಂಗವಾದ ಅನುವು, ಜಂಗಮಕ್ಕೆ ಜಂಗಮವಾದ ಅನುವು, ತಾನೆ ಗುರು ಲಿಂಗ ಸ್ವಯ ಲಿಂಗ ನಿಜ ಚೈತನ್ಯ ಜಂಗಮವಾದ ಅನುಭಾವವು ಲಿಂಗ ಪೂಜೆಯಾಗಿ ಲಿಂಗವೆಂಬ ನಿಮ್ಮ ನಾಮ ನಿರ್ನಾಮವಾಯಿತ್ತು. ಓಹೋ ! ಎನ್ನ ನಿಜದ ನಿಲುವೆ ಲಿಂಗ ಪೂಜೆಯಾಯಿತ್ತು. ಎನ್ನ ಪರಮಾಮೃತವೆ ಲಿಂಗ ಪೂಜೆಯಿತ್ತು ಎನ್ನ ಮನದ ಮಹಿಮನ್ನ ಲಿಂಗ ಪೂಜೆಯಾಯಿತ್ತು ಈ ಅನುಭಾವವೆ ಲಿಂಗ ಪೂಜೆಯಾಗಿ ಅಳವಡಿಸಿಕೊಂಡ ಬಾಲಕೇಶ.

ಕಪಿಲಸಿದ್ಧ ಮಲ್ಲೇಶ, ವ್ಯೋಮಕೇಶ, ಪಾಶನಾಶನೆಂದು ಸಿದ್ಧರಾಮ ಶಿವಯೋಗೀಶ್ವರನು ಭಕ್ತಿ, ಜ್ಞಾನ, ವೈರಾಗ್ಯ, ಅನುಭಾವವೆ ಲಿಂಗ ಪೂಜೆಯಾಗಿ ತಾವಾರೆಂದು ತಮ್ಮ ನಿಜದಿರುವು ಅಳವಡಿಸಿ ಕೊಂಡುದು ಸ್ತುತಿಸಿಹರು.

ವಚನ - 24

ತನು ಕೊಟ್ಟ ಬಳಿಕ ದೇಹ ವೆಲ್ಲಿಯದೋ ?
ಧನವ ಕೊಟ್ಟ ಬಳಿಕ ಭೋಗಂಗಳೆಲ್ಲಿಹವೋ ?
ಇವೆಲ್ಲವು ಬರಿಯ ಭ್ರಮೆ, ಕೊಟ್ಟೆವೆಂಬವರ ಮುಖವ ನೋಡಲಾಗದು.

ಕೊಟ್ಟು ಭಕ್ತನಾದೆನೆಂಬ ನುಡಿ ಸಮನಿಸದಯ್ಯ ಗುರುವೆ
ನಿಮ್ಮ ಶರಣರ ಬುದ್ದಿಗೆ ಕಪಿಲಸಿದ್ಧ ಮಲ್ಲಿಕಾರ್ಜುನ.

ತಾತ್ಪರ್ಯ : ತನು ಕೊಟ್ಟ ಬಳಿಕ ದೇಹ ವೆಲ್ಲಿಯದೋ ? ಧನವ ಕೊಟ್ಟ ಬಳಿಕ ಭೋಗಂಗಳೆಲ್ಲಿಹವೊ : ಇವೆಲ್ಲ ಬರಿಯ ಭ್ರಮೆ, ಕೊಡು ಕೊಳ್ಳುವ ವ್ಯವಹಾರ ಅರುವಿನ ವ್ಯವಹಾರವಲ್ಲ , ಮರವರುವಿನ ವ್ಯವಹಾರ, ಇದು ಸಸುಜ್ಞಾನದ ರೀತಿ ಯಾಗದ್ದರಿಂದ ಕೊಟ್ಟೆವೆಂಬವರ ಮುಖವ ನೋಡಾಲಾಗದು ಎಂದು ಹೇಳಿಹರು.

ಕೊಟ್ಟೆ ವೆಂಬುವವರು ತನುವೆ ಕಡಲಿ, ಧನವೆ ಕೊಡಲಿ, ಆರಾಗಿ ಕೊಡುವದು ? ಆರಾಗಿ ತೆಗೆದು ಕೊಳ್ಳುವದು ? ಭಕ್ತನಾಗಿ ಕೊಡುವನೆ ? ಗುರುವಾಗಿ ಕೊಡುವನೆ ? ಗುರುವಾಗಿ ತನು ಧನ ಕೊಳ್ಳುವ ನೆಂದಲ್ಲಿ ಗುರುವಿಂಗೆ ತಾನಾರು ಎಂದು ತನ್ನಿಂದ ತನ್ನ ನೋಡಿಹನೆ ? ತಾನು ಚೈತನ್ಯ ದೇವ, ಸಚ್ಚಿದಾನಂದ ಸ್ವರೂಪ, ಅಖಂಡ ಸರ್ವಾತ್ಮ , ಗುರುದೇವ ನಿರುವಲ್ಲಿ, ಗುರುಲಿಂಗ ಶಿಷ್ಯನನ್ನಾಗಿ ಹೇಗೆ ಕಂಡ. ನಿಸ್ಸೀಮವು ಸೀಮಿತ ದೃಷ್ಠಿ ಯುಳ್ಳದ್ದಾಯಿತೇ ? ಶಿಷ್ಯನೆ ಕಾಣದಿದ್ದಲ್ಲಿ ಇವನ ತನುವ ಹೇಗೆ ಕಂಡ ಇವನ ಧನವ ಹೇಗೆ ಕಂಡ, ಕಂಡಲ್ಲಿ ಗುರುಘನವು ಚಿನ್ಮಯ, ಚಿದಾಕಾಶ ಹೇಗಾಗುವುದು, ಸರ್ವಾತ್ಮ ಹೇಗಾಗು ವುದು ? ಆಗಲರಿಯದು.

ಶಿಷ್ಯ ನಾಗಿರಲಿ, ಭಕ್ತನಾಗಿರಲಿ, ತನ್ನ ತನು , ತನ್ನ ಧನ, ಗುರು ಲಿಂಗ ಜಂಗಮ ಲಿಂಗಕೆ ಕೊಡುವನೆಂದಲ್ಲಿ ಗುರುವ ಆರಾಗಿ ಕಂಡ ? ನಾಮ ರೂಪವುಳ್ಳ ಕಾಯಧಾರಿ ಯಾಗಿ ಕಂಡನೆ ? ಕಂಡುದರಿಂದ ಕೊಡ ಕೊಳ್ಳುವ ವ್ಯವಹಾರ ವಾಗಿದೆ . ಗುರು ದೇವನು ಬೋಧಾ ಬೋಧಕ್ಕೂ ಮೀರಿದ ಸಮಪ್ರಕಾಶ, ಸ್ವಯಂ ಜ್ಯೋತಿಗೆ ತನು ಕೊಟ್ಟ ಬಳಿಕ ಅಲ್ಲಿ ದೇಹ ವಿದೆಯಾ ? ಪ್ರಣವಕ್ಕೂ ಪ್ರಣವದರ್ಥವ ತಿಳಿಯುವದಕ್ಕೂ ತನು ಕೊಟ್ಟ ಬಳಿಕ ಅಲ್ಲಿ ದೇಹ ವಿದೆಯಾ ? ಸುಜ್ಞಾನಕ್ಕೆ ಅಜ್ಞಾನ ಉಳಿಯ ಬಹುದೆ ? ರವಿ ಮುಂದೆ ಕತ್ತಲೆ ಉಳಿ ಯಬಹುದೆ ? ವರನಿಗೆ ಕನ್ಯ ಕೊಟ್ಟ ಬಳಿಕ ವಧುವಾಗುವಳಲ್ಲದೆ ಕನ್ಯಯಾಗಿ ಉಳಿಯ ಬಹುದೇ ? ಬೋಧಾ ಬೋಧಾಕ್ಕೂ ಮೀರಿದ ಸಮ ಪ್ರಕಾಶಕ್ಕೆ ಎಂಬ ವರನಿಗೆ ಸರ್ವಾ ರ್ಪಣ ರೂಪಿ ನಿರಹಂಭಾವವುಳ್ಳ ಶಿಷ್ಯರೂಪಿ ಕನ್ಯವ ಕೊಡಲಿ, ಲಿಂಗಾಂಗ ಸಮರಸ ಜ್ಞಾನ ರೂಪಿ ಶರಣಸತಿ ಯಾಗುವಳಲ್ಲದೆ ದೇಹ ಬುದ್ಧಿಯಿಂದುಕ್ತನಾದ ಶಿಷ್ಯನಾಗಿ ಉಳಿಯಲಾರ.

ಕಾಣದ ದೇವರಿಗೆ ದೇಹ ಧನ ಅರ್ಪಿಸಿದವರುಂಟು ? ಗುರುದೇವನಿಗೆ ದೇಹ ವಾಗಲಿ, ಧನ ವಾಗಲಿ ಅರ್ಪಿಸಿದವರುಂಟೆ ? ಮರವಿನಿಂದುಕ್ತರಾಗಿ ಅರ್ಪಿಸಿದುದು ಶರಣರಿಗೆ ಸಮ್ಮತಿ ಯಾಗದು.

ಶರಣರ ಒಪ್ಪಿಗೆಯ ವ್ಯವಹಾರ ಅರುವಿನ ವ್ಯವಹಾರ ಲಿಂಗಾಗ ಸಮರಸ ಜ್ಞಾನ, ವ್ಯವಹಾರ ಇದು ಜ್ಞಾನಾರ್ಜನೆ ; ಗುರು ಕೃಪೆಯಿಂದ ತನ್ನಿಂದ ತನಗೆ ಜನ್ಯವಾದ ವ್ಯವಹಾರ ಅರುವಾಗಿ ಅರುವ ನರಿಯುವ ವ್ಯವಹಾರ.

ಅರುವಿನ ಜನ್ಮ ದೊರೆತಲ್ಲಿ ಗುರುಘನನ ಮಹಾನುಭವಕ್ಕೆ ಅಹಂರೂಪಿ ತನುವ ಅರ್ಪಿಸುವದು ಜಂಗಮ ತೃಪ್ತಿಗಾಗಿ ನಾಮ ಭಾವರೂಪಿ ಧನವರ್ಪಿಸಿ ದಾಸೋಹಂ

ಭಾವ ವುಳ್ಳದ್ದಾದಲ್ಲಿ ಹೃದಯ ಸುಜ್ಞಾನ ವುಳ್ಳದ್ದಾಗಿ ಅರು ಹೃದಯ ವಾಗುವದು.

ಆಗ ತನ್ನಲ್ಲಿ ಅರಿಸಿಕೊಳ್ಳುವ ದೃಶ್ಯ ಭಾವಕ್ಕಿಂಬಿಲ್ಲ, ಇತ್ತ ಅರಿವ ದೃಕ್‌ರೂಪ ನೆಂಬು ದಕ್ಕಿಂಬಿಲ್ಲವಾಗಿ ನಿರಂತರವಾಗಿರುವ ಮಂಗಳಮಯ ಸ್ವಯಂ ಜ್ಯೋತಿ ತಾನೆಂಬುದು ತನ್ನಿಂದ ತನಗೆ ದಿಟ ವಾದುದೆ ಗುರುದೇವನಿಗೆ ತನು ಕೊಟ್ಟದು, ಇದು ತನುಕೊಟ್ಟ ಪರಿ.

ತನ್ನ ನಿಜ ಸುಖಕ್ಕಾಗಿ ಎಲ್ಲವನ್ನು ತೊರೆಯುವಡೆ ಧನವ ಕೊಟ್ಟದು. ಧನ ತನ್ನದೆಂಬ ಅಹಂಭಾವ ಪೂರ್ಣ ಇಲ್ಲ ವಾಗುವದು. ಇದು ಧನ ಕೊಟ್ಟ ಪರಿ, ಇದು ತತ್ವಜ್ಞರ ವ್ಯವಹಾರ, ಗುರುವಿಂಗೆ ತನುವ ಕೊಟ್ಟು ತಾನು ಗುರುವಿಂಗೆ ಗುರುವಾಗಿ ತನ್ನಲ್ಲಿದ್ದ ಗುರು ಲಿಂಗದಿದಯ ಕಂಡವರ ವ್ಯವಹಾರ. ಲಿಂಗಕ್ಕೆ ಮನ ಕೊಟ್ಟು ತಾನು ಲಿಂಗಕ್ಕೆ ಲಿಂಗವಾಗಿ ಸ್ವಯಲಿಂಗವಾದವರ ವ್ಯವಹಾರ ಜಂಗಮಕ್ಕೆ ಧನಕೊಟ್ಟು ತಾನು ಜಂಗಮಕ್ಕೆ ಜಂಗಮವಾಗಿ ನಿರ್ನಾಮಿ ಜಂಗಮವಾದವರ ವ್ಯವಹಾರ ಇದು ಬಸವರಸರ ವ್ಯವಹಾರ, ಮೂರೊಂದಾದ ವ್ಯವಹಾರ.

ಇದು ಬಸವಾದಿ ಪ್ರಮಥರಾಗಿಹ ಶರಣ ಶರಣೆಯರ ವ್ಯವಹಾರ ತಾನಾರೆಂದರಿತ ವ್ಯವಹಾರ ಗುರು-ಶಿಷ್ಯ ರಾದವರ ವ್ಯವಹಾರ , ಭಕ್ತ ಜಂಗಮರಾದವರ ವ್ಯವಹಾರ, ಇದು ಸುಜ್ಞಾನೋದಯ ವಾದವರ ವ್ಯವಹಾರ, ಸುಜ್ಞಾನಕ್ಕೆ ತನು ಕೊಟ್ಟ ಬಳಿಕ ಕೊಟ್ಟುದು ಕೊಂಡುದು ಕಾಣುವುದೆ ? ಆನು ನೀನೆಂಬುದು ಇಲ್ಲವಾಗಿರುವಲ್ಲಿ ತನ್ನದೆಂಬುದಾದರೂ ಇದೆಯೆ ? ಇಲ್ಲಾದುದಿಲ್ಲದಾಗಿರುವಲ್ಲಿ ತನು ವಿದ್ದುದೆಂದು ಧನ ವಿದ್ದುದೆಂದು ? ಇಲ್ಲಾ ದುದಿಲ್ಲಾದುದು ಏಂದಿಪ್ಪದು ? ಇಲ್ಲಾದುದಿಲ್ಲಾದುದೆಂತಿಪ್ಪದು ಎಂಬುದು ಶರಣರ ಬುದ್ಧಿ. ಅಂದು ಇಂದು ಎಂದೆಂದೂ ಇದ್ದವ ತಾನು, ನಿರಂತರ ಮಂಗಳಮಯ ತಾನಾದ. ತನಗೆ ದೇಹವೆಲ್ಲಿ ? ಧನವೆಲ್ಲಿ ? ಇವೆಲ್ಲ ಬರಿಯ ಭ್ರಮವೆಂದು , ಭ್ರಮಾತ್ಮಕ ಬುದ್ಧಿಯನ್ನು ಮಂಡಿಸಿಹರಲ್ಲದೆ ಕೊಟ್ಟೆವೆಂಬವರ ಮುಖವ ನೋಡಲಾಗದು, ಕೊಟ್ಟು ಭಕ್ತ ನಾದೆನೆಂಬ ನುಡಿ ಸಮನಿಸದಯ್ಯ ಗುರುವೆ ನಿಮ್ಮ ಶರಣರ ಬುದ್ಧಿಗೆ ಕಪಿಲಸಿದ್ಧ ಮಲ್ಲಿಕಾರ್ಜುನ.

ನಿಮ್ಮ ಶರಣರ ಬುದ್ದಿ, ಸುಜ್ಞಾನ ಕರಿಗೊಂಡ ಬುದ್ಧಿ . ಅಖಂಡಿತ ಘನ ಪೂರ್ಣ ವಪ್ಪ ತನ್ನಿರುವೆ ಅರುವೆಂದರಿದ ಬುದ್ಧಿ , ಇದು ಅನುಪಮ ಲಿಂಗದಲ್ಲಿ ಲೀಯವಾದ ಬುದ್ಧಿ, ಸುಖದ ಸುಖವಾಗಿಹ ನಿಜದಿರುವಿನಲ್ಲಿ ಲೀಯವಾದ ಬುದ್ಧಿ, ಅದು ಶರಣರ ಬುದ್ಧಿ ಎಂದು ಹೇಳಿಹರು. ಇದು ಕಾರಣ ತನು ಕೊಟ್ಟು ಧನ ಕೊಟ್ಟು ಭಕ್ತನಾದನೆಂಬ ನುಡಿ ಸಮನಿಸ ದಯ್ಯ ಗುರುವೆ ನಿಮ್ಮ ಶರಣರ ಬುದ್ಧಿಗೆ ಕಪಿಲಸಿದ್ಧ ಮಲ್ಲಿಕಾರ್ಜುನ ಎಂದು ಹೇಳಿಹರು.

ವಚನ - 25

ನಿನ್ನ ನೊಲಿಸುವುಡೆ ನಿರಹಂಭಾವವೆ ತೃಪ್ತಿ
ಅನ್ಯಭಾವಂಗಳ ನೊಲ್ಲೆನಯ್ಯ
ಹೊನ್ನು , ಹೆಣ್ಣು , ಮಣ್ಣು ಮುನ್ನವೆ ಸಟೆ ಮಾಡಿ
ದಾಸೋಹದಲ್ಲಿ ಸುಖಿಯಾದೆನಯ್ಯ ಕಪಿಲಸಿದ್ಧಮಲ್ಲಿಕಾರ್ಜುನ .

ತಾತ್ಪರ್ಯ : ನಿನ್ನ ನೊಲಿಸುವುಡೆ ನಿರಹಂಭಾವವೆ ತೃಪ್ತಿ: ಓ ! ದೇವರ ದೇವನೆ

? ಅಹಮಿಲ್ಲದ ಚಿದೀಶ್ವರನೆ ! ನಿನ್ನ ಒಲಿಸುವುಡೆ ಅಹಮಿಲ್ಲದವ ನಾಗುವುದು, ನಿರ ಹಂಭಾವಿ ಯಾಗುವುದು. ತಾನು ಕಲ್ಪಿತನೆಂಬುದು ಎಲ್ಲಿಯ ವರೆಗೆ ಒಪ್ಪಿಕೊಂಡಿಹನು ಅಲ್ಲಿಯ ವರೆಗೆ ಮರವುಳ್ಳವನು, ಅಹಂಕಾರಿಯು. ತತ್ ಸ್ವರೂಪನ ಒಲಿಸಬೇಕೆಂದಲ್ಲಿ ತತ್ವಜ್ಞನಾಗುವದು ತತ್ವದೃಷ್ಠಿಯುಳ್ಳವನಾಗುವದು ತತ್ವವೇತ್ತನಾಗುವದರಿಂದ ಅಹಮತ್ವಕ್ಕಿಂಬಿಲ್ಲ ದಂತಾಗುವದು ಆಗ ತಾನೆ ಅಹಮಿಲ್ಲದ ಚಿದೀಶ್ವರ. ತಾನೆ ಅಚಿಂತ್ಯನೆಂಬುದು ತನ್ನಿಂದ ತನಗೆ ತಿಳಿಯುವದು, ಆಗ ತನು ದೇಹಾದಿಗಳ ಅಹಂಕಾರ ತಾನೆ ನಿರಸನವಾಗುವದು. ಅಲ್ಲ ದೆ ತನ್ನ ಶರೀರ ತನಗೆ ಹೆರವರದಾಗಿ ಕಾಣುವದು ಆಗ ತನ್ನ ಶರೀರದ ಶುಭಾಶುಭ ಕ್ರಿಯೆಯು ತಾನಾಗುವದಿಲ್ಲ ತನ್ನದಾಗುವದಿಲ್ಲ ವಾಣಿಯ ಶುಭಾ ಶುಭ ಕರ್ಮವಾಗಲಿ, ಮನಸ್ಸಿನ ಶುಭಾ ಶುಭ ಚಿಂತನವಾಗಲಿ, ತಾನಾಗುವದಿಲ್ಲ ತನ್ನದಾಗುವದಿಲ್ಲ ಅಂದು, ಇಂದು ಎಂದೆಂದು, ಇದ್ದುದೊಂದೆ ನಿರಂತರವಾಗಿರುವ ಮಂಗಳಮಯ ತತ್ವ. ಅದುವೆ ತಾನು ಎಂಬರಿವು ಉದಯವಾಗಿರುವದರಿಂದ ಸಹಜ ಅಚಿಂತ್ಯ ನಿರುವಲ್ಲಿ ಸುಮ್ಮನೆ ಹೇಳುವದಕ್ಕಾ ದರೂ ನಾಮರೂಪಂಗಳಿಲ್ಲ, ತನಗಿಂತ ಭಿನ್ನವಾಗಿರುವ ತನ್ನೊಂದಿಗೆ ಸೇರಿರುವ ಮತ್ತೊಂದು ವಸ್ತುವಿಲ್ಲವೆಂಬ ಅಖಂಡ ಅರಿವು ತನ್ನೊಳಗೆ ಉದಯವಾಗಿ ನಿರಹಂಭಾವವೆ ತೃಪ್ತಿ ಎಂದು ಹೇಳಿಹರು.

ನಿರಹಂಭಾವದ ಒಡಲು ಇದು ಸಂತರ ಒಡಲು, ಸುಖರೂಪ ಸುಖಿಗಳ ಒಡಲು, ಇದುವೆ ಚೈತನ್ಯದೊಡಲು, ಸಿದ್ಧರ ಸುಜ್ಞಾನಿಗಳ ಒಡಲು, ಸತ್ಯಜ್ಞಾನಾನಂದ ತಾನಾದವರ ಒಡಲು, ತ್ರಿಕಾಂಡ ಮೀರಿದ ಒಡಲುಳ್ಳದ್ದಾಗಿ ನಿರಹಂಭಾವ ತೃಪ್ತಿ ಎಂದು ಹೇಳಿಹರು.

ಅನ್ಯ ಭಾವಂಗಳನೊಲ್ಲೆನಯ್ಯಾ : ಅಲ್ಲಿ ನಿರಂಕುಶ ತೃಪ್ತಿಯ ನಿಲುವುಳ್ಳದ್ದಾದುದ ರಿಂದ ಆವಾವ ಭಾವಕ್ಕಿಂಬಿಲ್ಲವಾಗಿ ಅನ್ಯ ಭಾವಂಗಳನೊಲ್ಲೆನಯ್ಯ ಎಂದು ಶಿದ್ಧರಾಮ ಶಿವ ಯೋಗಿಗಳು ಬಿತ್ತರಿಸಿಹರು. ಏಕೆಂದರೆ ಭಾವಕ್ಕಗಮ್ಯವಾಗಿಹ ತನ್ನಿರುವರಿತು ಭಾವಂಗಳೆಂಬವು ಬರಿಯ ಭ್ರಮೆ, ತಾನು ಭರಿತ ಭಾವಿಯಾದ ಮೇಲೆ ಬಿಡಿಭಾವಂಗಳ ತಾಕಲಾಟವಿಲ್ಲ, ಪೂರ್ಣಭಾವಿಗೆ ಅನ್ಯಭಾವಂಗಳ ಹಂಗು ಇಲ್ಲ, ''ಸೋಹಂ ನೀನೆ ಅಯ್ಯ, ಕೋಹಂ ನೀನೆ ಅಯ್ಯ, ತತ್ವ ತೂರ್ಯಾರ್ಥವು ನೀನೆ ಅಯ್ಯ, ಆನೆಂಬುದುಂಟೆ ? ಗುರುವಿನ ಕೈಯಲ್ಲಿ ಸತ್ತು ಹುಟ್ಟಿದ ಬಳಿಕ ಆನು ನೀನೆಂಬ ಸಂದಳಿದೆ ಕಪಿಲಸಿದ್ಧ ಮಲ್ಲಿಕಾರ್ಜುನ''

ಹೊನ್ನು, ಹೆಣ್ಣು, ಮಣ್ಣು ಮುನ್ನವೆ ಸಟೆಮಾಡಿ ದಾಸೋಹದಲ್ಲಿ ಸುಖಿಯಾದೆನಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನ : ಅನ್ಯ ಭಾವಂಗಳು ಬೇಡಾದವುಗಳಾಗ ಬೇಕಾದಲ್ಲಿ ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆ ಅರುವೆಂದರಿದು ಹೊನ್ನು, ಹೆಣ್ಣು, ಮಣ್ಣು ಮುನ್ನವೆ ಸಟೆ ಮಾಡಿ ದಾಸೋಹದಲ್ಲಿ ಸುಖಿಯಾಗುವನು.

ಸುಖವು ಎಲ್ಲಿದೆ ? ದಾಸೋಹದಲ್ಲಿ, ದಾಸೋಹತ್ವ ಎಲ್ಲಿ ಅದೆ ಅಹಂ ಭಾವ ವಳಿದವರಲ್ಲಿ ದಾಸೋಹವಿದೆ. ದಾಸೋಹ ಮೂರ್ತಿಗಳು ನಿರ್ದೇಹಿಗಳು. ಆವಾವುದರ ಅಹಮಿಲ್ಲದವರು. ಕರ್ಮದಭಿಮಾನಿಗಳಲ್ಲ, ಉಪಾಸ್ಯ, ಉಪಾಸಕದ ಅಭಿಮಾನಿಗಳಲ್ಲ, ಚಿದಹಮ್ಮುಳ್ಳವರು ಅಲ್ಲ ಈ ಮೂರು ಕಾಂಡದ ಅಹಂಮಳಿದುಳಿದವರು, ಚಿದಾಕಾಶವೆ ತಾವಾದ ನಿರ್ದೇಹಿಗಳು ಎಲ್ಲಿ ನೋಡಿದಡಲ್ಲಲ್ಲಿ ತನ್ನನ್ನೆ ಕಂಡವರು, ಚಿದ್ಘನವ ಕಂಡವರು, ತೆರಹಿಲ್ಲದ ಲಿಂಗ ಭರಿತದಲ್ಲಿ ಸಮರಸವಾದವರು, ದಾಸೋಹಿಗಳು. ಹೆಣ್ಣೆಂಬ ತನು ಮನ,

ಮಣ್ಣೆಂಬ ತನು, ಭಾವವೆಂಬ ಧನ ಇವುಗಳ ಮುನ್ನವೆ ಸಟೆಮಾಡಿ ಸಂಕಲ್ಪ ವಿಕಲ್ಪ ರೂಪ ಸುಳ್ಳಾಗಿ ಮನವು ಘನಲಿಂಗವಾಗಿಹುದು, ತನುವದು ಗುರುಲಿಂಗದುದುಯದಿರುವು ಪ್ರಜ್ವಲಿಸಿ, ತನುವು ಸುಳ್ಳಾಗಿಹುದು ಭಾವದಲ್ಲಿ ತೆರಹಿಲ್ಲದ ಲಿಂಗ ಭರಿತದಿರುವು ದರ್ಶನವಾಗಿ ಭಾವನೆ ಸುಳ್ಳಾಗಿಹವು, ಇದು ಕಾರಣ ಮುನ್ನವೆ ಸಟೆಮಾಡಿ ದಾಸೋಹದಲ್ಲಿ ಸುಖವಾಗಿಹೆನೆಂದು ಸುಖವ ಕಂಡು ಶಿವಯೋಗಿ ಸಿದ್ಧರಾಮ ದೇವರು ಕೊಟ್ಟು ಭಕ್ತರಾದೆವೆಂದು ಹಿರಿಯತನದ ಕೇಡು ಎಂದು ಎಚ್ಚರಿಸಿಹರು. ತನು ಆರದು ? ಮನ ಆರದು ? ಧನ ಆರದು ಆರ ಒಡವೆ ಆರ ಪದಾರ್ಥ ಆರಾಗಿ ಕೊಡುವದು ಕೊಟ್ಟೆನೆಂಬುದು ಮರುವಿನ ಕಾರ್ಯ.

ವಚನ - 26

ತನುವ ಕೊಡುವುಡೆ ಗುರುವಿನದು, ಮನವ ಕೊಡುವುಡೆ ಲಿಂಗದ್ದದು,
ಧನವ ಕೊಡುವಡೆ ಜಂಗಮದ್ದದು ಅವರ ಪದಾರ್ಥ ಅವರಿಗೆ ಕೊಟ್ಟು ಭಕ್ತನಾದೆ
ನೆಂಬವರ ಹಿರಿಯತನದ ಕೇಡು ನೋಡಯ್ಯ ಕಪಿಲಸಿದ್ದ ಮಲ್ಲಿಕಾರ್ಜುನ.

ತಾತ್ಪರ್ಯ: ತನುವ ಕೊಡುವುಡೆ ಗುರುವಿನದು : ಎಂದು ತಿಳಿದ ಭಕ್ತರು ಶಿಕ್ಕುವದು ದುರ್ಲಭ. ನಾವು ನೀವು, ಭಕ್ತರೆಂದು ಹೇಳಿಕೊಳ್ಳುವವರೆಲ್ಲರೂ ಮಾತಿನ ಮಲ್ಲರು. ಹುಸಿ ತನು ಇವರೆಂತುಕೊಟ್ಟರು ? ಅವರೆಂತು ಕೊಂಡರು ? ಇದು ಕಾರಣ ಮಾತಿನಲ್ಲಿ ತನು, ಮನ, ಧನ ಸಮರ್ಪಿಸಿ ಭಕ್ತರಾದವರು ಸಿಕ್ಕುತ್ತಾರೆ.

ಗುರುಗಳೆ ಆಗಲಿ, ಜಂಗಮಯ್ಯಗಳೆ ಆಗಲಿ, ಶಿಷ್ಯರಾಗಲಿ, ಭಕ್ತರಾಗಲಿ, ಸಿದ್ದರಾಮ ಶಿವಯೋಗಿಗಳ ಪ್ರಸಾದವಾಣಿ ಬಿತ್ತರಿಸಿದಂತೆ ತನುವ ಕೊಡುವುಡೆ ಗುರುವಿನದು. ಪ್ರಭುದೇವ, ತನು, ಮನ, ಧನವೆಂಬುವು ಗುಹೇಶ್ವರಲಿಂಗದ ಆಸ್ತಿ. ಇವು ಅರುಹಿನ ಒಡವೆ ಎಂಬ ಭಾವ, ಶ್ರದ್ಧೆ, ನಿಷ್ಠೆ ಇದ್ದವರು ಸಿಕ್ಕುವದು ವಿರಳ. ತನುವ ಕೊಡುವಡೆ ಗುರುವಿನ ತನುವಾದುದರಿಂದ ಚೈತನ್ಯ ತನು ಅರುವಿನತನು. ಅರುವ ಒಳ ಹೊರಗೆನ್ನದೆ ತುಂಬಿದುದು. ಕರ್ಮೇಂದ್ರಿಯಂಗಳಲ್ಲಿ ತುಂಬಿದುದು. ಜ್ಞಾನೇಂದ್ರಿ, ಪ್ರಾಣಾದಿಗಳಲ್ಲಿ ತುಂಬಿದುದು ಕಾರಣ ತೆರಹಿಲ್ಲದ ಲಿಂಗ ಭರಿತವೆಂದು ಸರ್ವಾಂಗಲಿಂಗವೆಂದು ಹೇಳಿಹರು.

ಇಂದ್ರಿಯಂಗಳಲ್ಲಿ ಲಿಂಗಭರಿತವಾದುದರಿಂದ ಇವು ಅತೀಂದ್ರಿಗಳು. ಪ್ರಾಣದಲ್ಲಿ ಪ್ರಾಣದ ಪ್ರಾಣವಾಗಿ ಲಿಂಗಭರಿತವಾದುದರಿಂದ ಪ್ರಾಣಲಿಂಗವು. ಅದು ಸಹಜ ಇರುವಿಕೆಯಾಗಿಹುದು. ಕಾರಣ ಇದು ಅರುವಿನ ತನು, ಅರುವೆ ಪ್ರಜ್ವಲವಾಗಿ ಬೆಳಗುಳ್ಳದ್ದಾಗಿರುವುದರಿಂದ ಗುರುದೇವನು ಅದು ಸ್ವರೂಪನು ಸ್ವಯಂಜ್ಯೋತಿಯಾದುದರಿಂದ ಈ ತನುವಾದರೂ ಅರುವಿನದು ಅರು ಸ್ವರೂಪವಾದುದರಿಂದ ಗುರುವಿನ ತನುವೆಂದು ಹೇಳಿಹರು.

ಮನ ಕೊಡುವುಡೆ ಲಿಂಗದದು : ಲಿಂಗವು ಕಲ್ಪನಾ ರಹಿತವು, ಮನವು ಅಕಲ್ಪಿತ ಘನವು. ಇಲ್ಲದುದ ಕಲ್ಪಿಸಿ ಸಂಕಲ್ಪವಾಗಿ, ಇದ್ದುದ ನರಿಯದಾಗಿ ವಿಕಲ್ಪವೆನಿಸಿ ಮನವೆಂದು ಹೇಳಿಸಿಕೊಂಡಿತು. ಇದ್ದ ಘನವರಿಯ ಹೋಗಿ ಮನ ತನ್ನ ಸಂಕಲ್ಪ ವಿಕಲ್ಪದಿಂದ ದೂರಾಗಿ ಲಿಂಗವೆ ತಾನಾಗಿ ಪ್ರಜ್ವಲಿಸಿ ಆಗ ಮನವದು ಲಿಂಗ ಎಂಬುದು ತನ್ನಿಂದ ತನಗೆ ವಿದಿತವಾ

ಯಿತ್ತು.

ಧನವ ಕೊಡುವಡೆ ಜಂಗಮವದು : ಜಂಗಮವೆಂಬುದು ನಿರ್ಭಾವ, ಜಂಗಮ-ಲಿಂಗ ತಾನು ಒಂದಾದ ಜಮುಗಮ ಎರಡು ಮಾಡಬಹುದೆ? ಇಲ್ಲಿ ಧನ, ಜಂಗಮವೆಂದು ಎರಡು ಮಾಡಬಹುದೆ? ಭಾವಕ್ಕೆ ಮೀರಿದ ಘನವೆ. ನರ್ಭಾವ ಜಂಗಮ. ಧನವೆಂಬುದು ಭಾವಕ್ಕೆ ಮೀರಿದ ಘನದ ವಸ್ತುವಿನದು. ಧನದಲ್ಲಿ ಅಧಿಕಾರಭಾವದ ಸುಳುಹು ಇಲ್ಲ. ಧನವು ಸಕಲರದು ಎಂದಲ್ಲಿಯೂ ತಾನು ಇದ್ದಂತೆ ಇದೆ. ಒಬ್ಬನದು ಎಂದಲ್ಲಿಯೂ ಇದ್ದಂತೆ ಇದೆ. ದೇವನದು ಎಂದಲ್ಲಿಯೂ ಇದ್ದಂತೆ ಇದೆ. ಗುರುಗಳದೆನ್ನಲಿ, ಶಿಷ್ಯರದೆನ್ನಲಿ, ಭಕ್ತರದೆನ್ನಲಿ ಜಂಗಮಯ್ಯನದೆನ್ನಲಿ, ಗೃಹಸ್ಥರದೆನ್ನಲಿ, ತಾನು ಮಾತ್ರ ಇದ್ದಂತೆ ಇರುವುದರಿಂದ ಇದು ಭಾವಕ್ಕೆ ಮೀರಿದ ಘನ ವಸ್ತುವಿನದು ಎಂದು ಹೇಳಬಹುದು.

ಧನವು ನಿರಾಲಂಬವು ಅದು ಆರ ಹತ್ತರ ಇದ್ದರೂ. ಅವರ ಅವಲಂಬನ ಅದಕ್ಕಿಲ್ಲ. ಅದು ನಿಸ್ಸಂಗವಾಗಿ ಇದೆ. ಧನವು ತಾನಿದ್ದಂತೆ ಇದೆ. ಅದರ ಮೇಲೆ ಆರನಾಮವು ಇಡಲು ಬರುವಂತಿಲ್ಲ. ಅದು ಒಬ್ಬರ ಹತ್ತಿರ ಇರುವುದಿಲ್ಲವೆಂದಲ್ಲಿ ಅದು ಇಂಥಹರದೆ ಎಂದು ಬರೆಯಲು ಬಾರದ್ದರಿಂದ ನಿರ್ಲಿಖಿತ ಜಂಗಮವದು ಎಂದು ಹೇಳಿಹರು.

ಜಂಗಮದ ಧನ, ನಾಮಧಾರಿಗಳಿಗೆ ಅದರ ಘನತ್ವ ತಿಳಿಯದು ಭಾವಕ್ಕಗಮ್ಯವಾದ ಘನವಸ್ತು. ಇದು ಸೀಮಾತೀತ ನಿಲವುಳ್ಳದು. ಇಲ್ಲಿ ವಿಭಾಗಕ್ಕಿಂಬಲ್ಲವಾದುದರಿಂದ ಧನವೆಂಬುದು ಜಂಗಮದು ಎಂದು ಹೇಳಿದರು.

ಅವರ ಪದಾರ್ಥ ಅವರಿಗೆ ಕೊಟ್ಟು ಭಕ್ತನಾದೆನೆಂಬುದು ಹಿರಿಯತನದ ಕೇಡು ನೋಡಯ್ಯ, ತನು, ಮನ, ಧನವೆಂಬುವು ಗುರು, ಲಿಂಗ, ಜಂಗಮದವು. ಇದು ಚೈತನ್ಯದ ಆಸ್ತಿ. ಸಚ್ಚಿದಾನಂದದ ಆಸ್ತಿ ಸುಖರೂಪ ಸುಖದ ಆಸ್ತಿ ತನು, ಮನ, ಧನವಿಲ್ಲದಿದ್ದರೆ ಗುರು ಘನವ ತಿಳಿಯಲು ಬರದು. ಲಿಂಗದ ಘನವ ತಿಳಿಯಲು ಬರದು, ಜಂಗಮದ ಘನವ ತಿಳಿಯಲು ಬರದು, ತನು, ಮನ, ಧನಗಳಾಗಿ ತೋರಿದುದರಿಂದ ಗುರು, ಲಿಂಗ, ಜಂಗಮ ತತ್ವ ತಿಳಿಯಲು ಪ್ರಧಾನವಾಗಿ ತನು, ಗುರುವಿನದು, ಮನ ಲಿಂಗದದು, ಧನ ಜಂಗಮದದು ಎಂದು ಹೇಳಲು ಬಂದಿಹುದು. ಇದು ಕಾರಣ ಕೊಟ್ಟು ಭಕ್ತನಾದೆನೆಂಬುದು ಹಿರಿಯತದ ಕೇಡು ನೋಡಯ್ಯ ಎಂದು ಹೇಳಿದರು.

ವಚನ – 27

ನರಜನ್ಮವ ತೊರೆದು ಹರಜನ್ಮ ಮಾಡಿದ ಗುರುವೆ
ಭವ ಬಂಧನವ ಬಿಡಿಸಿ ಪರಮ ಸುಖವ ತೋರಿದ ಗುರುವೆ !
ಭವಿ ಎಂಬುದು ತೊಡೆದು ಭಕ್ತನೆಂದೆನಿಸಿದ ಗುರುವೆ !
ಚೆನ್ನಮಲ್ಲಿಕಾರ್ಜುನನ ತಂದು ಕೈ ವಶಕ್ಕೆ ಕೊಟ್ಟ ಗುರುವೆ
ನಮೋ ನಮೋ ಎನುತಿರ್ದೆನು''

ತಾತ್ಪರ್ಯ : ಅಕ್ಕ ಮಹಾದೇವಿಯು ತನಗೆ ಲಭ್ಯವಾದ ಜ್ಞಾನೈಶ್ವರ್ಯ ಜ್ಞಾನಾನಂದ ರೂಪಿ ಜ್ಞಾನ ಗಂಗೆಯ ವರ್ಣಿಸುತ್ತಿದ್ದಾಳೆ. ನರಜನ್ಮ ತೊಡೆದು ಹರಜನ್ಮ ಮಾಡಿದಗುರುವೆ :

ಗುರುದೇವ ಜನ್ಮ ಬದಲು ಮಾಡುವ ದೇವರ ದೇವ ,ಭ್ರಮಾಮದಿಗಳ ಮಾಯಿಕ. ಸೃಷ್ಟಿಯು ಕೆಡಿಸಿ ನಿರ್ಮಾಯ ಸೃಷ್ಟಿಸುವ ಮಾಯಾ ಕೋಲಾಹಲ. ಶ್ರೀಗುರು ಜನ್ಮಂಗಳ ಕೆಡಿಸಿ ಹರಜನ್ಮ ಮಾಡುವ ಘನವಂತ. ಬ್ರಹ್ಮಾದಿಗಳು ಶರೀರ ಬದಲು ಮಾಡುವ ಅಧಿಕಾರಿಗಳಾಗಿದ್ದರೆ ಈ ಮಹಾಂತನು ನರಜನ್ಮವನ್ನೆ ಕೆಡಿಸಿ ತೆರಹಿಲ್ಲದ ಭವ ನುಡಿಗೆಡೆ ಗೊಡದ ಮಹಾಘನವ ಮಾಡುವ ಮಹಾಮಹಿಮ.

ಈ ಮಹಾಂತನ ಕಾರುಣ್ಯ ನರಜನ್ಮವ ತೊಡೆದು ಹರಜನ್ಮ ಮಾಡುವ ಕಾರುಣ್ಯ. ಅನಾತ್ಮ ಭಾವಂಗಳ ಕೆಡಿಸಿ ಭರಿತ ಭಾವ ಮಾಡುವ ಕಾರುಣ್ಯ. ಭವ ಬಂಧನ ಬಿಡಿಸಿ ಪರಮ ಸುಖವ ತೋರಿದ ಗುರುವೆ : ನರ ಜನ್ಮ ಆವುದು ? ಹರಜನ್ಮ ಆವುದು ?

ಜನನ ಮರಣಂಗಳೆಂಬ ಭವ ತಾಪದಲ್ಲಿ ಸಿಕ್ಕು ನರಳುವದೆ ನರಜನ್ಮ . ನರಕ ರೂಪ ತ್ರಿವಿಧ ಮಲಮಯ ಶರೀರದಭಿಮಾನಿ ಯಾಗಿ ನಾನು ನನ್ನದೆನ್ನುವದೆ ನರಜನ್ಮ. ನಿತ್ಯಾ ನಿತ್ಯಾ ವಿಚಾರ ಶೂನ್ಯವಾದುದೆ ನರಜನ್ಮ .ಅನಿತ್ಯವಾದ ವಿಷಯೋಪ ಭೋಗ ಸುಖದ ನಿತ್ಯವೆಂದು ತಿಳಿದು ರಾಗ ದ್ವೇಷ ವುಳ್ಳದ್ದಾಗಿಹುದೆ ನರಜನ್ಮ ,ವಿಷಯಾಸಕ್ತಿ ಜನ್ಮ , ಇಂದ್ರಿಯಂಗಳ ಅಧೀನವಾದ ಜನ್ಮ ,ಇದುವೆ 84 ಲಕ್ಷ ಜನ್ಮಂಗಳಿಗೆ ಕಾರಣವಾದ ಅಜ್ಞಾನಿ ಜನ್ಮ , ಮರುವಿನ ಜನ್ಮ, ನರ ಜನ್ಮವ ತೊಡೆದು ಹರಜನ್ಮ ಮಾಡಿದ ಗುರುವೆ ? ಶ್ರೀಗುರು ನರ ಜನ್ಮವ ತೊಡೆಯಲು ದೇಹ ದಂಡಿಸಲಿಲ್ಲ , ನೊಂದಿಸಲಿಲ್ಲ , ನಿಂದಿಸಲಿಲ್ಲ , ವಧೆ ಮಾಡಲಿಲ್ಲ , ದೇಹ ಬುದ್ಧಿ , ದೇಹ ಭಾವ , ದೇಹಾಭಿಮಾನ, ದೇಹದ ಮೋಹ ನಾಶ ಮಾಡುದೆ ಬಿಡಲಿಲ್ಲ ; ನಾಶ ತಾ ಮಾಡಲಿಲ್ಲ .

ನಮ್ಮ ಕೈಯಿಂದ, ನಮ್ಮ ಅರುವಿನಿಂದ ನಮ್ಮ ಅಜ್ಞಾನ ; ಅಜ್ಞಾನದ ಕಾರ್ಯವಾದ ಅನಾತ್ಮಭಾವ ನಾಶ ಮಾಡಿಸಿದ. ಇದೆಂಥ ಲೀಲೆ, ಇದೆಂಥ ವಿನೋದ, ಇದೆಂಥ ಯುದ್ಧ , ಈ ಮಹಾಂತನ ಶಸ್ತ್ರಂಗಳು ಬೇರೆ ! ಆತ್ಮ ನಿಜವರಿದ ಮಹಾನುಭಾವವೆ ಈ ಮಹಾಂತನ ಶಸ್ತ್ರ ಲಿಂಗಾಗ ಸಮರಸ ಜ್ಞಾನದನುವೆ ಶಸ್ತ್ರ ! ಅಂಗವೆ ಲಿಂಗ , ಲಿಂಗವೆ ಅಂಗ ವೆಂದರಿತ ಅನುವೆ ಶಸ್ತ್ರ , ಗುರುಕಾರುಣ್ಯವೆ ಶಸ್ತ್ರ . ಈ ಶಸ್ತ್ರದಿಂದ ನರಜನ್ಮವ ತೊಡೆದ ಶಬ್ದ ಮುಗ್ಧನಾಗಿ ಹರಜನ್ಮ ಮಾಡಿದ. ಇದೆಂಥ ಕರುಣಾಮೃತ ಜ್ಞಾನಾಮೃತ.

ಭೇದ ಬುದ್ಧಿ, ಭೇದ ಜ್ಞಾನ, ಭೇದ ಭಾವ, ಇಲ್ಲದವುಗಳೆಂದು ಇಲ್ಲ ಮಾಡಿದ. ಇಲ್ಲದ ಮರವು ಇಲ್ಲಮಾಡಿದುದು, ಇಲ್ಲದ ಜೀವ ಬ್ರಹ್ಮರ ಭೇದ ಇಲ್ಲ ಮಾಡಿದುದೆ ನರಜನ್ಮ ತೊಡೆದುದು, ಇದ್ದ ಅರುವಿಂಗರುವಾದುದು ಇದ್ದಂತೆ ಅರುವರಿಯುವ ರಹಸ್ಯ ತಿಳಿಸಿದುದೆ ಹರಜನ್ಮ ಮಾಡಿದ ಪರಿ, ಇಲ್ಲದ ನಾಮ ರೂಪಂಗಳ ಇಲ್ಲ ಮಾಡಿದುದು ನರಜನ್ಮ ತೊಡೆದ ಪರಿ, ಇದ್ದ ಅಸ್ತಿ ಭಾತಿ ಎಂಬ ಎನ್ನ ಸತ್ಯವ ಇದ್ದಕ್ಕಿದ್ದಂತೆ ಅರಿಯುವ ರಹಸ್ಯ ತಿಳಿಸಿದುದೆ ಹರಜನ್ಮ ಮಾಡಿದ ಪರಿ.

ಭವ ಬಂಧನವ ಬಿಡಿಸಿ ಪರಮ ಸುಖವ ತೋರಿದ ಗುರುವೆ ! ತಾನಾಗದ್ದು ತಾನೆಂದು, ತನಗಿಲ್ಲುದುದು ತನಗುಂಟು ಮಾಡಿಕೊಂಡುದು ಅದುವೆ ಭವ, ಅದುವೆ ಬಂಧನ ವಾಗಿದೆ. ಕಲ್ಪನಾರಹಿತನಾದ ತಾನು ಆಣವ ಮಲ, ಮಾಯಾಮಲ, ಕಾರ್ಮಿಕ ಮಲ, ಮಲತ್ರಯಂಗಳು ತಾನಾಗದ್ದು ಗುರುವೆ ತಾನೆಂದು. ಸ್ಥೂಲ ಸೂಕ್ಷ್ಮಕಾರಣ

ಮಹಾಕಾರಣ ಶರೀರ ತಾನಾಗದ್ದು ತಾನೆಂದು. ನಾಲ್ಕು ಶರೀರಗಳು ನಾಲ್ಕು ಅವಸ್ಥೆ ವಿಶ್ವ, ತೈಜಸ, ಪ್ರಾಜ್ಞ ತೂರ್ಯ ನಾಲ್ಕು ಜೀವರುಗಳು ತಾನಾಗದ್ದು ತಾನೆಂದು ನಾಲ್ಕು ಶರೀರಗಳ ಶುಭಾ ಶುಭ ಅವಸ್ಥೆ , ಬಂಧ ಮೋಕ್ಷ ವೆಂಬ ಆವಸ್ಥೆ ಮರವು, ಅರಿವು ಅಜ್ಞಾನ, ಜ್ಞಾನ ನಾ ನೀನೆಂಬ ತೋರಿಕೆ, ಗುರು ಶಿಷ್ಯರಾಗಿರುವ ತೋರಿಕೆ ಗುರು ಲಿಂಗ ಜಂಗಮ ಪ್ರಸಾದವಾಗಿ ತೋರುವ ತೋರಿಕೆ ತನಗಿಲ್ಲದುದು ತನಗುಂಟುಮಾಡಿಕೊಂಡು ನರಳುವದೆ ಭವ ಬಂಧನ ವಾಗಿದೆ.

''ತನು ವಿಡಿದ ಪ್ರಕೃತಿ, ಪ್ರಕೃತಿ ವಿಡಿದ ಪ್ರಾಣ, ಪ್ರಾಣ ವಿಡಿದ ಜ್ಞಾನ, ಜ್ಞಾನ ವಿಡಿದ ಗುರು, ಲಿಂಗ ಜಂಗಮ ಪ್ರಸಾದವ ವಿಡಿದು ನಿರ್ಗುಣವ ತೋರುವವರ ಮುಖವ ತೋರುದಿರು ಕೂಡಲ ಸಂಗಮದೇವಾ'' ಕಲ್ಪಿತ ಪುರುಷನ ಕಾರಣವೆ ಆಗಲಿ, ಕಾರ್ಯವೆ ಆಗಲಿ, ಅವುಗಳಿಗವಕಾಶವಿಲ್ಲದ ಕಲ್ಪನಾ ರಹಿತವಾದ ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆ ನಿಜವೆಂದು ತೋರಿ ಭವ ಬಂಧನವ ಬಿಡಿಸಿ, ಪರಮ ಸುಖವ ತೋರಿದ ಗುರುವೆ. ಇದಲ್ಲದೆ ಇಲ್ಲದ ಮಾಯಾರೂಪ ಪಿಂಡಾಂಡ ಬ್ರಹ್ಮಾಂಡದ ತೋರಿಕೆಯಾಗಲಿ, ಇಲ್ಲದ ಶಬ್ದದ ತೋರಿಕೆ ಇದಲ್ಲದೆ ತತ್ವ ತಾತ್ವಿಕದ ಶಬ್ದಾಡಂಬರದ ತೋರಿಕೆಯಾಗಲಿ ತಾನಾಲ್ಲ, ಇವುಗಳ ಸಂಬಂಧದ ತೋರಿಕೆಯು ತನಗಿಲ್ಲವೆಂದು, ತೋರಬಾರದ ಘನವಾಗಿಹ ನಿನ್ನ ನಿಜದಿರುವು ನಿರಂತರ ಮಂಗಳಮಯ ಪರಮಸತ್ಯವೆಂದು, ತನ್ನರವು ತನ್ನಿಂದ ತನಗೆ ವೇದ್ಯವಾಗುವಂತೆ ಕೃಪೆ ಗೈದುದೆ ಭವ ಬಂಧನ ಬಿಡಿಸಿ ಪರಮ ಸುಖವ ತೋರಿದ ಗುರುವೆ ಎಂದು ಹೇಳಿಹರು.

ಭವಿ ಎಂಬುದು ತೊಡೆದು ಭಕ್ತನೆಂದೆನಿಸಿದ ಗುರುವೆ : ಭವಿ ಎಂಬುದು ಪೂಜಾ ಲಿಂಗ ಬಿಟ್ಟವರು, ಅದನ್ನು ಕೊರಳಲ್ಲಿ ಹಾಕಿಕೊಳ್ಳದವರು, ಭವಿಯೆಂಬ ತಪ್ಪು ತಿಳಿವಳಿಕೆಯ ತನ್ನ ಸುಜ್ಞಾನರೂಪಿ ಕಾರುಣ್ಯವ ಅಂಗದ ಮೇಲೆ ಲಿಂಗ ಸಾಹಿತ್ಯವಮಾಡಿ ಸರ್ವಾಂಗ ಲಿಂಗ ಮಾಡಿ ತೋರಿದ. ಪ್ರಾಣದ ಮೇಲೆ ಲಿಂಗ ಸಾಹಿತ್ಯವಮಾಡಿ ಪ್ರಾಣ ಲಿಂಗವ ತೋರಿದ. ಮನದ ಮೇಲೆ ಲಿಂಗ ಸಾಹಿತ್ಯಮಾಡಿ ಘನ ಮನ ಮಾಡಿ ತೋರಿ ತನು ಭವಿ ಎಂಬುದು ತೊಡೆದ. ಇಂದ್ರಿಯಂಗಳು ಭವಿ ಎಂಬುದು ತೊಡೆದ. ಇತ್ತ ಪ್ರಾಣ ಮನ ಭವಿ ಎಂಬುದು ತೊಡೆದು ಖಂಡಾ ಖಂಡಾ ಸಂಯೋಗವಿಲ್ಲದ ಅಖಂಡಿತನ ನಿಲುವು ಎನ್ನಲ್ಲಿ ತೋರಿ, ತೋರ ಬಾರದ ಘನ ದಿರುವೆ ಎನ್ನಯ ಇರುವಾದುದರಿಂದ ಭವಿ ಎಂಬುದು ಭಕ್ತ ನೆಂದೆನಿ ಸಿದ ಗುರುವೆ ಎಂದು ಹೇಳಿಹರು.

ಚೆನ್ನಮಲ್ಲಿಕಾರ್ಜುನ ತಂದು ಕೈವಶಕೆ ಕೊಟ್ಟ ಗುರುವೆ ನಮೋ ನಮೋ ಎನುತಿರ್ದೆನು ಚೆನ್ನಮಲ್ಲಿಕಾರ್ಜುನನೆಂದರೆ ಒಂದು ವ್ಯಕ್ತಿಯಲ್ಲ ಚಾರಿತ್ರ ಪುರುಷನಲ್ಲ , ಒಮ್ಮೆ ತೋರಿ ಒಮ್ಮೆ ಇಲ್ಲವಾಗುವ ಮಾಯಿಕನಲ್ಲ. ಇದು ತೋರಬಾರದ ಘನ, ಜ್ಞಾನ ಸ್ವರೂಪ, ಇದು ಉಪಮೆಗೆ ಮೀರಿದ ಅರಿವು, ಭಾವಕ್ಕಿಂಬುಕೊಡದ ಅರಿವು, ಶಬ್ದ ಮೀಸಲವಾಗಿಹ ಅರಿವು ಧ್ವನಿಯ ಮರೆಯಲ್ಲಿ ತೋರಿದ ಅರಿವು ನುಡಿಗೆಡೆ ಗೊಡದ ಅರಿವು, ಶಬ್ದಮುಗ್ದವಾಗಿಹ ಕಾರುಣ್ಯ. ಈ ಕಾರುಣ್ಯ ಚೆನ್ನ ಮಲ್ಲಿಕಾರ್ಜುನನ ತಂದು ಕೈವಶಕ್ಕೆ ಕೊಟ್ಟ ಗುರು ಕಾರುಣ್ಯ ಇದನೆಂತು ಉಪಮಿಸುವದು, ಇದು ಅಂದು ಇಂದು ಎಂದೆಂದೂ ಇದ್ದಂತಿದ್ದ ನಿಜವೆ ಲಿಂಗದಿರುವು ನನ್ನಯ ಇರುವು ನಿನ್ನಯ ಇರುವು ನಿಸ್ಸೀಮ ಇರುವು, ತಾನೆ ತಾನಾದ ಇರುವು, ಇದು ಸುಖದ ಸುಖರೂಪು. ಇದು ಚೆನ್ನಮಲ್ಲಿಕಾರ್ಜುನ ತಾನು

ಒಂದಾದ ನಿಲವು. ನೆಲೆಯುಳ್ಳದಲ್ಲ, ನೆಲೆಯಿಲ್ಲದ ನಿಲುವು. ಅದು ಅರುವಿಂಗರುವಾದ ಅರಿವು. ಮಹದರಿವು. ಶ್ರೀಗುರುವಿನಿಂದ ಲಭ್ಯವಾದುದುರಿಂದ ನಮೋ ನಮೋ ಎಂದು ಕೊಂಡಾಡಿದುದು. ಗುರುವೆ ಘನ ವಾದುದು ಆ ಮಹಾಂತನ ಕರುಣಾಮಯದ ಕುರುಹೆ ಕೈವಲ್ಯವಾಗಿದೆ.

ಈ ಲಿಂಗವೆಂಬ ಕುರುಹು ಇದು ಅನುಪಮ ಜ್ಞಾನ ನಿಧಿ, ಅಪರಿಮಿತ ಜ್ಞಾನಾಮೃತ, ಸತ್ಯಜ್ಞಾನಾನಂದ ವೆಂದು ಹೇಳಿಹರು.

ವಚನ - 27

ನರಜನ್ಮವ ತೊರೆದು ಹರಜನ್ಮ ಮಾಡಿದ ಗುರುವೆ
ಭವ ಬಂಧನವ ಬಿಡಿಸಿ ಪರಮ ಸುಖವ ತೋರಿದ ಗುರುವೆ !
ಭವಿ ಎಂಬುದು ತೊಡೆದು ಭಕ್ತನೆಂದೆನಿಸಿದ ಗುರುವೆ !
ಚೆನ್ನಮಲ್ಲಿಕಾರ್ಜುನನ ತಂದು ಕೈ ವಶಕ್ಕೆ ಕೊಟ್ಟ ಗುರುವೆ
ನಮೋ ನಮೋ ಎನುತಿರ್ದೆನು''

ತಾತ್ಪರ್ಯ : ಅಕ್ಕ ಮಹಾದೇವಿಯು ತನಗೆ ಲಭ್ಯವಾದ ಜ್ಞಾನೈಶ್ವರ್ಯ ಜ್ಞಾನಾನಂದ ರೂಪಿ ಜ್ಞಾನ ಗಂಗೆಯ ವರ್ಣಿಸುತ್ತಿದ್ದಾಳೆ. ನರಜನ್ಮ ತೊಡೆದು ಹರಜನ್ಮ ಮಾಡಿದಗುರುವೆ : ಗುರುದೇವ ಜನ್ಮ ಬದಲು ಮಾಡುವ ದೇವರ ದೇವ ,ಭ್ರಮಾಮದಿಗಳ ಮಾಯಿಕ. ಸೃಷ್ಠಿಯ ಕೆಡಿಸಿ ನಿರ್ಮಾಯ ಸೃಷ್ಠಿಸುವ ಮಾಯಾ ಕೋಲಾಹಲ. ಶ್ರೀಗುರು ಜನ್ಮಂಗಳ ಕೆಡಿಸಿ ಹರಜನ್ಮ ಮಾಡುವ ಘನವಂತ. ಬ್ರಹ್ಮಾದಿಗಳು ಶರೀರ ಬದಲು ಮಾಡುವ ಅಧಿಕಾರಿಗಳಾಗಿದ್ದರೆ ಈ ಮಹಾಂತನು ನರಜನ್ಮವನ್ನೆ ಕೆಡಿಸಿ ತೆರಹಿಲ್ಲದ ಭವ ನುಡಿಗೆಡೆ ಗೊಡದ ಮಹಾಘನವ ಮಾಡುವ ಮಹಾಮಹಿಮ.

ಈ ಮಹಾಂತನ ಕಾರುಣ್ಯ ನರಜನ್ಮವ ತೊಡೆದು ಹರಜನ್ಮ ಮಾಡುವ ಕಾರುಣ್ಯ. ಅನಾತ್ಮ ಭಾವಂಗಳ ಕೆಡಿಸಿ ಭರಿತ ಭಾವ ಮಾಡುವ ಕಾರುಣ್ಯ. ಭವ ಬಂಧನ ಬಿಡಿಸಿ ಪರಮ ಸುಖವ ತೋರಿದ ಗುರುವೆ : ನರ ಜನ್ಮ ಆವುದು ? ಹರಜನ್ಮ ಆವುದು ?

ಜನನ ಮರಣಂಗಳೆಂಬ ಭವ ತಾಪದಲ್ಲಿ ಸಿಕ್ಕು ನರಳುವದೆ ನರಜನ್ಮ . ನರಕ ರೂಪ ತ್ರಿವಿಧ ಮಲಮಯ ಶರೀರದಭಿಮಾನಿ ಯಾಗಿ ನಾನು ನನ್ನದೆನ್ನುವದೆ ನರಜನ್ಮ. ನಿತ್ಯಾ ನಿತ್ಯಾ ವಿಚಾರ ಶೂನ್ಯವಾದುದೆ ನರಜನ್ಮ .ಅನಿತ್ಯವಾದ ವಿಷಯೋಪ ಭೋಗ ಸುಖದ ನಿತ್ಯವೆಂದು ತಿಳಿದು ರಾಗ ದ್ವೇಷ ವುಳ್ಳದ್ದಾಗಿಹುದೆ ನರಜನ್ಮ ,ವಿಷಯಾಸಕ್ತಿ ಜನ್ಮ , ಇಂದ್ರಿಯಂಗಳ ಅಧಿ ೀನವಾದ ಜನ್ಮ ,ಇದುವೆ 84 ಲಕ್ಷ ಜನ್ಮಂಗಳಿಗೆ ಕಾರಣವಾದ ಅಜ್ಞಾನಿ ಜನ್ಮ , ಮರುವಿನ ಜನ್ಮ, ನರ ಜನ್ಮವ ತೊಡೆದು ಹರಜನ್ಮ ಮಾಡಿದ ಗುರುವೆ ? ಶ್ರೀಗುರು ನರ ಜನ್ಮವ ತೊಡೆಯಲು ದೇಹ ದಂಡಿಸಲಿಲ್ಲ , ನೊಂದಿಸಲಿಲ್ಲ , ನಿಂದಿಸಲಿಲ್ಲ , ವಧೆ ಮಾಡಲಿಲ್ಲ , ದೇಹ ಬುದ್ಧಿ , ದೇಹ ಭಾವ , ದೇಹಾಭಿಮಾನ, ದೇಹದ ಮೋಹ ನಾಶ ಮಾಡುದೆ ಬಿಡಲಿಲ್ಲ ; ನಾಶ ತಾ ಮಾಡಲಿಲ್ಲ .

ನಮ್ಮ ಕೈಯಿಂದ, ನಮ್ಮ ಅರುವಿನಿಂದ ನಮ್ಮ ಅಜ್ಞಾನ ; ಅಜ್ಞಾನದ ಕಾರ್ಯವಾದ

ಅನಾತ್ಮಭಾವ ನಾಶ ಮಾಡಿಸಿದ. ಇದೆಂಥ ಲೀಲೆ, ಇದೆಂಥ ವಿನೋದ, ಇದೆಂಥ ಯುದ್ಧ , ಈ ಮಹಾಂತನ ಶಸ್ತ್ರಂಗಳು ಬೇರೆ ! ಆತ್ಮ ನಿಜವರಿದ ಮಹಾನುಭಾವವೆ ಈ ಮಹಾಂತನ ಶಸ್ತ್ರ ಲಿಂಗಾಗ ಸಮರಸ ಜ್ಞಾನದನುವೆ ಶಸ್ತ್ರ ! ಅಂಗವೆ ಲಿಂಗ , ಲಿಂಗವೆ ಅಂಗ ವೆಂದರಿತ ಅನುವೆ ಶಸ್ತ್ರ , ಗುರುಕಾರುಣ್ಯವೆ ಶಸ್ತ್ರ . ಈ ಶಸ್ತ್ರದಿಂದ ನರಜನ್ಮವ ತೊಡೆದ ಶಬ್ದ ಮುಗ್ಧನಾಗಿ ಹರಜನ್ಮ ಮಾಡಿದ. ಇದೆಂಥ ಕರುಣಾಮೃತ ಜ್ಞಾನಾಮೃತ.

ಭೇದ ಬುದ್ಧಿ, ಭೇದ ಜ್ಞಾನ, ಭೇದ ಭಾವ, ಇಲ್ಲದವುಗಳೆಂದು ಇಲ್ಲ ಮಾಡಿದ. ಇಲ್ಲದ ಮರವು ಇಲ್ಲಮಾಡಿದುದು, ಇಲ್ಲದ ಜೀವ ಬ್ರಹ್ಮರ ಭೇದ ಇಲ್ಲ ಮಾಡಿದುದೆ ನರಜನ್ಮ ತೊಡೆದುದು, ಇದ್ದ ಅರುವಿಂಗರುವಾದುದು ಇದ್ದಂತೆ ಅರುವರಿಯುವ ರಹಸ್ಯ ತಿಳಿಸಿದುದೆ ಹರಜನ್ಮ ಮಾಡಿದ ಪರಿ, ಇಲ್ಲದ ನಾಮ ರೂಪಂಗಳ ಇಲ್ಲ ಮಾಡಿದುದು ನರಜನ್ಮ ತೊಡೆದ ಪರಿ, ಇದ್ದ ಅಸ್ತಿ ಭಾತಿ ಎಂಬ ಎನ್ನ ಸತ್ಯವ ಇದ್ದಕ್ಕಿದ್ದಂತೆ ಅರಿಯುವ ರಹಸ್ಯ ತಿಳಿಸಿದುದೆ ಹರಜನ್ಮ ಮಾಡಿದ ಪರಿ.

ಭವ ಬಂಧನವ ಬಿಡಿಸಿ ಪರಮ ಸುಖವ ತೋರಿದ ಗುರುವೆ ! ತಾನಾಗದ್ದು ತಾನೆಂದು, ತನಗಿಲ್ಲುದುದು ತನಗುಂಟು ಮಾಡಿಕೊಂಡುದು ಅದುವೆ ಭವ, ಅದುವೆ ಬಂಧನ ವಾಗಿದೆ. ಕಲ್ಪನಾರಹಿತನಾದ ತಾನು ಆಣವ ಮಲ, ಮಾಯಾಮಲ, ಕಾರ್ಮಿಕ ಮಲ, ಮಲತ್ರಯಂಗಳು ತಾನಾಗದ್ದು ಗುರುವೆ ತಾನೆಂದು. ಸ್ಥೂಲ ಸೂಕ್ಷ್ಮಕಾರಣ ಮಹಾಕಾರಣ ಶರೀರ ತಾನಾಗದ್ದು ತಾನೆಂದು. ನಾಲ್ಕು ಶರೀರಗಳು ನಾಲ್ಕು ಅವಸ್ಥೆ ವಿಶ್ವ, ತೈಜಸ, ಪ್ರಾಜ್ಞ ತೂರ್ಯ ನಾಲ್ಕು ಜೀವರುಗಳು ತಾನಾಗದ್ದು ತಾನೆಂದು ನಾಲ್ಕು ಶರೀರಗಳ ಶುಭಾ ಶುಭ ಅವಸ್ಥೆ , ಬಂಧ ಮೋಕ್ಷ ವೆಂಬ ಆವಸ್ಥೆ ಮರವು, ಅರಿವು ಅಜ್ಞಾನ, ಜ್ಞಾನ ನಾ ನೀನೆಂಬ ತೋರಿಕೆ, ಗುರು ಶಿಷ್ಯರಾಗಿರುವ ತೋರಿಕೆ ಗುರು ಲಿಂಗ ಜಂಗಮ ಪ್ರಸಾದವಾಗಿ ತೋರುವ ತೋರಿಕೆ ತನಗಿಲ್ಲದುದು ತನಗುಂಟುಮಾಡಿಕೊಂಡು ನರಳುವದೆ ಭವ ಬಂಧನ ವಾಗಿದೆ.

''ತನು ವಿಡಿದ ಪ್ರಕೃತಿ, ಪ್ರಕೃತಿ ವಿಡಿದ ಪ್ರಾಣ, ಪ್ರಾಣ ವಿಡಿದ ಜ್ಞಾನ, ಜ್ಞಾನ ವಿಡಿದ ಗುರು, ಲಿಂಗ ಜಂಗಮ ಪ್ರಸಾದವ ವಿಡಿದು ನಿರ್ಗುಣವ ತೋರುವವರ ಮುಖವ ತೋರುದಿರು ಕೂಡಲ ಸಂಗಮದೇವಾ'' ಕಲ್ಪಿತ ಪುರುಷನ ಕಾರಣವೆ ಆಗಲಿ, ಕಾರ್ಯವೆ ಆಗಲಿ, ಅವುಗಳಿಗವಕಾಶವಿಲ್ಲದ ಕಲ್ಪನಾ ರಹಿತವಾದ ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆ ನಿಜವೆಂದು ತೋರಿ ಭವ ಬಂಧನವ ಬಿಡಿಸಿ, ಪರಮ ಸುಖವ ತೋರಿದ ಗುರುವೆ. ಇದಲ್ಲದೆ ಇಲ್ಲದ ಮಾಯಾರೂಪ ಪಿಂಡಾಂಡ ಬ್ರಹ್ಮಾಂಡದ ತೋರಿಕೆಯಾಗಲಿ, ಇಲ್ಲದ ಶಬ್ದದ ತೋರಿಕೆ ಇದಲ್ಲದೆ ತತ್ವ ತಾತ್ವಿಕದ ಶಬ್ದಾಡಂಬರದ ತೋರಿಕೆಯಾಗಲಿ ತಾನಾಲ್ಲ, ಇವುಗಳ ಸಂಬಂಧದ ತೋರಿಕೆಯು ತನಗಿಲ್ಲವೆಂದು, ತೋರಬಾರದ ಘನವಾಗಿಹ ನಿನ್ನ ನಿಜದಿರುವು ನಿರಂತರ ಮಂಗಳಮಯ ಪರಮಸತ್ಯವೆಂದು, ತನ್ನರವು ತನ್ನಿಂದ ತನಗೆ ವೇದ್ಯವಾಗುವಂತೆ ಕೃಪೆ ಗೈದುದೆ ಭವ ಬಂಧನ ಬಿಡಿಸಿ ಪರಮ ಸುಖವ ತೋರಿದ ಗುರುವೆ ಎಂದು ಹೇಳಿಹರು.

ಭವಿ ಎಂಬುದು ತೊಡೆದು ಭಕ್ತನೆಂದೆನಿಸಿದ ಗುರುವೆ : ಭವಿ ಎಂಬುದು ಪೂಜಾ ಲಿಂಗ ಬಿಟ್ಟವರು, ಅದನ್ನು ಕೊರಳಲ್ಲಿ ಹಾಕಿಕೊಳ್ಳದವರು, ಭವಿಯೆಂಬ ತಪ್ಪು ತಿಳಿವಳಿಕೆಯ

ತನ್ನ ಸುಜ್ಞಾನರೂಪಿ ಕಾರುಣ್ಯವ ಅಂಗದ ಮೇಲೆ ಲಿಂಗ ಸಾಹಿತ್ಯವಮಾಡಿ ಸರ್ವಾಂಗ ಲಿಂಗ ಮಾಡಿ ತೋರಿದ. ಪ್ರಾಣದ ಮೇಲೆ ಲಿಂಗ ಸಾಹಿತ್ಯವಮಾಡಿ ಪ್ರಾಣ ಲಿಂಗವ ತೋರಿದ. ಮನದ ಮೇಲೆ ಲಿಂಗ ಸಾಹಿತ್ಯಮಾಡಿ ಘನ ಮನ ಮಾಡಿ ತೋರಿ ತನು ಭವಿ ಎಂಬುದು ತೊಡೆದ. ಇಂದ್ರಿಯಂಗಳು ಭವಿ ಎಂಬುದು ತೊಡೆದ. ಇತ್ತ ಪ್ರಾಣ ಮನ ಭವಿ ಎಂಬುದು ತೊಡೆದು ಖಂಡಾ ಖಂಡಾ ಸಂಯೋಗವಿಲ್ಲದ ಅಖಂಡಿತನ ನಿಲುವು ಎನ್ನಲ್ಲಿ ತೋರಿ, ತೋರ ಬಾರದ ಘನ ದಿರುವೆ ಎನ್ನಯ ಇರುವಾದುದರಿಂದ ಭವಿ ಎಂಬುದು ಭಕ್ತ ನೆಂದೆನಿಸಿದ ಗುರುವೆ ಎಂದು ಹೇಳಿಹರು.

ಚೆನ್ನಮಲ್ಲಿಕಾರ್ಜುನ ತಂದು ಕೈವಶಕೆ ಕೊಟ್ಟ ಗುರುವೆ ನಮೋ ನಮೋ ಎನುತಿರ್ದೆನು ಚೆನ್ನಮಲ್ಲಿಕಾರ್ಜುನನೆಂದರೆ ಒಂದು ವ್ಯಕ್ತಿಯಲ್ಲ ಚಾರಿತ್ರ ಪುರುಷನಲ್ಲ , ಒಮ್ಮೆ ತೋರಿ ಒಮ್ಮೆ ಇಲ್ಲವಾಗುವ ಮಾಯಿಕನಲ್ಲ. ಇದು ತೋರಬಾರದ ಘನ, ಜ್ಞಾನ ಸ್ವರೂಪ, ಇದು ಉಪಮೆಗೆ ಮೀರಿದ ಅರಿವು, ಭಾವಕ್ಕಿಂಬುಕೊಡದ ಅರಿವು, ಶಬ್ದ ಮೀಸಲವಾಗಿಹ ಅರಿವು ಧ್ವನಿಯ ಮರೆಯಲ್ಲಿ ತೋರಿದ ಅರಿವು ನುಡಿಗೆಡೆ ಗೊಡದ ಅರಿವು, ಶಬ್ದಮುಗ್ದವಾಗಿಹ ಕಾರುಣ್ಯ. ಈ ಕಾರುಣ್ಯ ಚೆನ್ನ ಮಲ್ಲಿಕಾರ್ಜುನನ ತಂದು ಕೈವಶಕ್ಕೆ ಕೊಟ್ಟ ಗುರು ಕಾರುಣ್ಯ ಇದನೆಂತು ಉಪಮಿಸುವದು, ಇದು ಅಂದು ಇಂದು ಎಂದೆಂದೂ ಇದ್ದಂತಿದ್ದ ನಿಜವೆ ಲಿಂಗದಿರುವು ನನ್ನಯ ಇರುವು ನಿನ್ನಯ ಇರುವು ನಿಸ್ಸೀಮ ಇರುವು, ತಾನೆ ತಾನಾದ ಇರುವು, ಇದು ಸುಖದ ಸುಖರೂಪು. ಇದು ಚೆನ್ನಮಲ್ಲಿಕಾರ್ಜುನ ತಾನು ಒಂದಾದ ನಿಲವು. ನೆಲೆಯುಳ್ಳದಲ್ಲ, ನೆಲೆಯಿಲ್ಲದ ನಿಲುವು. ಅದು ಅರುವಿಂಗರುವಾದ ಅರಿವು. ಮಹದರಿವು. ಶ್ರೀಗುರುವಿನಿಂದ ಲಭ್ಯವಾದುದುರಿಂದ ನಮೋ ನಮೋ ಎಂದು ಕೊಂಡಾಡಿದುದು. ಗುರುವೆ ಘನ ವಾದುದು ಆ ಮಹಾಂತನ ಕರುಣಾಮಯದ ಕುರುಹೆ ಕೈವಲ್ಯವಾಗಿದೆ.

ಈ ಲಿಂಗವೆಂಬ ಕುರುಹು ಇದು ಅನುಪಮ ಜ್ಞಾನ ನಿಧಿ, ಅಪರಿಮಿತ ಜ್ಞಾನಾಮೃತ, ಸತ್ಯಜ್ಞಾನಾನಂದ ವೆಂದು ಹೇಳಿಹರು.

ವಚನ - 28

> **ಗುರುಘನವೆಂದು ಕುರುಹಿನಿಂದಲೆ ಕೈವಲ್ಯವೆಂದು ಸಾರುತೈದಾವೆ ನೋಡಾ**
> **ಸಕಲಾಗಮ ನಿಗಮಂಗಳು ಗುರುವೆ !**
> **ಪರಪಾತಕ ಪರಿಹಾರಕನು ಗುರವೆ, ಪರಮಾನಂದ ದಾಯಕ ಗುರುವೆ,**
> **ಶ್ರೀಗುರು ಕಪಿಲಸಿದ್ಧ ಮಲ್ಲಿಕಾರ್ಜುನ ಮಹಾಲಿಂಗವು ಶ್ರಿಗುರುವೆ ನಮೋ ನಮೋ.**

ತಾತ್ಪರ್ಯ: ಸಿದ್ಧರಾಮ ಶೀವಯೋಗಿ ತಂದೆ, ಶಿವನಿಂದ ಉರಿಗಣ್ಣ ಪಡೆದ ಶಿವೋಪಾಸಕ. ಪೂರ್ವದಲ್ಲಿ ಶಿವೋಪಾಸಕನಾದ ಸಿದ್ಧರಾಮದೇವರು, ಇಲ್ಲಿ ಗುರುನಾಥನನ್ನು ಗುರುಘನನೆಂದು ಸಕಲಾಗಮಗಳ ಸಾಕ್ಷಿಯಾಗಿ ಗುರುವೆ ಘನನೆಂದು, ಈ ಮಹಾಂತನ ಕಾರುಣ್ಯದ ಕುರುಹಿನಿಂದಲೆ ಕೈವಲ್ಯವೆಂದು ಸಾರುತ್ತಿದೆ. ಎಂದು ಹೇಳಿದಾಗ ಶಿವನೆಂದರೆ, ತೋರಿ ಇಲ್ಲವಾಗುವ ಶಿವ, ಭಕ್ತರ ಇಷ್ಟಾರ್ಥ ಮೇರೆಗೆ ದರ್ಶನಕೊಡುವ ಶಿವ. ಅವರನು

ಬೇಡಿದ ಇಷ್ಟಾರ್ಥ ಪೂರ್ತಿಮಾಡುವ ಮಾಯಿಕ ಶಿವ, ಅವರ ತತ್ವಕ್ಕಿಂತಲೂ ಗುರುಘನನು ಶ್ರೇಷ್ಠನೆಂದು ಶೃತಿ ಸಾರುತ್ತಿವೆ.

ಗುರು ಘನನಾಗಿದ್ದರೂ ಸಕಲರಿಗೂ ತೋರುವವನಾಗಿಹನು, ಕುರುಹು ತೋರುವದು ತೋರಿದರೂ ತೋರದಡಗದ ಘನ ಮಹಿಮನಾಗಿ ಪ್ರಜ್ವಲಿಸುವ ಪ್ರಕಾಶಮಯ ನಾಗಿರುವನು. ಈ ಮಹಾಂತನ ಲೀಲೆ. ಅನನ್ಯ ಭಕ್ತವೃಂದವ ತನ್ನಂತೆ ಮಾಡುವ ಲೀಲೆ ಅಕರ್ತಾ ತಾನಾಗಿದ್ದರೂ ಕರ್ತಾರನಾಗಿ ಕಾಣುವ ಲೀಲೆ ಸ್ವಲೀಲೆ. ಈ ಸ್ವಲೀಲೆಯು ತಾನೊಂದೆ ಅಕರ್ತೃವಾಗಿರುವದಲ್ಲ; ಸಕಲರನ್ನು ಅಕರ್ತೃಗಳನ್ನಾಗಿ ಮಾಡಲು ಬಂದ ಮಹಾಕರ್ತಾರ. ತನ್ನಂತೆ ಮಾಡುವ ಮಹಾಮಹಿಮ ಈ ಮಹಾಕರ್ತೃ ಶಕ್ತಿ ಗುರುಘನನಲ್ಲಿ ಮಾತ್ರ ಸ್ವತಃ ಸಿದ್ಧವಾಗಿಪ್ಪುದು. ಈ ಮಹಾಶಕ್ತಿ ಇನ್ನುಳಿದ ದೇವತೆಗಳಿಗಿಲ್ಲ . ನಿರ್ಮಾಯನಾದ ಗುರು ಘನನೆ ಈ ಕಾರ್ಯಮಾಡುವುದು ಇದು ಕಾರಣ ಗುರು ಘನವೆಂದು, ಕುರುಹಿನಿಂದಲೆ ಕೈವಲ್ಯವೆಂದು ಸಕಲಾಗಮ ನಿಗಮಂಗಳು ಸಾರುತ್ತಿವೆ.

ಕುರುಹು ಆವುದು ? ಕೈವಲ್ಯವಾವುದು ? ಗುರು ಕರುಣೆಯ ಕುರುಹು. ಅದು ಯತೋವಾಚ್ಯೆ ನಿವರ್ತಂತೆ ಅಪ್ರಾಪ್ಯ ಮನಸಾಸಹ ಎಂದೆನಿಸುವ ಕುರುಹು, ಲಿಂಗವಾಗಿ ಭಕ್ತನ ಕರಕಮಲಕ್ಕೆ ಬಂದ ಕುರುಹು. ಕಥನಕ್ಕೂ ನಿಲುಕದ ಕುರುಹು, ನೆನಹಿಂಗೂ ನಿಲುಕದ ಕುರುಹು ನಿರ್ಣಯಕ್ಕೂ ನಿಲುಕದ ಕುರುಹು. ಚಿಂತನಕ್ಕೂ ಮೀರಿದ ನಿಶ್ಚಿಂತದ ಇರುವು ನಿರ್ಭಾವದ ಬೆಳಗುಳ್ಳ ಬೆಳಗು. ಇದು ತನ್ನದಾದ ಬೆಳಗು. ಆರಿಂದಲೂ ಎರವಲವಾಗಿ ಬೆಳಗುವ ಬೆಳಗಲ್ಲ, ತಾನೆ ತಾನಾಗಿ ಬೆಳಗುವ ಸ್ವಯಂಜ್ಯೋತಿ. ಇದನ್ನು ಅರಿಯ ಹೋದವರು ಸವೆಯದ ಸುಖಿಗಳು , ಅಕ್ಷಯ ಸುಖಿಗಳು, ನಿರಂತರ ಸುಖವಾದ್ದರಿಂದ ನಿಶ್ಚಿಂತತೆ ನಿರ್ಭಯತ್ವ ಕೃತಕೃತ್ಯತೆ ನಿರಂಕುಶ ತೃಪ್ತಿ, ತನ್ನಿಂದ ತನಗೆ ಸಿದ್ಧವಾಗುವದರಿಂದ ಕೈವಲ್ಯವೆಂದು ಹೇಳಿಹರು.

ಕೈವಲ್ಯ ವೆಂಬುದು ಕೇವಲ ಸುಖ ಸ್ವರೂಪ. ಸ್ವರೂಪ ಈಸುಖ ತನ್ನ ಸ್ವಸ್ವರೂಪದರಿವು, ತನ್ನಿಂದ ತನಗೆ ವೇದ್ಯವಾಗುವ ತಾನು, ಪೂರ್ವದಲ್ಲಿ ಕಳೆದುಕೊಂಡಿದ್ದು ಪುನಃ ಈಗ ಪಡೆದನೆಂಬುದಿಲ್ಲ, ಕೈವಲ್ಯವೆಂಬುದು ತಾನೆ ತನ್ನರವು ಅದುವೆ ತನ್ನಯ ನಿಜಧಾಮವೆಂದು ಸಕಲಾಗಮ ನಿಗಮಂಗಳು ಗುರು ಘನನನ್ನು ಗುರುವಿನ ಕುರುಹನ್ನು ಕೊಂಡಾಡಿದವಲ್ಲದೆ, ತನ್ನ ಕೊಂಡಾಡಿದವಲ್ಲದೆ ತನ್ನ ಕೊಂಡಾಡಿಕೊಳ್ಳಲಿಲ್ಲ. ಗುರುವಿನ ಕಾರುಣ್ಯ ಸಕಲಾಗಮ ನಿಗಮಂಗಳಿಗೆ ಮೀರಿದ ಸಂಜ್ಞೆಯು, ಗುರುವಿನಿಂದ ಲಭ್ಯವಾದ ಅಚಿಂತ್ಯನಿಧಿ ಇದನರಿವುಡೆ ತನ್ನತಾ ಅರಿತಂತೆ. ಗುರು ಘನವ ಅರಿತಂತೆ ಆಗ ತಾನು ಗುರು ಲಿಂಗ ಜಂಗಮ ಒಂದಾದುದು ತಾನೆ, ಗುರು ತಾನೆ, ಲಿಂಗ ತಾನೆ, ಜಂಗಮ ತಾನೆ ತಾನಾದುದು.

ಪರಪಾತಕ ಪರಿಹಾರಕನು : ಗುರು ಪರಪಾತಕ ಪರಿಹಾಕನು ಗುರು ಕರುಣೆಯಿಲ್ಲದವರು ಪರಪಾತಕರು. ಏಕೆಂದರೆ ಗುರುಕರುಣೆ ಯಾಗದ ವಿನಃ ತನ್ನ ಒಡವೆ ಆವುದು ? ಅನ್ಯರ ಒಡವೆ ಆವುದು ? ಎಂಬುದು ತಿಳಿಯದ್ದರಿಂದ ತಾನ್ನದಾಗದ ತನು, ಮನ, ಧನ, ತನ್ನದೆಂದು ಇವುಗಳಭಿಮಾನಿಯಾಗಿ, ರಾಗ ದ್ವೇಷಿಯಾಗಿರುವವನೆ ಪರಪಾತಕನು. ಕಾರಣ ಗುರು ಕೃಪೆಯಾಗುವಡೆ ತನು ಗುರುವಿನದು, ಮನ ಲಿಂಗದದು, ಧನ ಜಂಗಮದ್ದಗುದು. ಆಗ ಈ ತನು, ಮನ, ಧನ, ತನ್ನದೆಂಬುದಿಲ್ಲ ಅನ್ಯರವೆಂಬುದಿಲ್ಲ

ಆನು ಇಲ್ಲದುದು, ನೀನು ಇಲ್ಲದುದು, ಇದ್ದ ನಿರಂತರ ವಾಗಿರುವ ಮಂಗಳಮಯ ಪರಮಸತ್ ಸ್ವರೂಪವೆ, ನಿನ್ನ ಇರುವೆ ನಿಜವೆಂದು ತೋರಿದುದರಿಂದ ಪರಪಾತಕ ಪರಿಹಾರಕನೆಂದು ಹೇಳಿದೆ.

ಪರಮಾನಂದದಾಯಕ ಗುರುವೆ ಶ್ರೀಗುರು ಕಪಿಲಸಿದ್ಧ ಮಲ್ಲಿಕಾರ್ಜುನ ಮಹಾಲಿಂಗವು ಶ್ರಿಗುರುವೆ ನಮೋ ನಮೋ : ಶ್ರೀಗುರು ಇಲ್ಲದುದು ಇಲ್ಲ ಮಾಡಿ ಇದ್ದ ನಿರಂತರವಾಗಿಹ ಅಖಂಡ ಸ್ವರೂಪದಲ್ಲಿ ನಿಶ್ಚಲನಾಗಿ ನಿಲ್ಲಿಸುವದರಿಂದ ಪರಮಾನಂದದಾಯಕ ಗುರುವೆ ಎಂದು ಹೇಳಿಹರು.

ಇಲ್ಲದ ಉಪಾಧಿ ಇಲ್ಲ ಮಾಡಿ ಇದ್ದ ನಿರುಪಾಧಿ ನಿರಾಲಂಬ ನಿರಾಳವ ಸಿದ್ಧ ಮಾಡುವ ಸಿದ್ಧಾರೂಢನೆ ಪರಮಾನಂದ ದಾಯಕನು . ಇಲ್ಲದ ಸ್ಥಾವರ ಜಂಗಮ ಜಗತ್ತೆಂಬುದು ಇಲ್ಲಮಾಡಿ ಇದ್ದ ಅಸ್ತಿ, ಭಾತಿ, ಪ್ರಿಯ ಸತ್ಯವೆಂದು ಹೇಳಿದುದುಲ್ಲದೆ ಸತ್ಯವರಿಯಲು ಅನುವ ಕರುಣಿಸಿ ನುಡಿಗೆಡೆಗೊಡದ ಘನ ನಿನ್ನ ಪದವೆಂದು ಅದು ನಿರಂತರ ವಾಗಿರುವ ಅಚಿಂತ್ಯ ಪದವೆಂದು ತಾನು ಮೌನವಾಗಿ , ಮೌನ ಮುದ್ರೆಯುಳ್ಳ ಕುರುಹ ಕೊಟ್ಟು ದ ನರಿಯೆಂದು ಕರುಣಿಸಿದುದರಿಂದ ಪರಮಾನಂದ ದಾಯಕ ಗುರುವೆ ಎಂದು ಹೇಳಿದೆ.

ಶ್ರೀಗುರು ಕಪಿಲಸಿದ್ಧ ಮಲ್ಲಿಕಾರ್ಜುನ ಮಹಾಲಿಂಗವು ಶ್ರೀಗುರು ಮಹಾಲಿಂಗವು ಅದುವೆ ಕಪಿಲಸಿದ್ಧ ಮಲ್ಲಿಕಾರ್ಜುನ ಗುರುಲಿಂಗವು. ಅಂಗ ಲಿಂಗವೆಂದರಿತ ಲಿಂಗ, ಲಿಂಗ ಅಂಗವೆಂದರಿತ ಲಿಂಗ ವಾದುದರಿಂದ ಮಹಾಲಿಂಗವದು ಇದು ನಿರಂತರ ನಿಲುವು, ನಿಸ್ಸೀಮವು ತುದಿಮೊದಲಿಲ್ಲದ ಘನ, ಒಳ ಹೊರಗೆಂಬುದಿಲ್ಲದ ಮಹದಿರುವು, ಇದು ಮರವರುವಿಗೆ ಮೀರಿ ಬೆಳಗುವ ಬೆಳಗುಳ್ಳ ಬೆಳಗು ಅಖಂಡಿತ ಘನವಾದುದುರಿಂದ ಮಹಾಲಿಂಗ. ಇಂತಪ್ಪ ಮಹಾಲಿಂಗ ರೂಪಿ ಶ್ರೀಗುರುವಿಂಗೆ ನಮೋ ನಮೋ ಎಂದು ಹೇಳಿಹರು.

ವಚನ - 29

ಗುರುವೆ ಇಹಪರ ಗುರುವೆ ಗುರುವೆ ಕರುಣಾಕರನೆ !
ಗುರುವೆ ಶುದ್ಧಾತ್ಮನೆ ! ನಿರ್ಮಳಾಂಗ ಗುರುವೆ,
ನಿನ್ನಂತೆ ಎನ್ನವನು ಮಾಡಿದ ಪರಮ ಗುರುವೆ !
ನೀನು ಮಲ್ಲಿಕಾರ್ಜುನನು .

ತಾತ್ಪರ್ಯ : ಸಿದ್ಧರಾಮ ಶಿವಯೋಗಿ, ಮಹಾಂತ ಶ್ರೀಗುರು ಕರುಣಿಸಿದ ದಿವ್ಯ ದೃಷ್ಠಿಯುಳ್ಳವರಾಗಿ ಗುರುದೇವನ ಅಪಾರ ನಿಲುವನ್ನು ಸ್ತುತಿಸಿಹನು.

ಗುರುವೆ ಇಹಪರ ಗುರುವೆ ಗುರುವೆ ಕರುಣಾಕರನೆ ! : ಗುರುಕರುಣೆಯ ಘನವ ಅದನಾರು ಹೀಗೆಯೆ ಎಂದು ವಿವರಿಸುವದು ವರ್ಣಿಸುವದು ? ''ಗುರುವಿನ ಪರಿ ವಿಪ ರೀತ ವಾಯಿತ್ತಯ್ಯ, ಭ್ರಮರ ಕೀಟ ನ್ಯಾಯದಂತೆ, ಗುರು ತನ್ನ ನೆನಹನ್ನ ಬರ ತನ್ನಂತೆ ಮಾಡಿದ, ಇನ್ನ ಶಿಷ್ಯನಾಗಿ ಪೂಜಿಸುವವರಾರು ಹೇಳಾ ಗುಹೇಶ್ವರಾ'' ಎಂದು ಪ್ರಭುದೇವ ಬಿತ್ತರಿಸಿದಂತೆ ಗುರು ಘನದ ಪರಿಯೆ ಅಪಾರವಾದುದು. ಲೌಕಿಕಕ್ಕೂ ಅಲೌಕಿಕಕ್ಕೂ

ಎತ್ತಣದಿಂದೆತ್ತ ? ಜಾತರಿಗೂ ಅಜಾತರಿಗೂ ಎತ್ತಣದಿಂದೆತ್ತ ? ನರರಿಗೂ ನಾರಾಯಣ ನಿಗೂ ಎತ್ತಣದಿಂದೆತ್ತ ? ಸುಖ ದುಃಖದಿಂದುಕ್ತರಾದವರಿಗೂ ಕೇವಲ ಸುಖ ದೇಕ ರಸವುಳ್ಳ ಸುಖಾತ್ಮರಿಗೂ ಎತ್ತಣದಿಂದೆತ್ತ ?

ಲೋಕ ದೃಷ್ಠಿಯೆ ಬೇರೆ ಗುರುಕೃಪಾದೃಷ್ಠಿಯೆ ಬೇರೆ, ಲೋಕವ ನಚ್ಚಿದ ಜೀವರುಗ ಳಿಗೆ ಇಹಲೋಕ ಪರಲೋಕವಾಗಿ ಕಂಡರೆ, ಗುರುಕೃಪಾದೃಷ್ಠಿಯುಳ್ಳವರಿಗೆ ಇಹಲೋಕ ಪರಲೋಕವಾಗಿ ಕಾಣಲಿಲ್ಲ. ಇಹವು ಗುರುವಾಗಿ ಪ್ರಕಾಶಿಸಿತು. ಪರವು ಗುರುವಾಗಿ ಪ್ರಕಾಶಿ ಸಿತು ಪ್ರಕಾಶವದು ಸೀಮಾತೀತಾ ನೋಡಯ್ಯ ಇಹಲೋಕ ಕೀಳು, ಪರಲೋಕ ಶ್ರೇಷ್ಠವೆಂಬ ವಿಷಮರೂಪಿ ವಿಷಯ ಕೆಡಿಸಿ ನೆಲೆಯಿಲ್ಲದ ನಿಲುವುಳ್ಳ ನಿಜನಿವಾಸ ಮಾಡಿತ್ತು, ಇಹ ಪರವೆ ತಾನಾಗಿ ನಿಂದಿತ್ತಲ್ಲಾ ಎಲ್ಲಿ ನೋಡಿದಡಲ್ಲಲ್ಲಿ ಗುರು ಘನವೆ ಪ್ರಜ್ವಲಿಸುತ್ತಿದೆಯಲ್ಲ ಇದೆಂಥ ಕೃಪಾದೃಷ್ಠಿ, ಸೂರ್ಯನಿಗೆ ಕತ್ತಲೆ ಕಾಣಬಹುದೆ ? ಗುರ್ವಾನುಗ್ರಹದ ಮುಂದೆ ವಿಷಮ ದೃಷ್ಠಿ ರೂಪಿ ಕತ್ತಲೆ ಕಾಣಬಹುದೆ ? ನಿಸ್ಸೀಮವಾದ ನಿಜ ನಿವಾಸದಲ್ಲಿ ಪ್ರಕಾಶಿತ ಪ್ರಕಾಶಕ ದೃಶ್ಯ ದೃಕ್ ಎಂಬ ವಿಭಾಗ ಮುನ್ನಿಲ್ಲ ನೋಡಾ, ದೃಶ್ಯವಾಗಿ ತೋರಿದರೂ ತಾನೆ, ದೃಕ್ ಎನಿಸಿ ಕೊಂಡರೂ ತಾನೆ. ಇಹವಾಗಿ ಕಂಡರೂ ತಾನೆ ಪರವಾಗಿ ಕಂಡರೂ ತಾನೆ ಎಂದು ಹೇಳಿ ಹರು.

ಗುರುವೆ ಕರುಣಾಕರನೆ : ಜೀವಿಗಳ ಕರುಣಾಕರರು ಯಾರು, ಭವದಲ್ಲಿ ಜೀವಿಗಳ ನೂಕುವವರು ಕರುಣಾಕರರೋ ? ಭವದಲ್ಲಿ ಬಿದ್ದವರ ಮೇಲೆತ್ತುವವರು ಕರುಣಾಕರರೋ ? ಫಲ ಪದಂಗಳ ಕರುಣಿಸುವವರು ಕರುಣಾಕರನೋ ? ಅಕ್ಷಯಪದವುಳ್ಳ ಅಚಿಂತ್ಯತ್ವ ಕರುಣಿಸುವವರು ಕರುಣಾಕರನೋ ? ಕಲ್ಪಿತರನ್ನಾಗಿ ಕಾಣುವವನು ಗುರುಘನನೋ ? ಭಾವವದು ಭ್ರಮವೆಂದು ತಿಳುಹಿ ತೆರಹಿಲ್ಲದ ಲಿಂಗ ಭರಿತವೆಂಬ ಸಂಜ್ಞೆಯ ಕರುಣಿಸುವ ವನು ಕರುಣಾಕರನೊ ? ಕೈದೀಪವು ಘನವೋ ? ಗುರುವಾಗಿ ಗುರುವ ಕಾಣು ವದು ಘನವೋ, ನೀವೆ ನಿರ್ಣಯಿಸುವದು. ಗುರು ಘನನು ಸಕಲರಿಗೂ ಕರುಣಾಕರನು , ಆಸಕ್ತರಿಗೂ ಕರುಣಾಕರನು, ಅನಾಸಕ್ತರಿಗೂ ಕರುಣಾಕರನು, ದೋಷತ್ರಯವುಳ್ಳವರಿಗೂ ಕರುಣಾಕರನು, ದೋಷ ರಹಿತರೆಂಬುವವರಿಗೂ ಕರುಣಾಕರನು ಪಾಪದೋಷವುಳ್ಳವರಿಗೆ ಸರ್ವಾರ್ಪಣ ಕಲಿಸುವ ಕರುಣಾಕರನು ಚಂಚಲದೋಷವುಳ್ಳನಿಗೆ ಯೋಗವ ಕಲಿ ಸುವ ಕರುಣಾಕರನು. ಮರವುಳ್ಳವನಿಗೆ ಅರುವಿನ ರಹಸ್ಯ ಕರುಣಿಸುವ ಕರುಣಾಮೂರ್ತಿ. ಒಡಲುಳ್ಳವನಿಗೆ ಒಡಲು ನಷ್ಟಮಾಡುವ ರಹಸ್ಯವ ಕರುಣಿಸುವ ಕರುಣಾಕರನು. ಇಂದ್ರೀಯ ಶುಭಾ ಶುಭ ಕ್ರಿಯೆಗಳಿಗೆ ಒಪ್ಪಿಕೊಂಡವರಿಗೆ ಅತೀಂದ್ರಿಯರನ್ನಾಗಿ ಮಾಡುವ ಕರುಣಾನಿಧಿ. ಕರಣಂಗಳನ್ನೆ ಲಿಂಗ ಕಿರಣಂಗಳ ಮಾಡುವ ಕರುಣಾಕರನು. ಗುರುದೇವ ದೇವರ ದೇವ, ತನುವಿನ ತನು, ತೆರಹಿಲ್ಲದ ಲಿಂಗ ಭರಿತನ ಮಾಡುವ ಕರುಣಾಕರ. ಸರ್ವಾಂಗವನ್ನು ಲಿಂಗಮಾಡಿ ತೋರಿಸುವ ಸ್ವಯಲಿಂಗಿಯಾದುದ್ದರಿಂದ ಗುರುವೆ ಕರುಣಾಕ ರನೆ ! ಎಂದು ಸ್ತುತಿಸಿಹರು.

ಗುರುವೆ ಶುದ್ಧಾತ್ಮನೆ ನಿರ್ಮಳಾಂಗ ಗುರುವೆ : ಗುರುಘನನು ಶುದ್ಧಾತ್ಮನು ಇರುವಲ್ಲಿ ತನುವಿರಹಿತ ಅತೀಂದ್ರಿ. ನಿರುಪಾಧಿ ನಿಸ್ಸಂಗ ನಿರಾಲಂಬ. ನಾಗಿರುವದರಿಂದ ಶುದ್ಧಾತ್ಮ ನಿರ್ಮಳಾಂಗನೆಂದು ಹೇಳಿಹರು.

ಗುರು ದೇವನು ತನ್ನೊಳ್ ತನುತ್ರಯ ಕಾಣದವನು. ಬಹಿರಿಂದ್ರಿಯಂಗಳು, ಅಂತರಿಂದ್ರಿಯಂಗಳ ಕಾಣದವನು, ಗಮನಾಗಮನ ಕಾಣದವನು, ಒಡಲು ನಷ್ಟಮಾಡಿದವನು, ನಾ ನೀನೆಂಬುದು ನಷ್ಟಮಾಡಿದವನು, ಹಮ್ಮು ಗಿಮ್ಮು ಇಲ್ಲದವನು , ಶಬ್ದ ನಷ್ಟಮಾಡಿದವನು, ಮನ ನಷ್ಟಮಾಡಿದವನು, ಶುಭಾಶುಭ ಕ್ರಿಯೆ ನಷ್ಟ ಮಾಡಿದವನು, ಅರಿವ ಅರುಹಿಸಿಕೊಂಬುದನ್ನು ನಷ್ಟಮಾಡಿದುದರಿಂದ ಬುದ್ಧಿ ಭಸ್ಮ ಮಾಡಿದವನು. ಇದು ಕಾರಣ ಒಡಲಿಲ್ಲ ಗುರುವಿಂಗೆ ದೃಶ್ಯ ದೃಕ್ ಎಂಬುದು ನಷ್ಟಮಾಡಿದುದರಿಂದ ನಿರ್ಮಾಯನು ಕುರುಹ ಕಾಣದವನಾದುದರಿಂದ ಶುದ್ಧಾತ್ಮನೆಂದು ಹೇಳಿಹರು.

ನಿರ್ಮಳಾಂಗ ಗುರುವೆ : ಗುರುದೇವನ ಅಂಗವದು ಘನಾಂಗ , ಮಲ ಅಮಲ ಕಾಣದ್ದರಿಂದ ಘನಾಂಗ, ಅದು ನಿರ್ಮಳಾಂಗ ಶುದ್ಧವ ಕಾಣದು, ಅಶುದ್ಧ ಕಾಣದು ಸಮ ಪ್ರಕಾಶ ತನ್ನ ಅಂಗವಾದುದರಿಂದ ನಿರ್ಮಳಾಂಗ, ಭೋಗ ತ್ಯಾಗ ಮೀರಿದುದೆ ನಿರ್ಮಳಾಂಗ, ಯೋಗ ವಿಯೋಗ ಕಾಣದ ಅಂಗ, ಬಂಧ ಮೋಕ್ಷಗಳ ಕಾಣದ ಅಂಗ ಭಾವಕ್ಕಗಮ್ಯವಾದುದರಿಂದ ನಿರ್ಮಳಾಂಗ ಗುರುವೆ ಎಂದು ಹೇಳಿಹರು.

ನಿನ್ನಂತೆ ಎನ್ನವನು ಮಾಡಿದ ಪರಮ ಗುರುವೆ ನೀನು ಶ್ರೀಮಲ್ಲಿಕಾರ್ಜುನನು : ಓ ! ಗುರುಘನನೆ ! ನಿನ್ನಂತೆ ಎನ್ನವನು ಮಾಡಿದೆಯಾ ? ನಿನ್ನ ಕಾಣದ ಮುನ್ನ ಕಲ್ಪಿತ ನಾನೆಂದು ಏನೇನೊ ಕಲ್ಪಿಸುತ್ತಿದ್ದೆ, ನೆನೆಯುತ್ತಿದ್ದೆ, ಭಾವಿಸುತ್ತಿದ್ದೆ , ಅರಿಯುತ್ತಿದ್ದೆ ಇವೆಲ್ಲವುಗಳ ತಾದಾತ್ಮ್ಯ ದೋಷವುಳ್ಳವನಾಗಿ ಕಳವಳಿಸುತ್ತಿದ್ದೆ. ನಿನ್ನ ಕೃಪೆಯ ಮಹದಿರುವ ಏನೆಂಬೆನೇನೆಬೆ ? ಅರಿಯಲಿಲ್ಲದ ಅರುವನರುಹಿಸಿ ಎನ್ನ ಕಲ್ಪಿತ ಕೆಟ್ಟಿತ್ತು, ಇದು ಕೆಟ್ಟೊಡನೆ ನೆನಹು ನಷ್ಟವಾಯಿತ್ತು, ಭಾವವೆಂಬುದು ಭ್ರಮೆಯಾಗಿ ತೋರಿತು. ಅರಿವ ಅರುಹ ನಷ್ಟವಾಗಿ ಕಳವಳವೆಂಬುದೆ ನನ್ನ ಹೃದಯದಲ್ಲಿ ಕಾಣದಾಗಿ ಪ್ರಶಾಂತವು ನೆಲೆಯೂರಿತ್ತು. ನಿನ್ನಂತೆ ಎನ್ನವನು ಮಾಡಿದ ಘನಕ್ಕೆ ಘನವಾದುದು ಅದನೆಂತುಪಮಿಸುವದು.

ತೋರಬಾರದ ಘನವ ತೋರಿದ ಬಳಿಕ ಹೇಳಲು ಬಾರದು, ಹೇಳಲು ಬಾರದು ಘನವ ತೋರುವದದೆಂತು ? ಓಹೋ ! ಸ್ವಮಹಿಮನೇ ! ಅಕಲ್ಪಿತದಿರುವ ಕಲ್ಪಿಸುದದೆಂತು ಅಚಿಂತ್ಯವ ಚಿಂತಿಸುವದದೆಂತು ? ಇದು ಕಾರಣ ನಿನ್ನ ಅರುವಿನ ಕರ್ತೃತ್ವ ಅಕರ್ತಾರನಾಗಿಹ ಕರ್ತಾರ ನೋಡಾ ನಿನ್ನಂತೆ ಎನ್ನವನು ಮಾಡಿದ ಕರ್ತಾರ ನಿನ್ನ ಕರ್ತೃತ್ವ ಅರುವಿನಿಂದ ಕಂಡುಂಡ ಪರಮ ಸುಖವು ನನ್ನಿಂದ ನನಗೆ ವೇದ್ಯವಾದುದರಿಂದ ಶ್ರೀಮಲ್ಲಿಕಾರ್ಜುನನೆ ನೀನು ಎಂದು ಹೇಳಿಹರು.

ವಚನ : 30

ಗುರು ಧ್ಯಾನ ವಲ್ಲದೆ ಧ್ಯಾನವಿಲ್ಲವು, ಗುರುಪಾದ ಪೂಜೆಯಲ್ಲದೆ ಪೂಜೆಯಿಲ್ಲವು,
ಗುರು ವಾಕ್ಯವಿಲ್ಲದೆ ಮಂತ್ರವಿಲ್ಲವು, ಗುರುಕೃಪೆಯಿಲ್ಲದೆ ಮೋಕ್ಷವಿಲ್ಲವು
ಅದೆಂತೆಂದೊಡೆ ಧ್ಯಾನ ಮೂಲೋ ಗುರು ಮೂರ್ತಿಃ
ಮೋಕ್ಷ ಮೂಲೋ ಗುರು ಕೃಪಾ ಃ
ಎಂಬ ವಾಕ್ಯ ನಿಮ್ಮದಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನ .

ತಾತ್ಪರ್ಯ : ಗುರು ಧ್ಯಾನ ವಲ್ಲದೆ ಧ್ಯಾನ ವಿಲ್ಲವು : ಗುರು ವೆಂದರೆ ಆರು ? ಗುರುಘನನ ತಿಳಿದವರೆಂದರೆ ಶರಣರು ಶರಣೆಯರು, ಸಿದ್ಧರಾಮ ಶಿವಯೋಗಿ ತಂದೆ ಬಸವಣ್ಣ , ಚೆನ್ನಬಸವಣ್ಣ , ಪ್ರಭುದೇವ, ಅಮುಗೆಯ ರಾಯಮ್ಮ , ಅಕ್ಕಮಹಾದೇವಿ , ನೀಲಾಂಬಿಕೆ ಮೊದಲಾದವರು.

''ಗುರುವೆ ಸದಾಶಿವ ಗುರುವೆ ಮಹಾಮಹಿಮ, ಗುರುವೆ ಅಕಲ್ಪಿತ , ನಿತ್ಯ ನಿರವಯ ಸಾಕಾರ ವಿಡಿದು ಗುರುಲಿಂಗವಾದ , ನಿರಾಕಾರವಿಡಿದು ಪ್ರಾಣಲಿಂಗವಾದ , ಉಭಯ ಸ್ಥಲ ಏಕವಾದಲ್ಲಿ ಭವ ವಿರಹಿತ ಭಕ್ತ ಜೀವನ್ಮುಕ್ತನಾದ , ಅಂತು ಗುರುವಿನಿಂದ ಕಾಶಿ ಕ್ಷೇತ್ರ ಗುರುಚರಣ ಪ್ರಕ್ಷಾಲನೋದ ಗಂಗಾತೀರ್ಥ, ಗುರುಲಿಂಗ ಸಾಕ್ಷಾತ್ ಪರಶಿವನಿಂದ ವಿಶೇಷ ಗುರುದರ್ಶನ, ಪರಮ ಪೂಜೆ , ಗುರುಪಾದ. ರುದ್ರಗಾಯತ್ರಿ, ಗುರುವಿನಿಂದಲೆಯೆ ಘನವೇನು ಇಲ್ಲ ಕೂಡಲ ಚೆನ್ನಸಂಗಯ್ಯ, ಎನ್ನ ಪರಮಗುರು ಬಸವಣ್ಣನ ಪಾದಕ್ಕೆ ನಮೋ ನಮೋ ಎಂಬೆನು.''

ತಾತ್ಪರ್ಯ : ಗುರುವೆ ಸದಾಶಿವ ಗುರುವೆ ಮಹಾಮಹಿಮ ನಾದುದರಿಂದ ಗುರುಧ್ಯಾನ ವಲ್ಲದೆ ಧ್ಯಾನ ವಿಲ್ಲವು. ಸದಾಶಿವನೆಂದರೆ ಗುರು, ಗುರುಧ್ಯಾನವೆ ಸದಾಶಿವನ ಧ್ಯಾನ. ಸದಾಶಿವ ನಿರಂತರ ಶಿವ. ಒಮ್ಮೆ ಇದ್ದು ಒಮ್ಮೆ ಇಲ್ಲದವನಾಗುವವನಲ್ಲ , ಸಾಕಾರ ರೂಪದಿಂದಲೂ ಇದ್ದವನು, ನಿರಾಕಾರನಾಗಿ ಇದ್ದವನು, ಉಭಯ ಏಕರೂಪವಾಗಿ ಇದ್ದನು, ನಿರಂತರವಾಗಿರುವ ಮಂಗಳಮಯ ಸತ್ಯವನ್ನು ತಿಳಿಯದ್ದರಿಂದ ಗುರುವೆ ಸದಾಶಿವನೆಂಬುದು ತಿಳಿಯದೆ ಹೋಯಿತು.

ಇದ್ದವನ ಧ್ಯಾನ ಮಾಡುವುದು ಯೋಗ್ಯವಾದುದು. ಸದಾಶಿವರೂಪಿ ಮಹಾಮಹಿಮನಾಗಿದ್ದುದರಿಂದ ಗುರುಧ್ಯಾನವೆ ಯೊಗ್ಯವಾದುದು. ಈ ಮಹಾಂತ ತನ್ನ ನಂಬಿದ ಭಕ್ತರನ್ನು ತನ್ನಂತೆ ಮಾಡುವ ಮಹಾಮಹಿಮ. ಇಹಪರವೆ ಸ್ವಸ್ವರೂಪಿ ಮಾಡಿ ಪ್ರಜ್ವಲಿಸುವ ಪ್ರಕಾಶಮಯ. ಚರಾಚರ ಜಗವನ್ನೆ ಲಿಂಗಮಯಮಾಡಿ ತೋರುವ ಘನಲಿಂಗ. ಸಕಲವು ಲಿಂಗಮಯವು ಲಿಂಗದ ಹೊರ್ತು ಅನ್ಯ ಆವುದು ಇಲ್ಲ. ಲಿಂಗವೆ ಅಭೇದ್ಯ ಸತ್ಯವು ಎಂದು ಸಿದ್ಧಮಾಡುವ ಪರಿಣಾಮಿ ಪ್ರಸಾದಿಯೆ ಮಹಾಮಹಿಮನೆಂದು ಹೇಳಿಹರು.

ಗುರುದೇವ ಮಾಯಾಕೋಲಾಹಲ. ತೋರಿ ಇಲ್ಲವಾಗುವ ನಾಮರೂಪವನ್ನು ಅಸ್ತಿ ಭಾತಿ ಎಂಬ ಪರಮ ಸತ್ಯದಿರುವ ಸಿದ್ಧ ಮಾಡುವ ಸಿದ್ಧಿನಾಥ. ಗುರುನಾಥ ಜ್ಞಾನದೇವ, ಜ್ಞಾನಗಂಗಾ ಜ್ಞಾನೇಶ್ವರ ನಿದ್ದುದರಿಂದ ಗುರುಧ್ಯಾನ ವಲ್ಲದೆ ಧ್ಯಾನ ವಿಲ್ಲವು ಎಂದು ಹೇಳಿಹರು.

ಗುರುದೇವ ಅಕಲ್ಪಿತನು ನಿತ್ಯ ನಿರವಯನು ಉಪಮೆಗೆ ಮೀರಿದವನು ಆಗಿರುವಲ್ಲಿ ಉಪಮೆಗೆ ತರಬಾರದು ನೋಡಾ ಅಂದು ಇಂದು ಎಂದೆಂದೂ ಇದ್ದಂತೆ ಇದ್ದವಂಗೆ ಏನೆಂದುಪಮಿಸುವುದು. ಗುರುವಾದವನು ಶಿಷ್ಯನ ಕಾಣದವನು , ಮರವು ಆಗದವನು, ಅರುವು ಆಗದವನು, ಅರಿಯ ಬಾರದ ಘನವೆ ತಾನಿದ್ದವಂಗೆ ಏನೆಂದುಪಮಿಸುವುದು. ಸಮ ಪ್ರಕಾಶಮಾನ ಜೋತಿಗೆ ಉದಯವೆನ್ನಲೆ ಅಸ್ತ ವೆನ್ನಲೆ ? ಅದರತ್ತಾಚೆ ಒಳಗೆನ್ನಲೆ ? ಹೊರಗೆನ್ನಲೆ ? ಅದರತ್ತಾಚೆ ಎನ್ನಲೆ ಶಬ್ದದ ಮರೆಯಲ್ಲಿದ್ದವಂಗೆ ಏನೆನ್ನುವದು, ಶಬ್ದ ಮುಗ್ದಂಗೆ ಏನೆನ್ನುವದು. ಗುರುವಾದವಂಗೂ ಕಾಣದವನು , ಶಿಷ್ಯನಾದವಂಗೂ ಕಾಣದವಂಗೆ

ಏನನ್ನಾಗಿ ಕಾಣುವುದು, ಏನೊಂದಾಗದ ಘನನಾಗಿ ತನ್ನಿಂದ ತನ್ನ ಕಂಡವನೆ ಅಕಲ್ಪಿತನು, ನಿರಂತರ ಇದ್ದಂತೆ ಇರುವದರಿಂದ ನಿತ್ಯನು. ನಿರುಪಾಧಿಯು ತನು ವಿರಹಿತನು ಅತೀಂದ್ರಿಯು ಒಡಲಿಲ್ಲದವನು. ಕರಣಂಗಳು ಲಿಂಗ ಕಿರಣಂಗಳಾದವಂಗೆ ಉಪಮಿಸುವದದೆಂತು ?

ಸಾಕಾರ ವಿಡಿದು ಗುರುಲಿಂಗವಾದ ನಿರಾಕಾರ ವಿಡಿದು ಪ್ರಾಣಲಿಂಗವಾದ : ಉಭಯ ಸ್ಥಲ ಏಕವಾದಲ್ಲಿ ಭವವಿರಹಿತ ಭಕ್ತ ಜೀವನ್ಮುಕ್ತನಾದ . ಅಕಲ್ಪಿತನಾಗಿದ್ದು , ಅನುಪಮ ನಾಗಿದ್ದು , ನಿತ್ಯನಾಗಿದ್ದು , ನಿರವಯನಾಗಿದ್ದು , ಸಾಕಾರವಿಡಿದನೆ ? ಇದೆಂಥ ಸ್ವಲೀಲ! ನಿರಾಕಾರವಿಡಿದನೆ ಸಾಕಾರವೆಂಬನೆ ಸಮಪ್ರಕಾಶನಾಗಿಹ ಸಾಕಾರ ಒಳಹೊರಗೆನ್ನದೆ ಭರಿತ ಪ್ರಕಾಶ. ನಿರಾಕಾರವೆನ್ನಲೆ ? ನಿರುಪಮ ಜ್ಯೋತಿ. ಅಣುವಿಂಗಣು ವಾಗಿಹ ಜ್ಯೋತಿ ರೇಣುವಿಂಗೆ ರೇಣುವಾಗಿಹ ಜ್ಯೋತಿ, ಮಹಕ್ಕೆ ಮಹವಾಗಿಹ ಜ್ಯೋತಿ ಅಪರಮಿತ ಜ್ಯೋತಿಗೇನನ್ನಬೇಕು ? ಭಕ್ತನೆಂಬೆನೆ , ತನುವಿರಹಿತ ಮುನ್ನೆಲ್ಲಿಂದ ಬಂದ ನಲ್ಲಿ ಹೋಗಿ ನಿತ್ಯನಾಗಿರ್ದ ಜ್ಯೋತಿ. ಗುರು ನಿಂದ ಸ್ಥಾನ ಕಾಶಿ ಕ್ಷೇತ್ರ. ಗುರುಪಾದೋದಕವದು ಜ್ಞಾನಗಂಗಾ ಜ್ಞಾನಾಮೃತ. ಗುರುಧ್ಯಾನ ವಲ್ಲದೆ ಧ್ಯಾನವಲ್ಲವು. ಧ್ಯಾನಾತೀತನೆನ್ನುವುದು ಧ್ಯಾನವು ಅನುಪಮನೆನ್ನುವದೆ ಧ್ಯಾನವು.

ಗುರುಪಾದ ಪುಜೆಯಲ್ಲದೆ ಪೂಜೆಯಿಲ್ಲವು ಗುರು ಪಾದಪೂಜೆಯೆ ಪರಮ ಪೂಜೆ ಏಕೆಂದರೆ ಗುರುಚರಣ ಪ್ರಕ್ಷಾಲ ನೋದಕವೆ ಗಂಗಾತೀರ್ಥವು. ಗುರುಲಿಂಗವು ಸಾಕ್ಷಾತ್ ಪರಶಿವನಿಂದ ವಿಶೇಷವು. ಇದು ಕಾರಣ ಗುರುಪಾದ ಪೂಜೆ ಯಿಲ್ಲದೆ ಪೂಜೆಯಲ್ಲವು .

ಗುರುಲಿಂಗರೂಪಿ ಮಹಾಮಹಿಮನ ಪಾದ ಜಗದಗಲ, ಮಿಗೆ ಅಗಲ, ಬ್ರಹ್ಮಾಂಡದಗಲ ಅಣುವಿಗಿಂತಲೂ ಅಣುವಾಗಿ ಸಕಲವು ತಾನಾದ ಘನಪಾದ. ಈ ಪಾದ ಗುರುಪಾದ ವಾಗಿಪ್ಪುದರಿಂದ ಗುರುಪಾದ ಪೂಜೆಯಲ್ಲದೆ ಪೂಜೆಯಿಲ್ಲವು.

ಗುರು ವಾಕ್ಯವಿಲ್ಲದೆ ಮಂತ್ರ ವಿಲ್ಲವು : ಧ್ವನಿಯು ಗುರು ವಾಕ್ಯವೆ ಧ್ವನಿಯು, ಧ್ವನಿಯ ಮರೆಯಲ್ಲಿದ್ದವ ತಾನೆ ಆಗಿಹುದರಿಂದ ಕಲ್ಪಿತರು ಆರೆ ಇರಲಿ ಅವರುಗಳಿಗೆಲ್ಲ ಗುರುವಾಕ್ಯವೆ ಮಂತ್ರವಾಗಿದೆ. ನರರು, ಸುರರು, ದೇವಗಣ, ರುದ್ರಗಣ , ಪ್ರಮಥಗಣ ಮೊದಲಾದವರು ಸತ್ಯರು, ನಿತ್ಯರು ಮುಕ್ತರೆಂಬ ಮಹಾಮಹಿಮರಿಗೂ ಧ್ವನಿಯ ಮರೆಯಲ್ಲಿದ್ದರಿಂದ ಸದ್ಗುರುವೆ ಗುರುರೂಪವಾಗಿದೆ. ಅಂತಪ್ಪ ಮಹದಿರುವುಳ್ಳ ಮಹಾ ಮಹಿಮನಿಂದ ಹೊರಬಂದ ವಾಕ್ಯಗಳೆ ಮಹಾವಾಕ್ಯಗಳು ಮಂತ್ರವಾಗಿವೆ. ಗುರುದರ್ಶನ ವಾದಲ್ಲಿ ಗುರುವಾಕ್ಯವಿದೆ. ಗುರುವಾಕ್ಯವಿದ್ದಲ್ಲಿ ಮಂತ್ರವಿದೆ. ಮಂತ್ರವದು ಮನ ನಷ್ಟ ಮಾಡುವ ಘನದಿರುವು, ಅದುವೆ ಲಿಂಗಾಂಗ ಸಮರಸ ಜ್ಞಾನ . ಅದುವೆ ತತ್ವಮಸ್ಯಾದಿ ಮಹಾವಾಕ್ಯಗಳ ಘನದಿರುವು. ಅಲ್ಲಿ ಅಹಂಬ್ರಹ್ಮಾಸ್ಮಿಯ ಗುಟ್ಟು . ಈ ಘನಗುಟ್ಟು ಅರಿವುಡೆ ಅಚಿಂತ್ಯ ಪದ ತನ್ನಿಂದ ತನಗೆ ವಿದಿತವು. ಇಂತಪ್ಪ ರಹಸ್ಯ ಗುರು ತೋರಿದಲ್ಲದೆ ಅಸಾಧ್ಯವು. ಅಸಾಧ್ಯವ ಸಾಧಿಸಲು ಅನುವು ಕರುಣಿಸಿದುದೆ ಗುರುಕಾರುಣ್ಯ. ಇಲ್ಲಿ ಸತ್ತ ಗುರುವಿನ ಕಾರುಣ್ಯ ಸತ್ತಕೊಂಬ ಶಿಷ್ಯಂಗೆ ಭಕ್ತಿ ವಿಸ್ತರಿಸುವದು ಎಂದಂತೆ. ಚಿದಹಮ್ಮು ನಷ್ಟವಾಗಿ ಅಹಮಿಲ್ಲದ ಚಿದ್ಘನ ನಾದುದು ಸತ್ತಗುರು, ತನು ಅಹಂಮಮ ನಷ್ಟವಾದವನ ಸತ್ತಕೊಂಬ ಶಿಷ್ಯಂಗೆ ಇವರೀರ್ವರಲ್ಲಿ ಸಮಪ್ರಕಾಶ ಮಾನವಾದ ತತ್ವ ತಿಳಿಯುವ ತಿಳಿಸುವ ಪರಿಶುದ್ಧ ಹೃದಯ ವಾದುದು. ಅಲ್ಲಿ ಅಸಾಧ್ಯವಾದ ನುಡಿಗೆಡೆಗೊಡದ ಘನದಿರುವು ಕರುಣಿಸಿದುದೆ ಗುರುವಾಕ್ಯವು.

ಕೇಳುದುದ ಕೇಳಿ ಕೇಳದವ ತಾನಾದುದೆ ಪ್ರತಿಭಾವ ನಷ್ಟವಾದ ಚಿನ್ಹ. ಏನೆಂಬೇನೆಂಬೆ ಎರಡಿಲ್ಲದ ಘನವನೇನೆಂಬೆ ಗುರುಶಿಷ್ಯರೆಂಬ ಪ್ರತಿಭಾವ ನಷ್ಟವಾಗಿ ಸಮತೆ ಸಯವಾದುದ ನೇನೆಂಬೆ. ಈರ್ವರ ಇರವು ಸಮಪ್ರಕಾಶವೆ ಆಗಿಹ ಘನವನೇನೆಂಬೆ ಎಂದು ಹೇಳಿಹರು. ಇಂತಪ್ಪ ಗುಟ್ಟು ತಿಳಿಸಿದುದೆ ಗುರುವಾಕ್ಯವು, ಗುರು ವಾಕ್ಯವಿಲ್ಲದೆ ಮಂತ್ರವಿಲ್ಲವು ಎಂದು ಹೇಳಿಹರು.

ಗುರು ಕೃಪೆಯಿಲ್ಲದೆ ಮೋಕ್ಷವಿಲ್ಲವು : ಸಕಲದರ ಬಿಡುಗಡೆ ಯಾಗಬೇಕಾದರೆ ಗುರುಕೃಪೆಯೆ ಮುಖ್ಯವು. ಗುರು ಕೃಪೆ ಧ್ವನಿಯ ಮರೆಯಲ್ಲಿದ್ದುದ ಕರುಣಿಸುವದೆ ಗುರುಕೃಪೆ. ''ಆನು ನಿನೇನೆಂಬುದಿಲ್ಲ ತಾನಿಲ್ಲ ತಾನರಿದ ಬಳಿಕ ಏನೊ ಇಲ್ಲ ಇಲ್ಲಾದುದಿಲ್ಲಾದುದು ಎಲ್ಲಿಪ್ಪುದು, ಇಲ್ಲಾದುದಿಲ್ಲಾದುದು ಎಂತಿಪ್ಪುದು, ಅನುವರಿತು ತನುವ ಮರದಡೆ ಭಾವರಹಿತ ಗುಹೇಶ್ವರ ಬಯಲು.'' ಈ ಮಹಾನುಭವ ಭಕ್ತರ ಹೃಯದಲ್ಲಿ ವೇದ್ಯವಾಗುವಂತೆ ಕರುಣಿಸುವದೆ ಗುರುಕೃಪೆ. ಇದನರಿವುಡೆ ನಿಜವರಿತಂತೆ, ತನ್ನ ಅರಿತಂತೆ, ಗುರುವಿನರಿತೆ ಎಂಬುದು ಮಹತ್ಕೃಪೆಯಾಗದ ತನಕ ಅಚಿಂತ್ಯಸುಖವಿಲ್ಲ . ಅಚಿಂತ್ಯತ್ವವೆ ಮೋಕ್ಷವು ; ಅಚಿಂತ್ಯತ್ವ ದೊರೆಯದಿದ್ದಡೆ ಮೋಕ್ಷವಿಲ್ಲವು. ಇದು ಕಾರಣ ಗುರುಕೃಪೆಯೆ ಮೋಕ್ಷಕ್ಕೆ ಮೂಲವು. ಆದೆಂತೆಂದೊಡೆ ಧ್ಯಾನಮೂಲೋ ಗುರುಮೂರ್ತಿಃ ಮೋಕ್ಷಮೂಲ ಗುರುಕೃಪೆ ಎಂಬುದು ನಿಮ್ಮ ವಾಕ್ಯವಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನ.

ಧ್ಯಾನಕ್ಕೆ ಮೂಲವಾದುದು ಗುರುಮೂರ್ತಿ ಮೋಕ್ಷದ ಮೂಲ ಗುರುಕೃಪೆ : ಧ್ಯಾನವದು ಗುರುಮೂರ್ತಿಯಲ್ಲ , ಮೋಕ್ಷದ ಮೂಲವು ಗುರುಕೃಪೆ ಧ್ವನಿಯ ಮರೆಯಲ್ಲಿದ್ದುದು ಗುರುಮೂರ್ತಿ: ಬಂಧ ಮೋಕ್ಷಕ್ಕೆ ಮೂಲವಾದುದು ಕರುಣಿಸುವದೆ ಗುರುಕೃಪೆ ಎಂಬುದು ನಿಮ್ಮ ವಾಕ್ಯವಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನ ಎಂದು ಹೇಳಿಹರು.

ಇತಿ ಸಮಾಪ್ತಿ

ವಚನಾನುಕ್ರಮಣಿಕೆ

ಅಂತರಾತ್ಮ ಬೋಧೆ

ಅಂತರಾತ್ಮ ಬೋಧೆಯಲ್ಲಿ ಬಸವಣ್ಣ ಚೆನ್ನಬಸವಣ್ಣ ಹಾಗೂ
ಅಲ್ಲಮಪ್ರಭುಗಳ 33 ವಚನಗಳಿವೆ

ಸದ್ಗುರು ಕಾರುಣ್ಯವೆ ಸಕಲಕ್ಕೂ ಮೂಲವು ಕಾರಣದ ಮೂಲವು ಕಾರ್ಯದ ಮೂಲವು ಎಂದುದಾಗಿ ಲಿಖಿತಕ್ಕೂ ಸದ್ಗುರು ಕಾರುಣ್ಯವು ನಿಶ್ಚಿತವು.

ವಚನ - 1

ಸಾವು ತಡವಲ್ಲ . ನರಕ ದೂರವಲ್ಲ ಕೆಮ್ಮನೆ ಕೆಡಬೇಡ .
ವಿಷಯವ ಬಿಡು, ಗುರು ಭಕ್ತಿ ನಂಬು,
ಸುಖಿಯಪ್ಪೆ ಚಿಮ್ಮಲಿಗೆಯ ಚೆನ್ನರಾಮ .

ತಾತ್ಪರ್ಯ : ಓ ಮಾನವ ಮಹಾಂತರ ಸದುಪದೇಶದ ಕಡೆ ಲಕ್ಷ ಕೊಡು. ವ್ಯರ್ಥ ಕೆಡಬೇಡ ಮಾನವ. ನಿನಗೆ ಆವುದು ಬೇಡಾದುದು ಅದು ಬೇಕಾಗಿದೆ. ಆವುದು ಬೇಕು ಅದು ಬೇಡಾಗಿದೆ. ಆಶ್ಚರ್ಯ ಆವುದರ ಮೋಹ ನಿನಗೆ ಅಪಾಯವು ; ಅದರಲ್ಲಿ ಮೋಹಿತ ನಾಗಿರುವೆ. ಆವುದರಲ್ಲಿ ಪ್ರೀತಿ ಅವಶ್ಯಕವಾದುದು, ಅದರಲ್ಲಿ ಅಪ್ರೀತಿಯುಳ್ಳವನಾಗಿರುವೆ.

ದೇಹದ ಸತ್ಯತ್ವ ಬುದ್ದಿ ಆರಾರಿಗೂ ಬೇಡ ; ಇದು ಸಕಲರಲ್ಲಿ ಬೇರೂರಿವುದು. ಗುರುಭಕ್ತಿ ಸಕಲರಿಗೂ ಪ್ರಿಯವಾದುದು, ಅದು ಬೇಡಾಗಿದೆ. ಇದು ಆಶ್ಚರ್ಯವಲ್ಲವೇ? ಸಕಲರಿಗೆ ಬ್ರಹ್ಮ ವಿದ್ಯೆ ಅವಶ್ಯವಾಗಿ ಬೇಕು. ಭ್ರಾಂತಿ ಆರಾರಿಗೂ ಬೇಡ. ವಿಷಯಾಸಕ್ತಿ ವಿಷಯ ಭೋಗೋಪಭೋಗ ಅರುವಿನ ಜನ್ಮಕ್ಕೆ ಬೇಡವಾದುದು. ಅರುವು ಬೇಕಾದುದು. ಬೇಡವಾದುದು ಬೇಕಾಗಿದೆ. ಬೇಕಾದುದು ಬೇಡವಾಗಿದೆ. ದೇಹವದು ಸದಾದಹಿಸುವ ದೇಹ. ದಿನೇ ದಿನೇ ದಹಿಸುತ್ತ ದಹಿಸುತ್ತ ಕೊನೆಗೊಂದು ದಿನ ನಾಶವಾಗುವ ದೇಹ. ಇದು ಮಲಮೂತ್ರಗಳಿಂದುದಕವಾದ ದೇಹ , ರಕ್ತ ಮಾಂಸಂಗಳಿಂದ ಮುಚ್ಚಿದ ಚರ್ಮ, ಹೇಯದ ಗೊಂಬೆ. ಇದರಲ್ಲಿ ಮೋಹವೇ? ಮೋಹಿಸಿದರೂ ದೇಹ ಶಾಶ್ವತವೇ? ಇದರ ಸಾವು ತಡವಲ್ಲ. ಸಾವಿನ ಮರು ಕಾಲವೆ ನರಕದಲ್ಲಿರುವ ಕಾಲ . ಅದು ತಾಯಿ ಗರ್ಭದಲ್ಲಿರುವುದು ನರಕದ ಮನೆಯಲ್ಲವೆ ?

ದೇಹಕ್ಕೆ ಅಂಟಿಕೊಂಡಿರುವ ಇಂದ್ರಿಯಗಳೆಂಬ ಕುದುರೆಗಳ ಮುಖ ಅಧೋಮುಖ. ಸದಾ ಇವುಗಳಿಗೆ ವಿಷಯಂಗಳ ಭೋಗಿಸುವ ಹಂಬಲ, ವಿಷಯಂಗಳಾಸಕ್ತಿ. ಹೊನ್ನಾಗಲಿ ಹೆಣ್ಣು ಮಣ್ಣಾಗಲಿ ಕಂಡರೆ ಇವುಗಳಿಗೆ ಅಷ್ಟೊಂದು ಪ್ರೀತಿ . ಪತಂಗ ರೂಪಕ್ಕೆ ಮೋಹಿಸಿ, ಜಿಂಕೆ ನಾದಕ್ಕೆ ಮೋಹಿಸಿ, ಆನೆ ಸ್ಪರ್ಶಕ್ಕೆ , ಗಂಧಕ್ಕೆ ಭ್ರಮರವು ಮೋಹಿಸಿ ಮರಣವಾಗುವಲ್ಲಿ, ಓ ಮಾನವಾ ಈ ಐದಕ್ಕೂ ಮೋಹಿತನಾದಲ್ಲಿ ನೀನು ಉಳಿಯುವದೆಂತು ? ನಿನ್ನ ದೇಹದ ಅವಸಾನ ತಡವಲ್ಲ . ಇಂದ್ರಿಯಂಗಳ ಬಲವು ದಿನೇ ದಿನೇ ಕ್ಷೀಣವಾಗುತ್ತಿರುವವು . ದೇಹವದು ನೀರಿನ ಮೇಲಿರುವ ಗುರುಳೆ . ಗುರುಳೆಗೆ ಎಷ್ಟು ಆಯುಷ್ಯ ಅಷ್ಟೆ ಆಯುಷ್ಯ ಈ ಶರೀರದ್ದು . ಶರೀರವದು ಯಮನ ಕಾಳು. ಇದು ಅವನ ಆಹಾರ . ಅವನಿಗೆ ಊಟ ಮಾಡಲು ಕಾಲ ವೇಳ್ಯಗಳ ನಿರ್ಬಂಧವಿಲ್ಲ . ಅವನಿಗೆ ಬೇಕಾದಲ್ಲಿ ಮಧ್ಯ ರಾತ್ರಿಯಲ್ಲಾದರೂ ಉಣಬಲ್ಲನು. ಜಗತ್ತಿನಲ್ಲಿರುವ ವ್ಯಷ್ಠಿ ಸಮಷ್ಠಿ ಶರೀರಗಳು ಮೃತ್ಯುವಿನ ದವಡೆಯಲ್ಲಿ , ಇವನಿಗೆ ಕರುಣೆಯಿಲ್ಲ, ಹಸುಗೂಸುಗಳೆಂದರೆ ಕೇಳದವನು , ಜನನವೆಂದರೆ ಮರಣ,

ಮರಣವೆಂದರೆ ಜನನ . ಇದು ಬ್ರಹ್ಮಾದಿಗಳ ಆಟ , ಜೀವಿಗಳಿಗೆ ಪ್ರಾಣ ಸಂಕಟ . ಸಾವಿನ ದವಡೆಯಲ್ಲಿರುವಂಗೆ ಸಾವು ಕೇಳುವದು ಎಷ್ಟು ಹುಚ್ಚುತನ . ದೇಹದ ನಿವಾಸ ಮೃತ್ಯುವಿನ ಮನೆಯಲ್ಲಿಯೆ ಭವಿಷ್ಯದ ಇಚ್ಛೆ ಮಾಡುವದು ಅದೆಷ್ಟು ಮಂದ ಬುದ್ದಿ . ಈ ಬುದ್ದಿಗೆ ಏನನ್ನ ಬೇಕು?

ಇದು ಕಾರಣ ಗುರುಭಕ್ತಿಯ ನಂಬು ಸುಖಿಯಪ್ಪೆ ಚಿಮ್ಮಲಿಗೆಯ ಚೆನ್ನರಾಮ. ಗುರುದೇವನ ಸಂದೇಶ ಅಮರ ಸಂದೇಶ. ಸಕಲ ಮಾನವರ ಎಚ್ಚರ ಮಾಡುವ ಸಂದೇಶ. ಗುರುಭಕ್ತಿ : ಇದು ಸುಖದ ಸುಖಿಯಾಗುವ ಭಕ್ತಿ. ಜೀವ ಪರಮರೊಂದಾಗುವ ಭಕ್ತಿ. ಸಚ್ಚಿದಾನಂದದಲ್ಲಿ ಸಮರಸದ ಭಕ್ತಿ, ಅರುವಿಂಗರುವಾಗಿಹ ಇರುವು. ಪೂರ್ವಾಶ್ರಯ ನಷ್ಟವಾಗಿ ಅಜಾತನಾಗುವ ಸಂದೇಶ.

ಗುರುದೇವನು ಚೈತನ್ಯ, ಶಾಶ್ವತನು, ಶಾಂತನು. ಈ ಭಕ್ತಿ ಚೈತನ್ಯ ಭಕ್ತಿ. ತೋರಿ ಇಲ್ಲವಾಗುವ ಭಕ್ತಿಯಲ್ಲ . ಇದು ಮಾಯಿಕ ಭಕ್ತಿಯಲ್ಲ, ಶಾಶ್ವತ ಭಕ್ತಿ. ಇದರಿಂದ ಶಾಂತಾತ್ಮ ಚೈತನ್ಯಾತ್ಮ ತಾನೆ. ಶ್ರೀಗುರು ನಾಮ ರೂಪಂಗಳಿಂದತ್ತತ್ತ. ನಾದ ಬಿಂದು ಕಲೆಗಳಿಂದತ್ತತ್ತ. ಗುಣಾತೀತನಾಗಿರುವ ಸರ್ವಾತ್ಮ. ಸಕಲ ಹೃದಯಂಗಳ ಮಂಗಳಮಯ ಜ್ಯೋತಿ. ಜಗದೊಳಗಿದ್ದರೂ ಜಗವ ಹೊದ್ದದ ನಿರಾಲಂಬ ನಿಜಸುಖದ ನಿವಾಸ, ಭವತಾರಕ.

ಗುರುವು ರೂಪನಲ್ಲ, ಅರೂಪನಲ್ಲ, ನಿರೂಪನು. ನಾಮಿಯಲ್ಲ, ಅನಾಮಿಯಲ್ಲ ನಿರ್ನಾಮಿಯು. ನಿರ್ವಾಣಿಯು, ನಿಶಬ್ದವೇದಿ. ಈ ಘನವಂತನಲ್ಲಿ ಭಕ್ತಿ ಬರುವದೆಂದರೆ ಬಹು ಜನ್ಮಂಗಳಲ್ಲಿ ಮಾಡಿದ ನಿಷ್ಕಾಮ ಕರ್ಮದ ಪುಣ್ಯದ ಫಲದ್ರೂಪವು. ಅದು ಈಶ್ವರನೊಲಮೆ. ಗುರುಭಕ್ತಿ ಅನನ್ಯ ಭಕ್ತಿಗಷ್ಟೆ ಸುಗಮ. ಇನ್ನುಳಿದವರಿಗೆ ದುರ್ಗಮವಾಗಿದೆ. ಕೌರವರಿಗೆ ಶ್ರೀಕೃಷ್ಣನಲ್ಲಿ ಭಕ್ತಿ ಬರುವದು ಅಷ್ಟೇ ಕಠಿಣವಾಯಿತು. ಪಾಂಡವರ ಮಕ್ಕಳಾದ ಐವರಿಗೂ ದ್ರೌಪದಿಗೂ ಭಕ್ತಿ ಬರುವದು ಅಷ್ಟೇ ಸುಗಮವಾಯಿತ್ತು. ಹಾಗೆ 12ನೇಯ ಶತಮಾನದಲ್ಲಿ ಅನನ್ಯ ಭಕ್ತಿಯೆಂಬುದು ಬಸವರಸ ಚೆನ್ನಬಸವಣ್ಣ ಪ್ರಭುದೇವ ಮೊದಲಾದವರಿಗೆ ಹಾಗೂ ಶರಣಿಯರಾದ ಅಕ್ಕಮಹಾದೇವಿ ನೀಲಾಂಬಿಕೆ ಲಿಂಗಮ್ಮ, ಅಮುಗೆಯ ರಾಯಮ್ಮ ಮೊದಲಾದವರಿಗೆ ಅಷ್ಟೇ ಸುಗಮವಾಯಿತು.

ಲಿಂಗಾಂಗ ಸಮರಸ ಜ್ಞಾನವೇ ಗುರು. ಈ ಮಹದರುವಿನಲ್ಲಿ ಅಪಾರ ಶ್ರದ್ಧೆ ವಿಶ್ವಾಸವೆ ಭಕ್ತಿ, ಅದುವೆ ಗುರುಭಕ್ತಿ. ಆರ ಹೃದಯದಲ್ಲಿ ಲಿಂಗಾಂಗ ಸಮರಸ ಜ್ಞಾನ ಪ್ರಜ್ವಲಿಸುತ್ತಿದೆ ಅದು ಗುರು ಹೃದಯ, ಅರು ಹೃದಯ, ಚೈತನ್ಯ ಹೃದಯ, ಅಖಂಡೈಕರಸ ಹೃದಯ. ಇದುವೆ ಮಹಾಲಿಂಗ ಹೃದಯ. ಇಂತಪ್ಪ ಸ್ವಾನುಭವ ಹೃದಯ , ಭವಿಯ ಭಕ್ತರು ಮಾಡುವ ಮಹಾಲಿಂಗ. ಮರವ ಕಳೆದು ಅರು ಸ್ವರೂಪರನ್ನಾಗಿ ಮಾಡುವ ಘನ ಲಿಂಗ. ಇದು ಕಾರಣ ಗುರುತತ್ವಕ್ಕೆ ನಂಬು. ಎಲೆ ಜೀವನೆ ಘನ ಗುರುವ ನಂಬು, ಅವನಲ್ಲಿ ಅಪಾರ ವಿಶ್ವಾಸವಿಡು. ಆ ಮಹಾಂತನಲ್ಲಿ ಅಚಲ ಭಕ್ತಿಯನಿಡು ಆಗ ಸುಖಿಯಪ್ಪೆ ಚಿಮ್ಮಲಿಗೆಯ ಚೆನ್ನರಾಮನೆಂಬ ತೆರಹಿಲ್ಲದ ಲಿಂಗ ಭರಿತವೆಂಬ ಗುರು ಕಾರುಣ್ಯದಲ್ಲಿ ಪೂರ್ಣವಿಶ್ವಾಸ ಪ್ರೀತಿ ನಿಷ್ಠೆ ಮಾಡುವವರು ಸುಖ ಸ್ವರೂಪವೆ ತಾವಾಗಿ ನಿಜ ಸುಖಿಯಾಗುವರು.

ವಚನ - 2

ಹೆಗ್ಗಣವ ನಿಕ್ಕಿ ನೆಲಗಟ್ಟು ಕಟ್ಟಿದಂತೆ ಆಯಿತ್ತು
ಕಾಯಗುಣ. ಅಹಂಕಾರ ಪ್ರಭೋದಗಳೇಕಯ್ಯ ?
ಕಾಮ, ಕ್ರೋಧ, ಲೋಭ, ಮೋಹ, ಮತ್ಸರಂಗಳನಿಕ್ಕಿ ಎನ್ನ ಮಾಡಿದಿರಿ
ಎನ್ನ ಬಾಧಿಸಲೆಂದು ಲಿಂಗಯ್ಯ ತಂದೆ ಆದಿ ವ್ಯಾಧಿಗಳೆಲ್ಲವ ಕಳೆದು
ನಿರ್ವಾಣವಪ್ಪ ಪದವ ಕರುಣಿಸಯ್ಯ ಕೂಡಲಸಂಗಮದೇವಾ.

ತಾತ್ಪರ್ಯ: ಹೆಗ್ಗಣವ ನಿಕ್ಕಿ ನೆಲ ಗಟ್ಟು ಕಟ್ಟಿದಂತೆ ಆಯಿತ್ತು ಕಾಯ ಗುಣ : ಮಹಾತ್ಮ ಬಸವಣ್ಣನವರು ಕಾಯ ಗುಣವದು ಬುನಾದಿಯಲ್ಲಿ ಹೆಗ್ಗಣವ ನಿಕ್ಕಿ ಮನೆಯ ಕಟ್ಟಿದರೆ ಅದು ಭದ್ರವಾಗಿರಬಹುದೆ ? ಸುಭದ್ರವುಳ್ಳ ಮನೆಗೆ ಹೆಗ್ಗಣ ಬಿದ್ದರೆ ಅಭ್ರದ್ರವಾಗುವಾಗ ಬುನಾದಿಯಲ್ಲಿ ಹೆಗ್ಗಣವ ನಿಕ್ಕಿ ಮನೆಯ ಕಟ್ಟಿದರೆ ಆ ಮನೆ ಭದ್ರವಾಗಿರಬಹುದೆ? ಬಾಳುವವದಾದರೂ ಅದೆಷ್ಟು ಕಾಲ. ಆ ಮನೆಯಲ್ಲಿ ವಾಸಿಸುವದಾದರೂ ಹೇಗೆ ? ಅದು ಬೀಳಲು ಆಗ ಈಗ ಯಾವಾಗ ಎನ್ನುವ ಮಿತಿಯಿಲ್ಲ . ಅದು ಮೃತ್ಯುವಿನ ಮನೆ, ಯಮನ ಮನೆ ಎನ್ನಲು ನಿಸ್ಸಂದೇಹ.

ಹೆಗ್ಗಣರೂಪಿ ಗುಣವುಳ್ಳ ಕಾಯ, ಈ ಕಾಯದಲ್ಲಿ ಜೀವನು ವಾಸಿಸಲು ಅಷ್ಟೇ ಭಯಾನಕ . ನರದೇಹವೆಂಬುದು ಚೈತನ್ಯದ ನಿವಾಸ . ನಿಶ್ಚಿಂತತೆ ನಿರ್ಭಯವುಳ್ಳ ನಿಜ ನಿವಾಸ. ದೇಹಿಗೆ ದೇಹಿಯಾದವನ ವಾಸ . ಅದು ಕಾಯ ಗುಣವುಳ್ಳದ್ದಾಯಿತೆ ! ಭವತಾಪ ಉಳ್ಳದ್ದಾಯಿತೆ ! ನಿರ್ವಿಕಾರ ತನು, ವಿಕಾರಮಯವಾಯಿತೆ ! ಬ್ರಹ್ಮಾಕಾರ ಮನ ಭ್ರಮೆಗೀಡಾಯಿತೆ ? ನಿರ್ಭಯ ಮನ ಭಯವುಳ್ಳದ್ದಾಯಿತೆ ? ಸಮತ್ವ ಕಳೆದುಕೊಂಡು ವಿಷಯದ ನಿಲಯವಾಯಿತೆ ? ಆತ್ಮರತಿ ಹೋಗಿ ವಿಷಯ ರತಿವುಳ್ಳದ್ದಾಯಿತೆ ? ಲಿಂಗಾಂಗ ಸಮರಸ ಜ್ಞಾನದಿಂದ ದೂರವಾಗಿ ಭೇದ ಜ್ಞಾನವುಳ್ಳದ್ದಾಯಿತೆ ?

ಓಹೋ ಕಾಯ ಗುಣ, ಅರು ಸ್ವರೂಪವಾದ ಮಾನವ ಜನ್ಮಕ್ಕೆ ಈ ಕಾಯ ಗುಣ ಸಲ್ಲುದು. ಅರುವಿನ ಜನ್ಮದಲ್ಲಿ ಬಂದು ಮರವೆಗೆ ಇಂಬುಗೊಡಬೇಕೆ ? ಮರವೆಂಬುದು ಬಂಜೆಯ ಮಗ . ಈ ಮಗ ಇಲ್ಲದವನು. ಇಲ್ಲದವನಿಗೆ ತಂದೆ ತಾಯಿಗಳಿಲ್ಲ . ಇಲ್ಲದವನಿಗೆ ಸತಿಸುತರೆಲ್ಲಿ ? ಅವನ ಕಾಯವಾದರೂ ಇದೆಯೆ ? ಹಾಗೆ ಇಲ್ಲದ ಕಾಯ ಅದು ಇದ್ದುದೆಂದು ? ಅದರ ಗುಣವಾದರೂ ಇದ್ದುದೆಂದು? ಇದು ಆಶ್ಚರ್ಯ. ಇಲ್ಲದವನ ಅಹಂಕಾರ. ಇದು ಆಶ್ಚರ್ಯ. ಇಂತಪ್ಪ ಅಹಂಕಾರಿಯೆ ಇರಲಿ, ಅವನು ಮಹಾಬುದ್ಧಿವಾನನೆ ಇರಲಿ, ಅರಿವೆ ಇರಲಿ, ಅದು ಕಾಯ ಗುಣಕ್ಕೊಳಪಟ್ಟುದು. ಕಾಯ ಗುಣವುಳ್ಳ ಅಹಂಕಾರಿಗೆ ಪ್ರಬೋಧಗಳೇಕಯ್ಯ ಎಂದು ಬಸವರಸರು ಎಚ್ಚರಿಸಿಹರು. ಆ ಅರುವಿನ ಅಹಂಕಾರಿಯಾಗಿ ಬೋಧ ಮಾಡುವದಿದು ಆಶ್ಚರ್ಯ. ಇದ್ದಂತಿದ್ದ ತನ್ನ ಸ್ವರೂಪದಲ್ಲಿ ಇಲ್ಲದ ಕಾಯ ಗುಣ ತನ್ನೊಳು ಕಲ್ಪಿಸಿಕೊಂಡು ತಾಯಿಯ ಗರ್ಭದೊಳಿದ್ದವನಾಗಿ ಹೊರಗೆ ಬಂದವನಾಗಿ, ಬಾಲ್ಯ, ಯೌವ್ವನ, ಮುಪ್ಪುಗಳ ಕಲ್ಪಿಸಿ, ಕೊನೆಗೆ ಮರಣವುಳ್ಳವ ತಾನೆಂದು ಕಲ್ಪಿಸುವುದು ಮೂರ್ಖತ್ವವಲ್ಲವೆ ?

ಅಕಲ್ಪಿತ ಘನವೆ ತಾನಿದ್ದು , ತನ್ನೊಳು ಇಲ್ಲದ ಸಂಕಲ್ಪ , ವಿಕಲ್ಪ , ರೂಪ ಮನವು

ಕಲ್ಪಿಸಿ, ಆ ಮನ ಉಪಾಧಿಕ ಮನ, ಉಪಾಧಿ ರಹಿತ ಮನವಾಗಿ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳ ರಚಿಸಿ ಭಯ, ದುಃಖದಿಂದುಕ್ತವಾಗಿ ಚಿಂತೆ ಎಂಬ ಚಿತೆಯಲ್ಲಿ ಸದಾ ದಹಿಸುತ್ತಿರುವುದು. ಕಲ್ಪಿತನಾದುದೆ ಕಾರಣ.

ಮಾನವ ತನ್ನ ವಿವೇಕ ವಿಚಾರದಿಂದ ದೂರಾಗಿ ಭೇದ ಜ್ಞಾನಿಯಾಗಿ ಸ್ವಾಮಿ ಸೇವಕ ನೆಂಬ ಭಾವ ತಾಳಿ ಹಲುಬಲು ಕಾರಣರನ್ನಾಗಿ ಮಾಡಿದುದು ಕಾಯ ಗುಣ. ಪೂರ್ವದಲ್ಲಿ ಕಾಯ ಗುಣವುಳ್ಳವರಾಗಿ ದೇವತೆಗಳು ದೈತ್ಯರುಗಳು ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗೊಳಗಾಗಿ ತಾವು ಮಾಡಿದ ತಪಸ್ಸು ಪುರುಷಾರ್ಥ ಸಾಧನೆಗೆ ಉಪಯೋಗ ವಾಗದೆ ಭವ ಯಾತನೆಗೆ ಕಾರಣವಾಯಿತು. ಇದು ಕಾರಣ. ಕಾಯಗುಣ ಬೇಡ ಮನುಜಾ. ಕಾಯ ಗುಣದಿಂದ ಕಾಮಾದಿ ಷಡ್ರಿಪುಗಳು ಅವನತಿಗೆ ಆಧಾರ. ಇದು ಮನದ ವಿಕಾರ. ತಾನಾರೆಂದು ತಿಳಿಯದ್ದರಿಂದ ಇಲ್ಲದ ಮನದ ಹಿರಿತನ. ಈ ಮನ ಇಲ್ಲವಾಗಲು ಇದ್ದ ಅರು ಸ್ವರೂಪ ತಿಳಿಯುವುಡೆ ಇಲ್ಲದ ದೇಹ ಬುದ್ದಿ , ದೇಹ ಭಾವ ಇಲ್ಲದಂತಾಗಲು ಲಿಂಗ ತಂದೆಯ ಪ್ರಾರ್ಥಿಸಬೇಕು.

ಓ ಲಿಂಗಯ್ಯ ತಂದೆ ಆದಿ ವ್ಯಾದಿಗಳೆಲ್ಲವ ಕಳೆದು ನಿರ್ವಾಣವಪ್ಪ ಪದವ ಕರುಣಿ ಸಯ್ಯ ಕೂಡಲಸಂಗಮದೇವಾ . ಆದಿ ಆವುದು ? ವ್ಯಾಧಿ ಆವುದು ? ದೇಹ ಬುದ್ದಿಯೆ ಅಂತರಂಗದ ಆದಿ. ದೇಹದ ದೃಷ್ಠಿಯೆ ಬಹಿರಂಗದ ವ್ಯಾಧಿ . ಇವರೆಡನ್ನೊಳಗೊಂಡುದು ಮರಹು. ವಿಸ್ಮೃತಿ ತಾನಾರೆಂದು ತನ್ನ ತಾ ತಿಳಿಯಗೊಡದಂತೆ ಮಾಡಿದುದೆ ವಿಸ್ಮೃತಿ. ಇದು ಜೀವನನ್ನು ಬಹು ಬಾಧಿಸುತ್ತದೆ. ನಾನಾ ಜನ್ಮಂಗಳ ಕಲ್ಪಿಸಿ , ಹುಟ್ಟು ಸಾವುಗಳಿಗೆ ಗುರಿ ಮಾಡುತ್ತದೆ. ಈ ವಿಸ್ಮೃತಿಯೇ ಮರಣ. ಇದುವೆ ಭವಪಾಶ. ವಿಸ್ಮೃತಿ ಅದು ತನ್ನ ವಿಸ್ಮೃತಿ. ಅರುವೆ ತಾನಿದ್ದು ಆರು ಸ್ವರೂಪ ನಾನಾಗಲಾರೆನೆಂಬುದೆ ವಿಸ್ಮೃತಿ ಇದರಿಂದ ಕಾಯ ಗುಣ.

ಲಿಂಗ ತಂದೆ ! ವಿಸ್ಮೃತಿ ಬಾರದಂತೆ ಕರುಣಿಸು . ಈ ಕಾಯ ಅಪಾಯದ್ದಲ್ಲ ಅದು ಅರುವಿನ ಒಡಲಾಗಿದ್ದರೂ , ಅದರ ಮರುವು ಆಗಿ ಇಲ್ಲದ ಮನ , ಬುದ್ಧಿ , ಚಿತ್ತ , ಅಹಂಕಾರ ಉಂಟಾಗಿ ಅಪಾಯವಾಗಿದೆ , ಭೀತಿ ಉಂಟಾಗಿದೆ . ಅರುವಿನ ಮರವೆಯು ಜನನ , ಮರಣದ ಆಮಂತ್ರಣವಾಗಿದೆ. ಚಿಂತೆ ದುಃಖದ ಸ್ವಾಗತವಾಗಿದೆ. ಇಂಥಹ ಮರವೆ ಯಲ್ಲಿದ್ದೆ . ಅಹಂಕಾರ ಪ್ರಭೋಧಗಳೇಕಯ್ಯ ಅರುವಿನ ಗಿರಿತನದ ಮಾತುಗಳೇಕಯ್ಯ . ಅರಿ ತವನಂತೆ ನಟನೆ ಮಾಡುವದು ಇದೇತಕ್ಕೆಂದೇ ದೇಹಬುದ್ಧಿಯುಳ್ಳವನಾಗಿದ್ದುದು ಸರಿಯಲ್ಲ, ಈ ದೇಹ ಬುದ್ದಿಯೆ ಸಕಲ ಅನರ್ಥಕ್ಕೆ ಮೂಲವಾಗಿದೆ. ಇದುವೆ ಕಾಮಾದಿಗಳಿಗೆ ಆಶ್ರಯ.

ಓ ಲಿಂಗ ತಂದೆ ದೇಹ ಬುದ್ಧಿಯುಳ್ಳವನನ್ನೇಕೆ ಮಾಡಿದಿರಿ ? ಈ ದೇಹ ಬುದ್ದಿಯೆ ಅಂತರಂಗದ ವ್ಯಾಧಿಯಾಗಿ ಕಾಮದಿಗಳು ಕಾಡುತ್ತಿವೆ. ಇತ್ತ ಬಹಿರಂಗದ ವ್ಯಾಧಿಯಾಗಿ ಕರ್ಮೇಂದ್ರಿಯಂಗಳು , ಜ್ಞಾನೇಂದ್ರಿಯಂಗಳು ಕಾಡುತ್ತಿವೆ. ಇದು ಕಾರಣ ದೇಹ ಬುದ್ದಿ ಕಳೆದು ಲಿಂಗಾಂಗ ಸಾಮರಸ್ಯ ಜ್ಞಾನವಪ್ಪ ನಿರ್ವಾಣವ ಕರುಣಿಸು ಅಚಿಂತ್ಯ ಪದವುಳ್ಳ ನಿರ್ವಾಣವ ಕರುಣಿಸು . ನನ್ನ ಸ್ವರೂಪ ಸುಖವಪ್ಪ ಶಬ್ದಮುಗ್ಧವಾಗಿಹ ನಿರ್ವಾಣವ ಕರು ಣಿಸು ಕೂಡಲ ಸಂಗಮದೇವಾ ಎಂದು ಬಸವಣ್ಣನವರು ಚೈತನ್ಯರೂಪಿ ಲಿಂಗ ತಂದೆ ಪರಾ ನಂದ ಪರಬ್ರಹ್ಮವೆಂಬ ಅಖಂಡ ಲಿಂಗ ತಂದೆಯ ಪ್ರಾರ್ಥಿಸಿಹರು.

ವಚನ - 3

ಉತ್ಪತ್ತಿದಲ್ಲಿ ಶುಕ್ಲ ಶೋಣಿತದಿಂದಾಗಿ ಲಜ್ಜೆ ಸಾಲದೆ ?
ಅಂತು ಬಲದ ಸಪ್ತ ಧಾತುವಿನ ನರಕ ದೇಹದೊಳಿಪ್ಪ ಹೇಸಿಕೆ ಸಾಲದೆ ?
ಮತ್ತೆಯು ಪಾಪಂಗಳ ಮಾಡಿ ದುರಿತಂಗಳ ಹೊರುವ ಹಗೆತನವೇಕಯ್ಯ
ಕಾಲನ ಕೈಯಿ ಬಡಿಸಿಕೊಂಡು ನರಕವ ನುಂಬುವದು ವಿಧಿಯೆ ?
ಎಲೈ ಮನುಜಾ ಒತ್ತೊತ್ತಿ ಜನನಗೆಲುವುಡೆ ಕರ್ತನ ಪೂಜಿಸು
ನಮ್ಮ ಕೂಡಲಸಂಗಮದೇವಾ.

ತಾತ್ಪರ್ಯ : ಓ ! ಮಾನವಾ ನಿನ್ನ ಉತ್ಪತ್ತಿ ರೇತು ರಕ್ತದಿಂದಾರೂ ಈ ನಾಚಿಕೆ ಸಾಲದೆ ? ಓ ಜೀವನೆ ಬ್ರಹ್ಮ ನೀನಾಗಿದ್ದು ರೇತು ರಕ್ತದಲ್ಲ, ಜನಿಸಿಹೆನೆಂಬುದು ಸರಿಯೆ ? ಇದಲ್ಲದೆ ಹೊಲಸು ದೇಹಕ್ಕೆ ಮೆಚ್ಚಿ ದೇಹ ಬುದ್ದಿಯುಳ್ಳವ ನಾಗುವದೆಂದರೆ ಅದೆಷ್ಟು ಅಪ ಮಾನ ನಿನ್ನ ಸ್ವರೂಪ ಮರೆತು ದೇಹವೆ ನಾನೆನ್ನಲು ನಿನಗಿನ್ನು ನಾಚಿಕೆ ಸಾಲದೆ ? ನಿನ್ನವಾಸ ನರಕ ನಿವಾಸ . ತೋರುವ ಸಪ್ತಧಾತುಳ್ಳ ಶರೀರ ಕಂಡು, ಕಂಡು ಮಲ ಮೂತ್ರಗಳುಳ್ಳ ದೇಹಲ್ಲಿರಲು ಹೇಸಿಕೆಯಾಗಲೊಲ್ಲದೆ ? ಇದರ ಮೇಲೆ ಜಿಗುಪ್ಸೆ ಆವಾಗ ? ಹೇಯವಾದ ಶರೀರ ಅಲ್ಪ ಸುಖಕ್ಕೆ ಮಾಡಬಾರದ ಅನಿಷ್ಟಕಾರಕವಾದ ಪಾಪಂಗಳ ಮಾಡಿ ಇಂದ್ರಿಯರಾ ಮನಾಗುವದು ಅಲ್ಲವೇ ? ಹೊನ್ನು, ಹೆಣ್ಣು ಮಣ್ಣು ಬಯಸುವದಾದರೂ ಈ ಶರೀರದ ಉಪಭೋಗಕ್ಕಲ್ಲವೇ ? ಓ ಮಾನವಾ ಉಪಭೋಗದಿಂದ ಕಾಮಾಂಧನಾಗಿ ರತಿ ಕ್ರೀಡೆಯಲ್ಲಿ ಮುಳುಗಿ ಅದರ ವಾಸನೆಯಿಂದ ಹೀನ ಜನ್ಮ, ಜನ್ಮ ದುಃಖ, ಜರಾ ದುಃಖ ದುಖಃವೇ ದುಃಖವಾಗಿ ಮನಸ್ಸು ಸದಾ ಚಿಂತೆ ಎಂಬುದೆ ಚಿತಾ ರೂಪವಾಗಿ ನಿನ್ನನ್ನು ಸುಡುತ್ತಿರವದು ಮರೆತಿರುವಿಯಾ? ನಿನ್ನ ಸತ್ಕರ್ಮವೆ ನಿನಗೆ ಹಿತದವರು. ನಿನ್ನ ದುಷ್ಕರ್ಮಂಗಳೆ ನಿನಗೆ ವೈರವು ಇದು ನಿನಗೆ ಗೊತ್ತಾಗಲೊಲ್ಲದೆ ?

ಪಾಂಡವರ ಸದ್ಭಾವ, ಸದ್ಭಕ್ತಿ , ಸದಾಚಾರ ಶ್ರೀಕೃಷ್ಣನ ಒಲುಮೆಗೆ ಕಾರಣವಾಯಿತು. ಕೌರವರ ದುಷ್ಕರ್ಮ, ದುರ್ಭಾವ ದುರ್ಗತಿಗೆ ಕಾರಣವಾಯಿತು. ಇದು ಕಾರಣ ನಮ್ಮ ಸದ್ಭಾವ ನಮಗೆ ಸದ್ಗತಿ ಕೊಡುವದು. ನಮ್ಮ ದುರ್ಭಾವ ನಮಗೆ ದುರ್ಗತಿ ಕೊಡುವದು. ಮಾನವ ದುರ್ವ್ಯಸನಿಯಾಗುವನು ಅವನು ಯಮನ ಕೈಯಿಂದ ಬಡಿಸಿಕೊಳ್ಳಬೇಕಾಗು ವದು. ಸದ್ಭಾವದಿಂದ ಸಮರತಿ ಸಮದೃಷ್ಠಿಯುಳ್ಳವನಾಗಿ ಸವೆಯದ ಅಖಂಡ ಸುಖಿಯಾಗು ವನು ಆಗ ಯಮನ ಭಯ ಇರದು. ಯಮನೆ ನಿನ್ನ ಸಮರತಿ ಸದ್ಭಾವ ಕಂಡು ಅಪ್ಪಿಕೊಳ್ಳು ವನು.

ಓ! ಮಾನವಾ ಆವುದು ವಿಹಿತವೋ? ನೀನೆ ಅರಿ. ವಿಧಿ ಇದು ನಿನ್ನದಾದ ಕ್ರಿಯೆ ಎಲ್ಲಿ ಮರವಿನ ಕ್ರಿಯೆ ಇದೆ ಅಲ್ಲಿ ಭೇದಜ್ಞಾನವಿದೆ. ಭೇದಜ್ಞಾನವಿದ್ದಲ್ಲಿ ಭಯವಿದೆ. ಈ ಭಯ ತಾನೆ ಬರ ಮಾಡಿಕೊಂಡುದಾಗಿದೆ. ಇಲ್ಲದ ಯಮನನ್ನು ಉಂಟು ಮಾಡಿದುದು ಮರವೆ ಇದು ತನ್ನಯ ಮರವು ಮರವಿನಿಂದ ಭವ ಯಾತನೆ ನರಕ ಯಾತನೆ ಇದು ಕಾರಣ ಎಲೈ ಮಾನವಾ ಒತ್ತೊತ್ತಿ ಜನನ ಗೆಲುವುಡೆ ಕರ್ತನ ಪೂಜಿಸು ಕೂಡಲಸಂಗಮ ದೇವಾ . ದೇವ ದೇವ ಗುರು ಘನನೇ? ಜನನ ಮರಣ ಗೆಲಿಸುವ ಕರ್ತ ನೀನಿಲ್ಲವೆ.

ತೋರಬಾರದ ಘನ ನೀನಾಗಿದ್ದರೂ ನನ್ನ ಭವಗೆಲಿಸಲು ಕರ್ತನಾಗಿ ಬಂದೆಯಾ? ಮಂಗಳಮಯನೆ ಚಿಜ್ಯೋತಿಯೇ ತಾನೆ ತಾನಾಗಿ ಬೆಳಗುವ ಮಹಾ ಬೆಳಗೆ , ತನ್ನ ನೆನವನ್ನ ಬರ. ತನ್ನಂತೆ ಮಾಡುವ ಶ್ರೀಗುರು . ಈ ಮಹಾಂತ ಕರ್ತಾರೊಳ್ ಮಹಾಕರ್ತಾರ . ಜಡಭಾವ ಹೊಡದೋಡಿಸಿ ಚೈತನ್ಯ ಭಾವದವರನ್ನಾಗಿ ಮಾಡುವ ಕರ್ತಾರ ಭಾವಿಕರಿಗೆ ಭಾವಕ್ಕಗಮ್ಯನ ಮಾಡುವ ಮಹಾಕರ್ತೃ. ಈ ಮಹಾ ಕರ್ತೃರೂಪಿ ಗುರು ಘನನನ್ನು ಒತ್ತೊತ್ತಿ ಪೂಜಿಸು ಈ ಮಹಾಂತನ ಮಹಾನುಭವದಲ್ಲಿ ಸಮರಸನಾಗು. ಶ್ರೀಗುರು ರೂಪ , ನನ್ನ ಸ್ವರೂಪ ಬೇರೆಂದು ಭಾವಿಸದಿರು. ದೇವನು ಹೇಗೆ ಭಾವಕ್ಕಗಮ್ಯನೋ , ಹಾಗೆ ನೀನು ಭಾವಕ್ಕಗಮ್ಯನು ಎಂದು ಅರಿದುದು ನೋಡುವುಡೆ ಜನನವೆ ಗೆಲಲು ಗುರುದೇವ ಕರುಣಿಸಿದ ಜ್ಞಾನಾಮೃತವ ಸೇವಿಸುವುಡೆ ಜನನ ಮರಣವ ಗೆದ್ದುದು ನಿನ್ನಿಂದ ನಿನಗೆ ಸ್ವತಃ ಸಿದ್ದವಾಗಿ ಸಿದ್ದಿಸುವದು.

ವಚನ - 4

ಬೆಳೆಯ ಭೂಮಿಯಲೊಂದು ಪ್ರಳಯದ ಕಸ ಹುಟ್ಟಿ
ತಿಳಿಯಲೀಯದು ಎಚ್ಚರಲೀಯದು.
ಎನ್ನ ಅವಗುಣನೆಂಬ ಕಸಕಿತ್ತಿ ಸಲುಹಯ್ಯ ಲಿಂಗ ತಂದೆ ಸುಳಿದೆಗೆದು ಬೆಳೆವೆನು.
ಕೂಡಲಸಂಗಮದೇವರ.

ತಾತ್ಪರ್ಯ: ಬೆಳೆಯ ಭೂಮಿಯಲೊಂದು ಪ್ರಳಯದ ಕಸ ಹುಟ್ಟಿ ತಿಳಿಯಲೀಯದು ಎಚ್ಚರಲೀಯದು: ಬಸವರಸರು ದೃಷ್ಟಾಂತದೊಂದಿಗೆ ಬೆಳೆಯುವ ಭೂಮಿಯಲ್ಲಿ ಕಸ ಹುಟ್ಟಿ ತಿಳಿಯದಂತೆ ಎಚ್ಚರವಾಗದಂತೆ ಮಾಡಿರುವುದೆಂದು ಸಕಲ ಮಾನವರನ್ನು ಎಚ್ಚರಗೊಳಿಸಿಹನು. ಕೃಷಿಕನು, ಬೆಳೆಯುಳ್ಳ ಭೂಮಿಗೆ ಮಡಿ ವಂಡುಬಿಟ್ಟುದು, ಕೆರೆ ಯರಿಯಲ್ಲಿ ಕರಿಕೆ ಕಣಿಗೆ ದಟ್ಟವಾಗಿ ಬೆಳೆದು ನಿಂತರೆ ಬೆಳೆ ತೆಗೆಯುವದು ತಿಳಿಯದಂತಾಯಿತಲ್ಲ. ತಿಳಿಯದಿದ್ದುದೆ ಎಚ್ಚರವಾಗದ ರೀತಿ. ಒಕ್ಕಲಿಗನಿಗೆ ತಿಳಿದ ವಿಷಯ.

ಜಗಜ್ಯೋತಿ ಬಸವದೇವ ಲಿಂಗಾಂಗ ಸಮರಸ ಜ್ಞಾನದ ಕೃಷಿಕರು. ಅರು ಹೃದಯದ ಕೃಷಿಕರು ಅಖಂಡಭಾವ, ಅಖಂಡ ಜ್ಞಾನ, ಅಖಂಡ ದೃಷ್ಟಿಯುಳ್ಳ ಕೃಷಿಕರು ಆಗಿಹುದರಿಂದ ಹೃದಯರೂಪಿ ಬೆಳೆಯ ಭೂಮಿಯ ಕಂಡು, ಅದರಲ್ಲಿ ಭ್ರಾಂತಿರೂಪ ಕಸ ಹುಟ್ಟಿದುದು ಕಂಡು, ಇದನ್ನು ಹಸನ ಮಾಡುವ ಬಗೆ ಎಂತು? ಎಂದು ತನ್ನೊಳಗೆ ತಾನು ಅರಿದರಿದು ನೋಡಿ, ಓಹೋ! ಈ ಭೂಮಿ ಬೆಳೆಯುವ ಭೂಮಿ ಬಯಸಿದುದೆಲ್ಲ ಬೆಳೆಯುವ ಭೂಮಿ. ಸತ್ಯ, ಅಹಿಂಸೆ, ಬ್ರಹ್ಮಚರ್ಯ, ಆಸ್ತೇಯ, ಅಪರಿಗ್ರಹ, ಸದ್ಧರ್ಮ, ಸದ್ಭಕ್ತಿ, ಸದಾಚಾರ, ಸಮ್ಯಜ್ಞಾನ ಬೆಳೆಯುವ ಭೂಮಿ. ಇದಲ್ಲದೆ ಸತ್ಯಜ್ಞಾನಾನಂದ ಬೆಳೆ. ಅಚಿಂತ್ಯಾತ್ಮ ಬೆಳೆ. ಏನೆಂದೆನ್ನದ ಮುಂದೆ ತಾನೆ ಆದ ಬೆಳೆ. ಧ್ವನಿಯ ಮರೆಯಲ್ಲಿದ್ದುದು ಕಾಣುವ ಬೆಳೆ. ತೆರಹಿಲ್ಲದ ಲಿಂಗ ಭರಿತವೆಂಬ ಅರಿವಿನ ಬೆಳೆ. ತೆರಹಿಲ್ಲದಭವ ನುಡಿಗೆಡೆಗೊಡದವನ ಬೆಳೆ, ಬೆಳೆಯುವ ಭೂಮಿ. ಇಂತಪ್ಪ ಅಪ್ರತಿಮ ಬೆಳೆ ಬೆಳೆಯುವ ಭೂಮಿಯಲ್ಲಿ ದುರ್ಭಾವರೂಪ ಭ್ರಾಂತಿ ಕಸ ಬೆಳೆದು ನಿಂತಿದೆ. ಇದರಿಂದ ಜೀವನು ನಿಶ್ಚಿಂತನಾಗುವದದೆಂತು. ಆಗಲರಿಯ.

ಮಾನವ ಅರುವಿನ ಜನ್ಮ ಧರಿಸಿದರೂ ಆವ ಬೆಳೆಯಿಂದ ಸವೆಯದ ಸುಖಿಯು, ಅಚಿಂತ್ಯಾತ್ಮನು. ಎಂಬುದು ತಿಳಿಯದ್ದರಿಂದ ದುಃಖಿಗಳು. ಈ ದುಃಖ ನಿವೃತ್ತಿಯಾಗಬೇಕಾದರೆ ಸಕಲರ ಹೃದಯದಲ್ಲಿ ತೆರಹಿಲ್ಲದ ಲಿಂಗ ಭರಿತವೆಂಬ ಅರಿವು, ಜ್ಞಾನ ಬೆಳೆಯಬೇಕು. ಇದರಿಂದ ಭರಿತ ಜ್ಞಾನಿಯಾಗಿ ಭರಿತವೆ ಭರಿತವೆಂಬ ಭಾವ ಬಲಿದು ಅಚಿಂತ್ಯ ಪದ ತಾನಾಗಿ ಸಿದ್ದಿಸುವದು.

ಇಂತಪ್ಪ ಘನ ಬೆಳೆ ಬೆಳೆಯುವ ಭೂಮಿಯಲ್ಲಿ ಪ್ರಳಯದ ಕಸ ಇದು ನಾಮ ರೂಪದಿಂದುಕ್ತವಾದ ಕಸ ಹುಟ್ಟಿ ತಿಳಿಯದಂತೆ ಮಾಡಿದೆ. ತೋರಬಾರದ ಘನದಲ್ಲಿ ತೋರುವುದೆಲ್ಲ ಪ್ರಳಯ ರೂಪ ಕಸ. ತನಗೆ ಬೇರಾಗಿ ತೋರಿ ಕೆಡುವದೆಲ್ಲ ಪ್ರಳಯ ರೂಪ, ಪ್ರಪಂಚವೇ ಪ್ರಳಯ ರೂಪ ಕಸ. ಜಗವೆಲ್ಲ ಕಸ. ನಾಶವುಳ್ಳ ಕಸವಾಗಿದ್ದರೂ ಭ್ರಾಂತಿಯಿಂದ ಸತ್ಯವೆಂದು ತಿಳಿಯದಂತಾಗಿದೆ. ತಾನಾರು ತನ್ನ ಸ್ವರೂಪವೇನು ಎಂಬುದು ತಿಳಿಯಗೊಡದಂತಾಗಿದೆ. ತಾನಾಗದುದಕ್ಕೆ ತಾನೆಂದು ತಿಳಿದ ಭ್ರಾಂತಿ, ನಾಮ ರೂಪ ಸತ್ಯ. ನಾಮರೂಪ ಮಿಥ್ಯ ಅಸ್ತಿ, ಭಾತಿ, ಪ್ರಿಯ, ಮಿಥ್ಯೆವೆಂದು ತಿಳಿದವನಿಗೂ ತನ್ನ ಅಚಿಂತ್ಯಪದ ತಿಳಿದಂತಾಗಿದೆ. ಎಚ್ಚರವಾಗದಂತೆ ಮಾಡಿದೆ. ಏಕೆಂದರೆ ತನಗಿಂತ ಭಿನ್ನವಾಗಿರುವ ವಸ್ತುವಿಲ್ಲ ತನ್ನೊಂದಿಗೆ ಸೇರಿರುವ ವಸ್ತು ಇಲ್ಲ. ಸುಮ್ಮನೆ ಹೇಳುವದಕ್ಕಾದರೂ ನಾಮರೂಪಂಗಳಿಲ್ಲ ತನ್ನೊಳಗಿಲ್ಲದುದ ಕಲ್ಪಿಸಿ ತನ್ನ ತಾ ತಿಳಿಯದಂತಾಗಿದೆ. ತಿಳಿಯದಿದ್ದರಿಂದ ಅಂಗ, ಲಿಂಗ ಬೇರೆಂದು ಕೆಲಬರು ಒಪ್ಪಿದರು. ಕೆಲಬರು ಅಂಗ ಲಿಂಗ ಒಂದೆ ಎಂದು ಒಪ್ಪಿದರೂ ಒಪ್ಪಿಸಿದರೂ ತಾನಾರೆಂದು ತಿಳಿಯದೆ ಹಲುಬಲು ಕಾರಣರಾದರು. ಹೀಗಾಗಿ ಗಗನದಂತೆ ಅಖಂಡವಾಗಿರುವ ಜ್ಞಾನಾಮೃತ ರೂಪಿ ಲಿಂಗ ಅರಿವುಡೆ ತಾನೊಂದೆ ಸತ್ಯ. ತನ್ನ ಪರಮ ಸತ್ಯ ರೂಪಿ ನಿರಂತರವಾಗಿರುವ ಮಂಗಳ ಸ್ವರೂಪ ತಿಳಿಯದವರು ಎಚ್ಚರವಾಗಲಿಲ್ಲ.

ಕಾರಣ ಎನ್ನವಗುಣವೆಂಬ ಕಸ ಕಿತ್ತಿ ಸಲುಹು ಲಿಂಗ ತಂದೆ. ಓ ನನ್ನಯ್ಯ ನನ್ನ ಲಿಂಗ ತಂದೆ ನಿಸ್ಸೀಮವಾದ ತನ್ನಲ್ಲಿ ಸೀಮಿತ ದೃಷ್ಟಿ ಸೀಮಿತ ಭಾವ, ಸೀಮಿತ ಅರಿವು ಉಂಟಾದುದು ಅವಗುಣ ಅಚಿಂತ್ಯಾತ್ಮನೋಳ್ ಅನಾತ್ಮ ಚಿಂತೆ ಆತ್ಮ ಚಿಂತೆ ಎಂದು. ಜನನ ಮರಣವಿಲ್ಲದವಂಗೆ ದ್ವಂದ್ವ ಭಾವವುಳ್ಳವನ ಮಾಡಿದುದೆ ಅವಗುಣ. ಈ ಅವಗುಣವೆಂಬ ಕಸ ಕಿತ್ತಿ ಸಲುಹಯ್ಯ ಲಿಂಗ ತಂದೆ ಸುಳಿದೆಗೆದು ಬೆಳೆವೆನು ಕೂಡಲಸಂಗಮದೇವಾ.

ಅವಗುಣವೆಂಬ ಕಸ ಕಿತ್ತು ಸಲುಹಲು ಲಿಂಗ ತಂದೆಯಲ್ಲದೆ ಅನ್ಯರಿಂದ ಅದೆಂತು ಸಾಧ್ಯ. ಸೀಮಿತ ಜ್ಞಾನ, ಸೀಮಿತ ಭಾವ, ಸೀಮಿತ ದೃಷ್ಟಿ ಕೆಡಿಸಿ ನಿಸ್ಸೀಮರ ಮಾಡಲು ಲಿಂಗವರಿತು ಸ್ವಯ ಲಿಂಗವಾದ ಶರಣ ನಿಶಬ್ದವಾದ ಶರಣ ನಿಶಬ್ದವೇದಿಯಾಗಿಹ ಶರಣ ಇವರೆ ತಂದೆ ಇವರೆ ಲಿಂಗ ಇವರೆ, ಲಿಂಗೈಕ್ಯರು ಮಾಡುವ ಹಿರಿಮೆ, ತನ್ನಂತೆ ಮಾಡುವ ಅನುಪಮರಾದುದರಿಂದ ಲಿಂಗ ತಂದೆ ಎಂದು. ಏಕೆಂದರೆ ಇವರ ಹೃದಯದಲ್ಲಿ ಪ್ರಜ್ವಲಿಸುವ ಮಹಾನುಭಾವವೆ ಸಕಲರ ಸಲುಹುವ ಮಹಾನ್ ಶಕ್ತಿಯಾಗಿದೆ.

''ಗಾಳಿಬಿಟ್ಟಾಗಲೆ ತೂರಿ ರಾಶಿ ಮಾಡಿಕೊಳ್ಳಿರೋ? ಗಾಳಿ ನಿಮ್ಮ ಸ್ವಾಧೀನವಲ್ಲ, ನಾಳೆ ತೂರಿಹೆನೆಂದರೆ ಇಲ್ಲ, ಶಿವಶರಣರೆಂಬ ಅನುಭವರೂಪ ಗಾಳಿಯಲ್ಲಿ ಬೇಗನೆ ತೂರಿಕೊಂಡ ನಮ್ಮ ಅಂಬಿಗರ ಚೌಡಯ್ಯ'' ಅಂಬಿಗರ ಚೌಡಯ್ಯನೆಂಬ ಶರಣ ಶರಣರ ಅನುಭವರೂಪ ಗಾಳಿ ಬಿಟ್ಟಾಗ ತಾನು ಕಲ್ಪಿತ ಪುರುಷನೆಂಬ ಭಾವರೂಪ ಭ್ರಮೆಯನ್ನ

ತೂರಿಕೊಂಡುದರಿಂದ ಅಕಲ್ಪಿತ ಘನ ತಾನಾದ.

ಮಾನವನಿಗೆ ಗುಣಂಗಳಭಿಮಾನ ಅವುಗಳ ಕಾರ್ಯದಭಿಮಾನ ಹೃದಯದಲ್ಲಿ ಬೀಜ ಭೂತವಾದರೆ ಬೆಳೆಗೆ ಸುಳಿ ಬಿದ್ದಂತೆ. ಇದು ಕಾರಣ ಗುಣಾತೀತನಾಗಲು ಶರಣರ ಸ್ವಾನುಭವ ಅವಶ್ಯವಾಗಬೇಕು. ಬೆಳೆಗೆ ಬಿದ್ದ ಸುಳಿ ತೆಗೆಯಲು ಅಕ್ಷರೋತ್ತಮನರಿವು, ಇದು ಸುಳಿ ತೆಗೆಯುವ ಔಷಧ. ಸಮ ತತ್ವದ ಅರಿವು ಆಗುವುದರಿಂದ ಅವಗುಣವೆಂಬ ಕಸ ತನಗೆ ತಾನೆ ಕಿತ್ತುತ್ತಾನೆ. ಅಹಮಿಲ್ಲದ ಚಿದ್ಘನದರಿವು ತನ್ನಿಂದ ತನಗೆ ಬೆಳಗುವಲ್ಲಿ ಸುಳಿದೆಗದು ಬೆಳೆದಂತೆ. ಇದನ್ನು ಕಂಡೆ ಬಸವರಸರು ಎನ್ನ ಅವಗುಣವೆಂಬ ಕಸ ಕಿತ್ತಿ ಸಲುಹಯ್ಯಲಿಂಗ ತಂದೆ ಸುಳಿದೆಗೆದು ಬೆಳೆವೆನು ಕೂಡಲಸಂಗಮದೇವಾ ಎಂದು ಹೇಳಿಹರು.

ವಚನ - 5

ಒಂದು ಯೋನಿಯಲ್ಲಿ ಬಂದ ದುಃಖವ ನಾನು ಎಂದೆಂದಿಗೂ ಕಳೆಯಲಾರೆ.
ಇನ್ನೂ ಎಂಭತ್ತುಯ ನಾಲ್ಕು ಲಕ್ಷ ಯೋಗಿ ಎಂದರೆ ನಾ ನಿನ್ನೆ ಎನೆವೆನಯ್ಯ
ಒಂದುವ ನರಿಯದ ಶಿಶು ನಾನುನೊಂದೆನಯ್ಯ
ಕಂದ ಬಾ ಎಂದು ಕಂಬನಿಯ ತೊಡದತ್ತಿ ಆನಂದದಿಂದ ಕರೆ ಉಳುಮೇಶ್ವರಾ

ತಾತ್ಪರ್ಯ: ಒಂದು ಯೋನಿಯಲ್ಲಿ ಬಂದ ದುಃಖ ನಾನು ಎಂದೆಂದಿಗೂ ಕಳೆಯಲಾರೆ. ಶರಣರು ಒಂದೆ ಗರ್ಭದಲ್ಲಿದ್ದು ಹೊರಬಂದ ದುಃಖ ನಾನು ಎಂದೆಂದಿಗೂ ಕಳೆಯಲಾರೆ. ಇನ್ನು ಎಂಭತ್ತು ನಾಲ್ಕು ಲಕ್ಷ ಯೋನಿಯಲ್ಲಿ ಬರುವದೆಂದರೆ ನಾ ನಿನ್ನೆ ಎನೆವೆನಯ್ಯ. ಗರ್ಭದಿಂದ ಹೊರಬರುವ ದುಃಖ ಸಾಮಾನ್ಯ ದುಃಖವಲ್ಲ. ದುಃಖ ಪರಿಹಾರ ಮಾಡಿಕೊಳ್ಳುವಷ್ಟು ಶಕ್ತಿ ನನ್ನಲ್ಲಿಲ್ಲ. ಅದನ್ನು ನಾನು ಎಂದೆಂದಿಗೂ ಕಳೆಯಲಾರೆ . ಅದೆ ಗರ್ಭವಾಸನೆಯಿಂದ ಇನ್ನು ಎಂಭತ್ತು ನಾಲ್ಕು ಲಕ್ಷ ಯೋನಿಯಲ್ಲಿ ಬರುವದೆಂದಲ್ಲಿ ನಾನು ಏನೆಂದು ಹೇಳುವನಯ್ಯ.

ಒಂದೆ ಪೆಟ್ಟು ತಡೆಯದಾಗದ ಶಿಶು ಒಂದೆ ಗರ್ಭದ ಪೆಟ್ಟು ತಡೆಯದ ಕೂನಿಗೆ ಇನ್ನು ಎಂಭತ್ತು ನಾಲ್ಕು ಲಕ್ಷ ಯೋನಿಯಲ್ಲಿಂದ ಹೊರ ಬರುವ ಪೆಟ್ಟು ತಡೆಯುವದದೆಂತು ಉಳಿಯುವದದೆಂತು ಇದು ಕಾರಣ ದಿಗ್ಮೂಢನಾಗಿರುವೆ ಏನೂ ತಿಳಿಯದವನಾಗಿರುವೆ ನನ್ನಿಂದ ನನಗೆ ಇದರ ಪರಿಹಾರ ದೊರೆಯದು.

ಒಂದುವ ನರಿಯದ ಶಿಶು ನಾನು ನೊಂದೆನಯ್ಯ ಕಂದ ಬಾ ಎಂದು ಕಂಬನಿಯ ತೊಡದತ್ತಿ. ಆನಂದದಿಂದ ಕರೆ ಉಳುಮೇಶ್ವರಾ ಏನೊಂದು ಅರಿಯದ ಶಿಶು. ಒಂದೆ ಗರ್ಭದಿಂದ ಹೊರ ಬಂದು ನಾನು ಬದುನೊಂದಿರುವೆ ಓ ಲಿಂಗ ತಂದೆ ನಾನು ನಿನ್ನ ಶಿಶು ನೀನಾಗಿ ನನ್ನ ಪಿಡಿದೆತ್ತಿ. ಆನಂದದಿಂದ ಅಪ್ಪಿಕೊಂಡುದಾದರೆ ನಾನು ಉಳಿಯುವೆ ಇಲ್ಲದಿದ್ದರೆ ಉಳಿಯುವ ಬಗೆ ಎಂತು ಉಳುಮೇಶ್ವರ.

ನಿನ್ನಯ್ಯನೆ ನೀನು ಉಳುಮೇಶ್ವರ ನಿದ್ದುದ್ದರಿಂದ ಉಳಿಸುವ ಘನತ್ವ ನಿನ್ನದು ದೇವಾ ಎಂದು ಪ್ರಾರ್ಥಿಸಿದ್ದಾನೆ.

ವಚನ - 6

ಅರಿಯದೆ ಜನನಿಯ ಜಠರದಲ್ಲಿ ಜನಿಸಿದೆ
ಬಾರದ ಭವಂಗಳಲ್ಲಿ ಭರಿಸಿದೆ ತಂದೆ
ಮುನ್ನ ಹುಟ್ಟಿದ್ದೇ ತಪ್ಪಾಯಿತು ಎಲೆ ಲಿಂಗವೆ
ಇನ್ನು ಹುಟ್ಟಿದೆನಾದರೆ ನಿಮ್ಮಾಣೆ ,
ನಿಮ್ಮ ಪ್ರಮಥರಾಣೆ ಕೂಡಲಸಂಗಮದೇವಾ.

ತಾತ್ಪರ್ಯ : ಅರಿಯದೆ ಜನನಿಯ ಜಠರದಲ್ಲಿ ಹುಟ್ಟಿದೆ. ತಾಯಿಯ ಗರ್ಭದಲ್ಲಿ ಹುಟ್ಟಿದೆ ನಾನಾ ಬಾರದ ಭವಂಗಳಲ್ಲಿ ಬರಸಿದೆ. ಗರ್ಭಪಾಶ ಹರಾಯು ಪಾಶ ಇದಲ್ಲದೆ ಮಲ ಮೂತ್ರಗಳಲ್ಲಿ ವಾಸ. ರಕ್ತ, ಮಾಂಸ, ಮೇದಸ್ಸುಗಳ ಬಿಡಾರ, ಮತ್ತು ನರನಾಡಿಗಳಿಂದ ಎಲುಬು ಚರ್ಮದಿಂದುಕ್ತವಾದ ಬಿಗಿ ಬಂಧನ ಗರ್ಭದಿಂದ ಹೊರಬರುವಡೆ ಆಧ್ಯಾತ್ಮ ತಾಪ, ಆದಿ ಭೌತಿಕ ತಾಪ, ಆದಿ ದೈವಿಕ ತಾಪ, ಪಂಚೇಂದ್ರಿಯಗಳ ಕಾಟ, ವಿಷಲೋಪ ಭೋಗದ ಅಲೆದಾಟ ಇದರಲ್ಲಿ ಕಾಮಾದಿಗಳ ವಿಕಾರಗಳ ಇದರಿಂದ ನಾನಾ ಭವಂಗಳಲ್ಲಲಿ ಬಂದ ಹುಟ್ಟಿದ್ದೆ ತಪ್ಪಾಯಿತು. ತಂದೆ ಎಲೆ ಲಿಂಗವೆ ಮುನ್ನ ಹುಟ್ಟುದುದಕ್ಕೆ ಕೇಪೆ ಮಾಡು ಇನ್ನು ಹುಟ್ಟಿದೆನಾದಡೆ ಕೂಡಲಸಂಗಮದೇವಾ ನಿಮ್ಮಾಣೆ ಅರಿಯದೆ ಮರವಿನಿಂದ ಭವದಲ್ಲಿ ಬಂದೆನಲ್ಲದೆ ನಾನಾರು ಎಂದು ಅರಿಯದಿದ್ದುದೆ ಭವ ಪಾಶಕ್ಕೆ ಕಾರಣ.

ಓ ಗುರು ಲಿಂಗವೆ ಇನ್ನು ಹುಟ್ಟಿದುದಕ್ಕೆ ಕೃಪೆ ಮಾಡುವಂತಿದ್ದರೆ ನಾನಾರು ಎಂದು ನನ್ನ ಅರಿಯುವಂತೆ ಮಾಡು. ನ್ನ ಅರಿಯಿಸದಿರುವೆ ನನ್ನನಾ ಅರಿಯುವಂತೆ ಮಾಡು ನಿನ್ನ ಅರಿಯಿಸಬೇಡ. ಏಕೆಂದರೆ ಎನ್ನ ನರಿಯದವ ನಿನ್ನ ನರಿಯ.

ಎನ್ನ ಅರಿಯಿಸದ ನಿನ್ನ ಅರಿಸಿದಡೆ ನೀನೆನಗೆ ಗುರುಲಿಂಗವಲ್ಲ ಜಂಗಮ ಲಿಂಗವಲ್ಲ ನಾ ನಿನಗೆ ಭಕ್ತನಲ್ಲ. ಎನ್ನ ತಿಳಿಸಿದಡೆ ನೀ ನೆನಗೆ ಜಂಗಮ ಲಿಂಗ ನಾ ನಿನಗೆ ಭಕ್ತ ಓ ಗುರುಲಿಂಗವೇ ನಾನಾರೆಂದು ಅರಿಯುವಂತೆ ಮಾಡು ಗುರು ಘನನೆ ನನ್ನ ಅರಿಯದಂತೆ ಮಾಡಿರುವೆ ನನ್ನ ಸ್ವರೂಪವ ತಿಳಿಯಿಸು ತಿಳಿಯದ್ದರಿಂದ ಭವಪಾಶ ನಿನ್ನ ತಿಳಿಯಿಸಬೇಡಡ. ನಿನ್ನ ತಿಳಿದರೆ ನ್ನ ತಿಳಿಯಲಿಲ್ಲ. ನನ್ನ ತಿಳಿಯಲು ನೀನು ನನಗಿಂತನ್ಯವಾಗಲಿಲ್ಲ. ನಾನಾರೆಂದು ತಿಳಿಸಿದೆಯಾದಡೆ ನನ್ನ ತಿಳಿಯುವೆ ನನ್ನ ತಿಳಿಯಲು ನಿನ್ನ ತಿಳಿದಂತೆ ಇದುವೆ ಮುನ್ನ ಹುಟ್ಟದುದಕ್ಕೆ ನಿನ್ನ ಕೃಪೆ ತಂದೆ.

ಇನ್ನು ಹುಟ್ಟಿದೆನಾದಡೆ ಕೂಡಲಸಂಗಮದೇವಾ ನಿಮ್ಮಾಣೆ ಓ ಗುವಿನಗುರುವೆ ನಾನಾರೆಂದು ನ್ನ ಸ್ವರೂಪ ಇದ್ದಕ್ಕಿಂದತೆ ಅರಿಯುವಂತೆ ಮಾಡಿದರೂ ಪುನಃ ನನ್ನ ಸ್ವರೂಪ ತಾತ್ಸಾರ ಮಾಡಿ ಮಾಯಿಕ ತತ್ವಕ್ಕೆ ಮಹತ್ವ ಕೊಟ್ಟುದಾದರೆ ಓ ಗುರು ಲಿಂಗವೆ ನಿಮ್ಮಾಣೆ.

ವಚನ - 7

ಕಣ್ಣಿಂಗೆ ಸತ್ವ ರಜ ತಮವೆಂಬ ತಿಮಿರ ಕವಿದು ಅಜ್ಞಾನ ವಶನಾದಲ್ಲಿ
ಸದ್ಗುರು ವನುಪಧಾವಿಸಿ ಔಷಧವ ಬೇಡಲೊಡನೆ
ಶಿವಜ್ಞಾನವೆಂಬ ಅಂಹನವ ಹಚ್ಚಿ
ಎನ್ನ ಕಣ್ಣ ಮುಸುಕಹ ಅಜ್ಞಾನ ಕಾಳಿಕೆಯ ಬೇರ್ಪಡಿಸಿ

ತನ್ನ ಪಾದವ ನರುಹಿಸಿ ಕೊಂಡನಯ್ಯ ಎನ್ನ ಕಪಿಲಸಿದ್ಧ ಮಲ್ಲಿಕಾರ್ಜುನ

ತಾತ್ಪರ್ಯ: ಸಿದ್ಧರಾಮು ಶಿವಯೋಹಿಯು ಗುಣತ್ರೆಯ ಭ್ರಾಂತಿಯಿಂದ ಅಜ್ಞಾನಿಯಾಗಿಹ ಮಾನವ ತೀವ್ರ ಸದ್ಗುರುವೆಂಬ ವೈದ್ಯರ ಹತ್ತಿರಹೋಗಿ ಅನನ್ಯ ಭಕ್ತಿಯಿಂದ ಶರಣಾಗತನಾಗಿ ಔಷಧವ ಬೇಡಿದಾಗ ಅವರ ಕೊಡುವ ಶಿವಜ್ಞಾನವೆಂಬ ಅಂಜನವ ಹಚ್ಚಿಕೊಳ್ಳಲು ಮಾನವನಿಗೆ ದಿವ್ಯದೃಷ್ಠಿ ಉದಯವಾಗಿ ನಿಜವಾದ ಅರಿವು ಪಡೆಯುವನು.

ಕಣ್ಣಿಂಗೆ ಕವಿದ ಸತ್ವ, ರಜ, ತಮವೆಂಬ ಲಮಿರ ತನಗಿಂತ ಭಿನ್ನವೊ? ಅಭಿನ್ನವೊ? ಅಥವಾ ತಾನೋ ಎಂದು ವಿಚಾರಿಸಲಿಲ್ಲ, ಕಣ್ಣಿಂಗೆ ಅಜ್ಞಾನವೆಂಬ ಅರಮ ಕವಿದುದರಿಂದ ನಾಮವುಳ್ಳದ್ದಾಗಿ ರೂಪವುಳ್ಳದ್ದಾಗಿಹ ವಿಶ್ವವ ನಾನಾರೂಪದಲ್ಲಿ ಕಂಡ ಸಪ್ತಧಾತು, ಸಮಂ ಪಿಡಂ ಸಮಯೋನಿ ಸಮುದ್ಭವಃ ಎಂಬ ಮಹಾಂತರ ಅನುಭವವನ್ನಾದರೂ ನೋಡಲಿಲ್ಲ, ಸ್ವಗತ ಭೇಡ ಮಾಡಿದ ಸಜಾತಿ ಭೇಡ ಮಾಡಿದ ಕೊನೆಗೆ ವಿಜಾತಿ ಭೇಡ ಮಾಡಿದ ಸ್ವಗತ ಭೇಡವರು ತನ್ನದೇಹದಲ್ಲಿ ನಾನಾರೂಪ ಭೇದವ ಮಾಡಿ ನೋಡಿದಂದು ಸಜಾತಿ. ಭೇದ ಮಾನವ ಮಾನವರಲ್ಲಿಯೂ ಭೇದವಾಗಿ ಕಂಡುದು ವಿಜಾತಿ ಭೇದವದು ಪಶುಗಳಲ್ಲಿ, ಪಕ್ಷಿಗಳಲ್ಲಿ, ತಿರ್ಯಕ್ ಪ್ರಾಣಿಗಳಲ್ಲಿ ಪಂಚಭೂತಗಳಲ್ಲಿ ಭೇದ ಭೇದವಾಗಿ ಕಂಡುದು ಭೇದ ರೂಪವಾಗಿ ಕಂಡುದೆ ಕಣ್ಣಿನ ಕತ್ತಲೆ.

ಕಣ್ಣಿಂಗೆ ಸತ್ವ, ನಿಜ, ರಜ ತಮವೆಂಬ ತಿಮಿರ ಕವಿದು ಅಜ್ಞಾನ ವಶನಾದ ಕಾರಣ ತನ್ನದಾದ ಶರೀರ ಸಪ್ತಧಾತುಳ್ಳ ಶರೀರವೆನ್ನದೆ. ವಿವಿಧ ರೂಪವಾಗಿ ಕಂಡು ಅದರಲ್ಲಿ ಒಳ್ಳೆದು ಕೆಟ್ಟುದು ಅದರಲ್ಲಿ ಮಿಶ್ರವುಳ್ಳದು ಮಾಡಿದುದೆ ಕಣ್ಣಿನ ರೋಗ ಅದು ಕಣ್ಣಿನ ಅಜ್ಞಾನ ಮರವು.

ಕಣ್ಣಿನ ಅಜ್ಞಾನ ಮಾನವ ಮಾನವರಲ್ಲಿಯೂ ನಡೆ ನುಡಿಗಳಲ್ಲಿಯೂ ಭೇದವೇ ಕಂಡುದು ಬ್ರಾಹ್ಮಣವಾದುದು ಅದೆ ಶರೀರ ಹೀಗೆ ಭೇದವಾಗಿ ಕಂಡುದು ಕಣ್ಣಿನ ದೋಷ. ಗುಣತ್ರಯವೆಂಬುದು ರೋಗ ಭಾವ ಭ್ರಮವು ರೋಗ ಜೀವತ್ರಯಂಗಳ ಕಲ್ಪಿಸುವದು ರೋಗ ಈ ರೋಗ ಪರಿಹಾರ ಮಾಡಿಕೊಳ್ಳಲು ಸದ್ಗುರುಗಳ ಹುಡುಕಿ ಸಹಸ್ರರಲ್ಲಿ ಒಬ್ಬನು ಅನನ್ಯ ಭಕ್ತಿಯಿಂದ ಶರಣಾಗತನಾಗಿ ಭವರೋಗ ತೋರಿಸಲು ಆ ಗುರುಲಿಂಗವು ಶಿವಜ್ಞಾನವೆಂಬ ಅಂಗನವನಿಕ್ಕಿ ಎನ್ನ ಕಣ್ಣಿನಲ್ಲಿ ಮುಸುಕಿದ ಅಜ್ಞಾನ ಕಾಳಿಕೆಯ ಬೇರ್ಪಡಿಸಿ ತನ್ನ ಸುಜ್ಞಾನವರುಹಿಸಿ ಕೊಡುವನು.

ಶಿವಜ್ಞಾನವೆಂಬ ಅಂಜನ ದಿವ್ಯ ಅಂಜನ ಶಿಪಥವರಿಯಲು ಗುರು ಪಥವೆ ಮೊದಲು ಎಂದಂತೆ ಶಿವಜ್ಞಾನವ ತೋರಿಸಲು ಗುರುಪಥವೇ ಮೊದಲು ಶಿವ ಬೇರೆ ನೀನು ಬೇರೆಂದು ಭೇದ-ಜ್ಞಾನವ ಹೇಳುವುದು ಅದು ಗುರು ಪಥವಲ್ಲ.

ನೀನು ಶಿವ ಸರ್ವತ್ರ ಸರ್ವದಾ ಒಳಗೆ ಮತ್ತು ಹೊರಗೆ ವ್ಯಾಪಿಸಿರುವೆ ಹೀಗಿದ್ದರೂ ಭ್ರಾಂತಿ ಪಿಶಾಚಿಯಂತೆ ಅಲ್ಲಿ ಇಲ್ಲಿ ಎಂದು ಎಕೆ ತಿರುಗುವೆ ನೀನಾರೆಂದು ಅರಿ ಅರಿಯಲು ತೆರಹಿಲ್ಲದಭವ ನುಡಿಗೆಡೆಗೊಡನು ಎಂಬ ಅಂಜನವ ಹಚ್ಚಿಕೊ? ಇದು ನಿಸ್ಸೀಮ ಅಂಜನ ನಿರಂತರ ಇದ್ದ ಅರಿವು ಜ್ಞಾನ ಸ್ವರೂಪ ಎಲ್ಲಿ ನೋಡಿದಡಲ್ಲಲ್ಲಿ ಶಿವ ನೋಡುವವನು ಶಿವ ಬಯಲಿಂಗೆ ಒಲಹೊರಗೆಂಬುದುಂಟೆ? ಬಯಲು ಅಪಾರ ಅಲ್ಲಿ ಒಳಗೆಂಬುದಿಲ್ಲ

ಹೊರಗೆಂಬುದಿಲ್ಲ ಅದು ನಿರವಧಿಯು ಜಡವೆಂಬ ಬಯಲೆ ಇಷ್ಟು ನಿಸ್ಸೀಮವಾಇರುವಾಗ ಬಯಲಿಗಿಂತಲೂ ಸಹಸ್ರಾರು ಪಾಲು ಅತ್ಯಂತ ಸೂಕ್ಷ್ಮವಾದ ಅರಿವು ಬ್ರಹ್ಮ ಶಿವ, ಲಿಂಗ, ಅಲ್ಲಾ ತಾನೆ ಇರುವಲ್ಲಿ ತಾನುವಷ್ಟು ವ್ಯಾಪಕ ಅಗಣಿತ ಅರುವಿಂಗರುವು ಅದು ಶಿವ ಅರುವೆನ್ನದ ಅರುವು ಅದು ತನ್ನಯ ಇರವು ಹೀಗೆಯ ತಾರ್ಥ ಅರುವಿನ ಜ್ಞಾನ. ಹೃದಯಕ್ಕೆ ವೇದ್ಯವಾದಲ್ಲಿ ಶಿವ ತಾನೆ. ಇಂತಪ್ಪ ಜ್ಞಾನರೂಪಿ ಅಂಜನವ ನಚ್ಚಿ ಕಣ್ಣಿನ ಮುಸುಕಿಹ ಅಜ್ಞಾನದ ಕಾಳಿಕೆಯ ಬೇರ್ಪಡಿಸಿ ತನ್ನ ಸ್ವಾನುಭವರೂಪಿ ಪಾದ ಅರುಹಿಸಿಕೊಂಡನಯ್ಯ ಎಂದು ಹೇಳಿಹರು.

ಸದ್ಗುರು ಕಾರುಣ್ಯವಾಗದ ವಿನಃ ಭವ ಸಾಗರ ದಾಟುವದು ಅಸಾಧ್ಯ. ಕೃಪೆಯಾಗುವುಡೆ ನಿಶ್ಚಯವಾಗಿ ದಾಟುವನು. ಅರಿಯಲಿಲ್ಲದ ಅರುವ ನರುಹಿಸಿದುದೆ ಸದ್ಗುರು ಕೃಪೆ ಈ ಮಹಾಂತನ ಕೃಪೆ ಅರಿವ ಅರುಹಿಸಿಕೊಂಡ ಈ ಉಭಯಂಗಳು ನಷ್ಟವಾಗಿ ಅರಿಯಲಿಲ್ಲದ ಅರುವೆ ತಾನಾಗಿರಲು ಅಂಜಿಕೆ ಇಲ್ಲ, ಆಗ ಮನೋಮೂರ್ತಿ ಸಚ್ಚಿದ್ಘನದರ್ಶನ ಆಗ ಮಾಯೆಯು ಇಲ್ಲ ಸೀಮೆಯು ಇಲ್ಲ ಇಲ್ಲದುದು ಇಲ್ಲವಾಗಿಹುದೆ ಮಹಾಮಾಯೆ ಗೆದ್ದಂತೆ ಎಂದು ತಿಳಿವುದು.

ವಚನ - 8

> **ಹಿಂದಣಭವ ಸಾಗರವದಾಟಿದೆ ಮುಂದಣ ಮುಕ್ತಿ ಪಥಕ್ಕೆ ಜ್ಞಾನವಂಕುರಿಸಿತ್ತು**
> **ಇನ್ನಂಜೆನಂಜೆನಯ್ಯ ಎನ್ನ ಮನೋಮೂರುತಿಯಪ್ಪ ಚಂಡೇಶ್ವರನ**
> **ಕಾರುಣ್ಯವಾಯಿತು. ಗೆದ್ದೆ, ಗೆದ್ದೆ ಮಹಾಮಾಯೆಯ.**

ತಾತ್ಪರ್ಯ: ಚಂಡೇಶ್ವರನ ಕಾರುಣ್ಯವಾಗುವುಡೆ ಹಿಂದಣ ಭವಸಾಗರವ ದಾಂಟುವದು ಸರಳ. ಮುಂದಣ ಮುಕ್ತಿ ಪಥದ ಜ್ಞಾನೋದಯವಾಗುವದು ಸುಲಭ ಆಗ ನಿರ್ಭಯ ನಿರಂಕುಶ ತೃಪ್ತಿ. ಚಂಡೇಶ್ವರನ ಕಾರುಣ್ಯವದು ಕೂಡಲಸಂಗನ ಶರಣರು ದೊರೆತುದು, ಈಶ್ವರ ಕಾರುಣ್ಯ. ಅವರು ಮನದೆರೆದು ಮಾತಾಡಿದುದರಿಂದ ಚಂಡೇಶ್ವರನ ಅರಿತುದೆ ಕಾರುಣ್ಯ. ಈ ಘನ ಕಾರುಣ್ಯ ನಮಗಾದಲ್ಲಿ ಇಲ್ಲೆಂಬುದನಿಲ್ಲೆನಬಲ್ಲರೆ ಅರ್ಪಿತ ಉಂಟೆಂಬುದನುಂಟಿನ ಬಲ್ಲರೆ ಮಹಾ ಪ್ರಸಾದಿ ಎಂದು ಬಿತ್ತರಿಸುವದರಿಂದ ಇಲ್ಲದ ಸಂಸಾರ ಇಲ್ಲ. ಈ ಇಲ್ಲವೆಂಬುದು ಇಲ್ಲವಾದುದುದೆ ಹಿಂದಣ ಭವ ಸಾಗರವ ದಾಂಟಿದಂತೆ.

ಇಲ್ಲದುದಕ್ಕೆ ಅಂದು, ಇಂದು ಎಂದೆಂದೂ ಇರುವಿಕೆಯಿಲ್ಲ, ಇದ್ದುದು ಅಂದು, ಇಂದು, ಏಂದೆಂದೂ ನಿರಂತರ ಇದ್ದುದು. ಇಲ್ಲದ ನಾಮರೂಪ ಅಂದು ಇಲ್ಲ, ಇಂದು ಇಲ್ಲ ಎಂದೆಂದೂ ಇಲ್ಲ, ಇದ್ದ ನಿಸ್ಸೀಮವಾದ ಪರಮಸತ್ಯ ಅಂದು ಇದೆ. ಇಂದು ಇದೆ ಎಂದೆಂದೂ ಇದೆ. ಈ ಪರಮತತ್ವದ ತಿರಳು ನಮಗೆ ವೇದ್ಯವಾಗುವುದೆ ಹಿಂದಣ ಭವಸಾಗರವ ದಾಂಟಿದೆ ಮುಂದಣ ಮುಕ್ತಿ ಪಥಕೆ ಜ್ಞಾನವಂಕುರಿಸಿತ್ತು ಎಂಬುದು ತನ್ನಿಂದ ತನಗದು ವಿಧಿತವಾಗುವದು. ತಾನಾರೆಂದು ತನ್ನ ನರಿಯದ್ದರಿಂದ ತನ್ನೊಳಗಿಲ್ಲದುದ ಕಲ್ಪಿಸಿಯೆ ಹಿಂದಣ ಭವ ಸಾಗರವೆಂಬ ಕಲ್ಪಿತವಾಗಿತ್ತು. ಇದು ಸಭೆಯಾಗಬೇಕಾದರೆ ತನ್ನೊಳಗಣ ಮರವು ಮರವಿನ ಕಾರ್ಯವಾದ ಜನನ, ಮರಣ, ಆಧ್ಯಾತ್ಮಿಕ ತಾಪ, ಆದಿ ಭೌತಿಕ ತಾಪ ಆದಿ ದೈವಿಕ ತಾಪ ಈ ತ್ರಿವಿಧ ತಾಪಂಗಳ ಭವ ಸಾಗರ ಇವುಗಳು ದಾಂಟಬೇಕಾದರೆ ತನ್ನೊಳಗಣ ಅರಿವು

ತನಗೆ ತಿಳಿವುಡೆ ಆಗ ಹಿಂದಣ ಭವಸಾಗರವೆಂಬುದು ಮಿಥ್ಯಾಕಲ್ಪನೆ ಇದು ಭ್ರಮದೃಷ್ಠಿ ಎಂಬುದು ತನಗರಿವು ಆದುದೆ ಭವಸಾಗರವ ದಾಂಟಿದಂತೆ.

ಒಬ್ಬನಿಗೆ ಕನಸಿನಲ್ಲಿ ಸರ್ಪಕಚ್ಚಿ ವಿಷವೇರಿದಂತಾಗಿ ಮರಣದ ಭಯವಾಗಲು ಎಚ್ಚರ ವಾಯಿತು ಆಗ ಆ ಕನಸು ನಿಜವೆ? ಕನಸಿನಲ್ಲಿ ಕಂಡ ಸರ್ಪ ಆವುದು. ನಿಜವಾಗವಿದ್ದಾಗ ಮರಣದ ಭಯ ನಿಜ ಹೇಗಾಗುದು. ಹಾಗೆ ತಾನು ಸ್ವಸ್ವರೂಪದ ಮರೆಯಲ್ಲಿ ನಾಮರೂಪ ಹುಸಿ ಇದು ಕನಸು. ಕನಸಿನಲ್ಲಿ ತಾನು ಶರೀರದಾರಿಯಾಗಿ ಇಂದ್ರಿಯಂಗಳು, ಪ್ರಾಣಾದಿ ಗಳು, ಮನಬುದ್ಯಾದಿಗಳು, ಭ್ರಾಂತಿಯಿಂದ ಕಲ್ಪಿಸಿದುದೆ ಭವ. ಇದ್ದುದು ತನ್ನ ಸ್ವಸ್ವರೂಪ ವೆಂದು ಎಚ್ಚರವಾಗುವುದೆ. ಆಗ ತೋರಬಾರದ ಘನದಲ್ಲಿ ತೋರುವುದೆಲ್ಲ ಕನಸು ಅದು ಮಿಥ್ಯಾ ಕಲ್ಪನೆವೆಂಬುದು ಶ್ರೀಗುರು ಚಂಡೇಶ್ವರನ ಕರುಣೆಯಿಂದ ಜ್ಞಾನವಾದುದರಿಂದ ಇನ್ನಂಜಿ ನೆಂಜನಯ್ಯ. ಇದ್ದ ಅಕಲ್ಪಿತ ಘನ ತಾನೆಂಬುದು. ತನ್ನಲ್ಲಿ ಕರಿಗೊಂಡುದರಿಂದ ಇಲ್ಲದ ಕಲ್ಪಿತಕ್ಕೆ ಅಂಜುವದೆ ? ನಿರ್ವಿಕಾರ ತಾನೆಂಬುದ ತನಗದು ಅಳವಟ್ಟಲ್ಲಿ. ಷಡ್ವಿಕಾರ ದಿಂದುಕ್ತವಾಗಿಹ ದೇಹದ ಆಗು ಹೋಗುಗಳಿಗೆ ಅಂಜಲೇಕೆ? ತಾನಾಗದ ದೇಹಕ್ಕೆ ಗೌರವಿ ಸಲಿ ಅಗೌರವಿಸಲಿ ಆಂಜಲೇಕೆ? ಅರಿಯಲಿಲ್ಲದ ಅರುವೆ ತನ್ನರಿವು ತಾನೆಂಬುದು ಘಟ್ಟಿ ಗೊಂಡಲ್ಲಿ ಮನವು ಅನಾತ್ಮ ಚಿಂತನವುಳ್ಳದ್ದಾಯಿತ್ತೆಂದು ಅಂಜಲೇಕೆ? ಇತ್ತ ಆತ್ಮ ಚಿಂತನವುಳ್ಳ ದ್ದಾಯಿತೆತಮದು ಅಂಜಲೇಕೆ? ಅಚಿಂತ್ಯತ್ವವೆ ತನ್ನಿರುವು ತಾನೆಂಬುದು ಕರಿಗೊಂಡವಂಗೆ ಅಶುಭ ಚಿಂತನಕಂಡು ಕುಗ್ಗಲಿಲ್ಲ. ಶುಭ ಚಿಂತನಗೊಂಡು ಹಿಗ್ಗಲಿಲ್ಲ. ನಾನಾ ಗದ ನನ್ನದಾಗದ ಒಡಲು ಹಿಗ್ಗು ಕುಗ್ಗುಳ್ಳದ್ದಾದರೆ ಅಂಜಲೇಕೆ? ಶೋಕ ಮೋಹವುಳ್ಳದ್ದಾಗಲ್ಲಿ ಅಂಜಲೇಕೆ? ಕಲ್ಪನಾರಹಿತ ನಾನಾಗಿರುವಲ್ಲಿ ಮನದ ಸಂಕಲ್ಪ ವಿಕಲ್ಪಕ್ಕಂಜೆನು ನಿರುಪಾದಿಯೆ ತಾನಾಗಿರುವಲ್ಲಿ ಉಪಾಧಿಗೆ ಅಂಜೆನು ನಿಸ್ಸಂಗವೆ ನನ್ನಿರುವು ನಾನಗಿರುವದರಿಂದ ತನು ಇಂದ್ರಿಯಂಗಳು ಪ್ರಾಣಾದಿಗಳು ಮನಾದಿಗಳ ಸಂಗ ಸಂಬಂಧಕ್ಕೆ ಅಂಜೆನು ಎಂದು ಹೇಳಿ ಹರು.

ಎನ್ನ ಮನೋ ಮೂರುತುಯಪ್ಪ ಚಂಡೇಶ್ವರನ ಕಾರುಣ್ಯವಾಯಿತು. ಮನದ ಮೂರುತಿ ಯಾರು? ಮನಸ್ಸಿಗೆ ಪ್ರಿಯವಾದುದು ಆವುದು ಅದುವೆ ಮನೋ ಮೂರುತಿ. ಮನವೆಂಬುದು ದ್ವಂದ್ವವು ಸಂಕಲ್ಪ ವಿಕಲ್ಪವಾಗ ದ್ವೇಷ, ಶೋಕ ಮೋಹ ಮರವು, ಅರುವು ಇದು ಮನದ ಕಾರ್ಯವು ಮನಕ್ಕೆ ಮೀರಿದುದು ದ್ವಂದ್ವಾತೀತವು ಸಂಕಲ್ಪ ವಿಕಲ್ಪಕ್ಕೆ ಮೀರಿ ದುದು ಕಲ್ಪನಾ ರಹಿತವು ಸಮಸ್ವರೂಪವು ಅಶೋಕವು ಅಸಂಗವು ಅಚಿಂತ್ಯವು ಇದು ಮನೋ ಮೂರುತಿಯು ಮನಕ್ಕೆ ಬೆಳಗುವ ನಿರ್ವಿಕಾರ ಚಿಜ್ಯೋತಿಯ ಮನೋಮೂರುತಿ ಇದು ಚಂಡೇಶ್ವರ.

ಚಂಡೇಶ್ವರ ಕಂಡುದು ಕಂದದ ಕೂದದ ಎನೊಂದಾಗದ ಇದ್ದಂತಿರುವ ನಿರ್ವಿಕಾರ ವೆಚಂಡೇಶ್ವರ ಇದು ಚಂದದ ಚಂದ ಸಕಲದರ ಚಂದ ಸಕಲದರ ಅಧಿಷ್ಠಾನವಾದುದರಿಂದ ಚಂದ. ಇದು ಅಭಾಧಿತ ಚಂದ. ಇದು ನಿಷ್ಕಳಂಕವು ನಿಸ್ಸೀಮವು ಇದುವೆ ಚಂಡೇಶ್ವರ. ಚಂಡೇಶ್ವರನ ಕಾರುಣ್ಯವಾಯಿತ್ತು. ಗೆದ್ದೆ ಗೆದ್ದೆ ಮಹಾಮಾಯೆಯೆ ಇಲ್ಲಿ ಗೆದ್ದೆ ಗೆದ್ದೆ ಎಂದು ಎರಡು ಸಲ ಉಪಯೋಗ ಮಾಡಿದುದು ಬಹು ಗುಟ್ಟಾದುದು. ಕ್ರಿಯಾವಂತರು ಗೃಹಸ್ಥ ಆಶ್ರಮ ತ್ಯಾಗಮಾಡಿ ಮತ್ತೊಂದು ಆಶ್ರಮ ಸ್ವೀಕರಿಸಿದವನು ಇವರು ಕೂಡಾ ಮಾನೆ ಗೆದ್ದೆ

ವೆಂದು ಹೇಳುವರು ಇನ್ನು ಕೆಲಬರು ಆಸಕ್ತಿ ಎಂಬುದು ತ್ಯಾಗಮಾಡಿ ಅನಾಸಕ್ತರಾಗಿ ಗೆದ್ದೆವು ಮಾಯೆಯ ಎನ್ನುವರು.

ಇಲ್ಲಿ ಶರಣರು ಗೆದ್ದೆ ಗೆದ್ದ ಮಹಾ ಮಾಯೆಯ ಎಂದು ಸಂಭೋಧಿಸಿದುದು ನೋಡಿದಡೆ ಮರವು ಮರವಿನ ಕಾರ್ಯವಾದ ಅನಾತ್ಮಭಾವ ಇದು ತೋರಿಇಲ್ಲ. ನೋಡಿದಡೆ ಮರವು ಮರವಿನ ಕಾರ್ಯವಾದ ಅನ್ತಾತ್ಮಭಾವ ಇದು ತೋರಿ ಇಲ್ಲವಾಗುವ ಮಾಯೆ. ಇದಕ್ಕಿಂತ ಮಿಗಿಲಾದುದು ಚಿದಹಂಭಾವ ನನ್ನ ನಾನು ಅರಿತೆನೆನ್ನುವ ಭಾವ. ಇದು ಶಬ್ದ ಸಂಭ್ರಮದಿಂದುಕ್ತವಾದುದು ಇದುವೆ ಮಹಾಮಾಯೆ ಇದನ್ನು ಗೆದೆಯುವದು ದುಸ್ತರವು.

ಶರಣರು ನಿಶಬ್ದವೇದಿಗಳು ಅವರಿಗೆ ಚಂಡೇಶ್ವರನ ಕಾರುಣ್ಯ ವೇದ್ಯವಾದುದರಿಂದ ಇದು ಅರಿಯಲಿಲ್ಲದ ಅರುವ ಸ್ವೀಕರಿಸಿ ಅರಿಯಲಿಲ್ಲ. ಮರೆಯಲಿಲ್ಲದ ಘನತ್ವವುಳ್ಳವರಾಗಿ ಶಬ್ದ ಮುಗ್ದರು ಸುಖಮಯರು ಈ ನಿಲುವುಳ್ಳ ನಿಲುವು ಚಂಡೇಶ್ವರ ಘನಕ್ಕೆ ಘನವಾದುದು ತಾನೆ ಇದ್ದುದರಿಂದ ಗೆದ್ದೆ ಗೆದ್ದೆ ಮಹಾಮಾಯೆಯ ಎಂದು ಶ್ರೀಗುರುವ ಕೊಂಡಾಡಿಹರು. ಅಧೊಮುಖವಳಿಯಿತ್ತು ಊರ್ಧಮುಖ ಉಳಿಯುತ್ತು. ಜನನ ಮರಣವ ಹಿಂಗಿತ್ತು ಅವಿದ್ಯೆ ಕರಗಿತ್ತು. ಎಲೆ ಲಿಂಗವೆ ನಿಮ್ಮತ್ತ ಮನವಾಯಿತ್ತೆನಗೆ ಕೃಪೆ ಮಾಡು, ಕೃಪೆ ಮಾಡು, ಶಿವಧೊ ಶಿವಧೋ

ವಚನ – 9

ಜೀವ ಕುಳವಳಿಯಿತ್ತು. ಜ್ಞಾನ ಕುಳವುಳಿಯಿತ್ತು. ಭವಪಾಶ ಹರಿಯ್ತು.
ಅಜ್ಞಾನಹಿಂಗಿತ್ತು ಎಲೆ ಗೋಪನಾಥ ವಿಶ್ವೇಶ್ವರನ ಲಿಂಗ
ನಿಮ್ಮತ್ತ ಮನವಾಯಿತ್ತೆನಗೆ ಕೃಪೆ ಮಾಡು ಶಿವಧೊ ಶಿವಧೋ

ತಾತ್ಪರ್ಯ: ಜೀವ ಕುಳವಳಿಯುತ್ತು. ಇದಾವ ಜೀವ, ಜೀವವದು ಅಳಿದ ಕುಳ ಇದು ಗುರು ಕಾರುಣ್ಯದ ಕುಳ ವಿಶ್ವೇಶ್ವರರನ ಲಿಂಗ ದತ್ತಮನವಾದ ಕುಳ ಕುಳಕ್ಕೇನನ್ನಬೇಕು ಇದು ಪರಬ್ರಹ್ಮ ಪರಂಜ್ಯೋತಿ ಸ್ವಯಂಜ್ಯೋತಿ ನಿರಂತವಾಗಿರುವ ಮಂಗಳಮಯ ಚಿಜ್ಯೋತಿ.

ವಿಶ್ವೇಶ್ವರ ಲಿಂಗದತ್ತ ಮನವ ಆ ಮನ ಅದು ಲಿಂಗ ಲಿಂಗವರತ ಮನ ಲಿಂಗದಲ್ಲಿ ಬೆರತಮನ ಅರುವಿನ ಮನ. ವಿಶ್ವೇಶ್ವರ ಲಿಂಗವದು ವಿಶ್ವಕ್ಕೆಲ್ಲ ಬೆಳಗುವ ಲಿಂಗ ಒಮ್ಮೆ ಕಂಡು ಒಮ್ಮೆ ಕಾಣದಂತಾಗುವಲ್ಲ. ಇದುಪರ ಪ್ರಕಾಶವಲ್ಲ. ನಿರಂತರವಾಗಿ ಒಳಹೊರಗೆನ್ನದೆ ಬೆಳಗುಳ್ಳ ಬೆಳಗಿಂಗೆ ಉದಯವಾವುದು? ಅಸ್ತವಾವುದು, ಚರವಾವುದು? ಅಚರವಾವುದು? ನಿಸ್ಸೀಮವಾಗಿ ಬೆಳಗುವ ಚಿನ್ಮಯ. ಈ ಲಿಂಗದತ್ತ ಮನವಾಗುವದೆಂದರೆ ಅನಂತ ಜನ್ಮಂಗಳ ನಿಷ್ಕಾಮ ಕರ್ಮದ ಪುಣ್ಯ ವಿಶ್ವೇಶ್ವರ ಲಿಂಗವದು. ವಿಶ್ವದೊಳಗೆ ನೋಡಬೇಕಾದುದಿಲ್ಲ. ತನ್ನೊಳಗೆ ನೋಡುವುದು.

ನೋಡುವುದು ನೋಡಲರಿಯದೆ ಕೆಟ್ಟತೇ ಜಗವೆಲ್ಲ. ನೋಡುವುದ ನೋಡುವುಡೆ ಕೂಡಲಿಲ್ಲ ಆಗಲಿಲ್ಲ ಗುಹೇಶ್ವರಾ ನಿಮ್ಮ ಶರಣ ಅನುಪಮ ಸುಖಿ ವಿಶ್ವೇಶ್ವರ ಲಿಂಗ ತನ್ನೊಳಗೆ ನೋಡುವುದು. ಈ ಮಹಾಲಿಂಗವ ನೋಡದದ್ದರಿಂದ ಜಗವೆಲ್ಲ ಕೆಟ್ಟಿತ್ತು. ಆರು ವಿಶ್ವೇಶ್ವರ ಲಿಂಗ ನೋಡ ಹೋಗಿ ಲಿಂಗವೆ ಆಯಿತ್ತು. ಆಗ ವಿಶ್ವವದು ವಿಶ್ವೇಶ್ವರ ವಿಶ್ವವದು ಲಿಂಗಮು

ಯವಾಗಿ ಬೆಳಗುವಲ್ಲಿ ಜೀವನೆಂಬ ಭಾವರೂಪ ಭ್ರಮನಷ್ಟವಾಯಿತ್ತು. ಜ್ಞಾನಕುಳ ಉಳಿತಿತ್ತು. ಭ್ರಮ ನಿರಸನವಾಗುವುಡೆ ತಾನು ಲಿಂಗ ವಿಶ್ವವು ಲಿಂಗ ಲಿಂಗವದು ವಿಶ್ವೇಶ್ವರನೆಂಬುದು ಸ್ವತಃ ಸಿದ್ಧವು ಇಂತಪ್ಪ ಜ್ಞಾನದಿಂದ ಇಲ್ಲದ ಕಲ್ಪಿತ ಇಲ್ಲವಾಗುವುಡೆ ಭ್ರಮ ನಿರಸನ ಇದು ಜೀವ ಕರಳವಳಿದ ಸಂಕೇತ. ಇದ್ದುದು ಇದ್ದಂತೆ ಇದ್ದುದು ಇದು ಲಿಂಗವರಿತು ಸ್ವಯಲಿಂಗ ತಾನಾದುದೆ.ಜ್ಞಾನ ಜ್ಞಾನಕುಳವೆ ಲಿಂಗ ತಾನಾದುದು. ಇದುವೆ ಅಬಾಧಿತ ಕುಳ, ಇದು ನಿರಂತರವಾಗಿರುವ ಮಂಗಳಮಯ ಚಿಜ್ಯೋತಿ ಇದುನೆಲೆಯಿಲ್ಲದ ನಿಲವು. ಅಜ್ಞಾನ ಹಿಂಗಿತ್ತು. ಗುರುಕೃಪೆಯಿಂದ ತಾನಾರೆಂದು ತನ್ನ ಸ್ವರೂಪ ದತ್ತ ಮುಖವಾಗಿ ಮನ ಅರಿಯಬಾರದ ಘನ ಅರಿಯಹೋಗುವುಡೆ ತಾನು ಅರಿವ ಅರುಹಿಸಿಕೊಂಬುದು ಪುಸಿಯಾಗಿ ಅರಿಯಲಿಲ್ಲ ತಾನು ಅರಿಯಬಾರದ ಘನವೆ.ಂಬುದು ಮರೆಯದ್ದರಿಂದ ಆಗ ಜೀವನೆಂಬುದು ಪುಶಿ. ಭಾವದ ಬಯಕೆಯು ಪುಶಿ. ಮರವರುವೆಂಬುದು ಪುಶಿಯಾಗಲು ಅದುವೆ ಜ್ಞಾನಕುಳ ಉಳಿದ ಸಂಕೇತ.

ಜ್ಞಾನ ಕುಳ ಉಳಿದ ಸಂಕೇತ. ತಾನಾರೆಂದರಿತ ಸಂಕೇತ ಕಾರಣ ಜ್ಞಾನ ಕುಳವದು ಅಜಾತಕುಳ ಗುಣಾತೀತ ಕುಳ. ಅಚಿಂತ್ಯತ್ವವರಿತು ನಿಶ್ಚಿಂತನಾಗಿಹ ನಿರ್ಭಯಕುಳ ಈ ಮಹಾಂತನಿಗೆ ಭವ ಪಾಶ ಹರಿಯುತ್ತು. ಆಯಿತ್ತೆ ಉದಯಮಾನ ಹೋಯಿತ್ತೆ ಅಸ್ತಮಾ ಎಂದಂತೆ ಜ್ಞಾನೋದಯವಾಗುವುದೆ ಅಜ್ಞಾನಹಿಂಗಿತ್ತು.

ಎಲೆ ಗೋಪಿನಾಥ, ಇಂದ್ರಿಯಂಗಳೊಡೆಯನೆ ಅತೀಂದ್ರಿಯನೆ, ಇಂದ್ರಿಯಾತೀತನೆ ವಿಶ್ವೇಶ್ವರ ಲಿಂಗ ವಿಶ್ವಾತೀತ ಲಿಂಗ ಭಾವಕ್ಕಗಮ್ಯಲಿಂಗ ಬಹುಕಾಲದಿಂದಲೂ ಸಂಕಲ್ಪ, ವಿಕಲ್ಪ ಕ್ಕೊಳಪಟ್ಟಮನ ಭಾವಂಗಳಿಗೊಪ್ಪ ಭ್ರಾಂತವಾಗುವ ಹಂಬಲಿಸುವದಾಗಿದೆ. ಈ ಮನದ ಮುಖ ನಿಜ ಸುಖದ ಕಡೆ ಪ್ರವೃತ್ತವಾಗಿರುವುದು.

ಕೃಪೆಮಾಡು, ಕೃಪೆಮಾಡು ಶಿವಧೋ ಶಿವಧೋ ಇಲ್ಲಿ ಎರಡು ಸಲ ಕೃಪೆ ಮಾಡು ಎಂಬ ಸಂಭೋದನೆ ಈ ಮನ ನಿಮ್ಮ ಕಡೆ ಮುಖವಾಗದ ಮನ ಈಗ ಮುಖವಾಗಿಹು ದೆಂದಲ್ಲಿ ಪುನಃ ವಿಷಯಾದಿಗಳ ಕಡೆ ಮುಖವಾಗದಂತೆ ಕೃಫೆಮಾಡು ಇದಲ್ಲದೆ ನಿರಂತರ ಅಚಿಂತ್ಯವಾಗಿಹ ಸ್ವರಐಪ ಸುಖವ ಸವಿಯುವಂತೆ ಕೃಪೆಮಾಡು ಎಂದು ಸಂಬೋಧಿಸಿದುದಾ ಗಿದೆ. ಎಲ್ಲೆಲ್ಲೊ ಶಿವಧೋ ಶಿವಧೋ ಎಂಬ ಸುನಾದದ ಸುಖವ ಸವಿಯುವಂತೆ ಮಾಡು. ಶರಣ ಲಿಂಗಮುಖವಾಗಿ ನುಡಿವನು. ಲಿಂಗಮುಖವಾಗಿ ರವಿಸುವನು. ಶರಣ ಲಿಂಗ ಮುಖವಾಗಿ ತೃಪ್ತಿಯ ನೈದುವನು ಶರಣ. ಲಿಂಗ ಮುಖವಾಗಿ ಸಂಗ ಮಾಡುವನು ಶರಣ. ಲಿಂಗ ಕಾಯ ಶರಣ. ಶರಣ ಕಾಯಲಿಂಗ ಎಂಬ ಶರಣನ ಘನ ಗಂಭೀರ ಮಹಾ ಸುಖವ ಸವಿಯುವ ಅರು ಹೃದಯ ಕೃಪೆ ಮಾಡು ಶಿವಧೋ ಶಿವಧೋ.

ಓ ಅತೀಂದ್ರ ದೇವನೇ ವಿಶ್ವದ ಸ್ವಯಂಜ್ಯೋತಿಯೆ ಎತ್ತ ನೋಡಿದಡತ್ತತ್ತ ನಿನ್ನ ಕಾಣುವಂತೆ ಲಿಂಗ ನೋಟವ ಕರುಣಿಸು ನಿನ್ನ ರಮಿಸುವಂತೆ ಮಾಡುವದು ನಿನ್ನ ಕೃಪೆ ಇದು ಮಹಾತ್ಕೃಪೆ ತಂದೆ ನಿನ್ನಯ ನೋಟ ನೋಡದ ನೋಟ ನಿನ್ನನ್ನೆ ಕಂಡ ನೋಟ ನಿನ್ನ ಕೂಟ ಕೂಡದ ಕೂಟ ಆಗಲದ ಕೂಟ ಇದು ಪರವಶವಾಗುವ ಕೂಟ ವರ್ಣಿಸುವರೆ ಅಗಮ್ಯವು ಏಕೆಂದರೆ ಆವುದು ಅಗಮ್ಯವಾಗಿದೆ. ಅದು ಅವರ್ಣೀಯವಾಗಿದೆ. ಅಲ್ಲಿ ನಾನೀನೆಂಬುಕ್ಕೂ ತೆರಹಿಲ್ಲದ ಘನದ ನಿಲುವಾಗಿದೆ. ಅಂಥಹ ಮಹಾಘನದ ಸುಖವ ಸವಿಯುವ ಮಹತ್ಕೃಪೆ

ಮಾಡು. ಶಿವಧೋ ಶಿವಧೋ ಎಂಬ ಸುಖದನಾದ ಇದು ಶಿವ ಸುಖದ ಸುನಾದ ಶಿವೋಹಂ ಸುನಾದ ಸುಖ ಸ್ವರೂಪೋಹಂ ಸುನಾದ ಸುಖ ಸುಖ ಎಂಬ ಸುನಾದ ಸುಖದ ಸುಖವಾಗಿಹ ಸುನಾದ ಇದು ಸಚ್ಚಿದಾನಂದವರಿತು ನಿರಂತರ ಚಿದಾನಂದದ ಸುನಾದ. ಪರಿ ಪೂರ್ಣ ಪರಮಾನಂದ ಸುನಾದ. ಇದು ಶಿವಧೋ ಶಿವಧೋ ಎಂಬುದಾಗಿದೆ. ಇಲ್ಲಿ ತೋರುವ ಮಾಯೆ. ತಾನಲ್ಲವೆಂದು ತಾನು ಚಿದಾನಂದವೆಂದು ಹೇಳುವರುಂಟು ಚಿಂತನ ಮಾಡುವರುಂಟು. ತಾನೆಂಬುದು ಅಚಿಂತ್ಯವಾಗಿರುವಲ್ಲಿ ಇದನಾರು ಅರಿಯರಲ್ಲ ಇದೆಂತಹ ಆಶ್ಚರ್ಯ ಅರಿವುಡೆ ಅಚಿಂತ್ಯ ಪದ ಸ್ವತಃ ಸಿದ್ಧ ತನ್ನಿಂದ ತನಗೆ ವಿಧಿತವಾಗುವುದು ಆಗ ಸಹಜ ತಾನೆ ಆಜ ತಾನೆ.

ವಚನ - 10

> **ತಾನಿದಿರೆಂಬುದುದ ಮಾಯೆತೆ ತೋರಿತ್ತಾಗಿ ತಾನಲ್ಲ.**
> **ಈ ತೋರುವುದು ಉಳುಮೆ ಜ್ಞಾನಾನಂದ ತಾನೆಂಬುದು ಆರು ಅರಿಯರಲ್ಲ**
> **ನೋಡಲೇನೂ ಇಲ್ಲವಾಗಿ ನಿಜ ಸಿದ್ಧ ನೀನೆ ಚಿಮ್ಮಲಿಗೆಯ ಚೆನ್ನರಾಮ.**

ತಾತ್ಪರ್ಯ: ತಾನಿದಿರೆಂಬುದು ಮಾಯೆ ತೋರಿತ್ತಾಗಿ ತಾನಲ್ಲ ಈ ತೋರುವುದು ಉಳುಮೆ ಜ್ಞಾನಾನಂದ ತಾನೆಂಬುದ ನಾರು ಅರಿಯರಲ್ಲಾ ಮಾನವರೆ ಇರಲಿ. ತಪಸ್ವಿ, ತ್ಯಾಗಿ, ಯೋಗಿಯೆ ಇರಲಿ ಅಣಿ ಮಾದಿ ಸಿದ್ದ ಪಡದವರೆ ಇರಲಿ. ತಾನಾರೆಂಬುದು ತಿಳಿಯ ಲಾರೆ. ತನ್ನ ಅರಿವುಡೆ ಮಾಯೆ ತಾನಲ್ಲ ತನ್ನದು ಅಲ್ಲ ಮಾಯೆ? ತಾನಿದಿರೆಂಬುದು ಮಾಯೆ. ತನ್ನ ಮರವಿನಲ್ಲಿ ಕಾಣಿಸುವ ಅದಂ ಇದಂ ದೃಷ್ಠಿ ಎಲ್ಲಿಯವರೆಗೆ ಅಹಂಕಾರಿಯು ಅಲ್ಲಿಯವರೆಗೆ ಜೀವಾತ್ಮನು. ಜೀವಾತ್ಮನು ಕರ್ಮಕಾಂಡಿಯೆ ಆಗಿರಲಿ. ಉಪಾಸನೆ ಮಾಡುವ ಭಕ್ತಕಾಂಡಿಯಾಗಿರಲಿ ಜ್ಞಾನಕಾಂಡಿಯಾಗಿರಲಿ ಇವನು ಕಾಂಡತ್ರಯದ ಅಭಿಮಾನಿಯಾದುದ ರಿಂದ ಮಹಾಂತರ ಮಹದರಿವು ತಿಳಿಯಲಾರ ಏಕೆಂದರೆ ತ್ರಿಕಾಂಡಗಳೆಲ್ಲ ಮಾಯೆಗೆ ಒಳಪ ಟ್ಟವು ಇವು ನಿರ್ಮಾಯದ ಘನವ ಅರಿಯವು.

ಕರ್ಮಿಯು ಕರ್ಮದ ರಹಸ್ಯ ತಿಳಿಯದ್ದರಿಂದ ಕರ್ಮಾಭಿಮಾನಿಯು ಉಪಾಸಕನು ಪೂಜ್ಯನಾರು, ಪೂಜಿಸುವವನಾರು ಎಂಬ ರಹಸ್ಯ ತಿಳಿಯದ್ದರಿಂದ ಉಪಾಸನದಭಿಮಾನಿಯು ಜ್ಞಾನಿಯು ಜ್ಞಾನ ಸ್ವರೂಪ ರಹಸ್ಯ ತಿಳಿಯದ್ದರಿಂದ ಚಿದಹಮ್ಮಿಯು ಇವರುಗಳು ತಾವಾರು ತನ್ನ ತಿಳಿಯದ್ದರಿಂದ ತಮ್ಮ ಇವರ್ಗುಳು ತಾವಾರು ತನ್ನ ತಿಳಿಯದ್ದರಿಂದ ತಮ್ಮ ಮತಾನುಸಾರ ತಿಕಾಂಡದ ಅಭಿಮಾನಿಗಳು ಮೋಡಿಗಳು ಇದು ಕಾರಣ ಮಾಯೆಗೆ ಒಳಪಟ್ಟವರು. ಮಾಯೆ ಯದು ಬಿಡುವ ಹಿಡಿವ ಕ್ರಿಯೆಗಳಿಗೆ ಹೃದಯ ಒಪ್ಪಿಕೊಂಡಿದೆ ಅದು ಮಾಯಿಕ ತನು ಎಂದು ಸಿದ್ಧವಾಗುವದು. ಚತುರ್ ವರ್ಣಾಶ್ರಮ ಇವುಗಳಷ್ಟೇ ಮಾಯಿಕವೆಂದು ತಿಳಿಯಕೂ ಡದು ಕೆಲಬರು ಗೃಹಸ್ಥರಷ್ಠೇ ಮಾಯಿಕಕ್ಕೆ ಒಳಪಟ್ಟವರು ಸನ್ಯಾಸಿಗಳು ತಪಸ್ವಿಗಳು ತ್ಯಾಗಿ ಗಳು, ಯೋಗಿಗಳು ಅಣಿಮಾದಿ ಸಿದ್ದಿ ಪುರುಷರು ಶಬ್ದವೇದಿಗಳು ಕೂಡಾ ಮಾಯಾಧೀನರು ಇವರು ತೋರಿ ಇಲ್ಲವಾಗುವ ಮಾಯೆಗೆ ಒಪ್ಪಿದವರು ನಂಬಿದವರು. ಇದ್ದ ಸಚ್ಚಿದ್ರೂಪ ದೋಳ್ ಇಲ್ಲದ ನಾಮ ರೂಪಂಗಳ ದಿಟ ಮಾಡಿದುದೆ ಮಾಯೆ.

ತನ್ನಿಂದ ತಿಳಿಸಿಕೊಂಬುದೆಲ್ಲವು ಮಾಯೆ. ತಾರಲ್ಲ ತಾನೆಂಬುದು ಉಳುಮೆ ಜ್ಞಾನಾ

ನಂದವೆಂಬುದು ನಾರು ಅರಿಯರಲ್ಲ ಅರಿಯದ್ದರಿಂದ ಮಾಯೆಯು ದಿಟವಾದಂತಾಗಿದೆ. ಮಾ ಎಂದರೆ ಯಾವುದು? ಯಾ ಎಂದರೆ ಇಲ್ಲವೋ, ಅದು ಮಾತೆ ಆವುದು ಇಲ್ಲ, ಅದು ಮಾಯೆ ತಾನು ನಿರಂತರ ಇದ್ದವನು ತೋರದಡಗಹ ಘನ ತಾನು ಆರನ್ನಾದರೂ ನೀನು ಇದ್ದೀಯೋ ಇಲ್ಲವೋ? ಎಂದು ಹೇಳುವನೆಂದಲ್ಲಿ ತಾನು ಇಲ್ಲದವನಲ್ಲ ಇದ್ದವನು ಅದಕ್ಕಾಗಿ ಇದ್ದೇನೆನ್ನುತ್ತಾನೆ. ಮಾಯೆ ಇಲ್ಲದುದು ಅಹಂಕಾರ ಇಲ್ಲದುದು ಇದು ರೂಪ ಚರಾಚರ ಜಗವು ಇಲ್ಲದುದು ಹಗ್ಗದೊಳ್ ಹಾವು ತೋರಿದರು ನಿಜವೇ? ಕಪ್ಪೆ ಚಿಪ್ಪಿನೊಳ್ ಬೆಳ್ಳಿ ತೋರಿದರೂ ನಿಜವೇ? ಹಗ್ಗ ನಿಜವಲ್ಲವೆ ಹಾವು ನಿಜವಲ್ಲಿ . ಕಪ್ಪ ಚಿಪ್ಪೇ ನಿಜವಲ್ಲದೆ ತೋರಿ ದರೂ ನಿಜವೇ ಬೆಳ್ಳಿ ನಿಜವಲ್ಲ ಬಂಗಾರ ದೋಳ್ ಕಡಗ ಕಂಕಣ ಆಭರಣಗಳಾಗಿ ತೋರಿ ದರೂ ಬಂಗಾರ ವಲ್ಲದಿನ್ಯವಲ್ಲ ಹಾಗೆ ತೆರಹಿಲ್ಲದಭವ ನುಡಿಗೆಡೆಗೊಡದ ಘನದೊಳ್ ತಾನಿ ದಿರೆಂಬ ಮಾಯೆ ತೋರಿದರೂ ನುಡಿಗೆಡೆಗೊಡದ ಘನವಲ್ಲದೆ ಅನ್ಯವಲ್ಲ.

ಈ ತೋರುವದು ಉಳುವೆ ನುಡಿಗೆಡೆಗೊಡದ ಘನ ತಾನೆಂಬುದು ನಾರು ಅರಿಯ ರಲ್ಲ ನಿರಂತರವಾಗಿ ಇದ್ದ ಮಂಗಲಮಯ ಪರಮ ಸತ್ಯವು ಅಹಂ ಇದಂ ರೂಪ ಮಾಯೆ ಯಾಗಿ ತೋರುವದು. ಸುಜ್ಞಾನಿಗೆ ಈ ಮಾಯೆಯೆ ತೆರಹಿಲ್ಲದಭವವಾಗಿದೆ ಅರಿತ ಶರಣಂಗೆ ತೋರುವ ಮಾಯೆ ತೋರಬಾರದ ಘನವಾಗಿ ಪ್ರಜ್ವಲಿಸುತ್ತಿದೆ.

ದೋಷದೃಷ್ಠಿಗೆ ರವಿಯು ಹಳದಿ ಬಂಣವಾಗಿ ಕಂಡಂತೆ ಅಜ್ಞಾನಿ ದೃಷ್ಠಿಗೆ ಇಲ್ಲದ ಮಾಯೆ ಉಂಟಾಗಿ ತೋರಿದರೂ ಅದು ನಿರ್ಮಾಯವಾಗಿದೆ. ಅರಿವುದೆ ತಾನಿದಿರೆಂಬುದು ಮಾಯೆ ಎನ್ನಲು ಸಂದುಂಟೆ? ಇದು ಕಾರಣ ಶಬ್ದವೇದಿಗಳು ಸಿಕ್ಕುತ್ತಾರೆ ನಿಶಬ್ದವೇದಿಗಳು ಸಿಕ್ಕುವದು ಬಹು ವಿರಳವೆಂದು ಹೇಳಬಹುದು. ನೋಡಲೇನೂ ಇಲ್ಲವಾಗಿ ನಿಜಸಿದ್ದ ನೀನೆ ಚಿಮ್ಮಲಿಗೆಯ ಚೆನ್ನರಾಯ ನೋಡಲೇನೊ ಇಲ್ಲವಾಗಿ. ತಾನೆ ತನ್ನಿಂದ ತನ್ನ ಅರಿವುಡೆ ನಿಜ ಸಿದ್ಧ ನೀನೆ ನಿನ್ನ ಹೊರ್ತು ಅನ್ಯ ಆರೂ ಇಲ್ಲ ತಾನು ಶುದ್ದ. ತಾನೆ ಸಿದ್ದ ತಾನೆ ಪ್ರಸಿದ್ದವೆಂದು ನೋಡಲೇನೂ ಇಲ್ಲವಾಗಿ ನಿಜ ಸಿದ್ದನೀನೆ ಎಲ್ಲವಿಲ್ಲವ ಅರಿಯಬಹುದು. ತಾನು ನಿಜ ಸಿದ್ದವಿ ದ್ದುದು ಅದನಾರು ಅರಿವುದು? ಅರಿವ ಅರುಹಿಸಿಕೊಂಬುದಕ್ಕೂ ಮೀರಿದ ಘನಕ್ಕೆ ಘನ ಅದು ದೃಶ್ಯವಾದುದಲ್ಲ, ದೃಕ್ ಎಂಬುದು ಆದುದಲ್ಲ ನುಡಿಗೆಡೆಗೊಡದ ಘನ ಅದನೆಂತು ಅರಿವುದು ಆರು ಅರಿಯಲಿಲ್ಲ ಅರುವೆ ತಾನೆ ಆಗಿ ನೋಡುವರು ಅವರ ದಿವ್ಯ ದೃಷ್ಠಿಗೆ ನೋಡಲೇನೋ ಇಲ್ಲವಾಗಿ ನಿಜಸಿದ್ದಿ ತಾನೆ ಅಲ್ಲಿ ತಾನೆಂಬುದಿಲ್ಲ ಇದಿರೆಂಬುದಿಲ್ಲ ಇವೆರಡು ಇಲ್ಲದುದರಿಂದ ಮಾಯೆಯು ಇಲ್ಲ ಇಲ್ಲದುದು ಇಲ್ಲವಾಗಿರುವಲ್ಲಿ ತಾನು ತೆರಹಿಲ್ಲದ ಭವ ನುಡಿಗೆಡೆಗೊಡನು ತನ್ನೊಳ್ ಭಾವಕ್ಕಿಂಬಿಲ್ಲ ಶಬ್ದ ಮೀಸಲು ಆಗಿರುವಲ್ಲಿ ನುಡಿಗೆಡೆಯಿಲ್ಲ ವೆಂದು ಹೇಳಿಹರು.

ಸೂರ್ಯಪ್ರಕಾಶ್‌ದೊಳ್ ಸೂರ್ಯನೆಂಬ ನುಡಿಯುಂಟೆ? ಜ್ಯೋತಿಯೋಳ್ ಜ್ಯೋತಿ ಎಂಬುವದಿದೆಯೋ? ಹಾಗೆ ತನ್ನೊಳ ಉಳುಮೆ ಎಂಬುದು ಇಲ್ಲ, ಜ್ಞಾನಾನಂದನೆಂಬುದು ಇಲ್ಲದುದರಿಂದ ಇಲ್ಲವಾಗಿರುವಲ್ಲಿ ತಾನು ತೆರಹಿಲ್ಲದಭವ ನುಡಿಗೆಡೆಗೊಡನು ತನ್ನೊಳ್ ಭಾವಕ್ಕಿಂಚಿಲ್ಲ ಶಬ್ದ ಮೀಸಲು ಆಗಿರುವಲ್ಲಿ ನುಡಿಗೆಡೆಯಿಲ್ಲವೆಂದು ಹೇಳಿಹರು.

ವಚನ - 11

ಖಂಡಿತವಲ್ಲದ ಅಖಂಡತನೆ. ನಿಮ್ಮ ಕಂಡವರುಂಟೆ ?
ಹೇಳಯ್ಯಕಂಡೆನೆಂಬುವರೆಲ್ಲ ಬಂಜೆಯ ಮಕ್ಕಳು.
ನೀನಿಂದ ಹೆಜ್ಜೆಯ ಕೆಳಗೊಂದು ಬಿಂದು ಹುಟ್ಟಿ
ಬೆಳಗುವ ಥಂದವ ಕಂಡು ಕಣ್ಬೆರೆದೆ ಕಾಣಾ ರಾಮನಾಥ

ತಾತ್ಪರ್ಯ : ಖಂಡಿತವಲ್ಲದ ಅಖಂಡಿತನೆ ನಿಮ್ಮ ಕಂಡವರುಂಟೆ? ಹೇಳಯ್ಯ ಕಂಡೆನೆಂಬುವರೆಲ್ಲ ಬಂಜೆಯ ಮಕ್ಕಳು :

ಖಂಡಿತವಲ್ಲವ ಅಖಮಡಿತನೆಂಬುದು ಅಪಾರ ಅಗಣಿತ ಅನುಪಮ ಘನಕ್ಕೆ ಘನ ವಾದುದರಿಂದ ಪಿಂಡದ ಪ್ರೇಮಿಗಳಾದ ನರರು, ಸುರರು ಅಖಂಡಿತನ ಕಾಣಲಿಲ್ಲ ಬ್ರಹ್ಮಾಂಡದೊಡೆಯರಾದ ದೇವಗಣ, ರುದ್ರಗಣ, ಪ್ರಮಥಗಣಾದಿಗಳ ಅಖಂಡಿತನ ಕಾಣ ಲಿಲ್ಲ, ಇತ್ತ ಚಿದ್ ಬ್ರಹ್ಮಾಂಡದ ಪ್ರೇಮಿಗಳಾದ ಸತ್ಯರು, ನಿತ್ಯರು, ಮುಕ್ತರು ಎಂಬ ಮಹಾ ಮಹಿಮರು ಖಂಡಿತವಲ್ಲದ ಅಖಂಡಿತನ ತಿಳಿಯಲಿಲ್ಲ. ಏಕೆಂದರೆ ಇವರು ಕಲ್ಪಿತಕ್ಕೆ ಒಪ್ಪಿದ ಕಲ್ಪಿತರು ಆಗಿರುವಲ್ಲಿ ಅ ಕಲ್ಪತ ಘನವ ಇವರೆಂತು ಬಲ್ಲರು.

ಖಂಡಿತವಲ್ಲದ ಅಖಂಡಿತನೆಂಬುದು ಕಲ್ಪನೆಗೆ ನಿಲುಕದು ನೆನಹಿಂಗೆ ಬಾರದು ಭಾವಿ ಸುವದದೆಂತು? ಉಪಮಿಸುವದದೆಂತು? ಕಂಡೆನೆಂಬುವರೆಲ್ಲ ಬಂಜೆಯ ಮಕ್ಕಳು ಇವ ರಾರು? ಕಂಡೆನೆಂಬವರು?

ಸತ್ಯರು ನಿತ್ಯರು ಮುಕ್ತರು ಎಂಬ ಮಹಾ ಮಹಿಮರು ಇವರು ಚಿದ್ ಬ್ರಹ್ಮಾಂಡದ ವರು ಇವರು ಬಂಜೆಯ ಮಕ್ಕಳು ಖಂಡಿತವಲ್ಲದ ಅಖಂಡಿತನ ವಿಭಾಗಮಾಡಿ ಕಂಡೆವೆನ್ನು ವರು. ಇಲ್ಲದ ನಾಮರೂಪಂಗಳ ಕಲ್ಪಿಸಿ ಇದು ಇಲ್ಲವೆಂದು ಆಸ್ತಿ ಭಾತಿ ಪ್ರಿಯವೆ ಅಖಂಡಿತ ಘನವೆಂದು ಭಾವಿಸುವ ಬ್ರಹ್ಮ ಭಾವಿಗಳು ಭಾವಕ್ಕಗಮ್ಯವಾದುದು ಭಾವಿಸಲು ಇಂಬುಂಟೆ? ಭಾವಕ್ಕಗಮ್ಯವಾದುದರಲ್ಲಿ ಭಾವಕ್ಕಿಂಬುಂಟೆ ? ನಿಶಃಬ್ದ ಬ್ರಹ್ಮದಲ್ಲಿ ಹೊಗಳಿಕೆಗೆ ಅವಕಾಶ ವುಂಟೆ? ಮಾತಿಲ್ಲದವನಲ್ಲಿ ಮಾತಿಲ್ಲದವನೆನ್ನಲು ಅದೆಷ್ಟು ಲ್ಜಾಜ್ಜ ಸ್ಪದ ಇದು ಕಾರಣ ಶಬ್ದವೇ ದಿಗಳೆಲ್ಲ ಬಂಜಿಯ ಮಕ್ಕಳಂದೆ ಹೇಳಿದೆ.

ನೀನಿಂದ ಹೆಜ್ಜೆಯ ಕೆಳಗೊಂದು ಬಿಂದುವ ಹುಟ್ಟಿ ಬೆಳಗುವ ಥಂದವ ಕಂಡು ಕಣ್ಣೆ ರದೆ ಕಾಣಾ ರಾಮನಾಥ ನೀನಿಂದ ಹೆಜ್ಜೆ ಇದು ಭಾವಕ್ಕಿಂಬು ಹೆಜ್ಜೆ ಶಬ್ದ ಮೀಸಲಾದ ಹೆಜ್ಜೆ. ನುಡಿಗೆ ಅವಕಾಶ ಕೊಡದ ಹೆಜ್ಜೆ ಖಂಡಿತವಲ್ಲದ ಅಖಂಡಿತವಲ್ಲದ ಅಖಂಡಿತ ಘನವಪ್ಪ ಪೂರ್ಣಹೆಜ್ಜೆ ಇಲ್ಲಿ ನಾನೆಂಬುದಿಲ್ಲ, ನೀನೆಂಬುದಿಲ್ಲ, ದೃಶ್ಯದೃಕ್ ಎಂಬ ವಿಭಾಗಮುನ್ನಿಲ್ಲ, ಇಲ್ಲ ಇಲ್ಲವೆಂಬುದು ತಾನಿಲ್ಲ ಇದನ್ನು ಅದೃಶ್ಯ ಅದೃಶಿ ಎಂದು ಹೇಗೆ ಹೇಳುವದು. ಇದು ಕಾರಣ ನೀನಿಂದ ಹೆಜ್ಜೆ ಎಂಬುದು ಪರಾತ್ಪರ ಹೆಜ್ಜೆ ಎನಲಿಲ್ಲ. ಇದನ್ನು ಅರಿಯ ಹೋದವ ರೆಲ್ಲ ಕೆಳಗೊಂಡು ಬಿಂದು ಹುಟ್ಟಿದವರು ಇವರೆ ಶರಣರು ಶರಣೆಯರು ಇವರು ನಿಶಬ್ದವೇ ದಿಗಳು ಖಂಡಿತವಲ್ಲದ ಅಖಂಡಿತವರಿಯ ಹೋದವರು ಇವರು ಅರಿಯಬಾರದ ಘನವರಿತ ಬಿಂದುಗಳು ಜ್ಞಾನಾಮೃತ ಬಂಧುಗಳು ಈ ಬಂಧುಗಳ ದಿವ್ಯ ದೃಷ್ಠಿಯಲ್ಲಿ ಬೆಳಗಿಸಿಕೊಳ್ಳುವ ಅಂಗವಿಲ್ಲ, ಅನಾತ್ಮವಿಲ್ಲ, ಬೆಳಗುವ ಆತ್ಮನೆಂಬುದಿಲ್ಲ, ನಿಸ್ಸೀಮವು ಅಲ್ಲಿ ಸೀಮಿತ ದೃಷ್ಠಿ ಇಲ್ಲ,

ಇವರು ಅಪಾರ ಬಿಂದುಗಳು ಅದಕ್ಕಾಗಿ ಬೆಳಗುಳ್ಳ ಬೆಳಕು, ನಿರಂತರ ಬೆಳಗುಳ್ಳ ಬೆಳಕಿನ ಬಿಂದುಗಳ ಇವು ಬೆಳಗುವ ಛಂದವಕಂಡು ಕಣ್ಣೆರದೆ.

ಭಕ್ತನು ಕಣ್ಣು ತೆರೆಯಲಿ ಶರಣರ ಬಳಗುವ ಘನತ್ವಕಂಡು ಕಣ್ಣು ತೆರೆಯುತ್ತಾನೆ. ಕಣ್ಣು ಅರುವಿನ ಕಣ್ಣು ಕಣ್ಣು ತೆಗೆಯಲು ಅರು ಹೃದಯವಾಗಬೇಕು. ಅರು ಹೃದಯವಾ ದಲ್ಲಿ ಉದಯಾಸ್ತವೆಂಬುದಕ್ಕಿಂಬಿಲ್ಲ. ಅಂದು ಇಂದು ಎಂದೆಂದು ಇದ್ದಕ್ಕಿಂದ್ದಂತೆ ಬೆಳಗುವ ಬೆಳಗು ಇಂತಪ್ಪ ಮಹದರಿವು ಆವ ಹೃದಯದಲ್ಲಿ ಪ್ರಜ್ವಲಿಸುವದು ಅದು ಕಣ್ಣು ತೆರೆದ ಸಂಕೇತವೆಂದು ದೇವರ ದಾಸಿಮಯ್ಯನವರು ತಮ್ಮ ಆರು ಹೃದಯದಲ್ಲಾದ ಹಿರಿಮೆ ಕೊಂಡಾಡಿಹರು. ಬಲ್ಲವನನ್ನು ಬಲ್ಲವರು ಅರಿಯಲು ಸಾದ್ಯವಲ್ಲದೆ ಸಾಮಾನ್ಯರಿಗೆ ಸಾಧ್ಯವೆ ಅರಿಯಲಿಲ್ಲದ ಅರುವ ಅದನೆಂತು ಅರಿವುದು. ಅರಿಯದ್ದರಿಂದ ಎರಡಾಗಿ ಕಾಣಿಸುವುದು ಅರಿದಡೆ ಒಂದೆ.

ವಚನ - 12

ಬಲ್ಲನಿತ ಬಲ್ಲರಲ್ಲದೆ ಅರಿಯದುದನೆಂತು ?ಬಲ್ಲರಯ್ಯ .
ಅರುವು ಸಾಮಾನ್ಯವೆ ? ಅರಿಯದುದನಾರಿಗೆ ಅರಿಯಬಾರದು.
ಗುಹೇಶ್ವರ ಲಿಂಗವು ಅರಿಯದಿದ್ದಡೆ ಎರಡು, ಅರಿದಡೆ ಒಂದೆ.

ತಾತ್ಪರ್ಯ : ಬಲ್ಲನಿತ ಬಲ್ಲರಲ್ಲದೆ ಅರಿಯದುದನೆಂತು ?ಬಲ್ಲರಯ್ಯ :

ಬಲ್ಲನಿತ ಈತ ಬಲ್ಲರು. ಬಲ್ಲನಿತ ಈತ ಬಲ್ಲವ. ಸಕಲವ ಬಲ್ಲ. ಈ ಬಲ್ಲವನನ್ನು ಬಲ್ಲವರೆ ಬಲ್ಲವರಲ್ಲದೆ ಅರಿಯದ ಮುಗ್ಧರು. ಅವರೇನು ಬಲ್ಲರು. ಗುಹೇಶ್ವರ ಲಿಂಗವ ಅವರೇನು ಬಲ್ಲರು.

ಬಲ್ಲವ : ಇವನಾರು ? ಸಕಲವ ಬಲ್ಲವನಿಗೇನೆನ್ನಬೇಕು ? ಕ್ಷರವ ಬಲ್ಲವ ಅಕ್ಷರನೆಂಬುದನ್ನು ಬಲ್ಲವ. ಪುರವ ಬಲ್ಲವ ಪುರುಷನೆಂಬುದನ್ನು ಬಲ್ಲವ. ಅರಿದರುಹಿಸಿಕೊಂಬುದಕ್ಕೂ ಮೀರಿದ ಘನವಾದ ಅರುವು ಸಾಮಾನ್ಯವೆ. ಅದು ಅರಿಯಲಿಲ್ಲದ ಅರುವು. ಇದನೆಂತು ಬಲ್ಲರಯ್ಯ.

ಅರಿಯಲಿಲ್ಲದ ಅರುವು . ಅದನೆಂತು ದೃಶ್ಯವು ಅರುವುದು. ದೃಕ್ ಎಂಬುದನರಿ ಯದು, ಅದೃಶ್ಯವೆಂಬುದನರಿಯದು. ಅದೃಷಿಯೆಂಬುದು ಅರಿಯದು. ಇದ್ದಂತಿರುವ ನಿರಾಲಂಬವು ಅದು ಅರಿಯಲಲ್ಲದ ಅರುವು. ಇದು ಅರಿಸಿಕೊಳ್ಳುವದಾಗದು, ಅರಿಯುವ ದೃಕ್ ಆಗದು. ಅಂದು, ಇಂದು , ಎಂದೆಂದೂ ಇದ್ದಂತಿದ್ದ ಅನುಪಮ.

ಅರುವು ಸಾಮಾನ್ಯವೇ ? ಅರುವಿಂಗರುವಾದ ಅರುವು ಸಾಮಾನ್ಯವೆ ? ಅರುವೆನ್ನದ ಅರುವು ಅದು ಸಾಮಾನ್ಯವೆ ? ಅದು ಅರಿಯಲಲ್ಲದ ಅರುವು ಆದ್ದರಿಂದ ಅರಿಯದುದನಾರಿಗೆ ಅರಿಯಬಾರದು. ಅರಿಯದರುವು ಆರಿಗೆಯೂ ಅರಿಯಬಾರದು. ಕಲ್ಪಿತವಾದ ಅರಿವು ಅರಿಯಬಹುದು. ಕಲ್ಪಿತವಲ್ಲದ ಅರುವು ಅದು ಅಕಲ್ಪಿತ ಘನವ ಅರಿಯುವದೆಂತು ? ಭಾವಿಸಿಹ ಅರಿವು ಅರಿಯಬಹುದು. ಭಾವಕ್ಕಗಮ್ಯವಾದ ಘನವ ಅರಿಯುವದೆಂತು ?. ಚಿಂತನಕ್ಕೊಳಪಟ್ಟ ಅರಿವು ಅರಿಯಬಹುದು. ಅಚಿಂತ್ಯ ಘನವ

ಅರಿಯುವದೆಂತು ?

ಗುಹೇಶ್ವರನೆಂಬ ಲಿಂಗವು ಅರಿಯದಿದ್ದರೆ ಎರಡು. ಅರಿದಡೆ ಒಂದು : ಗುಹೇಶ್ವರ ಲಿಂಗ ಅರಿಯದ್ದರಿಂದ ಎರಡಾಗಿದೆ. ಅದು ಘನವಾಗಿಹುದು. ತಾನು ಕಿರಿದಾಗಿಹನು ಹಾಗಾದರೆ ಗುಹೇಶ್ವರ ಲಿಂಗವು ಅರಿಯುವುದಾದರೂ ಅದೆಂತು ? ಲಿಂಗ ಒಳಗೋ ? ಹೊರಗೋ ? ಬಲ್ಲಡೆ ನೀವು ಹೇಳಿರೆ. ಲಿಂಗ ಮುಂದೋ ? ಹಿಂದೋ ? ಬಲ್ಲಡೆ ನೀವು ಹೇಳಿರೆ. ಲಿಂಗ ಎಡನೋ ? ಬಲನೋ ? ಬಲ್ಲಡೆ ನೀವು ಹೇಳಿರೆ. ಲಿಂಗ ಸ್ಥೂಲವೋ ? ಸೂಕ್ಷ್ಮವೋ ಬಲ್ಲಡೆ ನೀವು ಹೇಳಿರೆ. ಲಿಂಗ ಪ್ರಾಣವೋ ? ಪ್ರಾಣ ಲಿಂಗವೋ ಬಲ್ಲಡೆ ನೀವು ಹೇಳಿರೆ ಗುಹೇಶ್ವರಾ.

ಗುಹೇಶ್ವರ ಲಿಂಗವದು ಖಂಡಾಖಂಡಾ ಸಂಯೋಗವಿಲ್ಲದ ಅಖಂಡನ ನಿಲುವು ತನ್ನಲ್ಲಿಯೇ ಅಲ್ಲದೆ ಹೊರಗೆ ನೋಡ ಹೋಗಬಾರದು. ಹೊರಗೆ ನೋಡ ಹೋದವರಿಗೆ ಅಸಾಧ್ಯವು. ಲಿಂಗವೆಂಬುದದು ತೆರಹಿಲ್ಲದ ಭವ. ನುಡಿಗೆಡೆಗೊಡನು. ನುಡಿಗೆಡೆಗೊಡನಂತಿದ್ದ ಘನವ ನುಡಿಗೊಳಪಡಿಸಿ ನೋಡಬಾರದು. ತೆರಹಿಲ್ಲದ ಭವನನ್ನು ಆವಾವುದಕ್ಕೂ ಅವಕಾಶಕ್ಕೊಡದವರಾಗಿ ತನ್ನಲ್ಲಿಯೇ ನೋಡಹೋಗಬೇಕು. ಆಗ ತನುವಿನ ತನು ಮನದ ಮನ , ಜೀವದ ಜೀವ ತಾನೇ, ತಾನೇ ಆಗಿ ಪ್ರಜ್ವಲಿಸುವನು.

ಗುರುವಿಡಿದ ಅರುವು ಅರುವಲ್ಲ. ಲಿಂಗವಿಡಿದ ಅರುವು ಅರುವಲ್ಲ. ಇಲ್ಲದ ಗುರು ಇಲ್ಲದ ಲಿಂಗ ಕಲ್ಪಿತಕ್ಕೆ ಅರಿವಹುದೆ ?. ತನ್ನಿಂದ ತಾನು ಅರಿವುದೆ ಅರಿವು ಗುಹೇಶ್ವರಾ. ಅರಿವು ಅನುಪಮ. ಎರವಲವಾಗಿ ಬಂದ ಅರಿವು ಅನುಪಮ. ಅರವಲವಾಗಿ ಬಂದ ಅರಿವು ಅದು ಯತಾರ್ಥವಾಗದು . ಅದು ಗುರುವಿನಿಂದ ಲಭ್ಯವಾಗಲಿ, ಲಿಂಗದಿಂದ ಲಭ್ಯವಾಗಲಿ ಇವೆಲ್ಲವು ಹೆತ್ತರಿವು. ತಾನೇ ಸ್ವಯಮೇವ ಅರಿವು. ಇದು ತನ್ನಿಂದ ತಾನರಿತಲ್ಲಿ ಸ್ವತಃ ಸಿದ್ಧವೆಂಬುದು ತನಗೆ ವಿಧಿತವು ಏಕೆಂದರೆ, ಸುಮ್ಮನೆ ಹೇಳುವುದಕ್ಕಾದರೂ ನಾಮ ರೂಪಂಗಳಿಲ್ಲ. ತನಗಿಂತನ್ಯ ವಸ್ತುವಾಗಲಿ, ತನ್ನೊಂದಿಗೆ ಸೇರಿದ ವಸ್ತುವಾಗಲಿ ಇಲ್ಲವೇ ಇಲ್ಲ. ತಾನೊಂದೇ ಸತ್ಯ. ತಾನು ನಿರಂತರವಾಗಿರುವ ಪರಮ ಸತ್ಯ. ಇದು ಕಾರಣ ತನ್ನ ತಾನರಿವಡೆ ಗುಹೇಶ್ವರ ಲಿಂಗ ತಾನೇ.

ತಾನಾರೆಂದರಿಯದೆ ಏನನ್ನಾದರು ಅರಿತರೆ ಅದು ಮಾಯಿಕ. ಇಲ್ಲದರುವು ಇಲ್ಲದ ಮಾಯಿಕವದು. ಕಥನಕ್ಕೊಳಗು ಇದ್ದ ತಾನು ಶೃತಿಗಗೋಚರ. ವಾಗಜ್ಮನೋತೀತವಾದುದು. ಅದು ತಿಳಿಯಬೇಕೆಂದಲ್ಲಿ ತನ್ನ ಮನಸ್ಸಿಗೆ ತಾನೇ ಬೋಧಿಸುವವನಾಗು.

ವಚನ - 13

ಎಲೆ ಮನವೆ ನೀ ನಿಜವ ತಿಳಿವುಡೆ ಆ ನಿನ್ನ ನಿಜವ ಹೇಳುವೆ ಕೇಳು ಅದು
ಕೇವಲ ಜ್ಯೋತಿ ಅದು ವರ್ಣಾತೀತ
ನೀನದ ನರಸುವಾಗ ನಿನಗಾವಲ್ಲಿ ನಿಶ್ಚಯ ತೋರಿತ್ತು.
ಅದೀಗ ನಿನ್ನ ಪರಿಪೂರ್ಣ ಊರ್ಣತ್ವ ನೆಲೆ
ಆ ನಿನ್ನ ನಿಜವ ನಿಶ್ಚೈಸಿ ನಿರ್ಗಮನಿಯಾದಲ್ಲಿ
ಅದೇ ಸಮ್ಯಜ್ಞಾನದ ತೋರಿಕೆಯ ಅಖಂಡ ಬೆಳಗಿನ ಹೊಳಪಿನೊಳಗೆ ನೀ ನಮ್ಮ

ಗುಹೇಶ್ವರ ಲಿಂಗದ ಶ್ರೀ ಚರಣದ ಸ್ಮರಿಸಿಕೊಂಡು ನಿಶ್ಚಿಂತನಾಗೆಲೆ ಮನವೆ.

ತಾತ್ಪರ್ಯ: ಎಲೆ ಮನವೆ ನೀ ನಿಜವ ತಿಳಿವುಡೆ ಆ ನಿನ್ನ ನಿಜವ ಹೇಳುವೆ ಕೇಳು:

ಪ್ರಭುದೇವ ಮನಕ್ಕೆ ಶ್ರೀಗುರುವಾದಾತ ಮನವ ತನ್ನಂತೆ ಮಾಡುವ ಸ್ವಯಂಜ್ಯೋತಿ ಲಿಂಗವಾದುದರಿಂದ ಎಲೆ ಮನವೆ ಎಲೆ ಮನವೆ ನೀ ನಿಜವ ತಿಳಿವುಡೆ ಆ ನಿನ್ನ ನಿಜವ ಹೇಳುವೆ ಕೇಳು ಎಂದು ಬೋಧಿಸಿಹನು. ಓ ಮನವೆ ನೀನು ಮನವಲ್ಲ ಕೇವಲ ಜ್ಯೋತಿ ವರ್ಣಾತೀತ ನೀ ನದನರಸುವಾಗ ನಿನಗಾವಲ್ಲಿ ನಿಶ್ಚಯ ತೋರಿತ್ತು.

ಪ್ರಭುದೇವ ಇದು ಮನಸ್ಸಿಗೆ ತಿಳಿಸುವ ಸುಶಿಕ್ಷಣ ಸುಜ್ಞಾನ, ಕರುಣಾ ಹೃದಯದಿಂದ ಹೊರಹೊಮ್ಮಿಬಂದ ಮಹಾ ಪ್ರಸಾದ. ಕೇವಲ ಜ್ಯೋತಿ ಎಂದು ಹೇಳಿ ಸರಿಮಾಡಬಹುದಾಗಿತ್ತು. ಅದು ವರ್ಣಾತೀತ ಎಂದು ಹೇಳಿದುದಲ್ಲದೆ ನೀನದನರಸುವಾಗ ನಿನಗಾವಲ್ಲಿ ನಿಶ್ಚಯ ತೋರಿತ್ತು ಎಂದು ತಿಳಿಸಿದುದು ನೋಡಿದಡೆ ಇದು ಸ್ವಸ್ವರೂಪ ಸಿದ್ಧಮಾಡಿ ತೋರುವ ಪರಮಗುರಿ ಇದು ಆಕಾಶವಾಣಿ . ಕಲ್ಪಿತ ನನ್ನ ನಷ್ಟಮಾಡಿ ಅಕಲ್ಪಿತ ಘನವ ತೋರಿಸುವ ಸಂಕೇತ ಅನುಪಮ ನಿಲುವು ತೋರಿಸುವ ಸಂಜ್ಞೆ. ಕೇವಲ ಜ್ಯೋತಿ ಎಂಬುದು ಏಕ ಏವ ಅದ್ವಯ ಇದು ನಿರಂತರವಾಗಿರುವ ಸರ್ವಮಂಗಳಮಯ ಜ್ಯೋತಿ ಇದು ಅಂದು ಇಂದು ಎಂದೆಂದೂ ಇದ್ದಂತಿರು ಘನ ಏನೊಂದಾಗದ ನಿರಾಲಂಬ ನಿರುಪಮ ಜ್ಯೋತಿ ವರ್ಣನೆಗೆ ಮೀರಿದುದು ಆವುದು ಅದು ಜ್ಯೋತಿ ಕೇವಲ ಜ್ಯೋತಿ ಎಂದು ಎಚ್ಚರಿಸಿದ.

ಎಲೆ ಮರವುಳ್ಳ ಮನವೆ ಇಲ್ಲದುದು ಕಲ್ಪಿಸುವದು ಇದ್ದುದ ನರಿಯದಿಹುದು ನಿನ್ನ ಸ್ವಭಾವವಾಗಿದೆ. ಇದುವೆ ನೀನೆಂದು ತಿಳಿದು ನಿನ್ನ ನಿಜದಿಂದ ದೂರವಾಗಿರುವೆ. ನಿನ್ನ ಪ್ರಮಾದ ಕಳೆದುಕೊಳ್ಳಲು ಕೇವಲ ಜ್ಯೋತಿಯೆಂದು ತಿಳಿಯೆ ಹೋಗು.

ಜ್ಯೋತಿ ಎಂದಾಕ್ಷಣ ನಿನಗಿಂತ ಬೇರಾಗಿ ತೋರುವ ಚಂದ್ರ ಸೂರ್ಯರೆಂದು ಹೊರಗೆ ತೋರುವ ಕೆಂಪು, ಹಳದಿ, ಹಸರು, ನೀಲಿ, ಬಿಳಿಪು, ಕೇಸರಿ ಈ ತೋರಿಕೆಯ ಜ್ಯೋತಿ ಕೇವಲ ಜ್ಯೋತಿಯಾಗವು ಇದಲ್ಲದೆ. ಯೋಗಾಭ್ಯಾಸದಲ್ಲಿ ತೋರುವ ನಾದ ಬಿಂದು ಕಲೆಗಳಿಂದುಕ್ತವಾದುದು ಅದು ಪರಪ್ರಕಾಶವಲ್ಲದೆ ಕೇವಲ ಜ್ಯೋತಿಯಾಗದು.

ಕೇವಲ ಜ್ಯೋತಿಯಾದುದು ಅದು ತಾನು ಜ್ಯೋತಿ ಎನ್ನಲು. ಇದು ಕಾರಣ ಅದು ವರ್ಣಾತೀತವಾದ್ದರಿಂದ ಅದಕ್ಕೆ ಪರಪ್ರಕಾಶವೆನ್ನಲು ಬರದು. ನುಡಿಗೆಡೆಗೊಡದ ಘನವೆ ಕೇವಲ ಜ್ಯೋತಿಯಾದುದು ನೀನದ ಹುಡುಕುವಾಗ ನಿನಗಾವಲ್ಲಿ ನಿಶ್ಚಯವಾಗಿ ನಿನಗೆ ಒಪ್ಪಿಗೆಯಾಗುವದು. ಅದುವೆ ನಿನ್ನ ನಿಜವ ತಿಳಿದುದು ಎಂದು ಹೇಳಿದವನಲ್ಲದೆ ಅರ್ಚನೆ ಮಾಡು, ಅನು ಸಂಧಾನ ಮಾಡು ಎನಲಿಲ್ಲ ಏಕೆಂದರೆ ತನ್ನ ನಿಶ್ಚಿಯ ಧ್ಯಾನಾತೀತ ಭಾವಾತೀತ ಕ್ರಿಯಾತೀತವಾದ್ದರಿಂದ ಅತೀತ ನಿಲುವು ವರ್ಣಿಸಲಕ್ಕೆಬಾರದ ನಿಲವು ನಿಜದ ನಿಲುವು ಅರಸುವದಕ್ಕೆಬಾರದ ನಿಲುವು ನಿಜ ನಿಲವು ಅದೀಗ ನಿನ್ನ ಪರಿಪೂರ್ಣತ್ವದ ನೆಲೆ.

ಎಲೆ ಮನವೆ ಆರು ನಾನೆಂದು ನಿನ್ನ ನಿಜವ ತಿಳಿಯುವೆ ಆಗಳೆ ತಾನು ಕೇವಲ ಜ್ಯೋತಿ ಎಂಬುದು ನಿನ್ನಿಂದ ನಿನಗೆ ವಿದಿತವಾಗಿ ನಡೆ ನಷ್ಟ ನುಡಿ ನಷ್ಟ ಭಾವ ನಷ್ಟ ನೆನಹು ನಷ್ಟ ಮರವು ಅರುವೆಂಬ ಜ್ಞಾನ ಇವೆಲ್ಲವು ಮುಕ್ತಾಯವಾದವೆಂದು ನಿನ್ನಿಂದ ನಿನಗೆ ಸಿದ್ಧವಾಗುವದು. ಆಗ ಅರಿಯಲಿಲ್ಲದ ಅರುವೆ ನನ್ನಿರುವಾಗಿ ದೃಢತರವಾದುದೆ. ಅದೀಗ ನಿನ್ನ

ಪರಿಪೂರ್ಣತ್ವದ ನೆಲೆ.

ಆ ನಿನ್ನ ನಿಜವ ನಿಶ್ಚೆಸಿ ನಿರ್ಗಮನಿಯಾದಲ್ಲಿ ಅದೆ ನಿನ್ನ ಸಮ್ಯಜ್ಞಾನದ ತೋರಿಕೆ ಆವುದು. ವರ್ಣನೆಗೆ ನಿಲುಕದ ಘನ ಅದುವೆ ನಿನ್ನಯ ನಿಜವು ಆವುದು ತೋರಬಾರದ ಘನ ಅದುವೆ ನಿನ್ನಯ ಸ್ವರೂಪ. ಅದುವೆ ನಿನ್ನಯ ನಿರ್ವಾಣ. ಅದುವೆ ಶಬ್ದಮುಗ್ದ ನಿಲುವು ಇದು ನೆಲೆಯುಲ್ಲದ ನಿಲುವು ನಿನ್ನಯ ನಿಜಧಾಮವಾದುದು ನಿನ್ನಿಂದ ನಿನಗೆ ವಿಧಿತವಾಗಿ ಮನದ ಕಾರ್ಯ ಇತಿಯಾದುದು.

ಅದು ಉಪಾಧಿಕ ಮನವಿರಲಿ ಉಪಾಧಿತ ರಹಿತ ಮನವಿರಲಿ ಇವೆರಡು ಕಾರ್ಯದಿಂದ ವಿಮುಖವಾದಲ್ಲಿ ಆ ನಿನ್ನ ನಿಜ ನಿಶ್ವೆಸಿ ನಿರ್ಗಮನಿಯಾದುದು. ಅದು ಸಮ್ಯಜ್ಞಾನದ ತೋರಿಕೆ. ನಿನ್ನದು ತೋರಬಾರದ ಘನದಿರುವು ನಿಶ್ಚಯವಾಗಿ ನಿನ್ನಿಂದ ನಿನಗೆ ಹೇಳಲು ಬಾರದಂತಾದುದೆ ಆ ನಿನ್ನ ನಿಜವ ನಿಶ್ವೆಸಿ ನಿರ್ಗಮನಿಯಾದುದು ಎಂದು ತಿಳಿವುದು ಅದುವೆ ಸಮ್ಯಜ್ಞಾನದ ತೋರಿಕೆ. ಇದು ತಾನಾರೆಂಬ ತನ್ನಿರುವಿನ ತೋರಿಕೆ ಇದು ತಾನೆ ತಾನಾದ ತೋರಿಕೆ ತೋರಬಾರದ ಘನವಾಗಿಹ ಇರುವು ನಿಸ್ಸೀಮವು ಅಪಾರವಾಗುವದರಿಂದ ಅಖಂಡ ಬೆಳಗಿನ ಹೊಳದಿನೊಳಗೆ ನಮ್ಮ ಗುಹೇಶ್ವರ ಲಿಂಗದ ಶ್ರೀಚರಣವ ಸ್ಮರಿಸಿಕೊಂಡು ನಿಶ್ಚಿಂತವಾಗಿರು ಮನವೆ.

ಅಖಂಡ ಬೆಳಗಿನ ಬೆಳಗು ಇದು ತನ್ನಯ ಬೆಳಗುಳ್ಳ ಬೆಳಗು. ಇಲ್ಲಿ ಹಮ್ಮು ಇಲ್ಲ ಗಿಮ್ಮು ಇಲ್ಲ ನಾನೆಂಬುದಿಲ್ಲ ನೀನೆಂಬುದಿಲ್ಲ ಅಹುದಾದುದಿಲ್ಲ, ಅಲ್ಲಾದುದಿಲ್ಲ, ಎರಡೆಂಬುದಿಲ್ಲ, ಒಂದೆಂಬುದಿಲ್ಲ ಅರಿಸಿಕೊಳ್ಳುವದಿಲ್ಲ, ಅರಿವುದು ಇಲ್ಲ ಇಲ್ಲವೆಂಬುದು ಇಲ್ಲವಾಗಿ ತನ್ನಿರುವು ಘನಕ್ಕೆ ಘನ ಅಖಂಡ ಬೆಳಗಿನ ಹೊಳಹು ಇದುವೆ ಗುಹೇಶ್ವರ.

ಲಿಂಗ ಪೂರ್ಣಾತ್ ಪೂರ್ಣವಾದುದು. ಇದು ಪೂಜೆಗೆ ಬಾರದ ಲಿಂಗ ಇದು ಕಾಣಿಸಿಕೊಳ್ಳದ ಲಿಂಗ ಅರಸಲು ಬಾರದ ಲಿಂಗ ಭಾವಕ್ಕಿಂಬು ಕೊಡದ ಲಿಂಗ ಅಚಿಂತ್ಯ ಲಿಂಗ ಈ ಅಚಿಂತ್ಯದರುವಿನ ಅರುವೆ ಮಹದರಿವು ಈ ಅರಿವೆ ಗುಹೇಶ್ವರ ಲಿಂಗದ ಶ್ರೀಚರಣ.

ಇದನ್ನು ಸ್ಮರಿಸಿಕೊಂಡು ನಿಶ್ಚಿಂತನಾಗಲೆ ಮನವ ಎ ಮನವೆ ನೀನು ನಿಶ್ಚಿಂತನಾಗಬೇಕೆಂದಲ್ಲಿ ಲಿಂಗವಿದು ಪೂಜೆಗೆ ಬಾರದ ಲಿಂಗವೆಂದು ಸ್ಮರಿಸಿ ಕಾಣಬಾರದ ಘನವೆಂದು ಸ್ಮರಿಸು. ಚಿಂತಿಸದ ಲಿಂಗ ಚಿಂತನೆಗೆ ನಿಲುಕದ ಲಿಂಗವೆಂದು ಅಚಿಂತ್ಯನಾಗು ಭಾವಕ್ಕಿಂಬುಕೊಡದಲಿಂಗವೆಂದು ಭಾವ ತ್ಯಜಿಸಿ ಭಾವಕ್ಕಗಮ್ಯನೆಂಥು ಅಚಿಂತ್ಯಾತ್ಮವೆಂದು ಚಿಂತನಗೆ ಮಹತ್ವಕೊಡದಿರು.

ಆಗ ಅಚಿಂತ್ಯಾತ್ಮ ಸನ್ನಿರವು ಎಂಬುದು ನಿನ್ನಿಂದ ನಿನಗೆ ಅರಿವು ಆಗುವುದು. ಆಗ ಸ್ವಾಭಾವಿಕಾಗಿ ನಿಶ್ಚಂತತ್ವ ಸಿದ್ಧಿಸುವದು. ಇದು ಕಾರಣ ಮನಸ್ಸು ತಾನಾಗಬಾರದು ಸಂಕಲ್ಪ ವಿಕಲ್ಪಕ್ಕೆ ಸೇರದವನಾಗಿ ಮನಸ್ಸಿಗೆ ಭೋಧಿಸುವವನಾಗಬೇಕು. ಮನದ ಪೂರ್ವಾಶ್ರಯ ಕೆಡಬೇಕು. ಅದು ಇತಿ ಆದ ನಿಲುವೆ ಮುಕ್ತಿ ಅರ್ಥಾತ್ ತನ್ನಯ ಇರವು ನಿಜದ ಅರಿವು ಅದು ಗುಹೇಶ್ವರಲಿಂಗ ತಾನು ಎಂದು ಹೇಳಿಹರು.

ವಚನ - 14

ಎಲೆ ಮನವೆ ಹವಣಿಸ ಬಾರದ ಅಖಂಡ ಬೆಳಗು ತೋರುತ್ತಿಹುದು
ಅದೀಗ ನಿನ್ನ ನಿಜ ಎಲೆ ಮನವೆ ನೀನೆಂಬ ಶಂಕೆಯ ಹಿಂಗಿ ತಾನೆ ತೋರುತ್ತಿಹುದು
ಅದೀಗ ನಿನ್ನ ನಿಜ. ಎನ್ನ ಮನವೆ ನಿನ್ನ ನಿಜವ ನರಿಯ ಬಲ್ಲಡೆ ಅದೆ ಬ್ರಹ್ಮಜ್ಞಾನ
ಅದೆ ಕೇವಲ ಮುಕ್ತ ಅದೆ ನಮ್ಮ ಗುಹೇಶ್ವರ ಲಿಂಗವ ನರಿದ ಸಹಜ ಭಕ್ತಿಯ
ಕುಳಕಾಣಾ ಎಲೆ ಮನವೆ ನೀನಿದ ನಿಶ್ಚಯಿಸಿಕೊ ಮರೆಯದೆ.

ತಾತ್ಪರ್ಯ: ಎಲೆ ಮನವೆ ನೀನಿದ ನಿಶ್ಚಿಯಿಸಿಕೊ ಮರೆಯದೆ ಪ್ರಭುದೇವ ಮನಕ್ಕೆ ನಿಜದ ನಿಶ್ಚಯ ಹೇಳಿಕೊಟ್ಟ ಅನುಪಮ ತನ್ನ ಮನಕ್ಕೆ ಬೋಧವ ಹೇಳಲು ಕಲ್ಪಿಸಿದ ಪರಮಗುರು ನಿಜವರಿತ ನಿರಾಲಂಬನಾದ್ದರಿಂದ ಎಲೆ ಮನವೆ ಹವಣಿಸಬಾರದ ಅಖಂಡ ಬೆಳಗು ತೋರುತ್ತಿಹುದು. ಅದೀಗ ನಿನ್ನ ನಿಜವೆಂದು ಬೋಧಿಸಿದ.

ಮನವದು ಸಂಕಲ್ಪ ವಿಕಲ್ಪಕ್ಕೊಳಗಾದುದು ಸಂಕಲ್ಪ ವಿಕಲ್ಪದ ರೂಪಿನಿಂದ ಹವಣಿಸಿಬಾರದ ಅಖಂಡ ಬೆಳಗು ತೋರುವದದೆಂತು? ಮರವಿನ ಮಾಪಿನಿಂದಲಾದರೂ ಮಾತು ಮನಂಗಳಿಗೆ ಮೀರಿದ ಘನವ ತಿಳಿಯುವದದೆಂತು? ಕಾಣುವದದೆಂತು? ಇಲ್ಲದುದ ಕಲ್ಪಿಸುವ ಮನ ಇದ್ದ ಘನವ ಅರಿಯುವದದೆಂತು? ಇದ್ದುದ ನರಿಯದಿಹ ಮರವು ಇದಾದರೂ ನಿಜತತ್ವ ಅರಿಯುವದದೆಂತು?

ಎಲೆ ಮನವೆ ನಿನ್ನ ನಿಜವದು ಹವಣಿಸ ಬಾರದ ಅಖಂಡ ಬೆಳಗು. ಇರುವಲ್ಲಿ ನೀನು ಸಂಕಲ್ಪ ವಿಕಲ್ಪದಿಂದುಕ್ತನಾದಷ್ಟು ನಿಜದಿಂದ ದೂರ ಓ ಮನವೇ ಇಲ್ಲದುದು ಎಲ್ಲಿಯವರೆಗೆ ಕಲ್ಪಿಸುವದು ಬಿಡುವದಿಲ್ಲ. ಅಲ್ಲಿಯವರೆಗೆ ನಿನ್ನ ಅಖಂಡತ್ವದಿಂದ ದೂರ ಇದ್ದುದ ಅರಿಯುವುದಿಲ್ಲವೆಂದಲ್ಲಿ ಅಖಂಡತ್ವ ಅದೆಂತು ಸಾಧ್ಯ. ಇದ್ದುದ ಅರಿಯುವಿದಿಲ್ಲವೆಂದಲ್ಲಿ ಅಖಂಡತ್ವ ಅದೆಂತು ಸಾಧ್ಯ.

ಮನವು ತನ್ನ ಕಲ್ಪಿತ ಮಾಪಿನಿಂದ ಅಖಂಡತ್ವ ಅಳತೆ ಮಾಡಲು ಹೋಗುವುದು ಇದನ್ನು ಜಿಜ್ಞಾಸುನೋಡಿ ತನ್ನಿಂದ ತನಗೆ ಜ್ಞಾನೋದಯವಾಗಿ ಸಂಕಲ್ಪ ವಿಕಲ್ಪದಿಂದ ಅಕಲ್ಪಿತ ಘನವ ಅರಿಯುವದು ಅಸಾಧ್ಯವೆಂದು ಹೊಳೆದು ನಾಚುವದು. ಆರ ಮನ ತಾನು ಅರಿವ ಅರುಹಿಸಿಕೊಂಬುದು ಕಲ್ಪಿಸುವದು ಬಿಡುವದು ಆಗ ಇದ್ದ ತನ್ನಿರುವು ತನಗೆ ವಿಧಿತವಾಗಿ ಅಖಂಡ ಬೆಳಗು ತೋರುತ್ತಿಹುದು.

ಹವಣಿಸಬಾರದ ಅಖಂಡ ಬೆಳಗು ಕಾಣುವದೆಂದರೆ ಇದು ಮಾತಮನಂಗಳಿಂದತ್ತತ್ತ ಚಿಂತನದಿಂದತ್ತತ್ತ. ಭಾವದಿಂದತ್ತತ್ತ ನಿರ್ಣಯದಿಂದತ್ತತ್ತ, ಅಂಚೆ ಶರಿಯೆನೆಂಬುದತ್ತತ್ತ ಸಾಗಬೇಕು. ಆಗ ಹವಣಿಸಬಾರದ ಅಖಂಡ ಬೆಳಗು ಇದು ಅಪಾರ ಇಲ್ಲಿ ಪ್ರಕಾಶ ಪ್ರಕಾಶಿತವೆಂಬ ಸೀಮಿತ ದೃಷ್ಟಿಗಿಂಬಿಲ್ಲ. ಬೆಳಗಿಸಿಕೊಳ್ಳುವ ನಾಮರೂಪವುಳ್ಳ ಪಿಂಡಾಂಡ ಬ್ರಹ್ಮಾಂಡವಿಲ್ಲ ಬೆಳಗುವ ಆತ್ಮನೆಂಬುದಿಲ್ಲ ಇಲ್ಲವೆಂಬುದು ಇಲ್ಲವಾಗಿ ತನ್ನಿರುವ ತನ್ನಿಂದ ಕಂಡ ಬೆಳಗಿನ ಬೆಳಗು ಇದುವೆ ಹವಣಿಸಬಾರದ ಅಖಂಡ ಬೆಳಗು ತೋರುತ್ತಿಹುದು. ಅದೀಗ ನಿನ್ನನಿಜ ಓ ಮನವೆ ನಿನ್ನ ನಿಜ ಅಖಂಡ ಬೆಳಗುಳ್ಳ ಬೆಳಗು ತೋರುತ್ತಿಹುದೆಂದಲ್ಲಿ ದೃಶ್ಯವಾಗಿ ತೋರುವದಲ್ಲ ದೃಕ್ಕಾಗಿ ತೋರುವದಲ್ಲ ಏನೊಂದಾಗದೆ ಇದ್ದಕ್ಕಿದ್ದಂತೆ ಬೆಳಗುವ ಜ್ಯೋತಿಯೆ

ಅಖಂಡ ಬೆಳಗು.

ಎಲೆ ಮನವೆ ನೀನೆಂಬ ಶಂಕೆ ಹಿಂಗಿ ತಾನೆ ತೋರುತ್ತಿಹುದು ಅದೀಗ ನಿನ್ನ ನಿಜ ಎಲೆ ಮನಸ್ಸೆ ಎಲ್ಲಿಯವರೆಗೆ ಇದ್ದುದ ಅರಿಯುವದಿಲ್ಲ. ಅಲ್ಲಿಯವರೆಗೆ ಇಲ್ಲದ ಕಲ್ಪಿತ ಕಲ್ಪಿಸವದು ಬಿಡದು ಈ ಕಲ್ಪಿತ ಕಲ್ಪಿಸುವದು ಬಿಡುವದಿಲ್ಲವೆಂದಲ್ಲಿ ನೀನೆಂಬ ಶಂಕೆವಿದ್ದುದೆ ತನಗಿಂತ ಘನಕ್ಕೆ ಘನವಾದ ಪರತತ್ವ ಬೇರೊಂದು ಇದೆ ಎಂಬ ಜ್ಞಾನ ಎಲ್ಲಿಯವರೆಗೆ ತನ್ನಂತರಂಗದೊಳು ಹುದುಗಿಹುದು. ಅಲ್ಲಿಯವರೆಗೆ ನೀನೆಂಬ ಶಂಕೆ, ಅಳುಕು, ಅಂಜಿಕೆ ಸಮದೇಹವಿದ್ದುದು ಇದು ಕಾರಣ ಮನವೆಂಬುದು ಕೇವಲ ಜ್ಯೋತಿ. ಅದು ವರ್ಣಾತೀತವಿರುವದರಿಂದ ಅರಸಲು ಅಸಾಧ್ಯ. ಧ್ಯಾನಾತೀತ ತಾನೆ ಆದುದು ಅದು ಸಮ್ಯಜ್ಞಾನವು ಎಂದು ಹೊಳೆದು ಆಗ ತಾನಾಗಿಯೆ ನೀನೆಂಬ ಶಂಕೆ ಹಿಂಗುವದು. ಕೇವಲ ಜ್ಯೋತಿ ತಾನೆ ತಾನಾದ ಚಿಜ್ಯೋತಿ ಈ ಘನಜ್ಯೋತಿಕ್ಕಿಂತ ಅನ್ಯ ಆವುದು ಇಲ್ಲ. ನಿರಂತರವಾಗಿರುವ ಮಂಗಳಮಯ ತತ್ವ ಒಂದೆ ಅರಿವುಡೆ ತಾನು ತನ್ನ ಹೊರ್ತು ಅನ್ಯ ಆವುದು ಇಲ್ಲವೆಂಬ ಅರಿವು ಆಗುವುಡೆ ಆಗ ನೀನೆಂಬ ಶಂಕೆ ಹಿಂಗಿ ತಾನೆ ತೋರುತ್ತಿಹುದು ಅದೀಗ ನಿನ್ನ ನಿಜ.

ಎಲೆ ಮನವೆ ನಿನ್ನ ನಿಜವ ಅರಿಯಬಲ್ಲಡೆ ಅದೆ ಬ್ರಹ್ಮಜ್ಞಾನ ಅದೆ ಕೇವಲ ಮುಕ್ತಿ ಓ ಮನವೇ ನಿನ್ನ ನಿಜವೆಂದು ಆವುದಕ್ಕನ್ನಬೇಕು? ಸಂಕಲ್ಪ, ವಿಕಲ್ಪಕ್ಕೆ ನಿಜವೆನ್ನಬೇಕೆ ? ಇದು ನಿನ್ನ ನಿಜವಲ್ಲ. ನಿಜವದು ಬೆಳಗುಳ್ಳ ಜ್ಯೋತಿ. ಉದಯಾಸ್ತವಾಗದೆ ಒಳಹೊರಗೆನ್ನದೆ ಸ್ವಪ್ರಕಾಶದಿಂ ಪ್ರಕಾಶಿಸುವ ಜ್ಯೋತಿ ಅರಿವುಡೆ ತಾನೆ. ಇದು ವರ್ಣಾತೀತವಾದ್ದರಿಂದ ಅರಿದಿಹೆನೆಂದಡೆ ಅರುಹಿಂಗಸಾಧ್ಯವಾದ ಜ್ಯೋತಿ ಆದಲ್ಲಿ ಅರಸುವ ಅಲಾಪಿಸುವ ಚಿಂತಿಸುವ ಪೂಜಿಸುವ ಕ್ರಿಯೆ, ಭಾವಜ್ಞಾನ ಮುಕ್ತಾಯಗೊಂಡಿವೆ. ಅದುವೆ ನಿನ್ನ ನಿಜವ ಅರಿಯಲಿಲ್ಲ. ಬ್ರಹ್ಮಜ್ಞಾನ ಏಕೆಂದರೆ ಬ್ರಹ್ಮವೆ ತಾನಾದುದು ಬ್ರಹ್ಮಜ್ಞಾನ ಲಿಂಗ ತಾನಾದುದೆ ಲಿಂಗಜ್ಞಾನ.

ಅದೇ ಕೇವಲ ಮುಕ್ತಿ ಇದು ತಾನಾರೆಂದರಿತವರ ಮುಕ್ತಿ. ಮುಕ್ತಿ ಎಂದರೆ ಸಾಲೋಕ್ಯ, ಸಾಮಿಪ್ಯ, ಸಾಯುಜ್ಯ, ಸಾರೂಪ್ಯವೆಂದು ಚತುರ್ವಿಧವಾಗಿ ವಿಂಗಡಿಸಬಲ್ಲ ಮುಕ್ತಿ ಇದಲ್ಲ. ಇದು ಅರಿತವರ ಅರುವಿನ ಇರವು. ಇದು ತನ್ನಯ ಇರವು. ತನ್ನ ನಿಜನಿವಾಸ ಇದುವೆ ಸ್ವತಂತ್ರ ಸುಖ, ಸವೆಯದ ಸುಖ, ಬೇಸರವಾಗದ ಸುಖ, ಕೂಡದಗಲದ ಸುಖ, ತಾನೆ ತಾನಾದ ತನ್ನ ಸುಖ ನಿಜ ಸುಖ ಇದುವೆ ಕೇವಲ ಮುಕ್ತಿ ಎಂದು ಹೇಳಿದೆ.

ನಮ್ಮ ಗುಹೇಶ್ವರ ಲಿಂಗವ ನಂದ ಸಹಜ ಭಕ್ತಿ ಕುಳ ಕಾಣಾ ಎಲೆ ಮನವೆ ನೀನಿದ ನಿಶ್ಚಯಿಸಿಕೊ ಮರೆಯದೆ ಎಲೆ ಮನವೆ ಇಲ್ಲಿಯವರೆಗೆ ಕಲಿತದನ್ನು ಮರೆ ನಿನ್ನ ನಿಜವ ಮರೆತಿರುವಿಯಲ್ಲ ಅದನ್ನು ಕಲಿ ಸಂಕಲ್ಪ ವಿಕಲ್ಪವ ಮರೆ ಮರೆತುದನ್ನು ಕಲಿ.

ಆವುದನ್ನು ಮರೆತಿರುವೆ? ಹವಣಿಸಬಾರದ ಅಖಂಡ ಬೆಳಗು ಅದನ್ನೆ ಮರೆತಿರುವೆ ಅದುವೆ ನನ್ನ ನಿಜವೆನ್ನಲು ಸಂದೇಹವುಳ್ಳವನಾಗಿರುವೆ. ನಿನಿಗಿಂತ ಅಖಂಡ ಬೆಳಗು ಅನ್ಯವಾದುದೆಂದು ತಿಳಿದು ನೀನೆಂಬ ಸಂದೇಹ ಬಂದಿದೆ. ನಿನಗಿಂತ ಅಖಂಡ ಬೆಳಗು ಅನ್ಯವಾದುದೆಂದು ತಿಳಿದು ನೀನೆಂಬ ಸಂದೇಹ ಬಂದಿದೆ.

ನಿನಗಿಂತ ಅನ್ಯರು ಆರು ಇಲ್ಲ. ನಿನ್ನ ಸಮಾನರು ಇಲ್ಲ. ನೀನೆ ನೀನೊಂದೆ ಇರುವುದರಿಂದ ನಿನ್ನ ನಿಜವ ತಿಳಿ ಆಗ ನಿನ್ನಿಂದ ನನಗೆ ತಿಳಿದು ನನಗಿಂತ ಅನ್ಯರಾರು ಇಲ್ಲ.

ಸಮಾನರು ಇಲ್ಲ. ನಾನು ಕೇವಲ ಜ್ಯೋತಿ ವರ್ಣಾತೀತವೆಂಬರಿವು ನಿಶ್ಚಯವಾಗಲು ಆಗ ದೇವ ನೀನೆಂಬ ಸಂದೇಹ ಹಿಂಗುವದು.

ಗುಹೇಶ್ವರ ಲಿಂಗವ ನರದ ಸಹಜ ಭಕ್ತನು ಈ ಜ್ಞಾನ ಭಕ್ತ ನಿರುಪಮ ತಾನೆ ಜ್ಞಾನ ಸ್ವರೂಪ ತಾನಾಗಿ ಜ್ಞಾನ ಸ್ವರೂಪ ಅರಿಯುವದು ತನ್ನ ತಾನೆ ಅರಿಯುವದು ಆಗ ಸಹಜ ಕುಳ ತಾನೆ ಇದುವೆ ನಿಜವಾದ ಅಕುಲ ಇದು ಶರಣನ ಕುಳ ಅರಿತವರ ಕುಳ, ಭಾವಕ್ಕಗಮ್ಯವಾದ ಕುಳ, ಅರಿಯದರುವಿನ ಕುಳ, ನಿಶ್ಚಿಂತ ಕುಳ, ಪರಿಪೂರ್ಣ ಪರಮಾನಂದವೆ ತಾನಾಗಿಪ್ಪ ತೃಪ್ತರೂಪ ತೃಪ್ತಿಯ ಕುಳ ನೀನಿದ ನಿಶ್ಚಯಿಸಿಕೊ ಮರೆಯದೆ ಎಂದು ಹೇಳಿಹರು.

ವಚನ - 15

ತನ್ನೊಳಗಣ ಅರಿವು ತನ್ನಲ್ಲಿಯೇ ತೋರುದಲ್ಲದೆ ಅನ್ಯರಲ್ಲಿ ತೋರಬಲ್ಲದೆ?
ತನ್ನಲ್ಲಿ ತಾನೆ ಇದ್ದಿತ್ತು. ತನ್ನಲ್ಲಿ ತಾನೆ ಪಕ್ವಕ್ಕೆ ಬಂದು ತನ್ನಲ್ಲಿ ಹುಟ್ಟಿದ
ನೆನಹಿನ ಭಿನ್ನಾಣವ ನೆನೆಂಬೆನಯ್ಯ ರಾಮನಾಥ.

ತಾತ್ಪರ್ಯ: ತನ್ನೊಳಗಣ ಅರಿವು ತನ್ನಲ್ಲಿಯೆ ತೋರುದಲ್ಲದೆ ಅನ್ಯರಲ್ಲಿ ತೋರಬಲ್ಲದೆ? ತನ್ನಲ್ಲಿ ತಾನೆ ಇದ್ದಿತ್ತು : ದೇವರ ವಾಸ್ಮಯನೆಂಬ ಪಿತಾಮಹ ವಚನಂಗಳ ಪ್ರಥಮ ಕರ್ತೃವೆಂದರೆ ಈ ಮಹಾಂತನೇ ಅಣ್ಣ ಬಸವಣ್ಣ ಪ್ರಭುದೇವ ಮಾಚಯ್ಯ, ಮಾರಯ್ಯ, ಚನ್ನಬಸವಣ್ಣ, ಅಕ್ಕ ಮಹಾದೇವಿ, ನೀಲಾಂಬಿಕೆ, ಅಮುಗೆರಾಯಮ್ಮ, ಸತ್ಯಕ್ಕ, ಮೊದಲಾದ ಶರಣ ಶರಣೆಯರಕ್ಕಿಂತ ಮುನ್ನಿನವರು ವಚನಂಗಳ ರಚನೆ ಮಾಡಿದ ಪ್ರಥಮ ಕರ್ತೃವೆಂದರೆ ದೇವರ ದಾಸಿಮಯ್ಯನೆಂಬ ಮಹಾಂತನು.

ಅರುವ ಅರಿಯ ಹೇಳಿ ಕುರುಹ ಸದ್ಗುರುನಾಥ ಕೈಯಲ್ಲಿ ಕೊಟ್ಟನಲ್ಲದೆ ಅರಿವನ ಮರೆದು ಕುರುಹನೆ ಪೂಜಿಸುವ ನರ ಕುರಿಗಳ ನೋಡಾ ಕೂಡಲ ಚೆನ್ನಸಂಗಮದೇವಾ. ತನ್ನೊಳಗಣ ಅರಿವು ತನ್ನಲ್ಲಿ ತೋರಿಸಲು ಸದ್ಗುರುನಾಥ ತೆರಹಿಲ್ಲದ ಲಿಂಗ ಭರಿತವೆಂದು ಕರಕಮಲದಲ್ಲಿ ಕೊಟ್ಟು ಕೃಪೆ ಮಾಡಿದರೂ ಕೆಲವರು ಅರಿಯದೆ ವೇದ ವೇದಾಂತದಲ್ಲಿ ನೋಡಿ ತನ್ನೊಳಗಣ ಅರಿವು ತನ್ನೊಳಗೆ ನೋಡಲಿಲ್ಲ ನೋಡದ್ದರಿಂದ ಅರಿಯಬಾರದ ಘನವೆಂದು ತೋರಲಿಲ್ಲ.

ಅದು ತನ್ನಲ್ಲಿಯೆ ತೋರಿದಲ್ಲದೆ ವೇದ ವೇದಾಂತದಲ್ಲಿ ತೋರಬಲ್ಲುದೆ ಅರಿದರಿದು ನೋಡಿದವರಿಗೆ ತನ್ನೊಳಗಣ ಅರಿವು ತೆರಹಿಲ್ಲದ ಲಿಂಗಭರಿತವೆಂಬ ಗುರು ಕಾರುಣ್ಯದ ಸಂಜ್ಞೆ ತನ್ನಲ್ಲಿಯೆ ತೋರಿದಲ್ಲದೆ ಅನ್ಯರಲ್ಲಿ ತೋರ ಬಲ್ಲುದೆ? ತನಗಿಂತನ್ಯವಾದ ಪುಸ್ತಕದಲ್ಲಿ ಉಪನಿಷತ್ತುಗಳಲ್ಲಿ ತೋರಬಲ್ಲುದೆ? ಎಂದು ಹೇಳಿದುದಲ್ಲದೆ ತನ್ನಲ್ಲಿ ತಾನೆ ಇದ್ದಿತ್ತು ಎಂದು ಹೇಳಿದರು.

ಅರಿಯದ ಮುನ್ನ ಕುರುಹು ಹಿಡಿದೆನಲ್ಲದೆ ಅರಿದ ಬಳಿಕ ಇನ್ನೆಂತೊ? ಬಿಟ್ಟದೆ ಸಮಯ ವಿರೋಧ ಬಿಡದಿದ್ದಡೆ ಜ್ಞಾನ ವಿರೋಧ ಗುಹೇಶ್ವರ ಲಿಂಗ ಉಭಯ ದಳದ ಮೇಲ್ವೆದಾನೆ ನೋಡಾ ಇದು ತಾನೆ ಪಕ್ವಕ್ಕೆ ಬಂದು ತನ್ನಲ್ಲಿ ಹುಟ್ಟಿದ ನೆನಹಿನ ಭಿನ್ನಾಣವ ನೇನೆಂಬೆನಯ್ಯ

ಲಿಂಗಕ್ಕೆ ಲಿಂಗವಾಗಿಹ ಸ್ವಯ ಲಿಂಗವಾದಾತ ಪ್ರಭು ದೇವ ಸ್ವಯ ಲಿಂಗ ತನ್ನಲ್ಲಿ ತಾನೆ ಇದ್ದಿತ್ತು ಲಿಂಗದ ರಹಸ್ಯವ ತಿಳಿದವರು ಬಸವಾದಿ ಪ್ರಮಥರು ಅರಿಯದ ಮುನ್ನ ಪೂಜಾಲಿಂಗವ ಹಿಡಿದಿದ್ದರು ಗುರು ಕರುಣೆಯಿಂದ ಇದು ತೆರಹಿಲ್ಲದ ಲಿಂಘಭರಿತವೆಂದು ಕರುಣಿಸಿದ ಇತ್ತ ಅರಿಯಬಾರದ ಘನ ಲಿಂಗವೆಂದು ಕರುಣಿಸಿದ ಅರಿಯಲಿಲ್ಲದ ಅರುವೆಂದು ಕರುಣಿಸಿದ ಇದಲ್ಲದೆ ಧ್ವನಿಯ ಮರೆಯಲ್ಲಿದ್ದುದು ಅರಿದರಿದು ನೋಡು ಎಂದು ಗುರು ಕಾರುಣ್ಯವ ಸಾರ್ಥಕ ಮಾಡಿದವರು ಶರಣರು ಶರಣೆಯರು ತನ್ನೊಳಗಣ ಅರಿವು ತನ್ನಲ್ಲಿಯೆ ತೋರಿದಲ್ಲದೆ ಅನ್ಯರಲ್ಲಿ ಬಲ್ಲುದೆ ತನ್ನಲ್ಲಿದ್ದ ಅರಿವು ತಾನೆ ಪ್ರಭು ಕಂಡು ಅರಿಯದ ಮುನ್ನ ಕುರುಹ ಹಿಡಿದೆನಲ್ಲದೆ ಅರಿದ ಭಳಿಕ ಇನ್ನೆಂತೊ? ಈ ಪೂಜಾಲಿಂಗದಲ್ಲಿ ತೋರಬಲ್ಲುದೆ ತನ್ನೊಳಗಣ ಅರಿವು ತೋರದು ತೋರದೆಂದು ಪೂಜಾಲಿಂಗ ಬಿಟ್ಟಡೆ ಸಮಯ ಸಾಂಪ್ರದಾಯಕ್ಕೆ ಒವ್ವ ಒಬ್ಬರನ್ನೊಬ್ಬರು ನೋಡಿ ಪೂಜಾ ಲಿಂಘಧರಿಸಿರುವರು ಒಬ್ಬರನ್ನೊಬ್ಬ ನೊಡಿ ಲಿಂಗ ಪೂಜ ಮಾಡುವದು ಬಿಟ್ಟರೆ ಇವರು ವಿರೋಧ ಮಾಡುತ್ತಾರೆ. ಬಿಡದಿದ್ದಡೆ ಜ್ಞಾನ ವಿರೋಧ ಈ ಪೂಜಾಲಿಂಗವೆ ನನ್ನ ಸ್ವಯಲಿಂಗ ಜ್ಞಾನಸ್ವರೂಪ ಲಿಂಗ ಪರಂಜ್ಯೋತಿ ಲಿಂಗ ಪರಮ ಶಾಂತನೆಂಬ ಲಿಂಗವೆಂದರೆ ಸಮ್ಯಜ್ಞಾನಕ್ಕೆ ವಿರೋಧವಾಗುತ್ತಿದೆ. ಇದು ಕಾರಣ ಜ್ಞಾನ ಸ್ವರೂಪ ಲಿಂಗ ತನ್ನಲ್ಲಿ ತಾನೆ ಇದ್ದಿತ್ತು ತನ್ನಲ್ಲಿ ತಾನೆ ಪಕ್ವಕ್ಕೆ ಬಂದು ತನ್ನಲ್ಲಿ ಹುಟ್ಟಿದ ನೆನಪಿನ ಭಿನ್ನಾಣವ ನೀನೆಂಬೆನಯ್ಯ ಗುಹೇಶ್ವರ ಲಿಂಗ ಉಭಯ ದಳದ ಮೇಲೈದಾನೆ ಪೂಜಾಲಿಂಗ ತನ್ನ ಸ್ವರೂಪ ಮಾಡ ಜ್ಞಾನಸ್ವರೂಪ ಲಿಂಗದಲ್ಲಿ ನೊಡುವುದು ಇದೊಂದು ದಳ ಅರ್ಥಾತ್ ಭ್ರಮ ಇನ್ನೊಂದು ಜ್ಞಾನಸ್ವರೂಪಲಿಂಗ ಪೂಜಾಲಿಂಗವದು ಪರಂಜ್ಯೊತಿಲಿಂಗವದು ಪರಾನಂದ ಲಿಂಗ ಪರಮಶಾಂತನೆಂಬ ಲಿಂಗವೆಂದು ನುಡಿದು ನುಡಿದು ನೆನೆನೆನೆದು ನೋಡುವುದು ಇದೊಂದು ದಳವಾಗಿದೆ. ಇದೊಂದು ಭ್ರಮವಾಗಿದೆ ಅರಿತ ಶರಣ ಉಭಯ ದಳದ ಮೇಲೈದಾನೆ ಎಂದು ಬಿತ್ತರಿಸಿದುದು ನೋಡಿದಂತೆ ಇವೆರಡು ದಳದವರಿಗೆ ತನ್ನಲ್ಲಿ ತಾನೆ ಇದ್ದಿತ್ತು ಎಮಬ ರಹಸ್ಯ ತಿಳಿದವರಲ್ಲ. ಒಂದು ಪೂಜಾಲಿಂಗವ ಪೂಜೆ ಮಾಡುವ ದಳದ ಮೇಲೈದಾನ ಲಿಂಗ, ಲಿಂಗ, ಎನ್ನುವ ಲಿಂಗ, ಲಿಂಗ ಎಂದು ನೆನಹಿನ ದಳದವರ ಮೇಲೈದಾನೆ ಭಾವಿಸುವ ಭ್ರಾಮಕರ ದಳದ ಮೇಲೈದಾನೆ ಇವರು ಗುರು ಕಾರುಣ್ಯ ಅರಿದರಿದು ನೋಡಿದವರಲ್ಲ ನೋಡದದ್ದರಿಂದ ಪೂಜಾ ದಳದವರಾದರು, ನುಡಿಯುವದಳ ನೆನೆಹಿನ ದಳದವರಾದರು. ನೆನಹಿನ ಅತ್ತಾಚೆಯಿರುವ ತೆರಹಿಲ್ಲದ ಘನದಿರುವತಿಳಿಯಲಿಲ್ಲ ತಿಳಿದವರು ಉಭಯದಳದ ಮೇಲೈದಾನೆ ಎಂದು ತಿಳಿಸಿದರು. ತನ್ನಲ್ಲಿ ತಾನೆ ಪಕ್ವಕ್ಕೆ ಬಂದು ತನ್ನಲ್ಲಿ ಯತಾರ್ಥಜ್ಞಾನ ಹುಟ್ಟಿದ ನನಹಿನ ಭಿನ್ನಾಣವ ನೇನೆಂಚಿನಯ್ಯ ಇದು ಶರಣರ ಹೃದಯ ತನ್ನಲ್ಲಿ ತಾನೆ ಪಕ್ವಕ್ಕೆ ಬಂದ ಹೃದಯ ನಿರಹಂಭಾವ ಹೃದಯ ನಿಸ್ಸಂಗ ಹೃದಯ ನಿರಾಲಂಬ ಹೃದಯ ಆರು ಹೃದಯ ನಿಶಬ್ದವೇದಿಗಳ ಹೃದಯ ತನ್ನಿಂದ ತನಗೆ ಸಮ್ಯಜ್ಞಾನ ಹುಟ್ಟಿದ ಹೃದಯ ತೆರಹಿಲ್ಲದ ನುಡಿ ತೆರಹಿಲ್ಲದ ನಡೆ ತೆರಹಿಲ್ಲದ ನೆನಹು ಇದು ನೆನಹಿನ ಭಿನ್ನಾಣವ ನೇನೆಂಬೆನಯ್ಯ ಎಂದು ಹೇಳಿಹರು.

ಈ ನೆನಹು ನೆನಹುಳ್ಳವರ ನೆನಹಿನಂಥಹದಲ್ಲ. ಈ ನೆನಹಿನ ಹಿರಿಮೆಯೆ ಬೇರೆಂದು ಶರಣ ಶರಣೆಯರು ಕಂಡುದು ಕಾರಣ ನೆನಹಿನ ಭಿನ್ನಾಣವ ನೀನೆಂಬೆನಯ್ಯ ಎಂದು ಬಿತ್ತರಿಸಿದುದು ನೋಡಿದಡೆ ಇದು ಸುಖದ ಸುಖವಾಗಿಹ ನೆನಹು ಸುಖವ ಸುಖಿಸುತ್ತ

ಸುಖಿಸುತ್ತ ನೆನಹೆ ಸುಖದಲ್ಲಿ ಲೀಯವಾದುದು ನುಡಿದು ನುಡಿದ ನುಡಿಗೆ ಅವಕಾಶವಿಲ್ಲದಂತಾಗಿ ಶಬ್ದಮುಗ್ಧರಾಗಿಹ ನೆನಹಿನ ಭಿನ್ನಾಣವ ಅದನೆಂತು ನುಡಿವುದು! ಇದು ತಾನೆ ತಾನಾಗಿ ನಿಂತ ನಿರವಧಿಯ ನಿಲುವು ನೋಡಲು ನೆನಹಾಗಿ ಕಂಡರೂ ನೆನಹಿಂಗೆ ಮೀರಿದ ಘನವೆ ತಾನಾಗಿ ನಿಂತ ಬೆಳಗುಳ್ಳ ಬೆಳಗು ನುಡಿದು ನಿಶಬ್ದವಾಗಿಹ ನಿಮತ ನಿಜವದಿರುವು ಇದಾವ ಭಾಷೆಯಿಂದಲೂ ವಿಸ್ತರಿಸಲು ಆಸಾಧ್ಯವಾದುದುರಿಂದ ಏನೆಂಬೆ ನೇನೆಂಬೆ ಎಂದು ಹೇಳಿಹರು.

ವಚನ - 16

> **ಇಳೆ ನಿಮ್ಮ ದಾನ ಬೆಳೆ ನಿಮ್ಮದಾನ ಸುಳಿದು ಬೀಸುವ ಗಾಳಿ ನಿಮ್ಮ ದಾನ,**
> **ನಿಮ್ಮ ದಾನವನುಂಡು ಅನ್ಯರ ಹೊಗಳುವ ಕುನ್ನಿಗಳ ನೇನೆಂಬೆ ರಾಮರ್ನಾಥ.**

ತಾತ್ಪರ್ಯ : ಇಳೆ ನಿಮ್ಮದಾನ ಬೆಳೆ ನಿಮ್ಮದಾನ : ದೇವರ ದಾಸಿಮಯ್ಯ ತಂದ ಈ ರೇಳು ಲೋಕಂಗಳು ಲೋಕಂಗಳಲ್ಲ ತೋರುವದೆಲ್ಲ ನಿಮ್ಮದಾನ ಪಿಂಡಾಂಡ ನಿಮ್ಮದಾನ, ಬ್ರಹ್ಮಾಂಡ ನಿಮ್ಮದಾನ ಬ್ರಹ್ಮಾಂಡದಲ್ಲಿ ತೋರುವ ಚರಾಚರ ವಸ್ತುಗಳೆಲ್ಲ ನಿಮ್ಮದಾನ. ಇದಾರು ಕೊಟ್ಟದಾನೆ? ಶಿವಕೊಟ್ಟ ಕೊಡುಗೆ ಸರ್ವತ್ರ ಸರ್ವದಾ ಒಳಹೊರಗೆನ್ನದೆ ವ್ಯಾಪಕವಾಗಿಹ ಶಿವ ಸಚ್ಚಿದಾನಂದ ಶಿವ ಪೂರ್ಣ ಶಿವ ಚೈತನ್ಯ ಶಿವ ಅಖಂಡ ಶಿವ ಪರಾತ್ಪರ ಶಿವ ಇದು ಸಾಕಾರ ಶಿವ ನಿರಾಕಾರ ಶಿವ ಸಾಕಾರ ನಿರಾಕಾರವಾಗದ ಶಿವ ಸ್ವಲೀಲೆಯೆ ಶಿವನ ಕೊಡುಗೆ

ಅಜ್ಞಾರಿಗೆ ನಾನಾರೂಪವಾಗಿ ಕಂಡರೂ ಸುಜ್ಞಾನಿಗಳಿಗೆ ಸ್ವಲೀಲೆಯಾಗಿರುವ ಕೊಡುಗೆ ಅಜ್ಞಾನಿಗಳಿಗೆ ಭ್ರಮಾತ್ಮಕದಿಂದ ಚರಾಚರ ಜಗತ್ತಾಗಿ ಹೊನ್ನಾಗಿ ಹೆಣ್ಣಾಗಿ ಮಣ್ಣಾಗಿ ಕಂಡರೆ ನಿಷ್ಕಳಂಕ ದೃಷ್ಟಿಗೆ ಪೂರ್ಣಶಿವ ಚೈತನ್ಯವಾಗಿ ಕೊಟ್ಟಿರುವ ಶಿವದಾನ ಬೆಳೆ ನಿಮ್ಮದಾನ ಇದಾವ ಬೆಳೆ? ಅವಿನಾಶಿ ಬೆಳೆ ಪರಬ್ರಹ್ಮದಿರುವುಳ್ಳ ಸುಜ್ಞಾನದಬೆಳೆ ಸಕಲ ಪಿಂಡಾಂಡದೊಳ್ ಸ್ವಪ್ರಕಾಶ ದಿಂ ಪ್ರಕಾಶಿಸುವ ಚೈತನ್ಯ ಬೆಳೆ ಲಿಂಗಾಂಗ ಸಮರಸ ಜ್ಞಾನದ ಬೆಳೆ ಅರುವಿನ ಬೆಳೆ, ಗುರು ಲಿಂಗ ಜಂಗಮದ ಅಗೋಚರ ಆಚರದರಿವುಳ್ಳ ಬೆಳೆ ಒಡಲು ನಷ್ಟವಾದವರ ಬೆಳೆ ಇದು ಗುರುಘನನು ಕರುಣಿಸಿದಾಗ ಲಭ್ಯವಾಗುವ ಬೆಳೆ ಇದು ಅರುವಿಂಗರುವಾಗಿಹ ಮಂಗಲಮಯೆ ತತ್ವದಿಂ ಸುಶೋಭಿತವಾದ ಬೆಲೆ ಸುಖದ ಸುಖವಾಗಿಹ ಬೆಳೆ.

ಬೆಳೆ ನಿಮ್ಮದಾನ ಓ ಗುರುಲಿಂಗವೆ! ಸುಜ್ಞಾನ ರೂಪಿ ಬೆಳೆ ನೀವು ಕೊಟ್ಟಾಗ ನನಗೆ ಪ್ರಾಪ್ತವಾದುದರಿಂದ ಭರಿತ ಬೆಳೆ ಲಿಂಗ ಬೆಳೆ ಇದು ನಿಮ್ಮದಾನವಯ್ಯ ಈ ಜ್ಞಾನಾಂಗ ನಿಮ್ಮದಾನವಯ್ಯ ನನ್ನಂತರಂಗದಲ್ಲಿರುವ ಸುಖಸ್ವರೂಪ ಸುಧೆಯ ನಿಮ್ಮದಾನವಯ್ಯ ಎಂದು ಹೇಳಿಹರು. ಸುಳಿದು ಬೀಸುವ ಗಾಳಿ ನಿಮ್ಮದಯ್ಯಾ ಈ ಗಾಳಿ ನಿಮ್ಮದಾದುದರಿಮದ ಸುಳಿದು ಬೀಸುವ ಗಾಳಿ ನಿಮ್ಮದಾನ ಬ್ರಹ್ಮಾಂಡ ದೊಳ ಸುಳಿದು ಬೀಸುವ ಗಾಳಿ ನಿಮ್ಮದಾನ ಪಿಂಡಾಂಡ ದೋಳ್ ಸುಳಿದು ಬೀಸುವ ಪ್ರಾಣಾಪಾನ ಗಾಳಿಯು ನಿಮ್ಮದಾನ. ಇದಲ್ಲದೆ ಸಮ್ಯಜ್ಞಾನದ ಸ್ವಾನುಭವವದುಸುಳಿದು ಬೀಸುವಗಾಳಿ ನಿಮ್ಮದಾನ ಜೀವ ಬ್ರಹ್ಮರೇಕತ್ವದ ಅನಿಪದದಿಂ ಸುಳಿದು ಬೀಸುವಗಾಳಿ ನಿಮ್ಮದಾನ ಅನಂತ ಜನ್ಮಂಗಳ ನಿಷ್ಕಾಮಕರ್ಮಡ

ಪ್ರಭೆಯ ಪುಣ್ಯದಿಂದ ಅನನ್ಯ ಭಕ್ತರಲ್ಲಿ ಅರುಹೃದಯರಿದ್ದಲ್ಲಿ ಸುಳಿದದು ಬೀಸುವ ಗಾಳಿ ನಿಮ್ಮದಾದ ಆಧ್ಯಾತ್ಮಗಾಳಿ ನಿಮ್ಮದಾನ ಮರವ ಓಡಿಸಿ ಆರುವಿಂಗರುವ ಮಾಡುವ ಗಾಳಿ ಆಸ್ತೀಕರಿದ್ದಲ್ಲಿ ಸುಳಿದದು ಶಿವಾನುಭವ ಉತ್ಸವ ಗಾಳಿ ನಿಮ್ಮದಾನ ಈಶ್ವರ ಕೃಪೆಯಿಂದ ಸುಳಿದು ಬೀಸುವ ಗಾಳಿ ಸತ್ಸಂಗ ನಿಮ್ಮದಾನ ಸಕಲ ಜಿಜ್ಞಾಸುಗಳ ಭಕ್ತರ ಹೃದಯದೊಳ್ ನಿತ್ಯಾನಿತ್ಯವಿಚಾರದಿಂ ಸುಳಿದು ಬೀಸುವಗಾಳಿ ನಿಮ್ಮಾನ ಸಕಲ ಶರರೀಂಗಳಲ್ಲಿ ಪಂಚಪ್ರಾಣ ಉಪಪ್ರಾಣವಾಗಿ ಸುಳಿದು ಬೀಸುವ ಗಾಳಿ ನಿಮ್ಮದಾನ ನಿಮ್ಮದಾನವನುಂಡು ಅನ್ಯರಹೊಗಳುವ ಕುನ್ನಿಗಳ ನೇನೆಮಬೆ ರಾಮನಾಥ.

ಅಖಂಡ ಬೆಳಗುಳ್ಳ ಶಿವ ಪರಾತ್ಪರ ಶಿವ, ಸರ್ವಾತ್ಮ ಶಿವ, ಸತ್ಯಜ್ಞಾನಾನುಂದ ಶಿವ, ನಿರಂತರವಾಗಿರುವ ಮಂಗಳಮಯ ಪರಮಸತ್ಯ ತೆರಹಿಲ್ಲದಭವ ನುಡಿಗೆಡೆಗೊಡದ ಮಹದಿರುವೆ ನೀವು ಈ ಅರಿವು ನಿಮ್ಮದಾನ ಇಂತಪ್ಪ ಮಹಾನುಭವುಳ್ಳ ಜ್ಞಾನದಾನವ ನುಂಡು ಅನ್ಯರ ಹೊಗಳುವ ಕನ್ನಿಗಳನೇನೆಂಬನಯ್ಯ. ಶರಣರೂಪಿ ಶಿವ, ಸದ್ಗುರು ರೂಪಿ ಶಿವ ಲಿಂಗ ಒಂದಾಗಿರ್ದ ಜಂಗಮ ರೂಪಿ ಶಿವ ಅದು ರೂಪಿ ಶಿವ ಇದು ಅರುವಿನ ದಾನ, ಜ್ಞಾನದಾನ, ಗುರ್ವಾನುಗ್ರಹವುಳ್ಳ ಮಹಾಜ್ಞಾನವನುಂಡು ಇಲ್ಲದ ಮಾಯಿಕ ತತ್ವ ಕಲ್ಪಿಸಿ ಗುರು ಶಿಷ್ಯರ ಮಾಡಿ ಹೊಗಳುವ ದೇವ ಭಕ್ತ ಮಾಡಿ ಹೊಗಳುವವರೆ ಕುನ್ನಿಗಳು. ಈ ಕುನ್ನಿಗಳಿಗೇನನ್ನ ಬೇಕು. ನಿಸ್ಸೀಮದಲ್ಲಿ ಸೀಮಿತದ ಕಲ್ಪಿಸಿ ಮರವು ಅರುವೆಂಬ ಅಜ್ಞಾನ ಜ್ಞಾನ ಪ್ರಧಾನವಾಗಿ ಅಖಂಡತ್ವದಿಂದ ದೂರಾದ ಕುನ್ನಿಗಳಿಗೇನೆನ್ನಬೇಕು.

ಜಂಗಮ ಬೇರೆ, ಭಕ್ತ ಬೇರೆ, ಗುರುಬೇರೆ, ಶಿಷ್ಯಬೇರೆಂಬ ಭೇದಜ್ಞಾನಿಗಳಾಗಿ ಇಲ್ಲದ ಮಾಯಿಕ ತತ್ವ ಹೊಗಳುವವರೆಲ್ಲ ಕುನ್ನಿಗಳೇ? ತಾವಾರೆಂದರಿಯದೆ ತನ್ನವ ಮರೆತು. ಖಂಡಿತವಲ್ಲದ ಅಖಂಡಿತವ ಕಾಣದೆ ಖಂಡಿತ ದೃಷ್ಠಿಯುಳ್ಳವರಾಗಿರುವವರೆಲ್ಲ ಕುನ್ನಿಗಳೆ. ಕೊಡುಕೊಳ್ಳುವ ವ್ಯವಹಾರಕ್ಕೆ ಒಪ್ಪಿದವರೆಲ್ಲ ಕುನ್ನಿಗಳ, ಇಲ್ಲದ ಮಾಯಿಕ ತತ್ವ ಕಲಿಸುವವರೆಲ್ಲ ಕುನ್ನಿಗಳೆ. ಭಾವಕ್ಕಗಮ್ಯವಾದ ಘನವ ಮರೆತು ಭಾವ ಭ್ರಮಿತಾದವರೆಲ್ಲ ಕುನ್ನಿಗಳೆ. ನಿಸ್ಸೀಮ ತಾನಗದವರೆಲ್ಲ ಕುನ್ನಿಗಳೆ ಕೊಡಕೊಳ್ಳುವ ದೃಷಿಯೆ ದೃಢವಾಗಿ ಪೂಜ್ಯ ಪೂಜಕರೆಂಬ ಭಾವ ಭ್ರಮಿತರೆಲ್ಲ ಕುನ್ನಿಗಳೆ.

ಈ ಕುನ್ನಿಗಳೆಲ್ಲ ಪರತತ್ವವರಿಯದವರು ಸದ್ಗುರು ಕಾರುಣ್ಯ ಅರಿಯದವರು ಲಿಂಗಾಂಗ ಸಾಮರಸ್ಯ ಜ್ಞಾನವರಿಯದವರು ಗಗನಕುಸುಮವೆಂಬುದು ತಿಳಿಯದವರು ಬಂಜಿ ಮಗುವೆಂಬುದು ತಿಳಿಯದವರು ನಾಮರೂಪ ಹುಸಿಯಾಗಿ ಕಾಣದವರು ಇಲ್ಲದ ಹೆಸರುಳ್ಳ ಚಿತ್ತಾರವೆಂದು ತಿಳಿಯದ್ದರಿಂದ ಪ್ರಪಂಚವ ತಿಳಿಯರು. ಧ್ವನಿಯ ಮರೆಯಲ್ಲಿದುದು ತಿಳಿಯದುದರಿಂದ ಶಬ್ದ ಅಪಶಬ್ದ ಶಬ್ದದಲ್ಲಿ ಕಾಣದವರಾದುದಕ್ಕಾಗಿ ಪರಮಾರ್ಥವ ತಿಳಿಯರು. ಅರುವಿಂಗರುವಾಗಿಹ ಘನದಿರುವ ತಿಳೀಯದ್ದರಿಂದ ನಿಮ್ಮ ದಾನವನುಂಡು ಅನ್ಯರ ಹೊಗಳುವ ಕುನ್ನಿಗಳನೇನೆಂಬೆ ಎಂದು ಎಚ್ಚರಿಸಿಹರು.

ವಚನ - 17

ಕಾಯ ನಿಮ್ಮ ದಾನ. ಜೀವ ನಿಮ್ಮ ದಾನ. ಕಾಯ ಜೀವವುಳ್ಳಡೆ
ನಿಮ್ಮ ನೆನೆಯದವ ನಾಯಿಗಳಿಗಿಂತ ಕರಕಷ್ಟ ಕಾಣಾ ರಾಮನಾಥ.

ತಾತ್ಪರ್ಯ : ಕಾಯ ಜೀವ ದಾನ ಮಾಡುವ ಮಹಾ ಮಹಿಮರು ಲೋಕದಲ್ಲಿ ಆರಾದರೂ ಇರುವುದುಂಟೆ? ಹೊನ್ನಾಗಲಿ, ಹೆಣ್ಣಾಗಲಿ, ಮಣ್ಣಾಗಲಿ, ತಾವೆ ಇವುಗಳನ್ನು ಸ್ವಂತ ಸೃಷ್ಠಿಸಿ ದಾನ ಮಾಡಿದ ತ್ಯಾಗವೀರರು ಆರಾದರೂ ಇದ್ದಾರೆಯೇ ? ಅನ್ಯರ ವಸ್ತುಗಳ ಅನ್ಯರಿಗೆ ಕೊಟ್ಟು ದಾನಿ ಎನಿಸಿಕೊಂಡು ದಾನಶೂರ ತ್ಯಾಗಿ ಧರ್ಮಾತ್ಮನೆಂದು ತಮ್ಮ ತಮ್ಮಪಳಗೆ ಅಚರು ಇವರನ್ನು ಕೊಂಡಾಡುವುದು. ಇವರು ಅವರ ಕೊಂಡಾಡುವ ಡಂಭತನಕೆ ಮಿತಿಯೆ ಇಲ್ಲದುದು ಕಂಡು ತೆರಹಿಲ್ಲದ ಮಹಾಘನವುಳ್ಳ ದೇವನಿಗೆ ಕಾಯ ನಿಮ್ಮದಾನ ಜೀವ ನಿಮ್ಮದಾನ ಕಾಯಜೀವವುಳಡೆ. ನಿಮ್ಮ ನೆನೆಯದವ ನಾಯಿಗಿಂತ ಕರಕಷ್ಟವೆಂದು ಜರಿದಿದ್ದಾರೆ.

ಭಕ್ತರೆ ಇರಲಿ, ತಪಸ್ವಿ, ತ್ಯಾಗಿ, ಯೋಗಿ, ಜಿಜ್ಞಾಸು, ಜ್ಞಾನಿಯೆ ಇರಲಿ ಆರೆ ಇರಲಿ ಕಾಯದಾನ, ಜೀವದಾನ ಮಾಡಿದ ಮಹಾಘನವರಿಯಲು ಈಶ್ವರ ಕೃಪೆ ಸತ್ಸಂಗ ಶರಣರ ಸಂಗ ಸದ್ಗುರು ಸೇವೆ ಮುಖ್ಯವಾಗಿ ಬೇಕು. ಆಗ ಕಾಯ ಜೀವದ ಘನವಂರಿತು. ಕಾಯ ಜೀವದಾನ ಮಾಡಿದ ಮಹಾಘನವ ನೆನೆವುದಲ್ಲದೆ ತಾನಾರೆಂದರಿತಲ್ಲಿ ಮಹಾಘನದಿರುವೆ ತಾನಾದುದು ಅದನಾವ ಭಾಷೆಯಿಂದ ಹೇಳುವುದು. ಇಂತಪ್ಪ ತನ್ನ ಮಹದಿರುವು ಅರಿಯಲು ಕಾಯಬೇಕು. ಜೀವ ಬೇಕು ಇವೆರಡು ಇರದಿದ್ದಲ್ಲಿ ತನ್ನ ನರಿಯುವದೆಂತು. ಆ ಮಹಾಘನವ ನರಿಯುವದೆಂತು. ಅರಿಯಲು ಮುಖ್ಯವಾಗಿ ಸಾಧನೆಯ ಕೊಟ್ಟ ದೇವರ ದೇವನ ನೆನಯದಿದ್ದಲ್ಲಿ ಕಾಯ ಹುಟ್ಟಿ ಜೀವ ಹುಟ್ಟಿ ಪುರುಷಾರ್ಥ ಪಡೆದಿದ್ದೇನು? ನಿಜವಾದ ಮೊದಲನೆಯ ಸಾಧನೆಯೆಂದರೆ ಕಾಯದಾನ ಮಾಡಿದ ದೇವನ ನೆನೆಯುವುದು ಜೀವದಾನ ಮಾಡಿದ ವೇದನ ನೆನೆಯುವುದು. ಪ್ರಥಮ ಕಾರ್ಯಮಾಡಿದವ ಸತ್ಸಂಗ ಮಾಡದವ ಶರಣರ ಸಂಗ ಮಾಡದವ, ಸದ್ಗುರು ಸೇವೆ ಮಾಡದವ, ಈಶ್ವರ ಕೃಪೆ ನೆನೆಯದವನಾದಲ್ಲಿ ನಾಯಿಗಿಂತ ಕರಕಷ್ಟವೆಂದು ಜರಿದಿಹರು.

ಆರು ಈಶ್ವರ ಕೃಪೆಯ ಪಡೆದುದರಿಂದ ಸದ್ಗುರುನಾಥನ ಸೇವೆ ಶರಣರ ಸಂಗ, ಸತ್ಸಂಗ ಮಾಡುವ ಕಾಯ, ಜ್ಞಾನವಾನ್ ಕಾಯ, ಅರುವಿನ ಕಾಯ, ಈಶ್ವರನ ವರ ಕೃಪೆ ಪಡೆದ ಕಾಯ, ಇದು ಚಿತ್ಕಾಯವೆನಿಸುವದು ಇದು ಕಾರಣ ಕಾಯದಿಂದ ಗುರುದರ್ಶನ ಕಾಯದಿಂದ ಲಿಂಗದರ್ಶನ ಕಾಯದಿಂದ ಜಂಗಮ ದರ್ಶನ ಕಾಯದಿಂದ ಪ್ರಸಾದ ದರ್ಶನ ಕಾಯದಿಂದ ನಿಮ್ಮುವ ಕಂಡೆನ್ನ ಮರದೆ ಕೂಡಲ ಚೆನ್ನ ಸಂಗಮದೇವ.

ಕಾಯವಿದ್ದಲ್ಲಿ ಜೀವವಿದೆ ಜೀವವಿದ್ದಲ್ಲಿ ಕಾಯವಿದೆ. ಸಕ್ಕರೆ ಇದ್ದಲ್ಲಿ ನಿಜ ಇದೆ. ಸಿಹಿ ಇದೆ. ಸಿಹಿ ಇಲ್ಲದ ಸಕ್ಕರೆ ಅದನಾರು ಕೇಳುವರು ಜೀವವಿಲ್ಲದ ಕಾಯ ಅದನಾರು ಕೇಳುವದು ಹಾಗೆ ಕಾಯ ಜೀವ ಇವರೆಡು ಕೊಡುಗೆಯ ವಸ್ತುಗಳು ಕಾರಣ ತನುವ ಕೊಡುವುಡೆ ಗುರುವಿನದದು ಮನವ ಕೊಡುವುಡೆ ಲಿಂಗದದು ಧನವಕೊಡುವುಡೆ ಜಂಗಮದದು ಅವರ ಪದಾರ್ಥ ಅವರಿಗೆಕೊಟ್ಟು ಭಕ್ತನಾದೆನೆಂಬುದು ಹಿರಿಯ ತನದಕೇಡೆ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನ.

ಕಾಯದಾನ ಮಾಡಿದುದು ಗುರುಲಿಂಗ ಮನದಾನ ಮಾಡಿದುದು ಶಿವಲಿಂಗ ಜೀವದಾನ ಮಾಡಿದುದು ಜಂಗಮಲಿಂಗ ಆರು ಕಾಯದೊಳಗಿದ್ದ ಗುರುಲಿಂಗ ತಿಳಿಯಲು ಕಾಯದ ಸದುಪಯೋಗವಾಗಿದೆ. ಅವರಿಗೆ ಕಾಯದಾನ ಮಾಡಿದ ಹಿರಿಮೆ ಗೊತ್ತಾಗಿರುವುದು.

ಅಬೇದ್ಯ ಶಿವ ಲಿಂಗ ತಿಳಿಯಲು ಮನದ ಸದುಪಯೋಗವಾಗಿದೆ ಅವರಿಗೆ ಮನ ಜೀವದಾನವಾದ ದಾನಮಾಡಿದ ಹಿರಿಮೆ ಗೊತ್ತಾಗಬಹುದು. ನಿರ್ಲಿಖಿತ ಜಂಗಮ ನಿರ್ನಾಮ ಜಂಗಮವರಿಯಲು ಪ್ರಾಣವೆಂಬ ಜೀವ ಭಾವವೆಂಬ ಧನವ ದಾನ ಮಾಡಿದ ಹಿರಿಮೆ ಗೊತ್ತಾಗಿಹುದು. ಇನ್ನುಳಿದ ಕಾಯವೆ ಆಗಲಿ, ಜೀವವೆ ಆಗಲಿ, ಕಾಯದ ಹಿರಿಮೆ ಗೊತ್ತಾಗದು. ಜೀವದ ಹಿರಿಮೆ ಗೊತ್ತಾಗದು. ಜೀವದ ಹಿರಿಮೆ ಗೊತ್ತಾಗದಿದ್ದಾಗ ಕಾಯದಾನ, ಜೀವದಾನ ಮಾಡಿದ ಮಹಾಘನವ ನೆನೆಯುವದದೆಂತು?

ಕಾಯದಾನ, ಜೀವದಾನ ಮಾಡಿದ ಘನತ್ವ ತಿಳಿದವನೆಂದರೆ ಲಿಂಗೈಕ್ಯ ಶರಣೆ ಸಮರ್ಥರು. ಅಂಗದ ಮೇಲೆ ಲಿಂಗ ಸಾಹಿತ್ಯ ಮಾಡಿ ಲಿಂಗವೆ ಲಿಂಗ ಮಾಡಿದ ಮಹಿಮರು ಮನದ ಮೇಲೆ ಲಿಂಗ ಸಾಹಿತ್ಯ ಮಾಡಿ ಮನವೆ ಘನಲಿಂಗ ಮಾಡಿದ ಸ್ವಯಂಜ್ಯೋತಿ ಪ್ರಾಣ ಅಥವಾ ಜೀವದದ ಮೇಲೆ ಲಿಂಗ ಸಾಹಿತ್ಯ ಮಾಡಿ ಚಿನ್ಮಯಲಿಂಗ ಮಾಡಿದ ಚೈತನ್ಯ ಘನ ಇಂತೀ ತ್ರಿವಿಧದ ಮೇಲೆ ತ್ರಿವಿಧ ಸಾಹಿತ್ಯ ಮಾಡಿ ತ್ರಿವಿಧವ ಏಕೀಕರಿಸಿದ ಮಹಾಲಿಂಗಗಳಾಗಿರುವದರಿಂದ ಕಾಯದಾನ ಜೀವದಾನವಾದ ಹಿರಿಮೆ ಅವರು ಬಲ್ಲವರು. ಕಾಯಜೀವವಿರುವವರೆಗೂ ನಿಮ್ಮ ನೆನೆಯುವವರು ಕೊನೆಗೆ ನಿಮ್ಮಲ್ಲಿಯೆ ಕಾಯ ಜೀವವು ತಲ್ಲೀಯವು. ಇದು ಕಾಯದಾನವಾದ ಸಾರ್ಥಕತೆ ಜೀವದಾನವಾದ ಸಾರ್ಥಕತೆ ಜೀವದಾನವಾದ ಸಾರ್ಥಕತೆಯು.

ಕಾಯ ನಿಮ್ಮದಾನವಾದುದ್ದರಿಂದ ನಿಮ್ಮ ಕಾಯದಿಂದದ ಗರು ದದರ್ಶನ ಲಿಂಗ ದರ್ಶನ ಜಂಗಮ ದರ್ಶನ ಜಂಗಮ ದರ್ಶನವಾಗಿ ನಿಮ್ಮ ಕಂಡೆನ್ನ ಮರದೆ ನೀವು ದಾನಮಾಡಿದ ಕಾಯದಿಂದ ಗುರು ದರ್ಶನವಾಗಿ ಹೊರಗು ಒಳಗೂ ಗುರು ತೋರಿ ಇಹ ಪರಗುರುವಾಯಿತ್ತು. ಕಾಯದಿಂದ ಲಿಂಗ ದರ್ಶನವಾಗಿ ಎನ್ನಂತರಂಗ ಲಿಂಗ ಪ್ರಭೆಯಿಂದ ಪ್ರಜ್ವಲಿಸಿತ್ತು. ಕಾಯದಿಂದ ಜಂಗಮ ದರ್ಶನವಾಗಿ ಜೀವ ಚಿನ್ಮಯ ಜ್ಯೋತಿಯಾಗಿ ಪ್ರಜ್ವಲಿಸಿತ್ತು. ಇಂತಪ್ಪ ಗುರು ಕಾರುಣ್ಯ ಕಾಯ ಜೀವದಾನ ವಾದರೂ ಕಾಯದ ಕಾಯವಾಗಿಹ ಗುರುಲಿಂಗ ಕಾಣಲಿಲ್ಲ, ಜೀವದ ಜೀವವಾಗಿಹ ನಿರ್ನಾಮ ಜಂಗಮಲಿಂಗ ಕಾಣದಾಗಿ ಕಾಯದಾನವಾದ ಹಿರಿಮೆಯ ತಿಳಿಯಲಿಲ್ಲ, ಇತ್ತ ಜೀವದಾನವಾದ ಹಿರಿಯಮೆಯ ತಿಳಿಯಲಿಲ್ಲ, ತಿಳಿಯದ್ದರಿಂದ ಕಾಯ ಜೀವವುಳ್ಳವನಾದರೂ ನಿಮ್ಮ ನೆನೆಯಲಿಲ್ಲ, ನೆನೆಯದ್ದರಿಂದ ನಾಯಿಗಿಂತ ಕರಕಷ್ಟ ಕಾಣಾ ರಾಮನಾಥ ಎಂದು ಜರಿದಿಹರು.

ವಚನ - 18

ಹಾಲು ತುಪ್ಪವ ಬೇರಾಗಬಲ್ಲುದೆ?
ಸೂರ್ಯಕಾಂತವ ಅಗ್ನಿಯ ನಾರು ಭೇದಿಸಬಲ್ಲರು.
ಅಪಾರ ಮಹಿಮ ಚೆನ್ನಮಲ್ಲಿಕಾರ್ಜುನ
ನೆನ್ನೊಳಗಡಗಿಪ್ಪ ಪರಿಯಬೇರಿಲ್ಲದೆ ಕಂಡು ಕಣ್ದೆರೆದೆನು.

ತಾತ್ಪರ್ಯ : ಅಕ್ಕ ಮಹಾದೇವಿಯು ಅಪಾರ ಮಹಿಮ ಚೆನ್ನ ಮಲ್ಲಿಕಾರ್ಜುನನ ಕಂಡು ಕಣ್ಣೆರದ ಎಚ್ಚರ ಸಕಲರ ಕಣ್ಣೆರೆಯಿಸುವ ಎಚ್ಚರವು. ಹಾಲು ತುಪ್ಪವ ಬೇರಾಗಬಲ್ಲುದೆ?

ಹಾಲು ತುಪ್ಪ ಒಂದಾದುದು. ಅರನಾರಯ್ಯ ಹೀಗೆ ಎಂದು ವಿವರಿಸುವದು ಆರಾದರೂ ಹಾಲಲ್ಲಿ ಇದು ತುಪ್ಪ ಇದು ಹಾಲು ಎಂದು ಬೇರು ಮಾಡಿ ಕಾಣಬಹುದೆ? ಹಾಲು ತುಪ್ಪ ಒಂದಾಗಿದ್ದ ಘನವು ಸಕಲರಿಗೆ ಎದುರಿನಲ್ಲಿದ್ದರೂ ಹಾಲಿನ ಮಧುರ್ಯವೆ ತುಪ್ಪ, ತುಪ್ಪ ಸವಿಯೆ ಹಾಲು ಇರುವಲ್ಲಿ ಬೇರು ಮಾಡಬಹುದೆ? ಹಾಲು ಆರು ಹೃದಯ ತುಪ್ಪವದು ಜ್ಞಾನಾಮೃತ, ಆರು ಹೃದಯ ಜ್ಞಾನಾಮೃತವಾಗಿದ್ದುದು ಅದನೆಂತು ವಿವರಿಸುವದು. ಇದುವೆ ಆರು ಹೃದಯ ಇದುವೆ ಜ್ಞಾನಾಮೃತವೆಂದು ಬೇರು ಮಾಡಿ ಕಾಣಬಹುದೆ? ಇದು ಕಾರಣ ಆರು ಹೃದಯ ಜ್ಞಾನಾಮೃತ ದ್ವಿವಿಧ ನಾಮದಿಂ ಕರೆಯಿಸಿಕೊಂಡರೂ ಬಂದೆ.

ಸೂರ್ಯಕಾಂತ ಅಗ್ನಿಯ ನಾರು ಭೇದಿಸಬಲ್ಲರು. ಸೂರ್ಯಪ್ರಕಾಶ ಪ್ರಕಾಶದಲ್ಲಿಹ ಅಗ್ನಿ ಇದನಾರು ಭೇದಿಸಬಲ್ಲರು ಸೂರ್ಯೋದಯವಾಗುವುಡೆ ಪ್ರಕಾಶವೆ ಪ್ರಕಾಶಿಸುವದು ಆಗ ಪ್ರಕಾಶಿಸುವಲ್ಲಿ ಅಗ್ನಿಯು ಹೊರ ಬೀಳವದು. ಸೂರ್ಯ ಪ್ರಕಾಶದಿಂದ ಭೂಮಿ ಸುಡುವುದು ನೀರು ಬಿಸಿಯಾಗುವವು. ವಾರಿ ಕಲ್ಲು ಕರಗಿ ನೀರಾಗುವುದು. ಆಗ ಇದು ಪ್ರಕಾಶ ಇದು ಅಗ್ನಿಯೆಂದು ಬೇರು ಮಾಡಬಹುದೆ? ಹಾಗೆ ಅರುವು ಜ್ಞಾನಸ್ವರೂಪ ಪ್ರಕಾಶಿಸುವುದು. ಅಲ್ಲಿ ಚಿತ್ ಇದ್ದಲ್ಲಿ ಚಿತ್ತ ಶಕ್ತಿಯು ಇರುವದು. ಇದುವೆ ಚಿತ್, ಚಿತ್ ಶಕ್ತಿ ಎಂದು ಬೇರು ಮಾಡಿ ಕಾಣಬಹುದೆ? ಖಂಡಿತವಲ್ಲದ ಅಖಂಡಿತವ ಕಾಣಬಹುದೆ? ಇದು ಅಖಂಡಿತ ಇದು ಖಂಡವ ಕಾಣಬಹುದೆ?

ಅಪಾರ ಮಹಿಮ ಚೆನ್ನಮಲ್ಲಿಕಾರ್ಜುನ ನೆನ್ನೊಳಗಡಗಿಪ್ಪ ಪರಿಯ ಬೇರಿಲ್ಲದೆ ಕಂಡು ಕಣ್ಣೆರೆದರನು. ಹಾಲು ತುಪ್ಪ ಹೇಗೆ ಬೇರಾಗದೋ? ಹಾಗೆ ಹಾಲು ಸವಿ ಹೇಗೆ ಬೇರಾಗದೋ? ಹಾಗೆ ಅಪಾರ ಮಹಿಮ ಚೆನ್ನಮಲ್ಲಿಕಾರ್ಜುನ ಗಗನದಂತೆ ಅಖಮಡವಾಗಿರುವ ಜ್ಞಾನಾಮೃತವೆ ನೆನ್ನೊಳಗಡಗಿಪ್ಪ ಅಪಾರ ಮಹಿಮನು ಇದು ಸೀಮಾತೀತ ನಿಲುವು. ಖಂಡಿತವಲ್ಲದ ಅಖಂಡಿತನ ನಿಲುವು. ಸೀಮಾತೀತ ನಿಲುವುಳ್ಳ ಚೆನ್ನಮಲ್ಲಿಕಾರ್ಜುನನನ್ನು ಬೇರಿಲ್ಲದೆ ಕಂಡು ಕಣ್ಣರೆದೆನು. ಹಾಲೊಳಗೆ ಹುದುಗಿದ ತುಪ್ಪವ ಕಾಣಲು ಹಾಲು ತುಪ್ಪ ಬೇರಾಗಿ ಕಂಡನು ಅಲ್ಲಿ ಹಾಲಿನ ದರ್ಶನ ತುಪ್ಪವಲ್ಲವೆ. ಹಾಗೆ ತಾನಾರೆಂದಿರತ ಶರಣಂಗೆ ತನ್ನ ಸ್ವರೂಪ ದರ್ಶನ ಚೆನ್ನ ಮಲ್ಲಿಕಾರ್ಜುನ ದರ್ಶನ ಅಪಾರ ಮಹಿಮನ ದರ್ಶನವೆ ತನ್ನ ದರ್ಶನ ನಾಮ ಎರಡಾಗಿ ಕಂಡರೂ ಅರುವು ಇರವು ಒಂದೆ ಅಖಂಡ ಜ್ಞಾನಾಮೃತ ಒಂದೆ.

ಅಪಾರ ಮಹಿಮ ಚೆನ್ನಮಲ್ಲಿಕಾರ್ಜುನ ಎನ್ನೊಳಡಗಿಪ್ಪ ಪರಿಯ ಬೇರಿಲ್ಲದೆ ಕಂಡು ಕಣ್ಣೆರೆದೆನು. ಅಪಾರ ಮಹಿಮ ಚೆನ್ನಮಲ್ಲಿಕಾರ್ಜುನ ಬೇರೆ ನಾನು ಬೇರೆಂದು ಬೇರಿಲ್ಲದೆ ಕಂಡು ಕಣ್ಣೆರೆದುದನೇನೆಂಬೆ ಆವುದು ಏನೊಂದುಸರಿಲು ಎಡೆಗೊಡದ ಘನವೆ ನನ್ನಿರುವು ನನ್ನಿರುವಿಲ್ಲಿ ಅಪಾರ ಮಹಿಮ ಚೆನ್ನಮಲ್ಲಿಕಾರ್ಜುನ ಎನ್ನೊಳಡಗಿಪ್ಪನು ಕಾಣಿರೆ. ಎನ್ನ ತೆರಹಿಲ್ಲದ ಭವ ನುಡಿಗೆಡೆಗೊಡದ ಘನದಲ್ಲಿ ಅಪಾರ ಮಹಿಮ ಚೆನ್ನ ಮಲ್ಲಿಕಾರ್ಜುನ ಎನ್ನ ಇರುವಿಲ್ಲಿ ಅಡಗಿಪ್ಪ ರಹಸ್ಯವು ಕಂಡು ಕಣ್ಣೆರೆದೆನು. ಧ್ವನಿಯ ಮರೆಯಲ್ಲಿದ್ದ ಎನ್ನ ಇರುವು ಕಂಡು ಸಕಲ ಧ್ವನಿಗಳು ಅಪಾರ ಮಹಿಮ ಎನ್ನೊಳಗಡಗಿಪ್ಪ ಪರಿಯ ಬೇರಿಲ್ಲದೆ ಕಂಡು ಕಡೆದೆರೆದುದು ಎಂದು ಹೇಳಿದರು.

ವಚನ - 19

ಸುಖವ ಬಲ್ಲಾತ ಸುಖಿಯೆಲ್ಲ ದುಃಖವ ಬಲ್ಲಾತ ದುಃಖಿಯಲ್ಲ
ಸುಖ ದುಃಖವೆರಡನು
ಬಲ್ಲಾತ ಜ್ಞಾನಿಯಲ್ಲ, ಹುಟ್ಟಿದ ಮುನ್ನ ಸತ್ತವರ ಕುರುಹ ಬಲ್ಲದೆ ಅದೆ ಜ್ಞಾನ
ಅದೆ ಬಲ್ಲತನದ ಕುಳಕಾಣಾ ಗುಹೇಶ್ವರಾ.

ತಾತ್ಪರ್ಯ: ಸುಖವ ಬಾಲ್ಲಾತನ ಸುಖಿಯಲ್ಲ, ದುಃಖವ ಬಲ್ಲಾತ (ಜ್ಞಾ) ದುಃಖಿಯಲ್ಲ.: ಸುಖವ ಬಲ್ಲವನು ದುಃಖವ ಬಲ್ಲವನು ಆಗಿಹನು ಬಲ್ಲವನು ಸುಖಕ್ಕಿಂತನ್ಯನೋ? ದುಃಖಕ್ಕಿಂತ ಅನ್ಯನೋ ಎಂಬುದ ತಿಳಿಯಲಿಲ್ಲ. ತಿಳಿಯದಿದ್ದರಿಂದ ಸುಖವು ತಾನಾದ ದುಃಖವು ತಾನಾದ ಸುಖವ ಬಲ್ಲಾತ ಸುಖಿಯಲ್ಲ ದುಃಖವ ಬಲ್ಲಾತ ದುಃಖಿಯಲ್ಲ ಎಂಬ ಪ್ರಭುವಿನ ರಹಸ್ಯವ ತಿಳಿಯಲಿಲ್ಲ, ಸುಖವ ಬಲ್ಲವ ದುಃಖವ ಬಲ್ಲವ ಸುಖವು ಆಗದವನು ದುಃಖವು ಆಗದವನು, ಬಲ್ಲವನು ಸುಖ ದುಃಖಗಳಿಗೆ ಸಮಸ್ವರೂಪನು ಸಮಸ್ವರೂಪನು ಸುಖವ ತೋರಲಿ ಇದ್ದಂತಿಹನು ದುಃಖವ ತೋರಲಿ. ಇದ್ದಂತಿಹನು ಸುಖ ದುಃಖವೆಂಬುವು ಮನಸ್ಸಿನ ಕಾರ್ಯವು ಮನವು ಸತ್ವಗುಣದಿಂದುಕ್ತವಾದ ಶಾಂತವು ಅಕ್ಷೋಭೆಯು ಅದುವೆ ರಜೋಗುಣದಿಂದುತ್ತವಾದಲ್ಲಿ ಕ್ಷೋಭೆಯು ಅಲ್ಲಿ ಅಕಾಂತತೆಯು ಮನದ ಸಮಾಧಾನವೆ ಸುಖವಾಗಿ ಭಾವಿಸುತ್ತದೆ. ಅಸಮಾಧಾನೆವ ದುಃಖವಾಗಿ ಭಾವಿಸುತ್ತದೆ.

ಸಮಾಧಾನ ಅಸಮಾಧಾನ ಮನದ ಮುಖವು ಇದು ಪ್ರವೃತ್ತಿಯಲ್ಲಿ(ಮನವು) ಇದ್ದುದು ನಿವೃತ್ತಿಯಲ್ಲಿ ಇದ್ದುದು ಮನವಿದ್ದಲ್ಲಿ ಕ್ಷೋಭೆಯು ಇದ್ದುದು ಅಕ್ಷೋಭೆಯು ಇದ್ದುದು ಮರವಿನಲ್ಲಿಯು ಮನದ ಕಾರ್ಯವು ಬೀಜ ಭೂತವಾಗಿದೆ. ಅರುವಿನಲ್ಲಿ ಬೀಜಭೂತವಾಗಿದೆ ಮರವಿನಲ್ಲಿ ನಾಮರೂಪಂಗಳೆ ಪ್ರಧಾನವಾಗಿವೆ. ಅರುವಿನಲ್ಲಿ ಆತ್ಮ ಲಕ್ಷಣವೆ ಪ್ರಧಾನವಾಗಿವೆ.

ಮರವಿನಲ್ಲಿದ್ದವಂಗೆ ದೇಹಬುದ್ಧಿ, ದೇಹಭಾವ, ದೇಹಾಭಿಮಾನ, ಸತ್ಯವಾಗಿ ಮನದ ವೃತ್ತಿಯು ಕಾರ್ಯೋನ್ಮುಖವಾಗಿದೆ. ಅದು ಆವಾಗಲೂ ತನ್ನ ಫಲ ಪದಂಗಳ ಇಚ್ಛೆ ಇಟ್ಟುಕೊಂಡು ಬಹಿರಾಕಾರವುಳ್ಳದ್ದಾಗಿರುವದು. ತನ್ನಿಚ್ಛೆಯಂತೆ ಫಲ ಪದಂಗಳು ಲಭ್ಯವಾಗಲು ಮನದ ವೃತ್ತಿಯು ಸ್ವಲ್ಪಕಾಲ ಸಮಾಧಾನ ಹೊಂದುತ್ತವೆ. ಆ ಸಮಾಧಾನಕ್ಕೆ ಕೆಲಬರು ಸುಖವೆಂತಲು ವಿಷಯ ಸುಖವೆಂತಲು ವಾಸನಾನಂದವೆಂತಲೂ ಅದು ನಿದ್ರೆಯಲು ಬ್ರಹ್ಮಾಂಡವೆಂತಲೂ, ಅಜ್ಞಾನ ಕಾಲದಲ್ಲಿ ವಿಷಯಾನಂದ ವಾಸನಾನಂದ ಮುಖ್ಯಾನಂದ, ಬ್ರಹ್ಮಾನಂದ ಈ ನಾಲ್ಕು ಅವಿದ್ಯಾ ವೃತ್ತಿಯಲ್ಲಿ ತೋರುವ ಮನದ ಸಮಾಧಾನವು ಈ ಚತುರ್ವಿಧ ರೂಪದಲ್ಲಿ ಕಾಣುವುದು. ಸುಖವ ಬಲಾತ ಸುಖಿಯಲ್ಲ, ಅವಿದ್ಯಾ ವೃತ್ತಿಯಲ್ಲಿ ತೋರುವ ಸುಖವು ತಾನಾಗುವುದಿಲ್ಲ. ಇದು ಕಾರಣ ಅರಿತ ಶರಣ ತೋರಿ ಇಲ್ಲವಾಗುವ ಮಾಯಿಕ ಸುಖವೆಂದು ಬಲ್ಲವನು ಅವನೆಂತು ಈ ಸುಖಕ್ಕೆ ಮೆಚ್ಚುವನು.

ಇತ್ತ ವಿದ್ಯಾವೃತ್ತಿ ಅರುವಿನ ವೃತ್ತಿಯಲ್ಲಿ ತೋರುವ ಯೋಗಾನಂದ ಆತ್ಮಾನಂದ ಅದ್ವೈತಾನಂದ, ವಿದ್ಯಾನಂದ ಇವು ಮನವು ಸಮಾಧಾನವುಳ್ಳವರಿಗಾಗಿ ಶಾಂತವಾಗುವುದು. ಅದುವೆ ಯೋಗಾನಂದವೆನಿಸುವುದು. ಅದೆ ಮನವು ನಿತ್ಯಾ ನಿತ್ಯವಿಚಾರವುಳ್ಳದ್ದಾಗಿ ನಿವೃತ್ತವಾಗಿ

ತಾನೆ ಉಳುಮೆ ಸ್ವರೂಪ ಆತ್ಮನೆಂಬ ಅರಿವು ಆಗಿ ಸಮಾಧಾನಗೊಂಡ ವೃತ್ತಿಯೆ ಆತ್ಮಾನಂದವೆಂದು ಕರೆಯುವರು. ಇದಲ್ಲದೆ ಅದ್ವೈತ ಭಾವವುಳ್ಳದ್ದಾಗಿ ಕಂಡುದೆಲ್ಲ ಸಚ್ಚಿದಾನಂದ ತಾನು ಗುರು ಈಶ್ವರ ಸಚ್ಚಿದಾನಂದವೆಂಬ ಭಾವವು ದೃಢಗೊಂಡಾಗ ಮನವು ಭೇದ ಭಾವದಿಂದ ದೂರಾಗಿ ಅಭೇದ ಭಾವ ದೃಢಗೊಂಡವು ಮನವು ಸಚ್ಚಿದಾನಂದ ಭಾವದಲ್ಲಿ ಸಮಾಧಾನಗೊಂಡುದೆ ಅದ್ವೈತಾನಂದವೆಂದು ಹೇಳಿಹರೆ. ಇದು ಕೊನೆಯದಾಗಿಹ ವಿದ್ಯಾನಂದದಲ್ಲಿ ವಿಷಯವನ್ನು ಬ್ರಹ್ಮಾಕಾರ ವೃತ್ತಿ ಅರುವಿನ ವೃತ್ತಿ, ತೋರುವ ಆವಾವುದಕ್ಕೂ ಮಹತ್ವ ಕೊಡದೆ ತನ್ನ ಅರುವಿಂಗೆ ಮಹತ್ವಕೊಟ್ಟು ಅರುವಿನ ಅನುಸಂದಾನದಲ್ಲಿ ರಮಿಸುವದೆ. ವಿದ್ಯಾನಂದ ಇದು ಕೂಡಾ ಮನದ ಶುದ್ದ ಸತ್ವಗುಣದ ಕಾರ್ಯವೆಂದು ಬಲ್ಲವರು ಹೇಳುವರು. ಅಜ್ಞಾನದಲ್ಲಿ ಮನ ವೃತ್ತಿಯೆ ಚತುರ್ವಿಧ ರೂಪದಲ್ಲಿ ಆನಂದವ ತೋರಿ ಮತ್ತು ಅರುವಿನಲ್ಲಿ ಮನವ ವೃತ್ತಿಯೆ ಚತುರ್ವಿಧ ರೂಪವಾಗಿ ತೋರುವದರಿಂದ ವೃತ್ತಿ ಇರುವವರೆಗೂ ತೋರುತ್ತವೆ ಎಂದಲ್ಲಿ ಇವೆರಡು ತನ್ನಿಂದ ಬೇರಾದವುಗಳು ಆದುದರಿಂದ ಪ್ರಭುದೇವ ಹುಟ್ಟಿದ ಮುನ್ನ ಸತ್ತವರ ಕುರುಹಬಲ್ಲದೆ. ಅದೆ ಜ್ಞಾನ, ಅದೆ ತನ್ನ ಜ್ಞಾನ.

ವೃತ್ತಿಯ ಬಹಿರಾಕಾರದಿಂದ ಅಪ್ರಸನ್ನತೆ ಅಂತರ್ಮುಖದಿಂದ ಪ್ರಸನ್ನತೆ ತಿಳಿದವರು ಬಲ್ಲವರಲ್ಲ. ಬಲ್ಲವರು ಬಹಿರಾಕಾರ ವೃತ್ತಿಗೂ ಅಂತರ್ಮುಖ ವೃತ್ತಿಗೂ ಮೀರಿ ತನ್ನ ತಾನರಿವುದೆ ನಿಜವಾದ ಅರಿವು ಅದೆ ಜ್ಞಾನ ಅದೆ ಸುಖದುಃಖ ಹಿಟ್ಟಿದ ಮುನ್ನ ಸತ್ತವ ಸತ್ ಸ್ವರೂಪ ತಾನೆ. ತಾನು ಸುಖವೇ ತೋರಲಿ ದುಃಖವೇ ತೋರಲಿ ತಾವು ಇವುಗಳನ್ನು ಮುನ್ನ ಇದ್ದವನು ಇದುಕಾರಣ ಸತ್ ಸ್ವರೂಪ ತಾನೆ. ಸತ್ ಸ್ವರೂಪವದು ನುಡಿಗೆಡೆಗೊಡದ ಇದ್ದವನು ಘನ ಇದ ನರಿಯುವದೆ ನಿವಾದ ಜ್ಞಾನ. ಅದುವೆ ಬಲ್ಲತನದ ಕುಳ. ಇದು ಅರುವಿನ ಕುಳ. ಜ್ಞಾನೀ ಕುಳ, ಇದು ಅಕುಲ, ಅಖಂಡಿತ ಘನ ಪರಿಪೂರ್ಣವಪ್ಪ ತನ್ನಿರುವೆ ಅರುವೆಂದರಿದ ಕುಳ. ಬಲ್ಲ ತನದ ಕುಳ ಕಾಣಾ ಗುಹೇಶ್ವರಾ ಎಂದು ಹೇಳಿಹರು.

ವಚನ - 20

ಸತ್ತ ಕೋಳಿ ಎದ್ದು ಕೂಗಿತ್ತು ಕಂಡೆ. ಸತ್ ಸ್ವರೂಪವರಿತವರು ಬದುಕ ಸತ್ತವರು
ಇವರ ದಿವ್ಯ ದೃಷ್ಠಿಯಲ್ಲಿ ನಾನೆಂಬುದಿಲ್ಲ. ನೀನೆಂಬುದಿಲ್ಲ.
ಬೇಕಾದುದಿಲ್ಲ, ಬೇಡಾದುದಿಲ್ಲ, ತನ್ನವರಿಲ್ಲ, ಅನ್ಯರಿಲ್ಲ,
ತಾನಂದ ಬಳಿಕ ಏನೂ ಇಲ್ಲ, ಇಲ್ಲದುದು ಇಲ್ಲದುದು ಎಲ್ಲಿಪ್ಪುದು.
ಇಲ್ಲದುದಿಲ್ಲಾದುದೆಂದಿಪ್ಪದೋ ಅನುವ ನರಿದು ತನುವ ಮರದಡೆ
ಭಾವ ರಹಿತ ಗುಹೇಶ್ವರ ಬಯಲು.

ತಾತ್ಪರ್ಯ: ಸತ್ತಕೋಳಿ : ತಾನಾರೆಂದರಿತ ಘನ ಕೋಳಿ ಸತ್ ಸ್ವರೂಪವೆ ತಾನಾದ ಮಹಾಂತ ಸಂತ ಕೋಳಿ, ಸತ್ ಕೋಳಿ, ಜೀವಿಗಳುತ್ಥಾನಕ್ಕಾಗಿ ಕೂಗುವ ಕೋಳಿ. ಸಕಲರ ಎಚ್ಚರ ಮಾಡುವ ಕೋಳಿ. ಎಚ್ಚರದಲ್ಲಿ ಎಚ್ಚರ ಮಾಡುವ ಕೋಳಿ. ಈ ಘನ ಕೋಳಿಯ ಧ್ವನಿಯಿಂದ ಅನನ್ಯ ಭಕ್ತ ವೃಂದಕ್ಕೆ ನಾನೆಂಬುದಿಲ್ಲ ನೀನೆಂಬುದಿಲ್ಲ ಜಗವಿಲ್ಲ ಜಗದೊಡಯರಿಲ್ಲ ಮಾಯೆಯಿಲ್ಲ ಮಾಯೆದ ಕಾರ್ಯವಿಲ್ಲ, ಅವಿದ್ಯೆ ಇಲ್ಲ, ಅದರ ಕಾರ್ಯವಿಲ್ಲ ಆವಾವ ನಾಮಂಗಳಿಲ್ಲ ರೂಪಂಗಳಿಲ್ಲ ಪಿಂಡವೆಂಬುದಿಲ್ಲ ಬ್ರಹ್ಮಾಂಡವೆಂಬುದಿಲ್ಲ ಇಲ್ಲವೆಂಬುದ ತಾನಿಲ್ಲ

ಅರಿತೆ ಅರಿಯನೆಂಬ ಈ ನಡುವಣ ಅರಿವು ಇಲ್ಲ. ಇದು ಕಾರಣ ಇಲ್ಲಾದುದಿಲ್ಲಾದು ಎಲ್ಲಿಪ್ಪುದುದು ಎಂತಿಪ್ಪುದು ಎಂದು ಸಿಂಹ ಗರ್ಜನೆಯ ಮಾಡಿಹರು.

ಸತ್ ಸ್ವರೂಪವರಿತವರ ವಾಣಿ ಆಕಾಶವಾಣಿ, ಅಂತಪ್ಪ ಮಹಾಂತನ ಕೃಪೆಯಿಂದ ಅನುವರಿತು ತನುವ ಮರೆಯುವದರಿಂದ ಭಾವ ರಹಿತ ಗುಹೇಶ್ವರ ಸ್ವರೂಪರು ಬಯಲು ಬಯಲಾದ ಮಹಾಂತರೆ ಸಚ್ಚಿದಾನಂದೋಹಂ. ಸುಖ ಸ್ವರೂಪೋಹಂ ಪರಿಪೂರ್ಣೋಹಂ ಎಂದು ಸುನಾದವ ಮಾಡುವದರಿಂದ ಮೊತ್ತದ ಮಾಮರಲುಲಿಯಿತ್ತು ಕಂಡೆ ಎಂದು ಹೇಳಿಹರು.

ನುಡಿಯದ ಮಾಮರ ನುಡಿಯುವುದು ಕಂಡೆ ಎಲ್ಲಾ ಮರಕ್ಕಿಂತಲೂ ಮಾನವರೂಪಿ ಮರ ದೊಡ್ಡ ಮರ ಘನಮರ ಭಗವದ್ಗೀತೆಯಲ್ಲಿ ಇದಕ್ಕೆ ಊರ್ಧ್ವಮೂಲ ಮಧಃಶಾಖಂ ಆಶ್ವಥಂ ಪ್ರಾಹುರವ್ಯಯಮ್ ಎಂದು ಹೇಳಿದೆ. ಎಲ್ಲಾ ಮರಗಳಿಕ್ಕಿಂತಲೂ ಈ ಮರದ ವೈಶಿಷ್ಠತೆಯೇ ಬೇರೆ. ಎಲ್ಲಾ ಮರಗಳ ಬುಡ ಅಡಿ ಇದ್ದರೆ ಶಾಖೆಗಳು ಮೇಲು ಇದ್ದರೆ ಈ ಮರದ ಬುಡ ಮೇಲೆ ಶಾಖೆಗಳು ಕೆಳಗೆ ಇದಕ್ಕೆ ಅಶ್ವಥ ವೃಕ್ಷವೆಂದು ಕರೆವರು. ಇದು ಯುಗದಲ್ಲಿ ಹುಟ್ಟಿದರೂ ಮರವಿನಿಂದ ದೇಹೋಹಂ ಎಂದು ಕೂಗುತ್ತ ಬಂದಿದೆಯಲ್ಲದೆ ಸಚ್ಚಿದಾನಂದೋಹಂ ಪರಿಪೂರ್ಣೋಹಂ, ಜ್ಞಾನಸ್ವರೂಪೋಹಂ ಎಂದು ನುಡಿದುದಿಲ್ಲ. ಈಗ ಮಾತ್ರ ಇದು ಅಹಂ ಬ್ರಹ್ಮಾಸ್ಮಿ ಎಂದು ನುಡಿದು ಶಬ್ದ ಮಾಡಿದ್ದು ಕಂಡೆನೆಂಬುದೆ ಮೊತ್ತರ ಮಾಮರದ ಉಲಿಯಿತ್ತು ಕಂಡೆನೆಂದು ಹೇಳಿಹರು.

ಕತ್ತಲೆ ಬೆಳಗಾಯಿತ್ತು ಕಂಡೆ, ಭ್ರಾಂತರೂಪಕತ್ತಲೆ ನಷ್ಟವಾಗಿ ನಿಭ್ರಾಂತವಾದುದಕಂಡೆ ಮರವೆ ಅರುವಾದುದಕಂಡೆ ನಾಮರೂಪ ಜಗವೆ ಆಸ್ತಿ ಭಾತಿ ಪ್ರಿಯವಾದುದ ಕಂಡೆ ಮಾಂಸಮಯಪಿಂಡ ಮಂತ್ರಪಿಂಡವಾದುದ ಕಂಡೆ. ಷಡ್ ಧಾತು ಶರೀರ ಷಡಕ್ಷರವಾದುದು ಕಂಡೆ. ತೋರಿ ಇಲ್ಲವಾಗುವ ಕಲ್ಪಿತವೆ ತೋರಬಾರದ ಘನವಾದುದ ಕಂಡೆ ಕಲ್ಪಿತವೆ ಕಲ್ಪನಾರಹಿತವಾದುದ ಕಂಡೆ. ಮರವರುವೆಂಬ ಮಾಯಿಕವೆ ಅರಿಯಲಿಲ್ಲದ ಅರುವಾದುದ ಕತ್ತಲೆ ಬೆಳಗಾಯಿತ್ತು ಕಂಡ ಎಂದು ಹೇಳಿಹರು.

ಹೊತ್ತಾರೆ ಎದ್ದು ಹೊಲಬದಪ್ಪತ್ತು ಕಂಡೆ. ಮಲಗಿದವರು, ಏಳುವರು, ಎದ್ದವರು ಮಲಗುವರು ಇವರು ಹೊತ್ತಾರೆ ಎದ್ದವರಲ್ಲ ಹೊಲಬದಪ್ಪಿದವರಲ್ಲ, ಆರು ಹೊತ್ತಾರೆ ಎದ್ದುದು ಅವರಿಗೆ ಮಾರ್ಗವೆ ತಪ್ಪಿತ್ತು.

ಹೊತ್ತಾರೆ ಎದ್ದವರು ಯಾರು? ಯಾರು ಎಚ್ಚರವಾಗಿಹರು. ಅವರಿಗೆ ನಿದ್ದೆಯೆ ಇಲ್ಲವಾಯಿತು. ಅವರು ಮಲಗಿದವರು ನಿರಂತರ ಎಚ್ಚರವಿರುವುದರಿಂದ ನಿದ್ರೆಯೆ ಇಲ್ಲವಾಗಿ ಹಾದಿಯೆ ತಪ್ಪಿತ್ತು. ಆಥಾವ ಹಾದಿ ತಪ್ಪಿದುದು? ಮಲರೂಪಿ ಪಾಪದೋಷ ಕಳೆದುಕೊಳ್ಳುವ ಕರ್ಮಕಾಂಡದ ಕ್ರಿಯೆ. ಕರ್ಮಂಗಳೆ ತಪ್ಪಿ ಹೋಯಿತ್ತು.

ಚಿತ್ತದ ಚಂಚಲ ದೋಷ ಕಳೆಯುವ ಯೋಗ ಮಾರ್ಗವೆ ತಪ್ಪಿ ಹೋಯಿತ್ತು ಇತ್ತ ಆವರಣ ನಷ್ಟ ಮಾಡುವ ಶ್ರವಣ ಮನನ ನಿಧಿಧ್ಯಾನರೂಪಿ ಜ್ಞಾನಕಾಂಡದ ಹಾದಿಯು ತಪ್ಪಿತ್ತು. ಸದಾ ಎಚ್ಚರವುಳ್ಳವರಿಗೆ ಬ್ರಾಹ್ಮಿ ಮುಹೂರ್ತವಾವುದು? ಮಧ್ಯಾಹ್ನವಾವುದು? ಸಾಯಂಕಾಲವಾವುದು? ಅರಿತ ಶರಣಂಗೆ ಅವಿಚಾರವೆಂಬ ರಾತ್ರಿಯೂ ಇಲ್ಲ. ಬ್ರಹ್ಮವೆ ನಾನೆಂಬ ಚಿದಹಮ್ಮುಳ್ಳ ಬ್ರಹ್ಮಿ ಮುಹೂರ್ತವಿಲ್ಲ. ಮರವರುವೆಂಬ ಸಾಯಂಕಾಲವೂ ಇಲ್ಲ.

ಅರಿಯಲಿಲ್ಲದ ಅರುವೆ ತಾನಾದ ಮಹಾಘನನೆ ಹೊತ್ತಾರೆ ಎದ್ದವನು ಅಂತಪ್ಪ ಮಹಾಂತಂಗೆ. ಮಾಡುವು ನಿಯಮವಿಲ್ಲ. ಅರ್ಪಿಸುವ ವಸ್ತುವಿಲ್ಲ. ತಾನನ್ಯವೆಂಬ ಭಿನ್ ಜ್ಞಾನವಿಲ್ಲದುದರಿಂದ ಹೊಲಬುದಪ್ಪಿದವರು ಎಂದು ಹೇಳಿದರು. ಇದೇನು ಹತ್ತಿತ್ತೆಂದರಿಯೆ ಗುಹೇಶ್ವರಾ. ಅರುವಿಂಗರುವು ಘಟ್ಟಿಗೊಂಡವಂಗೆ ಮನಲೀಯ ಭಾವ ನಿರ್ಭಾವವಾಯಿತ್ತು. ನಿಜದಲ್ಲಿ ನಿಂದುದು ಅರುವಿಂಗರುವು ಕರಿಗೊಂಡುದು ಇದೇನು ಹತ್ತಿತ್ತೆಂದರಿಯೆ.

ಅರಿವೆನ್ನದ ಅರುವು ಹೃದಯಕ್ಕೆ ಹತ್ತಿ ಬೆಳಗಿದುದು ಬೆಳಗುಳ್ಳ ಬೆಳಗೆ ಸುಖವೆ ಸುಖವಾದುದು ಅಚಿಂತ್ಯವೆ ನಿಶ್ಚಿಂತದ ನಿಜ ನಿವಾಸವಾದುದು ಇದೇನು? ಮನಕ್ಕೆ ಹತ್ತಿ ಮನವೆನಲಿಲ್ಲ ಭಾವ ನಿರ್ಭಾವದಲ್ಲಿ ಬೆಂದು ನಿಬ್ಬೆರಗುಳ್ಳ ಘನಕ್ಕೆ ಘನವಾದುದು ಏನೆಂದೆನಲಿಲ್ಲದ ಅರಿವು ಇರವು ಗುಹೇಶ್ವರಾ ಎಂದು ಹೇಳಿದರು.

ವಚನ - 21

ಮತಿಯೊಳಗೊಂದು ದುರ್ಮತಿ ಹುಟ್ಟಿದ ಬಳಿಕ ಮತಿಯ ಮರವೆಯೊಳಕೊಂಡು
ಭವಕ್ಕೆ ಗುರಿಮಾಡಿತ್ತು ನೋಡಾ ಖಂಡಿತಕಂಡು ಮತಿಯೊಳಗೆ ವೇಧಿಸಲು
ಗತಿಗೆಟ್ಟು ನಿಂದಿತ್ತು ಗುಹೇಶ್ವರಾ.

ತಾತ್ಪರ್ಯ: ಮತಿಯೊಳಗೊಂದು ದುರ್ಮತಿ? ಮತಿ ಆವುದು? ದುರ್ಮತಿ ಆವುದು? ಮತಿ ಲಿಂಗಾಂಗ ಸಾಮರಸ್ಯ ಜ್ಞಾನವೆ ಮತಿ. ಸಮರತಿ ಮತಿ, ಸಮಕಲೆಯುಳ್ಳ ಮತಿ, ಸಮ ಸುಖರೂಪಮತಿ, ಸಮಗೋಷ್ಠಿ ಮತಿ, ಉಪಮಿಸದ ಮತಿ, ಇದು ಸಹಜ ಮತಿ, ಸಹಜಾನಂದ ರೂಪಿ ಮತಿ, ಸಯ ಸುಖದ ಮತಿ ಅರುವುಳ್ಳ ಮತಿ, ಮತಿಯೊಳಗೊಂಡು ದುರ್ಮತಿ. ಇದು ಆಶ್ಚರ್ಯ ಪರಮಾಶ್ಚರ್ಯ, ದುರ್ಮತಿ ಆವುದು? ಇದು ದೇಹ ಬುದ್ದಿಯುಳ್ಳ ಮತಿ ಬಂಧನದಿಂದುಕ್ತವಾದ ಮತಿ. ಅವಿದ್ಯೆಯಿಂದುಕ್ತವಾದ ಮತಿ. ಮರವುಳ್ಳ ಮತಿ. ಇಲ್ಲದುದ ಕಲ್ಪಿಸಿ ಇದ್ದುದ ನರಿಯದಿಹ ಮತಿ ತಾನಾರೆಂದರಿಯದಿಹ ಮತಿ.

ಗುರ್ವಾನು ಗ್ರಹಕ್ಕೆ ದೂರಾದ ಬುದ್ದಿಯೆ ದುರ್ಬುದ್ಧಿ. ಇದು ದುರ್ಮತಿ ಇದುವೆ ಲಿಂಗಾಂಗ ಸಮರಸ ಜ್ಞಾನವುಳ್ಳ ಸುಮತಿಯನ್ನೆ ಮರವು ಮಾಡಿತ್ತು. ಖಂಡಿತವನ್ನೆ ಮುಂದುಮಾಡಿ ಅಖಂಡಿತ ಘನಪೂರ್ಣವಷ್ಟ ಇರುವನ್ನೆ ಮರವು ಮಾಡಿತ್ತು. ಇದ್ದ ಆಸ್ತಿ, ಭಾತಿ, ಪ್ರಿಯರೂಪ ಸತ್ಯದೋಳ್ ಇಲ್ಲದ ನಾಮರೂಪವೆಂಬ ವಿಕಲ್ಪವ ಕಲ್ಪಿಸಿ ಹೊನ್ನು, ಹೆಣ್ಣು, ಮಣ್ಣೆಂದು ಭಾವಿಸಿ ಇದ್ದ ಸುಮತಿಯನ್ನು ಮರವು ಮಾಡಿತ್ತು. ಅಂದು ಇಂದು ಎಂದೆಂದೂ ಇದ್ದ ಪರಮ ಸತ್ಯದೋಳ್ ಇಲ್ಲದ ಗಂಡುಗೂಸು ಹೆಂಗೂಸೆಂಬ ಹುಸಿಯೆ ಸತ್ಯವ ಮಾಡಿ ಭವಕ್ಕೆ ಗುರಿ ಮಾಡಿತ್ತು ನೋಡಾ.

ಓ ದುರ್ಬುದ್ಧಿ ಇದ್ದುದ ನರಿಯದೆ ಇಲ್ಲದುದು ಕಲ್ಪಿಸಿದುದು ದುರ್ಬುದ್ಧಿ. ಅಸತ್ಯದೋಳ್ ಸತ್ಯವ ಕಂಡುದೆ ದುರ್ಬುದ್ದಿ. ಮಿಥ್ಯಕ್ಕೆ ಸತ್ಯವೆಂಬುದು ದುರ್ಬುದ್ದಿ. ಹಗ್ಗಕ್ಕೆ ಹಾವೆಂದು ಕಲ್ಪಿಸಿದುದೆ ದುರ್ಬುದ್ದಿ. ಸತ್ಯಜ್ಞಾನಾನಂದವನ್ನೆ ನಾಮರೂಪವೆಂದು ತಿಳಿದುದೆ ದುರ್ಬುದ್ದಿ. ದುರ್ಬುದ್ದಿಯಿಂದಲೆ ಬಂಧನ. ಇದುವೆ ಜನನ ಮರಣಗಳ ಕಲ್ಪಿಸಿ ನಾನಾ

ಭವಾಂತರದಲ್ಲಿ ಕೆಡಹಿತ್ತು. ಇದರಿಂದಲೇ ಭವ ಪಾಶ, ಬ್ರಹ್ಮ ಪಾಶ, ವಿಷ್ಣು ಮಾಯೆ ಇದರಿಂದ ಆಶೆಯೆಂಬ ಕುಟುಕು ಇದು ಹೇಸಿಕೆ ಇಲ್ಲದೆ ಭವಕ್ಕೆ ಗುರಿಮಾಡಿದಿದುವೆ ಸುಮತಿಗೆ ಮರವು ಮಾಡಿದಿದುವೆ.

ಸುಜ್ಞಾನವೆಂಬ ಮತಯ್ಯು ಪೌರ್ಣಮಿ ಚಂದ್ರಮನಿಗೆ ಮರವುಳ್ಳ ದುರ್ಬುದ್ಧಿ ರೂಪಿ ಮೋಡಗತ್ತಲು ಕಾಣದಂತೆ ಮಾಡಿತ್ತು. ಕತ್ತಲೆ ಬೆಳಕನ್ನು ನುಂಗಿತ್ತೆ. ಇದೇನಾಶ್ಚರ್ಯ ವಿಷವು ಅಮೃತ ನುಂಗಿತ್ತೆ. ಮರಣವು ಅಮರತ್ವ ನುಂಗಿತ್ತೆ! ಪರಮಾಶ್ಚರ್ಯ ನಾಮರೂಪಕ್ಕೆ ಒಪ್ಪಿದ ದುರ್ಮತಿ ಸಚ್ಚಿದಾನಂದವುಳ್ಳ ಸದ್ಭಾವ ಕಾಣದಂತೆ ಮಾಡಿತ್ತೆ. ಪಿಂಡವೆಂಬ ದುರ್ಮತಿ ಪರಬ್ರಹ್ಮವೆಂಬ ಪರಮನ ಕಾಣದಂತೆ ಮಾಡಿತ್ತೆ. ಇದೇನಾಶ್ಚರ್ಯ ಭ್ರಮವು ಬ್ರಹ್ಮಾಕಾರವ ನುಂಗಿತ್ತೆ. ಕಲ್ಪಿತವೆಂಬ ದುರ್ಮತಿ ಕಲ್ಪನಾರಹಿತವ ಕಾಣದಂತೆ ಮಾಡಿತ್ತೆ. ಇಲ್ಲದುದೆ ಇದ್ದಂತಾಯಿತ್ತೆ. ಇದ್ದುದೆ ಇಲ್ಲದಂತಾಯಿತ್ತೆ. ಇದೆಂಥಹ ದುರ್ಬುದ್ಧಿ ಹಗರಣ ಖಂಡಿತವಲ್ಲದ ಅಖಂಡಿತದೋಳ್ ಖಂಡಿತವ ಕಂಡುದೆ ದುರ್ಬುದ್ಧಿಯ ಹಗರಣ ಅರುವೆಂಬ ಅಖಂಡಿತದೋಳ್ ಮರವೆಂಬ ಹುಸಿ ಕಲ್ಪಿತ ಖಂಡಿತ ಕಂಡುದೆ ದುರ್ಬುದ್ಧಿ ಹಗರಣ ಇದು ಪರಮಾಶ್ಚರ್ಯ. ಇದುವೆ ದುರ್ಮತಿಯು ಸುಮತಿಯ ಮರವೆಯ ಮಾಡಿದ ಆಟ. ಈ ಆಟದಿಂದ ಬಹು ತಪಸ್ವಿ ತ್ಯಾಗಿ ಯೋಗಿ ಜಿಜ್ಞಾಸು ಸಾಧಕ ವೃಂದವ ಭಾವಕ್ಕೆ ಗುರಿ ಮಾಡಿತ್ತು. ಖಂಡಿರವಕಂಡು ಮತಿಯೊಳಗೆ ವೇಧಿಸಲು ಗತಿಗೆಟ್ಟು ನಿಂದಿತ್ತು ಗುಹೇಶ್ವರಾ. ದುರ್ಮತಿಯ ಹಗರಣ ತಿಳಿದುದೆ ಖಂಡಿತಕಂಡುದು ನಿಸ್ಸೀಮದಲ್ಲಿ ಸೀಮಿತವ ಕಲ್ಪಿಸಿದುದೆ ದುರ್ಮತಿಯ ಹಗರಣ ಈ ಹಗರಣ ಬಹು ಆಶ್ಚರ್ಯ.

ಇದ್ದೊಂದೆ ಅರಿಯಬಾರದ ಘನದೋಳ್ ಮರವು ಅರುವೆಂದು ಕಲ್ಪಿಸಿದುದೆ ದುರ್ಮತಿ ಇದ್ದೊಂದೆ ಅನುಪಮ ಲಿಂಗದೋಳ್ ಅಜ್ಞಾನ, ಜ್ಞಾನವೆಂದು ಬಂಧಮೋಕ್ಷವೆಂದು ಕಲ್ಪಿಸಿದುದು ಆಶ್ಚಯವಲ್ಲವೆ? ಇದ್ದುದೊಂದೆ ಪರಮ ಸತ್ಯದೊಳ ಸತ್ಯ ಅಸತ್ಯ ಕಲ್ಪಿಸಿದುದು ಆಶ್ಚರ್ಯ. ಸಮ ತತ್ವದೋಳ್ ಇದು ಅಮಗ. ಇದು ಲಿಂಗವೆಂದು ವಿಭಾಗಿಸಿದುದು ಖಂಡಿತ ಕಂಡುದು ಬೆಳಗುಳ್ಳ ಜ್ಯೋತಿ. ಖಂಡಿತವಲ್ಲದ ಅಖಂಡಿತಜ್ಯೋತಿ, ಜ್ಞಾನಜ್ಯೋತಿ, ಸ್ವಯಂಜ್ಯೋತಿ, ಸ್ವತೇಜ ಜ್ಯೋತಿ, ಸ್ವತೇಜದೋಳ್ ಒಂದು ಬೆಳಗಿಸಿಕೊಳ್ಳುವದು ಮತ್ತೊಂದು ಬೆಳಗುವದನ್ನಾಗಿ ಮಾಡಿದುದು ಖಂಡಿತವ ಕಂಡುದು ಅರಿಯಲಿಲ್ಲದ ಅರುವಿನೊಳ್ ಅರಿವ ಅರುಹಿಸಿಕೊಂಬುದನ್ನಾಗಿ ಕಂಡುದು ಖಂಡಿತವ ಕಂಡುದು ಇದು ಮತಿಯೊಳಗೆ ವೇಧಿಸಲು ಗತಿಗೆಟ್ಟು ನಿಂದಿತ್ತು ಗುಹೇಶ್ವರಾ.

ಸುಜ್ಞಾನದಿಂದ ದುರ್ಮತಿಯ ಹಗರಣ ರೂಪಿ ಖಂಡಿತವು ಸತ್ಯವೋ? ಅಸತ್ಯವೋ? ಇದ್ದುದೋ? ಇಲ್ಲುದುದೋ? ಅಹುದಾದುದೋ? ಅಲ್ಲಾದುದೋ? ನಾಶವುಳ್ಳದೋ? ಅವಿನಾಶಿಯೋ? ಇದು ಉದಯಾಸ್ತದಿಂದುಕ್ತವೋ? ಇದ್ದಂತಿರುವುದೋ ಎಂದು ಖಂಡಿತವಲ್ಲದ ಅಖಂಡ ಮತಿಯಿಂದ ಅರಿದರಿದು ನೋಡಲು ಈ ದುರ್ಮತಿಗೆ ಸತ್ಯವೆನ್ನಲು ಬರದು. ಅಸತ್ಯವೆನ್ನಲು ಬರದು. ಅಲ್ಲಾದುದೆನ್ನಲು ಬರದು. ಏಕೆಂದರೆ ಅಕಲ್ಪಿತ ಘನದಲ್ಲಿ ಕಲ್ಪಿತಕ್ಕಿಂಬಿಲ್ಲವಾದ್ದರಿಂದ ಇದು ಉದಯಾಸ್ತದಿಂದುಕ್ತವಾದಂತೆ ಭಾಸವಾದರೂ ಯತಾರ್ಥವಲ್ಲ.

ಇದು ಬಂಜೆ ಮಗನೆಂಬ ನುಡಿ ಮಾತ್ರದಂತೆ ಸ್ವಪ್ನದಂತೆ ತೋರುವುದು. ಯತಾರ್ಥವಲ್ಲ, ಎಚ್ಚರವಾಗುವುದೆ. ಸ್ವಪ್ನ ಹೇಗೆ ಇಲ್ಲವಾಗುವುದು. ಶಬ್ದ ನಷ್ಟ ಮಾಡುವುದೆ

ನಿಶಃಬ್ದ ಬ್ರಹ್ಮವೆ ಸಿದ್ದವಾಗಿ ದುರ್ಮತಿಯೆಂಬ ಬಂಜಿ ಮಗ ಗಲೆಗೆಟ್ಟುನಿಂದಿತ್ತು. ಸಮಕಲೆ, ಸಮಸುಖ, ಸಮಗೋಷ್ಠಿಯೆಂಬ ಮತಿಯಲ್ಲಿ ನಿಂತು ನೋಡುವುಡೆ ದುರ್ಮತಿಯೆಂಬ ವಿಷಮಗೋಷ್ಠಿಯುಳ್ಳ ಸ್ವಪ್ನವು ಅತ್ಯಂತಾಭಾವವಾಗುವುದು ಇದುವೆ ಗತಿಗೆಟ್ಟ ಸಂಕೇತ.

ದುರ್ಮತಿಯು ನಷ್ಟವಾಗಲು ಲಿಂಗಾಂಗ ಸಾಮರಸ್ಯ ಸುಜ್ಞಾನವು ದೃಢ ದೃಡಾಂಗವಾಗಬೇಕು. ಅಚಲವಾಗಬೇಕು ಖಂಡಿತವಲ್ಲದ ಅಖಂಡಿತ ಬುದ್ದಿ ಘಟ್ಟಿಗೊಂಡುದು ತನ್ನಿಂದ ತನಗದು ಸ್ವತಃ ಸಿದ್ದ ಮನವರಿಕೆಯಾಗಬೇಕು. ಆಗ ತನ್ನಿಂದ ತನಗೆ ಖಂಡಿತವಲ್ಲದ ಅಖಂಡಿತ ಘನ ಪರಿಪೂರ್ಣವಪ್ಪ ತನ್ನಿರುವೆಂದರಿತ ನಿಜಲಿಂಗೈಕ್ಯ ತಾನೆ ತನ್ನ ಮಹದಿರುವ ಉಪಮಿಸುವದದೆಂತು?

ವಚನ - 22

> **ಒಂದೆಂಬೆನೆ ? ಆಹಾರವಿಲ್ಲ ಎರಡೆಂಬೆನೆ ? ದರ್ಶನ ನಿರ್ಣಯವಾಗದು.**
> **ಮೂರೆಂಬೆನೆ ಮೂರುತಿಯಾಗಿ ತೋರದು.**
> **ಸುಗುಣ, ನಿರ್ಗುಣ, ಸ್ಥೂಲ ಸೂಕ್ಷ್ಮವಾಗುವುದು ?**
> **ಅಲ್ಲದುದೇನಯ್ಯ ಕೂಡಲ ಚೆನ್ನಸಂಗಯ್ಯ ದರ್ಪಣದೊಳಗಣ ಪ್ರತಿಬಿಂಬದಂತೆ**
> **ತನ್ನೊಳಗಿರ್ದುದ ಭಿನ್ನದಲರಸುವದೇನಯ್ಯ.**

ತಾತ್ಪರ್ಯ: ಒಂದೆಂಬನೆ? : ಆಕಾಶವಿಲ್ಲ ನಿರಂತರವಾಗಿರುವ ಮಂಗಳಮಯ ಪರಮಸತ್ ಒಂದೆಂಬೆನೆ? ಆಕಾಶವಿಲ್ಲ, ಅರಿವುಡೆ ತಾನೆ ತನಗೆ ಆಕಾರವಿಲ್ಲ, ತಾನು ಪರಮಸತ್ಯ ಒಂದೆಬನೆ? ಸತ್ಯ ನಿರುವಲ್ಲಿ ತನ್ನೊಂದಿಗೆ ಸೇರಿದುದು ಇಲ್ಲ, ಬೇರಾದುದು ಇಲ್ಲ ಸುಮ್ಮನೆ ಹೇಳುದಕ್ಕಾದರೂ ಆಕಾರವಿಲ್ಲ, ನಾಮವೂ ಇಲ್ಲ.

ಎರಡೆಂಬನೆ? ದರ್ಶನ, ನಿರ್ಣಯವಾಗದು. ಎರಡೆಂಬೆನೆ? ಅಂಗ, ಲಿಂಗ, ಪೂಜ್ಯ, ಪೂಜಕ, ಗುರು, ಶಿಷ್ಯ ಎರಡೆನ್ನಬೇಕೆ? ಎರಡೆಂದಲ್ಲಿ ದರ್ಶನವಿದೆ, ನಿರ್ಣಯವಿದೆ. ಅಂಗ, ಲಿಂಗ, ಎರಡರಲ್ಲಿ ದರ್ಶನ ನಿರ್ಣಯವಾದರೆ ಅಂಗನಿಗೆ ಲಿಂಗ ದರ್ಶನವೆನ್ನಬೇಕೋ ಲಿಂಗಕ್ಕೆ ಅಂಗದರ್ಶನವೆನ್ನಬೇಕು? ಅಂಗನಿಗೆ ಲಿಂಗ ದರ್ಶನವಾದತೆ ಹೇಳಲು ಬರುತ್ತಿತ್ತು. ಲಿಂಗಕ್ಕೂ ಅಂಗ ದರ್ಶನವಾದರೆ ಹೇಳಲು ಬರುತ್ತಿತ್ತಯ, ದರ್ಶನವಾಗದ್ದರಿಂದ ನಿರ್ಣಯವಾಗದು. ಏಕೆಂದರೆ ಅಂಗ ಲಿಂಗವೆಂಬುದು ದರ್ಪಣದೊಳಗಣ ಪ್ರತಿಬಿಂದ ಪ್ರತಿಬಿಂದ ವಿದ್ದಲ್ಲಿ ಬಿಂಬವಿರುವದು ನಿಶ್ಚಿತವು. ಬಿಂಬ ಪ್ರತಿಬಿಂಬ ನ್ಯಾಯದಂತೆ ಎಂದು ಹೇಗೆ ಹೇಳುವದು.

ಕೂಡಲ ಚೆನ್ನ ಸಂಗಯ್ಯ ದರ್ಪಣದೊಳಗಣ ಪ್ರತಿಬಿಂಬದಂತೆ ತನ್ನೊಳಗಿರ್ದುದ ಭಿನ್ನದಲರಸುವದೇನಯ್ಯ. ತನ್ನೊಳಗಿರ್ದುದ ತನ್ನ ಸ್ವರೂಪ ತಿಳಿಯದ್ದರಿಂದ ಅರಸಲು ಕಾರಣವಾಯಿತ್ತು. ತಾನಾರೆಂದು ಆರು ತಿಳಿದರು. ಅವರು ಅರಸಲಿಲ್ಲ, ತಿಳಿಯದವರು ಒಂದೆ ಎಂದರು. ಎರಡು ಅಂದರು.

ಒಂದೆಂಬೆನೆ ಆಕಾರವಿಲ್ಲ ತನ್ನೊಳಗಿರ್ದ ತನ್ನ ಸ್ವರೂಪಕ್ಕೆ ಒಂದೆನ್ನಲು ಆಕಾರವಿಲ್ಲ. ಉಪಮಾತೀತವಾದ ಸ್ವರೂಪ ಅಗಣಿತ ಅಕ್ಷೇಶ್ವರ ನಿರುವಲ್ಲಿ ಸಾಕಾರ, ನಿರಾಕಾರವೆಂದು ಹೇಗೆ ಹೇಳುವದು. ಸ್ಥೂಲ ಸೂಕ್ಷ್ಮನೆಂದು ಹೇಗೆ ಹೇಳುವುದು.

ಎರಡೆಂಬನೆ ದರ್ಶನ ನಿರ್ಣಯವಾಗದು. ತಾನು ಬೇರಾಗಿದ್ದು ತನ್ನೊಳಗಿರ್ದುದು ಬೇರಾಗಿದ್ದರೆ ಎರಡೆನ್ನಲು ಬರುತ್ತಿತ್ತು. ದರ್ಶನದಿಂದ ನಿರ್ಣಯ ಮಾಡಲು ಬರುತ್ತಿತ್ತು. ತನ್ನೊಳಗಿರ್ದುದು ತನಗಿಂತ ಶ್ರೇಷ್ಠವಾಗಿ ತಾನು ಕೀಳಾಗಿದ್ದಲ್ಲಿ ತಾನು ಶಿಷ್ಯನಾಗಿ. ಭಕ್ತನಾಗಿ ಅದು ದೇವ ಲಿಂಗ, ಜಂಗಮ, ಗುರುವಾಗಿದ್ದಲ್ಲಿ ದರ್ಶನದಿಂದ ನಿರ್ಣಯವಾಗುತ್ತಿತ್ತು. ಇದಲ್ಲದೆ ಅದು ಬ್ರಹ್ಮವಾಗಿ ತಾನು ಅಂಗನಾಗಿದ್ದಲ್ಲಿ ದರ್ಶನದಿಂದ ನಿರ್ಣಯವಾಗುತ್ತಿತ್ತು. ತನ್ನೊಳಗಿರ್ದುದು ತಾನೆ ಇರುವುದರಿಂದ ಎರಡೆನ್ನಲು ಬರದು ದರ್ಶನ ನಿರ್ಣಯವಾಗದು.

ಮೂರೆಂಬನೆ ಮೂರುತಿಯಾಗಿ ತೋರದು. ತನ್ನೊಳಗಿರ್ದುದು ಅದು ಜಡವಲ್ಲ. ಜಡವಾಗಿದ್ದರೆ ಮೂರುತಿಯಾಗಿ ತೋರುತ್ತಿತ್ತು. ತನ್ನೊಳಗಿರ್ದುದು ತಾನೆ ತನ್ನನ್ನು ಜಡವೆನ್ನಲು ಬರದು. ಅಜಡವೆನ್ನಲು ಬರದು. ಜಡಾಜಡ ರಹಿತಾತ್ಮನೆನ್ನಲು ಬರದು. ಶಬ್ದಕ್ಕೆ ತೆರಹಿಲ್ಲದಿರುವಾಗ ಅದು ಮೂರುತಿ ಆಗಿ ಹೇಗೆ ತೋರುವದು? ಇದು ಕಾರಣ ಮೂರೆಂಬುದು ದರ್ಶನ ಮೂರುತಿಯಾಗಿ ತೋರದ್ದರಿಂದ ತನ್ನೊಳಗಿರ್ದುದು ಗುರುವಾಗಿ ತೋರದು. ಲಿಂಗವಾಗಿ ತೋರದು ಜಂಗಮವಾಗಿ ತೋರದು, ಗುರು ಲಿಂಗವು ಬೋದಾಭೋದಕ್ಕೆ ಬೆಳಗುವ ಘನವು ಅದು ಸಮತೆಸಯವಾಗಿಹ ಸ್ವಯಂಜ್ಯೋತಿಲಿಂಗ ಅದು ಮೂರುತಿ ಹೇಗೆ ಆಗುವುದು. ಲಿಂಗ ಘನವು ಚಿಂತನಕ್ಕೊನೆನಹಿಂಗೂ ನಿಲುಕದ ಅಚಿಂತ್ಯಾತ್ಮವು ಅದು ಮೂರಿತಿಯಾಗಿ ಹೇಗೆ ತೋರುವುದು. ಜಂಗಮ ಲಿಂಗವು ಭಾವಕ್ಕಗಮ್ಯವಾಗಿಹ ನಿರಾಲಂಬವು. ಅದು ಮೂರುತಿಯಾಗಿ ಹೇಗೆ ತೋರುವುದು. ತೋರದ್ದರಿಂದ ಮೂರೆಂಬೆನೆ ಮೂರುತಿಯಾಗಿ ತೋರದು ಎಂದು ಹೇಳಿಹರು.

ತನ್ನೊಳಗಿರ್ದುದು ಸುಗುಣವೆನ್ನಲು ಬರದು. ನಿರ್ಗುಣವೆನ್ನಲು ಬರದು. ಅದು ಸ್ಥಲವಾಗದು. ಸೂಕ್ಷ್ಮವಾಗದು. ಅಲ್ಲದುದೇನಯ್ಯ ತನ್ನೊಳಗಿರ್ದುದ ಅರಿತವರಿಗೆ ಧ್ವನಿಯ ಮರೆಯಲ್ಲಿರ್ದುದು ಅರಿವು ಅಲ್ಲದುದೇನಯ್ಯ ನಿಮ್ಮ ನೀವೆ ಅರಿತು ನೋಡಯ್ಯ ಕೂಡಲಚೆನ್ನ ಸಂಗಯ್ಯ ದರ್ಪಣದೊಳಗಣ ಪ್ರತಿಬಿಂಬದಂತೆ ತನ್ನೊಳಗಿರ್ದದ ದರ್ಪಣದೊಳಗಣ ಪ್ರತಿಬಿಂಬ. ಪ್ರತಿಬಿಂದಬದ ನಿಲುವು ತನ್ನ ಕರಣಂಗಳೆ ಲಿಂಗ ಕಿರಣಂಗಳಾದ ಪ್ರತಿಬಿಂಬ. ಬೇರೆ ಮಾಡಲು ಬರುವುದೆ? ಬಿಂಬ ಪ್ರತಿಬಿಂಬವದು ನಾನೀನೆಂಬ ಸಂದಳಿದ ತೆರಹಿಲ್ಲದ ಘನವು ಬಿಂಬವು ನಾನೆನಲಿಲ್ಲ ಪ್ರತಿಬಿಂಬವು ನೀನೆನಲಿಲ್ಲ ಇವು ಎರಡೊಂದಾದ ಘನವು ಶಬ್ದಕ್ಕೆ ತೆರಹಿಲ್ಲವೆಂದು ಹೇಳಿಹರು.

ಬಿಂಬಕ್ಕೂ ಆಕಾರವಿಲ್ಲ, ಪ್ರತಿಬಿಂಬಕ್ಕೂ ಆಕಾರವಿಲ್ಲ, ಬಿಂಬವು ದರ್ಶನವಾಗದು ಪ್ರತಿಬಿಂಬವು ದರ್ಶನವಾಗಿದ್ದರಿಂದ ಎರಡಲ್ಲದ ಘನವು ಇದು ಕಾರಣ ಅಕಥನೀಯವು ಆಗಿರುವಲ್ಲಿ ಅಕ್ಕಮಹಾದೇವಿಯ ಘಟ್ಟದುಪ್ಪ, ತಿಳಿದುಪ್ಪಕ್ಕೆ ಭೇದವೆ ಅಯ್ಯ ದೀಪಕ್ಕೆ ದೀಪ್ತಿಗೆ ಭೇದವೆ ಅಯ್ಯ. ಲಿಂಗಕ್ಕೆ ಆತ್ಮಕ್ಕೆ ಭೇದವೆ ಅಯ್ಯ ಎನ್ನಂಗವನು ಶ್ರೀಗುರು ಮಂತ್ರ ಮಾಡಿ ತೋರಿದನಾಗಿ ಸಾವಯವ ನಿರವಯಕ್ಕೆ ಭೇದವಿಲ್ಲವಯ್ಯ ಚೆನ್ನಮಲ್ಲಿಕಾರ್ಜುನ ಎಂದು ಬಿತ್ತರಿಸಿಹಳು. ಎಲ್ಲಿಯವರೆಗೆ ಅಂಗನನ್ನಾಗಲಿ, ಲಿಂಗವನ್ನಾಗಲಿ ಅರಿಯುವದಿಲ್ಲ ಅಲ್ಲಿ ಅಂಗ, ಲಿಂಗ, ಅನ್ನುವದುಂಟು ಬಿಂಬ ಪ್ರತಿಬಿಂಬ ಅನ್ನುವುದುಂಟು. ಆವಾಗ ಅರಿಯುವನು ಒಂದೆಂಬುದಿಲ್ಲ, ಎರಡೆಂಬುದಿಲ್ಲ, ಮೂರೆಂಬುದಿಲ್ಲ ಇಲ್ಲ.

ಇಲ್ಲವೆನ್ನುವ ತಾನಿಲ್ಲವಾಗಿ ಅಕಲ್ಪಿತ ಘನವೆ ಪ್ರಜ್ವಲಿಸುವಲ್ಲಿ ಇದ್ದದದುದೆ ಘಟ್ಟಿ

ತುಪ್ಪವಾಗಿ ಕಂಡರೂ ಅದುವೆ ತಿಳಿದುಪ್ಪವಾಗಿ ಕಂಡರು ಅದುವೆ ಇದ್ದುದು,. ಅಂದು, ಇಂದು, ಎಂದೆಂದೂ ಇದ್ದದದುವೆ ಅವರ್ಣೀಯವು, ಅಪ್ರಮಾಣಗಮ್ಯವಿರುವಲ್ಲಿ ಅಂಗನೆಂದರೂ ಅದುವೆ ಲಿಂಗನೆಂದರೂ ಅದುವೆ ಬಿಂಬನೆಂದರೂ, ಪ್ರತಿಬಿಂಬನೆಂದರೂ ಅದುವೆ, ಗುರುವೆಂದರೂ ಅದುವೆ, ಲಿಂಗವೆಂದರೂ ಅದುವೆ, ಜಂಗಮವೆಂದರೂ ಅದುವೆ ನಿರಂತರವಾಗಿದ್ದುದು ಆವುದು ಅದುವೆ ಅವರ್ಣೀಯವಾಗುವಲ್ಲಿ ಅದಕ್ಕೆ ಆಕಾರಿವಲ್ಲ ಅದು ದರ್ಶನವಾಗದು. ನಿರ್ಣಯವಾಗದು, ಮೂರುತಿಯಾಗದು, ಸಗುಣವಾಗದು, ನಿರ್ಗುಣವು ಆಗದು ಸ್ಥೂಲವಾಗದು, ಸೂಕ್ಷ್ಮವಾಗಿದು, ಏನೊಂದಾಗದ ಘನ ಉಪಮಿಸುವದದೆಂತು?

ತನ್ನೊಳಗಿರ್ದುದ ಭಿನ್ನದಲರಸುವದೇನಯ್ಯ ಒಂದು, ಎರಡು, ಮೂರರ ಘನವರಿತವರು. ಸಗುಣ, ನಿರ್ಗುಣ, ಸ್ಥೂಲ ಸೂಕ್ಷ್ಮವೆನಲಿಲ್ಲ, ನುಡಿಗೆಡೆಗೊಡದ ಘನದಲ್ಲಿ ನುಡಿದುದೆಲ್ಲವು ಭ್ರಾಮಕವು. ಅಲ್ಲಿ ಅಹುದಾವುದು ಅಲ್ಲಾವುದು ಎಂಬುದು ನೀವೆ ನೋಡಿಕೊಳ್ಳಿ ಎಂದು ಷಟ್‌ಸ್ಥಲ ಚಕ್ರವರ್ತಿ ಚೆನ್ನಬಸವದೇವರು .

ಇದು ದರ್ಪಣದೊಳಗಣ ಪ್ರತಿಬಿಂದದಂತೆಂಬುದು ತಾನೆ ತನ್ನೊಳಗಿರ್ದುದ ತಾನೆ ಭಿನ್ನದಲರಸುವದೇನಯ್ಯ ಎಂದು ಎಚ್ಚರಿಸುವಲ್ಲಿ ಅಂಗ, ಲಿಂಗ, ಬಿಂಬ, ಪ್ರತಿಬಿಂಬವೆಂದು ಎರಡಾಗಿ ಹೇಳಿಸಿಕೊಂಡರೂ ತನ್ನೊಳಗಿರ್ದುದ ಅಂಗ ತನ್ನೊಳಗಿರ್ದ ಲಿಂಗ ಅರಿವುಡೆ ತಾನೆ ಗುರು, ಲಿಂಗ, ಜಂಗಮ, ಮುರಾಗಿ ಕರೆಯಿಸಿಕೊಂಡರು ಇವು ತನ್ನೊಳಗಿರ್ದ ಘನ. ತಾನು ಇವುಗಳಿಗೆ ಬೇರಾಗಿ ಹುಡುಕಬಹುದೆ? ಎಂದು ಹೇಳಿದುದು ತುಂಬಿದುದು ತುಳುಕದು.

ವಚನ - 23

ಜಗಭರಿತನೆನ್ನದೇವ, ಜಗವ ಹೊದ್ದನೆನ್ನದೇವ,
ಭಕ್ತನ ಕರಕಮಲಕ್ಕೆ ಬಂದನೆನ್ನದೇವ
ಭಕ್ತ ನವಗ್ರಹಿಸಿಕೊಂಡ ನೆನ್ನದೇವ.
ಇದು ಕಾರಣ ಕೂಡಲ ಚೆನ್ನಸಂಗಮದೇವರು ಅಕ್ಷರಾಕ್ಷರವ ಮೀರಿದ ಘನ.

ತಾತ್ಪರ್ಯ: ಷಟಸ್ಥಲ ಚಕ್ರವರ್ತಿ ಚನ್ನಬಸವರಾಜ ದೇವರು ಎನ್ನದೇವ ಜಗಭರಿತ ಎನ್ನದೇವ ಜಗದ ಹೊದ್ದವನ ಎನ್ನದೇವ ಭಕ್ತರ ಕರಸ್ಥಲಕೆ ಬಂದವನು. ಭಕ್ತನನ್ನೇ ಸ್ವೀಕರಿಸಿದವ ಎನ್ನದೇವ ಇದು ಕಾರಣ ಕೂಡಲ ಚೆನ್ನ ಸಂಗಮ ದೇವರು. ಎನ್ನದೇವ ಕೂಡಲ ಚೆನ್ನಸಂಗಮ ದೇವನೆಂದರೆ ಅಕ್ಷರಾಕ್ಷರವ ಮೀರಿದ ಘನವೆಂದು ಹೇಳಿದಾಗ ಇಲ್ಲಿ ಜಗಭರಿತ ನೆನ್ನದೇವ ಜಗವ ಹೊದ್ದವನ ಎನ್ನದೇವನೆಂದು ಹೇಳಿದಾಗ ದೇವನಪರಿ ಆವುದು? ಭಕ್ತನ ಕರಸ್ಥಲಕ್ಕೆ ಬಂದವ ಭಕ್ತ ನವಗ್ರಹಿಸಿಕೊಂಡವ ಅಕ್ಷರಾಕ್ಷರ ಮೀರಿದ ಘನನೆಂದು ದೇವನ ಅರಿತು ಹೇಳಿದನೋ? ಅರಿಯದೆ ಹೇಳಿದನೋ? ದೇವ ತಾನಾಗಿ ಹೇಳಿದೆನೋ? ಭಕ್ತನಾಗಿ ಹೇಳಿದನೋ ಅಥವಾ ಅಭಿನವಾಗಿ ಕಂಡು ಹೇಳಿದನೋ ಎಂದು ನೋಡುವುದು.

ಬಹು ಭಕ್ತರು ಸೃಷ್ಟಿಕರ್ತನಿಗೆ ದೇವ ಎಂದುಕೊಂಡಿಹರು. ರಕ್ಷಿಸುವವನಿಗೂ ದೇವನೆಂದು ಲಯ ಕರ್ತನಿಗೂ ದೇವನೆಂದಿಹರು ಇಲ್ಲಿ ಬ್ರಹ್ಮನ ಸೃಷ್ಠಿಗೂ ವಿಷ್ಣುವಿನ ರಕ್ಷಣೆಗೂ ರುದ್ರನಲಯದ ವಿಷಯದಲ್ಲಿ ಶರಣರು ಅಷ್ಟು ಪ್ರಧಾನ ಮಾಡಿರುವುದಿಲ್ಲ,

ದೇವನಿಗೆ ಜಗಭರಿತದೇವನೆ ದೇವನು ಅಖಂಡಿತ ಘನ ಪೂರ್ಣವ ಪ್ರದೇವನೆ ದೇವನಲ್ಲದೆ ತೋರಿ ಇಲ್ಲವಾಗುವ ಮಾಯಿಕಕ್ಕೆ ದೇವ ನೆನಲಿಲ್ಲ ದೇವನಿಗೆ ಪ್ರಿಯರಾಗುವುದು. ಜ್ಞಾನಿಯ ಪುರುಷಾಥರವು ಅರುವಿನ ಜನ್ಮದ ಮುಖ್ಯ ಪುರುಷಾರ್ಥವು ಇದರಿಂದ ಅತ್ಯಂತ ದುಃಖ ನಿವೃತ್ತಿ ಪರಮಾನಂದ ಪ್ರಾಪ್ತರೂಪ, ಪ್ರಾಪ್ತಿ ಲಭಿಸುವದು. ಅತ್ಯಂತ ದುಃಖ ನಿವೃತ್ತಿ ಪರಮಾನಂದ ಪ್ರಾಪ್ತರೂಪ. ಪ್ರಾಪ್ತಿ ಲಭಿಸುವದು.

ಜಗಭರಿತ ನೆನ್ನದೇವನೆಂದು ಅನನ್ಯ ಭಕ್ತಿಯಿಂದುಕ್ತರಾದರು. ಪರಿಪೂರ್ಣದೇವನೆಂದು ಅತಿ ಪ್ರಿಯರಾದರು. ಅವನನ್ನು ಕಾಣಲು ತೀವ್ರ ಇಚ್ಛೆಯುಳ್ಳವರಾಗಿ ಗುರು ಕಾರುಣ್ಯಮಯರಾಗಿ ದೇವನ ಅರಿಯ ಹೋಗಿ ಜಗವ ಹೊದ್ದ ನನ್ನದೇವನೆಂದು ಹೇಳಿದರು. ಜಗದ ಹೊದ್ದವನೆಂಬುದು ಉಪಾಧಿ ಹೊದ್ದವನ ನಿರುಪಾದಿ, ನಿರವಯ, ನಿರಾವರಣ, ಅವನೆಂತು ಆವರಣವ ಹೊಡೆಯುವನು ಪಿಂಡಾಂಡವ ಹೊದ್ದದವ ಬ್ರಹ್ಮಾಂಡ ಹೊದ್ದವನ ಗುಣಂಗಳ ಹೊದ್ದವ ಜಗದ ಕಾರ್ಯವ ಹೊದ್ದವನ ಕಾರಣಂಗಳು ಹೊದ್ದವ ಸತ್ಯರು, ಮುಕ್ತರು ಎಂಬ ಮಹಾಮಹಿಮರು ಹೊದ್ದಿರುವ ಚಿದ್ ಬ್ರಹ್ಮಾಂಡವ ಕೂಡ ಹೊದ್ದವನೆ ದೇವ ದೇವ ದೇವ ಲಿಂಗ ದೇವ.

ಭಕ್ತ ಕರಸ್ಥಲಕ್ಕೆ ಬಂದ ನೆನ್ನದೇವ. ದೇವ? ವೇದ ವೇದಾಂತಗಳಿಗೆ ಅಸಾಧ್ಯವಾದ ಅನುಪಮದೇವ, ಅಚಲಿತ ದೇವ, ಅಖಂಡಿತ ದೇವ, ಸದ್ಗುರು ಕೃಪೆಯಿಂದ, ಭಕ್ತನ ಕರಸ್ಥಲಕ್ಕೆ ಬಂದಿಹುದರಿಂದ ಚೆನ್ನ ಬಸವಣ್ಣನವರು ಎನ್ನದೇವನೆಂದು ಹೇಳಿಹರು.

ಭಕ್ತನವಗ್ರಹಿಸಿಕೊಂಡ ನೆನ್ನದೇವ. ಸಮ್ಯಜ್ಞಾನಿ ಚನ್ನಬಸವ ರಾಜದೇವರು ತಮ್ಮ ಕರಸ್ಥಲದಲ್ಲಿ ಬೆಳಗುವ ಅದ್ವೈತ ಶಿಶುವ ನೋಡಿ ಎನ್ನ ತನ್ನಂತೆ ಮಾಡಿತ್ತೆಂದು ಎನ್ನದೇವನ ನೋಡಿ ನೋಟವ ಮರೆದು. ಇದಾವ ನೋಟವ ಮರೆದು? ಭಕ್ತನಾದವನು ತನ್ನ ಪೂರ್ವಾಶ್ರಯದ ನೋಟವ ಮರೆತು ಕರಸ್ಥಲದಲ್ಲಿ ಬೆಳಗುವ ನಿರಂಜನ ದೇವನ ಕೂಡಿ ಕೂಟವ ಮರೆದು ಅದಾವ ಕೂಟವ ಮರೆದು? ಕೂಡುವ ಅಗಲುವ ಮಾಯಿ ಕೂಟ ಮರೆದು ನಿರ್ಮಾಯದಲ್ಲಿ ಕೂಡಿದುದೆ ಭಕ್ತ ನವಗ್ರಹಿಸಿಕೊಂಡುದು ಎನ್ನದೇವ ಭಕ್ತನನ್ನು ತಾನೆ ಅವಗ್ರಹಿಸಿಕೊಂಡು ನೋಡಾ ಸಮರಸ ಮಾಡಿಕೊಂಡ ನೋಡಾ. ಸಮುದ್ರನಾಥ ನದಿಗಳ ತನ್ನೊಳ್ ಲೀನ ಮಾಡಿಕೊಂಡಂತೆ ಎನ್ನದೇವ ಭಕ್ತನನ್ನು ತಾನೆ ಸ್ವೀಕರಿಸಿ ಒಂದಾದುದು ಶಬ್ದಕ್ಕೆ ತೆರೆಹಿಲ್ಲ ನೋಡಾ ಅಲ್ಲಿ ಭಕ್ತರಾರು? ದೇವನಾರು? ಸೀಮೆ ನಿಸ್ಸೀಮೆಯಾಯಿತ್ತು. ನಿಸ್ಸೀಮ ನಿಲುವು ಉಪವಾಸವದದೆಂತು?ಕೂಡಲ ಚೆನ್ನಸಂಗಯ್ಯ ಅಕ್ಷರಾಕ್ಷರ ಮೀರಿದ ಘನವೆಂದು ಹೇಳಿದ.

ಇದು ಅನುಪಮ ನಿಲವು. ಜಗಭರಿತ ನಿಲವು ಜಗದ ಹೊದ್ದವನ ನಿಲವು. ಭಕ್ತರ ಕರಕಮಲದಲ್ಲಿ ಬೆಳಗುಳ್ಳ ದೇವನ ನಿಲವು ಇದು ಭಾವಕ್ಕಿಂಬುಕೊಡದ ನಿಲವು. ಶಬ್ದ ಮೀಸಲವಾಗಿಹ ನಿಲುವು. ನುಡಿಗೆಡೆಗೊಡದ ನಿಲವು. ತನ್ನಯ ನಿಲವು. ಅಕ್ಷರಾಕ್ಷರ ಮೀರಿದ ಘನವದು. ಅಪರಮಿತವು. ನಿರವಧಿಯು, ತುದಿ ಮೊದಲಿಲ್ಲದ ಘನವು, ಅಗಣಿತವು, ಅಚಿಂತ್ಯವು, ಕಲ್ಪಿತವಲ್ಲ, ಅ ದ್ವಿತೀಯವಾದುದು ವಿಭಾಗಿಸಿ ಹೇಗೆ ಹೇಳುವುದು. ಖಂಡಾ ಖಂಡ ಸಂಯೋಗವಿಲ್ಲದ ಅಖಂಡಿತನ ನಿಲವು.

ಅಲ್ಲಿ ಖಂಡವೆಂದು ಹೇಗೆ ವಿಭಾಗಿಸುವುದು ಅಖಮಂವೆಂದು ಹೇಗೆ ಹೇಳುವುದು.

ಅಚಿಂತವ ಚಿಂತನ ಮಾಡುವದದೆಂತು? ಆ ಪ್ರಮಾಣಗವ್ಯವಾಗಿರುವಲ್ಲಿ ಸುರಲೆಡೆಯಿಲ್ಲದಿರುವಲ್ಲಿ ಶಬ್ದಮುಗ್ಧವಾದುದು ಇದು ಅನುಪಮ ಲಿಂಗವರಿತ ಪ್ರಥಮಾಚಾರಿ ಲಿಂಗಾಚಾರ್ಯನ ಹಿರಿಮೆಯ ಹೊಗಳುತ್ತಿಹನು.

ವಚನ - 24

> **ಬಸವಣ್ಣ ಓಂಕಾರದಿಂದತ್ತತ್ತ ನೀನೆ ನಾದಬಿಂದು ಕಳೆಗಳಿಂದತ್ತ ನೀನೆ**
> **ಪ್ರಥಮಾಚಾರ್ಯ ನೀನೆ, ಲಿಂಗಾಚಾರ್ಯ ನೀನೆ, ನೀನೆ ಗತಿಮತಿಯಾಗಿ**
> **ಎನ್ನನುಳುಹಿದ ಕಾರಣ ಕೂಡಲ ಚೆನ್ನ ಸಂಗಮದೇವಾ ಆವ ವರ್ಣವಿಲ್ಲದಂದು**
> **ಓಂ ನಮಃ ಶಿವಾಯ ಎನುತಿರ್ದೆನು.**

ತಾತ್ಪರ್ಯ: ಚೆನ್ನಬಸವಣ್ಣನವರು ತನ್ನ ಗುರು ಘನನಾದ ಬಸವಣ್ಣನವರನ್ನು ಅವರಿದ್ದ ನಿಜದಿರುವುಳ್ಳ ಸ್ವಮಹಿಮೆಯ ಸ್ತುತಿಸುತ್ತಿಹನು. ಗುರುಲಿಂಗವು ನೀನು ದೇವ, ದೇವ, ದೇವ ನೀನು ಮಹಾ ಪ್ರಸಾದ ನೀನು ತೆರಹಿಲ್ಲದ ಪ್ರಸಾದ ನೀನು ವರ್ಣಾತೀತ ನೀನು, ಬಸವಣ್ಣ ಬಸವದೇವ, ಓಂಕಾರದಿಂದತ್ತತ್ತ ನಾದ ಬಿಂದು ಕಳೆಗಳಿಂದತ್ತತ್ತ ನೀನಾದುದರಿಂದ ಬೆಳಗುಳ್ಳ ಜ್ಯೋತಿ ಪ್ರಭು ಬಸವ. ಪ್ರಥಮಾಚಾರ್ಯ ಲಿಂಗಾಚಾರ್ಯ ನೀನಾದುದರಿಂದ ಗತಿಮತಿ ನೀನೆಯಾಗಿ ಎನ್ನ ಮಳುಹಿದ ಕಾರಣ ಕೂಡಲ ಚೆನ್ನಸಂಗಮದೇವಾ ಆವ ವರ್ಣವಿಲ್ಲದಂದು ಓಂ ನಮಃ ಶಿವಾಯ ಎನುತಿರ್ದೆನು.

ಚಿಕ್ಕ ದಣ್ಣಾಯಕನಾದ ಚೆನ್ನಬಸವಣ್ಣನು ತನ್ನ ಗುರುಲಿಂಗವೆಂಬ ಬಸವದೇವ ಓಂಕಾರ ಸ್ವರೂಪನಲ್ಲ, ಓಂಕಾರದಿಂದತ್ತತ್ತ ಎಂದು ಹೇಳಿದಾಗ ಬಸವದೇವನ ದರ್ಶನ ತತ್ವ ದೃಷ್ಟಿಯಿಂದ ಸಾಧ್ಯವು. ನಾಹಂ ಎಂಬ ವಿವೇಚನೆ ದೃಷ್ಟಿಗೂ ಅಗೋಚರ ಕೋಹಂ ದೃಷ್ಟಿಗೆ ಹೇಗೆ ಸಾಧ್ಯ. ಸೋಹಂ ಎಂಬ ಅಂತರಂಗಮದವುಳ್ಳ ದೃಷ್ಟಿಗೂ ಅಗೋಚರ ಚಿದಹಂ ಎಂಬ ಅರುವಿನ ಅಹಂಕಾರುಳ್ಳ ದೃಷ್ಟಿಗೂ ಅಗೋಚರ. ಈ ಮಹಾಂತ ಸುರಾಸುರ ದೃಷ್ಟಿಗೂ ಅಗೋಚರ.

ದೇವಗಣ, ರುದ್ರಗಣ, ಪ್ರಮಥ ಗಣ ಮೊದಲಾದವರ ದೃಷ್ಟಿಗೂ ಅಗೋಚರನಾದುದರಿಂದ ಖಂಡಿತವಲ್ಲದ ಅಖಂಡ ದೃಷ್ಟಿಗೆ ಅಗೋಚರ ತಾನಾರೆಂದರಿತವರ ಇರವು ಅರಿವು ಆದುದರಿಂದ ನಾದ ಬಿಂದು ಕಲೆಗಳಿಂದತ್ತತ್ತ ಆಕಾರ ನಾದದಿಂದತ್ತತ್ತ ಉಕಾರ ನಾದದಿಂದತ್ತತ್ತ ಮ ಕಾರ ದಿಂದತ್ತತ್ತ ಪ್ರಣವ ನಾದದಿದಂ ಅತ್ತತ್ತ ವ್ಯಷ್ಟಿನಾದದಿಂದತ್ತತ್ತ ಸಮಷ್ಟಿನಾದದಿಂದತ್ತತ್ತ ಪರಮಾರ್ಥ ನಾದದಿಂದತ್ತತ್ತ. ವ್ಯಷ್ಟಿ ಬಿಂದುವಾಗದಾತ ಸಮಷ್ಟಿ ಬಿಂದುವಾಗದಾತ ನಾಹಂ ಕೋಹ, ಸೋಹ, ಚಿರಹಂ ಬಿಂದುವಾಗದಾತ, ಕಲ್ಪಿತ ಕಲೆಯು ಆಗದಾತ, ಧ್ವನಿಯ ಮರೆಯಲ್ಲಿರ್ದ ಮಹಾಮಹಿಮನಾದುದರಿಂದ ಏನೊಂದಾಗದ ಘನನಾದ್ದರಿಂದ ಪ್ರಥಮಾಚಾರ್ಯ ನೀನೆ, ಲಿಂಗಾಚಾರ್ಯ ನೀನೆ.

ಓ ಬಸವಪ್ರಭು, ಪ್ರಥಮಾಚಾರ್ಯ ನೀನು, ನಿಶಬ್ದವೇದವ ಕರುಣಿಸುವ ಕೃಪಾಚಾರ್ಯ ನೀನು, ನುಡಿಗೆಡೆಗೊಡದ ಇರುವ ಕರುಣಿಸಿದ ಪ್ರಥಮಾಚಾರ್ಯ ನೀನು. ಭೋದ ಸೃಷ್ಟಿಗೆ ಮೀರಿದ ಸಂಜ್ಞೆಯ ಕರುಣಿಸುವಲ್ಲಿ ಪ್ರಥಮಾಚಾರ್ಯ ನೀನು. ನಾ ನೀನೆನ್ನದಿಹ ನಿಸ್ಸೀಮತ್ವದ ನಿಜಗೋಷ್ಠಿ ಒಂದನುವಮಾಡಿ ತಿಳಿಸಿದ ಪ್ರಥಮಾಚಾರ್ಯ ನೀನು.

ತೆರಹಿಲ್ಲದನುವ ತಿಳಿಸಿದ ಪ್ರಥಮಾಚಾರ್ಯ ನೀನು.

ಓ ಬಸವ ಪ್ರಭು ಪ್ರಥಮಾಚಾರ್ಯ ನೀನು ನಿಶಬ್ದವೇದವ ಕರುಣಿಸುವ ಕೃಪಾಚಾರ್ಯ ನೀನು. ನುಡಿಗೆಡೆಗೊಡದ ಇರುವ ಕರುಣಿಸಿದ ಪ್ರಥಮಾಚಾರ್ಯ ನೀನು. ಬೋಧ ಸೃಷ್ಠಿಗ ಮೀರಿದ ಸಂಜ್ಞೆಯ ಕರುಣಿಸುವಲ್ಲಿ ಪ್ರಥಮಾಚಾರ್ಯ ನೀನು.

ನಾ ನೀನೆನ್ನದಿಹ ನಿಸ್ಸೀಮತ್ವದ ನಿಜಗೋಷ್ಠಿಯ ಒಂದನುವ ಮಾಡಿ ತಿಳಿಸಿದ ಪ್ರಥಮಾಚಾರ್ಯ ನೀನು ತೆರಹಿಲ್ಲದನುವ ತಿಳಿಸಿದ ಪ್ರಥಮಾಚಾರ್ಯ ನೀನು.

ಲಿಂಗಾಚಾರ್ಯ ನೀನಾದುದರಿಂದ ಲಿಂಗವು ಘನ ಗಂಭೀರ ಮಹಾಘನನೆಂದು ತಾನು ಘನಗಂಭೀರ ಮಹಾಘನದೊಳಗೆ ಘನಕ್ಕೆ ಘನವಾಗಿ ಶಬ್ದಮುಗ್ದನಾದುದರಿಂದ ಇಂತಪ್ಪ ಮಹದಿರುವ ಕರುಣಿಸಿಇದುದರಿಂದ ಲಿಂಗಾಚಾರ್ಯನೆಂದು ಹೇಳಿಹರು.

ಲಿಂಗವದು ನಿಜದ ನಿಲುವುಳ್ಳ ನಿರ್ವಾಣದ ನಿಧಿ ಅನಾಮಯವಾಗಿಹ ಏಕರಸ ಚಿದ್ರಸವೆಂದರುಹಿದ ಲಿಂಗಾಚಾರ್ಯ ನೀನು. ಲಿಂಗವದು ಏನೊಂದುಸರಲು ಎಡೆಗೊಡದ ನಿರಾಳ ನಿಷ್ಪತ್ತಿ ನಿಜಧಾಮವು ಇದು ಅರುವಿನ ವಿಶ್ರಾಮವೆಂದರುಹಿದ ಲಿಂಗಾಚಾರ್ಯ ನೀನು. ಲಿಂಗವದು ಅವರ್ಣೀಯವು ನೆನಹಗಿಂಗೆ ನಿಲುಕದ ಘನ ನಿರ್ಣಯಕ್ಕೆಡೆಗೊಡದ ಘನವೆಂದು ಮೌನ ಮುದ್ರಿತಬಾಗಿ ಭಕ್ತರ ಕರಕಮಲಕ್ಕೆ ಕೃಪೆಗೈದ ಲಿಂಗಾಚಾರ್ಯ ನೀನು ಪ್ರಥಮಾಚಾರ್ಯ ನೀನು.

ನೀನೆ ಗತಿ ಮತಿಯಾಗಿ ಎನ್ನ ಸುಳಿಹದ ಕಾರಣ ಓ ಬಸವಯ್ಯ ದೇವ ದೇವ ನೀನು ಅಕ್ಷರಾಕ್ಷರ ಮೀರಿದ ಘನನಾದುದರಿಂದ ನೀನೆ ಗತಿಯಾದಿರಿ ಮತಿಯಾದಿರಿ ಸಕಲವು ನೀನೆ ಆಗಿ ಎನ್ನ ನುಳುಹಿದಿರಿ ನಿಮ್ಮ ಕಾರುಣ್ಯದ ಅರಿವು ಅರಿದರುಹಿಸಿಕೊಂಬುದಕ್ಕೆ ಮೀರಿದ ಘನ ಅರಿಯಬಾರದ ಘನ ತೋರಿ ಎನ್ನ ನುಳುಹಿದ ಕಾರಣ ನೀವೆ ಗತಿಮತಿಯಾಗಿರಾಗಿ ಕೂಡಲ ಸಂಗಮದೇವಾ. ಆವ ವರ್ಣವಿಲದಲದುದು ಓಂ ನಮಃ ಶಿವಾಯೆನ್ನುತಿರ್ದೆನು ಆವ ವರ್ಣವಿಲ್ಲದುದು ಸತ್ ಚಿತ್ ಅದು ನುಡಿಗೆಡೆಗೊಡದ ಘನವು ಆವ ವರ್ಣದ್ದಾಗಬೇಕು.

ಮತಿಗತಿಗೆ ನಿಲುಕದ ಘನಕ್ಕೆ ವರ್ಣವಾವುದು? ನಿಸ್ಸೀಮ ನಿಲುವುಳ್ಳ ತೆರಹಿಲ್ಲದ ಘನವು ಅಂಗ ಲಿಂಗ ಎಂಬುದಕ್ಕೂ ಅವಕಾಶಕೊಡದ ಘನದಲ್ಲಿ ಅಂಗ ಲಿಂಗಬೇರೆಂದು ಒಂದೆಂದು ಹೇಗೆ ಹೇಳುವುದು. ಇದು ಕಾರಣ ಆವ ವರ್ಣವಿಲ್ಲದುದು ಓಂ ನಮಃ ಶಿವಾಯ ಎನುತಿರ್ದೆನು ಎಂದು ಹೇಳಿಹರು.

ಓಂ ಎಂಬಯದಯ ಅವರ್ಣೀಯ ನಿಲವು ಭೇದಿಸುವರೆ ಅಗಮ್ಯವು ನಮಃ ಶಿವಾಯ ಅಂಗವೆ ಲಿಂಗ ಲಿಂಗವೆ ಅಂಗವೆದರಿತ ನಿರ್ವಾಣ ನಿಲವು ಅಚಿಂತ್ಯ ನಿಲವು ಸಾವಯವ ನಿರವಯನೊಂದು ಮಾಡಿದ ನಿಲವು ಜ್ಞಾನ, ಜ್ಞೇಯ, ಒಂದಾದ ನಿಲವು ಇದು ಅಪ್ರಮಾಣವಾದುದರಿಂದ ಆವ ವರ್ಣವಿಲ್ಲದುದು ಓಂ ನಮಃ ಶಿವಾಯ ಎನುತಿರ್ದೆನು ಎಂದು ಚೆನ್ನಬಸವರಾಜ ದೇವರು ಗುರುಲಿಂಗದ ಹಿರಿಮೆಯ ಕೊಂಡಾಡಿಹನು. ಇದಲ್ಲದೆ ಲಿಂಗವಾಗಲಿ, ಲಿಂಗದಿರುವಾಗಲಿ, ಜಂಗಮವಾಗಲಿ, ಜಂಗಮದಿರುವಾಗಲಿ, ಪ್ರಸಾದವಾಗಲಿ, ಪ್ರಸಾದದಿರುವಾಗಲಿ ಬಸವಣ್ಣನೆ ಬಲ್ಲನೆಂದು ಹೇಳಿಹರು.

ವಚನ - 25

ಜಂಗಮ ಸ್ಥಳವೆಂಬೆನೆ ಜಂಗಮಕ್ಕೆ ಜನನವಿಲ್ಲ.
ಪ್ರಸಾದ ಸ್ಥಲವೆಂಬೆನೆ? ಪ್ರಸಾದಕ್ಕೆ ಪರಿಣಾಮವಿಲ್ಲ.
ಈ ತ್ರಿವಿಧವೂ ಅಲ್ಲವೆಂಬೆನೆ ಕೂಡಲ ಚೆನ್ನ ಸಂಗಬಸವಣ್ಣ ಬಲ್ಲ.

ತಾತ್ಪರ್ಯ: ಲಿಂಗ ಸ್ಥಲವೆಂಬೆನೆ? ಲಿಂಗಕ್ಕೆ ನೆಲೆಯಿಲ್ಲ : ಭಾವಿಕರು ಲಿಂಗ ಸ್ಥಲವದು ಕಾಶಿ ಕೇದಾರ ಉಳುವಿ ಕಂಚಿ ಕಾಳಾಹನಿ ಮೊದಲಾದ ಬಾರಾ ಜ್ಯೋತಿರ್ಲಿಂಗಗಳು ಇರುವ ಸ್ಥಲವೆ ಲಿಂಗ ಸ್ಥಲವೆನ್ನುವರು. ಇನ್ನೂ ಕೆಲಬರು ದೊಡ್ಡ ದೊಡ್ಡ ತೀರ್ಥಂಗಳಲ್ಲಿ ಕ್ಷೇತ್ರಂಗಳಲ್ಲಿರುವ ಲಿಂಗ ಸ್ಥಲವದು ಎನ್ನುವರು. ಇನ್ನು ಕೆಲಬರು ಶರೀರದಲ್ಲಿರುವ ಆಧಾರ ಸ್ವಾಧಿಷ್ಠ ಮಣಿಪುರ ಅನಾಹತ ಅಗ್ನೇಯ, ಭ್ರೂಮಧ್ಯ ಮೊದಲಾದ ಷಟ್ ಚಕ್ರಗಳಿರುವ ಸ್ಥಾನಕ್ಕೆ ಲಿಂಗಸ್ಥಲವೆನ್ನುವರು. ಕೆಲಬರು ಅದರಲ್ಲಿ ಹೃದಯ ನಾಸಿಕಾಗ್ರ ಭ್ರೂಮಧ್ಯಕ್ಕೆ ಲಿಂಗ ಸ್ಥಲವೆಂದು ಲಿಂಗದೇವನ ಪೂಜಿಸುವ ಸ್ಥಲವೆಂದು ಅಲ್ಲಿಯೆ ತಮ್ಮ ಲಕ್ಷ್ಯವಿಟ್ಟು ಧ್ಯಾನಾಸಕ್ತರಾಗುವರು.

ಲಿಂಗಸ್ಥಲವೆಂಬೆನೆ ಲಿಂಗಕ್ಕೆ ನೆಲೆಯಿಲ್ಲವೆಂದು ಚೆನ್ನ ಬಸವಣ್ಣನವರು ಬಿತ್ತಿರಿಸಿದುದು ನೋಡುವುಡೆ ಬಹು ಜನರಿಗೆ ಲಿಂಗಜ್ಞಾನವಿದ್ದುದು ವಿರಳವೆಂದು ಕಂಡೆಂತಾಗುವದು? ಲಿಂಗವದು ಸ್ಥಾವರ ಜಂಗಮ ಜಗತ್ತಿಗೂ ಆಧಾರವೂ ಆಧಾರ? ಗೃಹ, ಗ್ರಾಮ, ನಗರಗಳಿಗೆ ಭೂಮಿಗೆ ಇವುಗಳು ಹೇಗೆ ಆಧಾವಾಗುವವು? ಲಿಂಗವೆಂಬುದು ಖಂಡಿತವಲ್ಲದ ಅಖಂಡಿತ. ಒಳಗೆ ಹೊರಗೆ ಎನ್ನಲು ಅವಕಾಶ ಕೊಡದ ಘನ ಚೈತನ್ಯ ಘನವಾಗಿರುವಲ್ಲಿ ಅದಕ್ಕಾವ ಆಧಾರವಾಗಬೇಕು? ಕಾರಣ ಲಿಂಗಕ್ಕೆ ನೆಲೆಯಿಲ್ಲವೆಂಬುದು ಹೇಳಿಹರು.

ಜಂಗಮ ಸ್ಥಲವೆಂಬೆನೆ? ಜಂಗಮಕ್ಕೆ ಜನನವಿಲ್ಲ. ಜಂಗಮವದು ಘನ ಚೈತನ್ಯ. ವಾಙ್ಮನಕ್ಕಗೋಚರ ನಿರುಪಾಧಿ ಜಂಗಮ, ನಿರವಯ ಜಂಗಮ, ನಿರಾಲಂಬ ಜಂಗಮ, ನಿಸ್ಸಂಗ ಜಂಗಮ, ನಿಜೈಕ್ಯವಾಗಿಹ ಜಂಗಮ, ಅರಿಯಲಿಲ್ಲದೆ ಅರುವೆ ತಾನಾದ ಜಂಗಮ ಜಗಭರಿತ ಜಂಗಮ, ಜಗವ ಹೊದ್ದವ ಜಂಗಮ, ಚಿದ್ಘನವೆ ಜಂಗಮವಾದುದರಿಂದ ಜಂಗಮಕ್ಕೆ ಜನನವಿಲ್ಲವೆಂದು ಹೇಳಿಹರು.

ದೇಹವು ಜಂಗವಾಗದು ನಿರ್ದೇಹಿಯ ಜಂಗವುವಾದ್ದರಿಂದ ಜನನವಿಲ್ಲ ಆವರಣವುಳ್ಳುದು ಜಂಗಮವಾಗದು ನಿರಾವಣರವು ಜಂಗಮ ಘನವು ನಿರ್ಲೇಪ ನಿರ್ಲಿಖಿತ ಜಂಗಮವಾದುದರಿಂದ ಜನವಿಲ್ಲವೆಂದು ಹೇಳಿಹರು. ಕರ್ಮಿಯು ಜಂಗಮನಾಗನು. ಸತ್ಕರ್ಮಿಯು ಜಂಗಮನಾಗನು. ಸಕಾಮಿಯು ಜಂಗಮನಾಗನು. ನಿಃಕಾಮಿ ನಿಷ್ಕರ್ಮಿ ಜಂಗಮವಾದ್ದರಿಂದ ಜನನವಿಲ್ಲವೆಂದು ಲಿಂಗ ತಾನು ಒಂದಾಗಿರ್ದ ಜಂಗಮಲಿಂಗ ತಾನು ಒಂದಾದವ ಜಂಗಮ ಅದು ಜಂಗಮ ಲಿಂಗವು ಅದುಯ ಘನ ಚೈತನ್ಯ ಜಂಗಮವಾದ್ದರಿಂದ ಜಂಗಮಕ್ಕೆ ಜನವಿಲ್ಲವೆಂದು ಹೇಳಿಹರು.

ಲಿಂಗ ಲಿಂಗ ಎಂದು ಹಲಬುವವನು. ಜಂಗಮನಲ್ಲ ಜಂಗಮ ಜಂಗಮ ಎಂದು ಹಲಬುವವನು ಜಂಗಮನಲ್ಲ, ಪ್ರಸಾದ ಪ್ರಸಾದ ಎಂಬುವನು ಜಂಗಮನಲ್ಲ, ಲಿಂಗವೆನ್ನದವ ಜಂಗಮ, ಜಂಗಮ ಎನ್ನದವ, ಜಂಗಮ ಲಿಂಗ, ಸರ್ವಾಂಗ ಲಿಂಗ ಜಂಗಮವಾದ್ದರಿಂದ

ಜಂಗಮಕ್ಕೆ ಜನನವಿಲ್ಲವೆಂದು ಹೇಳಿಹರು.

ಪ್ರಸಾದಕ್ಕೆ ಪರಿಣಾಮವಿಲ್ಲ. ಪ್ರಸಾದವೆಂಬುದು ಪರಮಜ್ಞಾನ, ಪರಮಾಮೃತ, ವಾಙ್ಮನೋತೀತವಾದುದರಿಂದ ಪರಿಣಾಮವಿಲ್ಲ. ಪರಮಜ್ಞಾನವದು ತರ್ಕದಿಂದುಕ್ತವಾದುದಲ್ಲ. ಗುರೂಪದೇಶವೂ ಅಲ್ಲ. ಯೋಗದಿಂದುಕ್ತವಾದುದು ಅಲ್ಲ. ಅದು ಸಮಾಧಿಯು ಅಲ್ಲ. ಜ್ಞಾನಕಾಂಡದಿಂದುಕ್ತವಾದ ಶ್ರವಣಕಾಂಡ, ಮನನ ಕಾಂಡ, ನಿಧಿ ಧ್ಯಾನ ಕಾಂಡವೂ ಅಲ್ಲ ಅದು ಸಹಜ ಜ್ಞಾನ ಸಹಜಾನಂದ ಸಯಸುಖ ಸವೆಯದ ಸುಖ ಬೇಸರವಾಗದ ಸುಖ ಅಕ್ಷಯ ಸುಖಕ್ಕೆ ತುದಿ ಆವುದು? ಅಂತ್ಯವಾವುದು? ಇದು ಕಾರಣ ಪ್ರಸಾದಕ್ಕೆ ಪರಿಣಾಮವಿಲ್ಲವೆಂದು ಹೇಳಿಹರು.

ಈ ತ್ರಿವಿಧವೂ ಅಲ್ಲವೆಂಬೆನೆ? ಕೂಡಲ ಚೆನ್ನ ಸಂಗಯ್ಯ ಬಸವಣ್ಣನೆ ಬಲ್ಲ. ಲಿಂಗಕ್ಕೆ ನೆಲೆಯಿಲ್ಲದುದು, ಜಂಗಮಕ್ಕೆ ಜನನವಿಲ್ಲದುದು ಪ್ರಸಾದಕ್ಕೆ ಪರಿಣಾಮವಿಲ್ಲದುದು ಕೂಡಲ ಚೆನ್ನ ಸಂಗಾ ಬಸವಣ್ಣ ಬಲ್ಲನೆಂದು ಹೇಳಿಹರು. ಬಸವಣ್ಣ ಗುರುವಿಂಗೆ ಗುರುವಾಗಿ ಗುರು ಪ್ರಸಾದ ಕೊಂಡ ಲಿಂಗಕ್ಕೆ ಲಿಂಗವಾಗಿ ಲಿಂಗ ಪ್ರಸಾದಕೊಂಡ ಜಂಗಮಕ್ಕೆ ಜಂಗಮವಾಗಿ ಜಂಗಮ ಪ್ರಸಾದಕೊಂಡ ಪ್ರಸಾದಕ್ಕೆ ಪ್ರಸಾದವಾಗಿ ಪ್ರಸಾದವ ಕೊಂಡ ಇಂತೀ ಚತುರ್ವಿಧಕ್ಕೆ ಚತುರ್ವಿಧವಾಗಿ ಕೊಳಬಲ್ಲಡೆ ಕೂಡಲ ಚೆನ್ನ ಸಂಗಮದೇವಾ ಲಿಂಗೈಕ್ಯವು. ಲಿಂಗಕ್ಕೆ ಲಿಂಗವ ಲಿಂಗ ಪ್ರಸಾದ ಕೊಂಡುದರಿಂದ ಲಿಂಗಕ್ಕೆ ನೆಲೆಯಿಲ್ಲದುದು ಬಸವಣ್ಣ ಬಲ್ಲ. ಜಂಗಮಕ್ಕೆ ಜಂಗಮವಾಗಿ ಜಂಗಮ ಪ್ರಸಾದಕೊಂಡುದರಿಂದ ಜಂಗಮಕ್ಕೆ ಜನನವಿಲ್ಲವೆಂಬುದು ಬಸವಣ್ಣ ಬಲ್ಲ. ಪ್ರಸಾದಕ್ಕೆ ಪ್ರಸಾದವಾಗಿ ಪ್ರಸಾದಕೊಂಡುದರಿಂದ ಪ್ರಸಾದವ ಪರಿಣಾಮವ ಬಸವಣ್ಣ ಬಲ್ಲನೆಂದು ಹೇಳಿಹರು.

ಬಸವಣ್ಣ ಧ್ವನಿಯ ಮರೆಯಲ್ಲಿರ್ದುದು ಕಂಡ ಗುರು ಲಿಂಗವು ಅಹುದು ಸ್ವಯಂ ಲಿಂಗವು ಅಹುದು. ಸುಚೈತನ್ಯ ಜಂಗಮಕ್ಕೆ ನಿಜ ಚೈತನ್ಯ ಸಾಹಿತ್ಯವಾಗಿದ್ದ ನಿರ್ನಾಮಿ ಜಂಗಮನು ಅಹುದು ನಿರ್ಲಿಖಿತ ಜಂಗಮನು ಅಹುದು ತೆರಹಿಲ್ಲದ ಮಹಾ ಪ್ರಸಾದಿಯಾದುದರಿಂದ ಈ ತ್ರಿವಿಧದ ನಿಜವು ಬಸವಣ್ಣ ಬಲ್ಲನೆಂದು ಹೇಳಿಹರು.

ಬಸವಣ್ಣ ಲಿಂಗಾರ್ಚನೆಯ ಬಲ್ಲಾತ. ಜಂಗಮಾರ್ಚನೆಯ ಬಲ್ಲಾತ ಪ್ರಸಾದದ ಪರಿಣಾಮವು ಬಲ್ಲಾತ. ಬಲ್ಲಾತನಾಗಿಹುದರಿಂದ ಲಿಂಗಾರ್ಚನೆಯಲ್ಲಿ ಫಲವುಂಟು, ಪದವುಂಟು, ಕುಲವುಂಟು, ಛಲವುಂಟು, ಫಲಂನಾಸ್ತಿ, ಪದಂನಾಸಿ, ಭವಂ ನಾಸ್ತಿ ಹೇಳಿ ಪ್ರಸಾದದಲ್ಲಿ ಶುದ್ಧ, ಸಿದ್ಧ, ಪ್ರಸಿದ್ಧವೆಂದು ಹೇಳಿದನಲ್ಲದೆ ಗುರು ಪ್ರಸಾದವರು ಶುದ್ಧ ಲಿಂಗ ಪ್ರಸಾದವದು ಸಿದ್ಧ, ಜಂಗಮ ಪ್ರಸಾದವದು ಪ್ರಸಿದ್ಧ ಪ್ರಸಾದವದು ಬಹು ಭಕ್ತರು ಇಹರು. ಲಿಂಗವರಿತವರು ಸಿಕ್ಕುವುದು ವಿರಳವೆಂದು ಲಿಂಗಾಚೇನೆಯ ಆರಂಭ ಜಂಗಮ ಮನೆಗೆ ಬರಬೇಕೆಂಬ ಗುರಿಯನ್ನಿಟ್ಟುಕೊಂಡು ಲಿಂಗಾರ್ಚನೆಯ ಆರಂಭವಾಗಬೇಕು. ಜಂಗಮ ಮನೆಗೆ ಬಂದರೆ ಲಿಂಗಾರ್ಚನೆ ಮಾಡು ಜಂಗಮಾರ್ಚನೆಯೆ ಲೇಸು ಎಂದು ಹೇಳಿಹರು.

ವಚನ - 26

ಆರಂಭ ಮಾಡಿ ಸಂಸಾರ ಸ್ಥಿತಿಯ ಕಳೆಯದಿದ್ದಡೆ ಆ ಆರಂಭವೆ ಕೇಡು
ವ್ಯವಹಾರ ಮಾಡಿ ಸಂಸಾರ ಸ್ಥಿತಿಯ ಕಳೆಯದಿದ್ದರೆ ಆ ವ್ಯವಹಾರವೇ ಕೇಡು.

ಓಲಗವ ಮಾಡಿ ಸಂಸಾರ ಸ್ಥಿತಿಯ ಕಳೆಯದಿದ್ದಡೆ ಆ ಓಲಗವೆ ಕೇಡು
ಭಕ್ತಿಯ ಮಾಡಿ ಜನನ ಮರಣ ವಿರಂತನಾಗದಿದ್ದರೆ ಆ ಭಕ್ತಿಯೆಕೇಡು
ಕೂಡಲ ಚೆನ್ನಸಂಗಮದೇವಾ.

ತಾತ್ಪರ್ಯ: ಆರಂಭಮಾಡಿ ಸಂಸಾರ ಸ್ಥಿತಿಯ ಕಳೆಯದಿದ್ದಡೆ ಆ ಆರಂಭವೆ ಕೇಡು : ಆರಂಭ ಮಾಡಿ? ಏನನ್ನು ಆರಂಭ ಮಾಡಿ? ಈ ಆರಂಭ ಮಾಡಿವರಾರು? ಕಾಯನಾನೆಂದವನು ಕರ್ಮವ ಆರಂಭ ಮಾಡಿ ಹಸ್ತು ಭಕ್ತನಾದವನು ಈಶಾರ್ಪಣವ ಆರಂಭ ಮಾಡಿಹನು ಜ್ಞಾನಿಯಾದವನು ಸಕಲ ಕರ್ಮಗಳಿಗೆ ತಾನು ಸಾಕ್ಷಿಯೆಂದು ಆರಂಭ ಮಾಡಿಹನು. ಈ ಮೂವ್ವರ ಭಾವ ಬೇರಾಗಿವೆ ಇವರದು ಭರಿತ ಭಾವವಲ್ಲ, ಖಂಡಿತವಲ್ಲದ ಅಖಂಡವ ತಿಳಿಯದ್ದರಿಂದ ಇವರ ಕ್ರಿಯಾರಂಭವೆ ಕೇಡೆ ಆಗಿದೆ.

ಕ್ರಿಯಾಚಾರದ ಬಹುಪಾಲು ಜನರು ಫಲಾಪೇಕ್ಷೆಯ ಗುರಿಯನ್ನಿಟ್ಟುಕೊಂಡು ಕಾರ್ಯಾರಂಭ ಮಾಡುತ್ತಾರೆ. ಫಲಾಡಾಶ್ರಯ ರಹಿತರಾಗಿ ಮಾಡುವ ಕ್ರಿಯಾವಂತರು ಸಿಕ್ಕುವದು ವಿರಳ ಫಲಾಪೇಕ್ಷೆಯುಳ್ಳ ಕ್ರಿಯೆಯಿಂದ ರಾಗದ್ವೇಷ ಲಾಭ, ಹಾನಿ, ಸುಖ-ದುಃಖ, ಇಷ್ಟಾನಿಷ್ಠ ಪುಣ್ಯ ಪಾಪಗಳೆಂಬ ವಿಷಮತ್ವವೆ ಅಧಿಕವಾಗಿ ಸಂಸಾರ ಸ್ಥಿತಿ ಬಲಗೊಳ್ಳುತ್ತದೆ. ಇದರಿಂದ ಅಂತಃಕರಣ ಪರಿಶುದ್ದವಾಗದು. ನಿತ್ಯಾನಿತ್ಯ ವಿವೇಕೋದಯವಾಗದು ತಾನಾರೆಂಬ ಜ್ಞಾನ ಲಭಿಸದು ಭವ ಬಿಡುಗಡೆಯಾಗದು.

ಕ್ರಿಯಾವಂತರ ಕ್ರಿಯೆ ಮಾಡಿ ಮಾಡದಂತಿರುವ ಕ್ರಿಯಾರಂಭವ ಮಾಡುವದು. ಶರೀರವು ಕ್ರಿಯೆ ಇಲ್ಲದೆ ಒಂದು ನಿಮಿಷ ಕೂಡ ಕ್ರಿಯೆ ಮಾಡದೆ ಇರಲಾರದು. ಕ್ರಿಯೆಯಿಂದ ಜನಿಸಿದ ಶರೀರ ಕ್ರಿಯೆ ನಡೆಯುತ್ತಿರುವದು ಅದರ ಸಹಜ ಇರುವಿಕೆ. ನುಡಿದು, ನುಡಿಯದಂತಿದ್ದ ಕ್ರಿಯಾರಂಭ ನಡೆದು ನಡೆಯದಂತಿದ್ದ ಕ್ರಿಯಾರಂಭ ಮುಟ್ಟಿ ಮುಟ್ಟದಂತಿದ್ದ ಕ್ರಿಯಾರಂಭ. ನೋಡಿ ನೋಡದಂತಿದ್ದ ಕ್ರಿಯಾರಂಭ ಮಾಡಬೇಕು. ಇದರಿಂದ ಸಂಸಾರ ಸ್ಥಿತಿ ಕೆಡುವುದು. ಇದು ಜ್ಞಾನಾನುಭವ ಜ್ಞಾನಾರ್ಜನೆ, ಜ್ಞಾನಕ್ರಿಯೆ ಅದಾವ ಜ್ಞಾನಾನುಭವ? ಇದು ತಾನಾರೆಂಬ ತನ್ನಿರುವಿನ ಜ್ಞಾನಾನುಭವ ಸಮತೆಯ ತನ್ನಿರುವು ಆಗಿಹ ಜ್ಞಾನ ಅರಿದರುಹಿಸಿಕೊಂಬುದಕ್ಕೂ ಮೀರಿದ ಘನವೆ ತನ್ನಿರು ಆಗಿಹ ಜ್ಞಾನ ಇಂತಪ್ಪ ಜ್ಞಾನಾನುಭವ ಸ್ವರೂಪಾನುಭವದ ಕ್ರಿಯಾರಂಭ ಮಾಡುವುಡೆ ಸಂಸಾರಸ್ಥಿತಿ ಕೆಟ್ಟು ಸುಖಮಯವಾಗುವುದು.

ಸಂಸಾರ ಸ್ಥಿತಿ ಅದು ವಿಷಮ ಸ್ಥಿತಿ. ದ್ವಂದ್ವದಿಂದುಕ್ತವಾದುದು ಸುಖ ದುಃಖದಿಂದುಕ್ತವು ಶೋಕ ಮೋಹದಿಂದುಕ್ತವು ರಾಗದ್ವೇಷವುಳ್ಳ ನಿಲವು. ಇಲ್ಲಿ ಸ್ವಲ್ಪ ಲಾಭ, ಅಧಿಕ ಹಾನಿಯುಳ್ಳ ಸ್ಥಿತಿ ಇಲ್ಲಿನೆಲೆಗೊಂಡಿದೆ. ಇದಲ್ಲದೆ ಕರ್ತೃತ್ವ, ಭೋಕ್ತೃತ್ವವ ಮುಖ್ಯವಾದುದರಿಂದ ಅಹಂಕಾರವು ಬಲಗೊಂಡಿದೆ. ಇದು ಕಾರಣ ನಿರಹಂ ಭಾವಿಯ ಸಂಸಾರವಾಗಬೇಕು. ಅಕರ್ತಾ ಅಭೋಕ್ತೃತ್ವ ಸಿದ್ದಿಸಿಕೊಳ್ಳಬೇಕು. ಅಜ್ಞಾನಿಯ ಸಂಸಾರವಾಗಬಾರದು. ಸುಜ್ಞಾನಿಯ ಸಂಸಾರವಾಗಬೇಕು. ಬುದ್ದನ ಸಂಸಾರ ದುಃಖಮಯ ಸಂಸಾರ ಬುದ್ದನ ಸಂಸಾರ ಜೀವನ್ಮುಕ್ತ ಸಂಸಾರ ಸಂಸಾರ ಸ್ಥಿತಿ ಕೆಡಿಸುವ ಸಂಸಾರದ ಕ್ರಿಯಾರಂಭವ ಮಾಡುವದು.

ತಾನು ಅಕ್ರಿಯ ತನ್ನ ಅಕ್ರಿಯದ ಕ್ರಿಯಾರಂಭ ಮಾಡುವುದರಿಂದ ಪೂರ್ವಾಶ್ರಯವುಳ್ಳ

ಸಂಸಾರದ ಭ್ರಮಿತ ಭಾವ ಕೆಡಬೇಕು. ಇದು ಕೆಟ್ಟಿದೆ ಹೇಗೆ? ಎಂಬುದು ತನ್ನಿಂದ ತಾನು ನೋಡಿಕೊಳ್ಳಬೇಕು. ಏಕೆಂದರೆ ತನ್ನದು ಸಮಗೋಷ್ಠಿಯ ನಿಲುವುಳ್ಳದ್ದಾಗಬೇಕು. ಕರಣಂಗಳ ಕೆಟ್ಟು ಲಿಂಗಾಂಗ ಸಮರಸ ಜ್ಞಾನದ ಕಿರಣಗಳಾದಗಬೇಕು. ಇದರಿಂದ ಸಂಸಾರದ ಸತ್ಯತ್ವ ಬುದ್ದಿ ಕೆಡುವದು. ರಾಗದ್ವೇಷ ನಷ್ಟವಾಗುವದು. ಶೋಕ ಮೋಹ ಕೆಟ್ಟು ಕತೃತ್ವ ಭೋಕ್ತೃತ್ವ ಭ್ರಮ ನಿರಸನವಾಗುವದು ಆಗ ತಾನು ತನ್ನದೆಂಬುದು ಇಲ್ಲವಾಗಿ ಕಲ್ಪಿತ ನಿರಹಂಭಾವಿಯು ದಾಸೋಹ ಮೂರ್ತಿಯಾಗುವನು.

ಶರಣರು ಕಾಯಕ ಜೀವಿಗಳು ಕಾಯಕ ಆರಂಭ ಮಾಡಿದರು. ದಾಸೋಹ ಭಾವಿಗಳಾಗಿ ಆರಂಭ ಮಾಡಿದರು. ಇದರಿಂದ ಸಂಸಾರ ಸ್ಥಿತಿ ಕೆಡುವುದು. ತಾನು ತನ್ನವರು ಎಂಬುದಿಲ್ಲವಾಗಿ ದಾಸೋಹ ಭಾವವೆ ಮುಖ್ಯ ಪ್ರಧಾನವಾಗುವದು. ವ್ಯವಹಾರ ಮಾಡಿ ಸಂಸಾರ ಸ್ಥಿತಿ ಕೆಡದಿದ್ದಡೆ ಆ ವ್ಯವಹಾರವೆ ಕೇಡು. ಜೀವನು ಶರೀರಧಾರೆಯಾಗಿ ಹುಟ್ಟಿ ಬಂದ ಮೇಲೆ ವ್ಯವಹಾರ ಮಾಡದೆ ಬದುಕುವಂತಿಲ್ಲ ಬದುಕಲು ಕಾಯಕ ಜೀವಿಗಳಾಗುವದು ಅವಶ್ಯಕ. ಪಶು ಪಕ್ಷಿಗಳು ಕೂಡಾ ಬದುಕುತ್ತವೆ. ಸಕಲ ಜನ್ಮಂಗಳಲ್ಲ ಮಾನ ಜನ್ಮ ಹಿರಿದಾದ ಜನ್ಮ ಅರುವಿನ ಜನ್ಮದಲ್ಲಿ ಬಂದ ಮೇಲೆ ಅರುವಿನ ವ್ಯವಹಾರವಾಗಬೇಕು. ಹೊಟ್ಟೆ ತುಂಬಿಕೊಳ್ಳುವಷ್ಟರ ಮಟ್ಟಿಗೆ ಕ್ರಿಮಿಕೀಟಕ ವ್ಯವಹಾರವಾಗಬಾರದು.

ಸಂಸಾರ ಸ್ಥಿತಿ ಕೆಡುವ ವ್ಯವಹಾರವದು ತನುವ ಗುರುವಿಂಗೆ ಕೊಡುವುದು. ಮನವ ಲಿಂಗಕ್ಕೆ ಕೊಡುವುದು. ಧನವ ಜಂಗಮಕ್ಕೆ ಕೊಡುವುದು. ಇದರಿಂದ ಕಾಣಬಾರದ ಗುರು ತನ್ನೊಳಕಾಣುವದು ಪೂಜೆಗೆ ಬಾರದ ಲಿಂಗ ತನ್ನೊಳ ಕಾಣುವದು ನಿಜೈಕ್ಯ ಜಂಗಮ ನಿರಾಲಂಬ ಜಂಗಮ ಲಿಂಗ ಒಂದಾಗಿರ್ದ ಜಂಗಮ, ಘನಚೈತನ್ಯ ಜಂಗಮ ತನ್ನೊಳ ಕಾಣುವದು ಕಂಡಮೇಲೆ ತಾನೆ ಗುರು ತಾನೆ ಲಿಂಗ ತಾನೆ ಜಂಗಮ ತಾನು ತಾನೆ ನ್ನ ಹೊರ್ತು ಅನ್ಯ ಆವುದುಇಲ್ಲ ಇಲ್ಲದುದು ಅದು ಎಲ್ಲಿಪ್ಪುದು ಇಲ್ಲಾದುದಿಲ್ಲಾದುದೆಂತಿಪ್ಪುದು ಎನ್ನುವಂತೆ ಆಗ ಎಲ್ಲೆಲ್ಲೂ ತನ್ನನ್ನೆ ನೋಡುವ ವ್ಯವಹಾರ ತನ್ನದಾಗಬೇಕು. ಪೂರ್ವಾಶ್ರಮವುಳ್ಳ ದೇಹೋಹಂ ಕೆಡುವಲ್ಲದೆ ಕೋಹಂ, ಸೋಹಂ, ಚಿದಹಂ, ಸಹಿತ ಕೆಡುವುದು ಎಲ್ಲಿಯವರೆಗೆ ತಾನು ಕಲ್ಪಿನೆಂಬ ವಾಸನೆ ಇರುವುದು ಅಲ್ಲಿಯವರೆಗೆ ಒಂದಿಲ್ಲೊಂದು ಭಾವ ಭ್ರಮಿತನಾಗಿ ವ್ಯವಹಾರದ ಅಹಂಭಾವ ಪರನಾಗುವನು. ಇದು ಕಾರಣ ಕಲ್ಪಿತನ ಮರವಿನ ಭಾವಂಗಳಾಗಲಿ ಅರುವಿನ ಭಾವಂಗಳಾಗಲಿ ಕೆಟ್ಟು ಅಕಲ್ಪಿತನಾಗಬೇಕು. ಲಿಂಗವಾಗಿ ಪ್ರಜ್ವಲಿಸಬೇಕು. ಜಂಗಮ ಲಿಂಗವಾಗಿ ಸಂಚರಿಸಬೇಕು. ಇಲ್ಲದಿದ್ದರೆ ಪುನಃ ವ್ಯವಹಾರ ಬುದ್ದಿಯು ಪೂರ್ವಾಶ್ರಯವುಳ್ಳವನ ಮಾಡಿ ಕರ್ತಾರನನ್ನಾಗಿ ಮಾಡುವೆದರಿಂದ ಬದ್ಧ ಜೀವಿಯಾಗುವನು.

ನಮ್ಮ ವ್ಯವಹಾರ ಲಿಂಗೈಕ್ಯ ವ್ಯವಹಾರವಾಗಬೇಕು. ಅರಿಯಲಿಲ್ಲದ ಅರುವಿನ ವ್ಯವಹಾರವಾಗಿ ಶಬ್ದ ಸಂಭ್ರಮ ತನ್ನಷ್ಟಕ್ಕೆ ತಾನೆ ನಾಚಬೇಕು. ನಿಶಬ್ದವೇದಿಯ ಸುಖವಾಗಬೇಕು. ಕಾಯವಿಡದ ವ್ಯವಹಾರವಾಗಬಾರದು. ಅರುವಿಡಿದ ವ್ಯವಹಾರವಾಗಿ ಅರಿಯಲಿಲ್ಲದ ಅರುವರಿತು. ಅರಿಯದರುವೆ ತನ್ನ ನಿಜರಿದುವು ಆಗುವುದು. ಇಂತಪ್ಪ ಘನ ವ್ಯವಹಾರ ಮಾಡಲು ಬಂದಲ್ಲಿ ಅರುವಿನ ಜನ್ಮ ದೊರೆತದ್ದು, ನಿಜವಾದ ಶ್ರೇಯಸ್ಕರ ಇದರಿಂದ ಸಂಸಾರದ ಸ್ಥಿತಿ ನಿಶ್ಚಯವಾಗಿ ಕೆಡುವದು. ಇದು ತನ್ನ ತಾನರಿಯುವ ವ್ಯವಹಾರ ಶರಣ, ಶರಣೆಯರ ವ್ಯವಹಾರ ಸಮ್ಯುಕ್ ವ್ಯವಹಾರ ಇಲ್ಲಿ ಲಿಂಗಭೋಗೋಪ ಭೋಗವೆಂಬ

ಖಂಡಿತ ಬುದ್ದಿ ಲಯವಾಗಿ ತನ್ನ ಸ್ವರೂಪ ಸುಖ ಸವಿಯುವ ವ್ಯವಹಾರ ಇದು ಸಮಗೋಷ್ಠಿಯ ಉಪವಾಸವಳವಲ್ಲ ನೋಡಾ.

ಓಲಗ ಮಾಡಿ ಸಂಸಾರ ಸ್ಥಿತಿ ಕೆಡದಿದ್ದರೆ ಆ ಓಲಗವೆ ಕೇಡೆ? ಅದಾವ ಓಲಗ? ಶರಣರು ಮನೆಗೆ ಬಂದರೆ ಹರ್ಷದಿಂದ ಕುಣಿ ಕುಣಿದಾಡುವ ಓಲಗ,ಉಬ್ಬಿ ಉಬ್ಬಿ ನಲಿದಾಡುವ ಓಲಗ. ಸತ್ಸಂಗ ಮನೆಯಲ್ಲಿ ನಡೆಯುವ ಓಲಗ ಸದ್ಗುರು ಸಾರ್ವಭೌಮನ ಮಹಾ ಪ್ರಸಾದ ಶರಣರು ಕೂಡೆ ಸಮಗೋಷ್ಠಿಯ ಓಲಗ ಇದುವೆ ನಿಜವಾದ ಓಲಗ. ಇದು ಜ್ಞಾನಾರ್ಜನೆಯ ಸಂಭ್ರಮದ ಓಲಗ. ಈ ಓಲಗ ಮಾಡುವುಡೆ ಸಂಸಾರ ಸ್ಥಿತಿ ಕೆಡುವುದು. ಮಾನವ ಖಂಡಿತವಲ್ಲದ ಅಖಂಡಿತ ಸುಖದ ಓಲಗಬಿಟ್ಟು ಕ್ಷಣಿಕ ಸುಖದ ಅನಾತ್ಮರುಗಳು ಕೂಡುವ ಓಲಗ ಕರೆಯುತ್ತಾರೆ. ಬಂಧು ಮಿತ್ರರನ್ನು ನೆರೆಹೊರೆಯ ಪ್ರೇಮಿಗಳ ಕೂಡಿ ಲಕ್ಷೋಪ ಲಕ್ಷ ದುಡ್ಡು ವ್ಯಯ ಮಾಡುತ್ತಾನೆ. ಕ್ಷಣಕಾಲ ಹಸನ್ಮುಖಿಯಾಗಿ ಪುನಃ ದುಡ್ಡು ಕಳೆದುಕೊಂಡುದು ಸ್ಮರಣಕ್ಕೆ ಬರುವಡೆ. ವ್ಯಸನಿಯಾಗುವನು ಇದರಿಂದ ತಾನಾರೆಂಬ ಜ್ಞಾನ ಉದಯವಾಯಿತೆ? ಜ್ಞಾನವಾಗದಿದ್ದಲ್ಲಿ ಇಂಥಹ ನಿಷ್ಪ್ರಯೋಜಕ ಓಲಗ ಮಾಡಿ ಪ್ರಯೋಜನವೇನು? ಇದು ತೋರಿಕೆಯ ಓಲಗ. ಡಾಂಭಿಕ ಓಲಗ ಇದ್ದರಿಂದ ಸಂಸಾರ ಸ್ಥಿತಿ ಕೆಡದು ಎಂದು ಹೇಳಿಹರು.

ಭಕ್ತಿ ಮಾಡಿ ಜನನ ಮರಣ ವಿರಹಿತನಾಗದಿದ್ದಡೆ ಆ ಭಕ್ತಿಯೆ ಕೇಡು ಕೂಡಲ ಚೆನ್ನಸಂಗಮದೇವಾ ಭಕ್ತಿ ಮಾಡಿದವರುಂಟು ಜನನಮರಣ ವಿರಹಿತರಾದವರು ಸಿಕ್ಕುವದು ವಿರಳ ಭಕ್ತಿಯೆಂದರೆ ಸಕಾಮ ಭಕ್ತಿಯಲ್ಲ ಸಹಜ ಭಕ್ತಿ ಲಿಂಗಬೇರೆ ತಾನು ಬೇರೆಂದು ಭೇದಜ್ಞಾನವುಳ್ಳವರಾಗಿ ಮಾಡುವ ಭಕ್ತಿಯಲ್ಲ ಲಿಂಗಬೇರೆ ತಾನು ಬೇರೆಂದು ಭೇದಜ್ಞಾನವುಳ್ಳವರಾಗಿ ಮಾಡುವ ಭಕ್ತಿಯಲ್ಲ. ಫಲ ಪದಂಗಳ ಬೇಡುವ ಕಾಮನಾ ಭಕ್ತಿಯಲ್ಲ. ದೇವನು ಪೂಜ್ಯನು, ಪೂಜಕನೆಂಬ ಭಕ್ತನು ಇದು ಮಾಯಿಕ ಈ ಮಾಯಿಕ ಭಕ್ತಿಯಿಂದ ಉಪಾಸಕರು ಗಣಪದವರೆಂದು ಪುರಾಣಂಗಳಿಂದ ತಿಳಿದು ಬಂದರೂ ಭವವಿರಹಿತರಾಗಲಿಲ್ಲ.

ಇತ್ತ ವೀರಶೈವರು ಲಿಂಗಾರ್ಚನೆ ಮಾಡಿ ಭಕ್ತ ಮಹೇಶ್ವರರು ಕೂಡ ಭವವರಹಿತರಾದವರು ವಿರಳ. ಬಿಟ್ಟು ಮಹೇಶನಾದೆನೆಂಬುದು ಅರುಹಿನ ಕೇಡು. ಹಿಡಿದು ಭಕ್ತನಾದೆನೆಂಬುದು ನಿಜದ ಕೇಡು. ಬಿಡುವದು ಹಿಡಿವುದು ಮನ ಕಲ್ಪಿತವಲ್ಲದೆ ಕಲ್ಪನಾರಹಿತ ಭಕ್ತ ಮಹೇಶ್ವರರಲ್ಲಿಪ್ಪುದೇನಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನ ಎಂಬ ಮಹಾಂತರ ಸಂದೇಶದಂತೆ ಒಬ್ಬನು ಹಿಡಿದು ಭಕ್ತನಾದೆನೆನ್ನುವನು ಇನ್ನೊಬ್ಬ ಬಿಟ್ಟು ಮಹೇಶನಾದೆನೆನ್ನುವದು ಹಿಡಿದು ಭಕ್ತನಾದವಂಗೆ ಅರುವಿನ ಕೇಡಾದುದು ತಿಳಿಯಲೊಲ್ಲ ಬಿಟಗಟು ಮಹೇಶನಾದವಂಗೆ ನಿಜದಿಂದ ದೂರಾದುದು ತಿಳಿಯಲಿಲ್ಲ. ಏಕೆಂದರೆ ಮನದ ಕಾರ್ಯಕ್ಕೆ ಒಪ್ಪಿಕೊಂಡವರು ಮನವ ನಷ್ಟ ಮಾಡದ್ದರಿಂದ ಕಲ್ಪಿತರು ಇವರುಗಳ ಕಲ್ಪಿತವೆ ಇವರಿಗೆ ಕೇಡು ಮಾಡಿದ್ದರಿಂದ ಕಲ್ಪನಾರಹಿತರಾಗಲಿಲ್ಲ. ಕಲ್ಪನಾ ರಹಿತರಾಗದಿದ್ದರಿಂದ ಭವ ವಿರಹಿತರಾಗಲಿಲ್ಲ.

ಭಕ್ತಿಎಂಬುದು ಕಲ್ಪಿತ ಕಾರ್ಯವಲ್ಲ. ಅದು ಅಕಲ್ಪಿತದಿರುವು. ನಿಜದಿರುವು ಆರು ನಿಜದಿರುವುಳ್ಳವರು ಅವರು ಜನನ ಮರಣವಿರಹಿತರು. ಬಸವಣ್ಣ ಪ್ರಭುದೇವ ಚೆನ್ನ ಬಸವಣ್ಣ, ಅಕ್ಕಮಹಾದೇವಿ, ಅಮುಗೆ ರಾಯಮ್ಮ ಮೊದಲಾದ ಶರಣ ಶರಣೆಯರು ತೆರಹಿಲ್ಲದ ಘನ ನುಡಿಗೆಡೆಗೊಡದವನ ಭಕ್ತಿ ಮಾಡಿ ಜನನ ಮರಣ ವಿರಹಿತರಾದರು. ಇದು ಭಕ್ತಿ ಮಾಡಿ

ಜನನ ಮರಣ ವಿರಹಿತರಾದ ಸಂಕೇತ ಆರು ಭಕ್ತಿ ಮಾಡಿ ಜನನ ಮರಣ ವಿರಹಿತರಾಗದಿದ್ದರೆ ಆ ಭಕ್ತಿಯೆ ಕೇಡು ಕೂಡಲ ಚೆನ್ನ ಸಂಗಮದೇವಾ ಎಂದು ಹೇಳಿಹರು.

ವಚನ - 27

> **ತನು, ಮನ, ಧನ ಏಕಾರ್ಥವಾದ ಕಾರಣ ಉದಯದಲ್ಲಿ ಲಿಂಗವೆ ಶರಣು, ಜಂಗಮವೇ ಶರಣು, ಪ್ರಸಾದವೆ ಶರಣು ಕಂಡಯ್ಯ ಈ ತ್ರಿವಿಧ ಗುಣ ಸಂಪನ್ನರು ಕೂಡಲ ಚೆನ್ನ ಸಂಗನ ಶರಣರು ಮಹಾಘನವಯ್ಯ.**

ತಾತ್ಪರ್ಯ: ತನು, ಮನ, ಧನ ಏಕಾರ್ತವಾದ ಕಾರಣ ಉದಯದಲ್ಲಿ ಲಿಂಗವೆ ಶರಣು : ಜಂಗಮವೇ ಶರಣು, ಪ್ರಸಾದವೆ ಶರಣು ಕಂಡಯ್ಯ ಈ ತ್ರಿವಿಧ ಗುಣ ಸಂಪನ್ನರು ಮಹಾಘನವಯ್ಯ. ತನು, ಮನ, ಧನ ಏಕಾರ್ಥವಾದ ಕಾರಣ ಉದಯದಲ್ಲಿ ಲಿಂಗವೆ ಶರಣು ಶರಣು ಶರಣಾರ್ಥಿ ಶರಣರಿಗೆ ತನು,ಮನ,ಧನ ಏಕಾರ್ಥವಾದ ಮಹಾಂತರ ಮಹಾನುಭವಕ್ಕೂ ಮಹರಿವಿಂಗೆ ಶರಣು. ಮೂರೊಂದಾದ ಏಕಾರ್ಥ ಏಕ, ಏವ, ಏವ, ಒಂದೆ, ಒಂದಾದ ಅದ್ವಿತೀಯತ್ವದ ಇರುವ ಅದನಾರಯ್ಯ ಉಪಮಿಸುವದು. ಶರಣರ ಹಿರಿಮೆ, ಅಪಾರ ತನು,ಮನ,ಧನ ಏಕಾರ್ಥವಾದುದೆತ್ತ. ಲೋಕದವರೆತ್ತ ಇವರು ತನು,ಮನ,ಧನಂಗಳ ಬೋಗಕ್ಕಾಗಿ ಸವಿಸಿದರು. ವೈರಾಗ್ಯವಂತನು ಹೇಯವಾಗಿ ಕಂಡು ಜಿಗುಪ್ಸೆಗೊಂಡ ಅನಿತ್ಯವೆಂದು ತ್ಯಜಿಸಿದ ಯೋಗಿಗಳು ತಮ್ಮ ತಮ್ಮ ಇಷ್ಟಾರ್ಥ ಪೂರೈಸಲು ಅಭ್ಯಾಸಕ್ಕಾಗಿ ಸವಿಸಿದರು. ಶಾಸ್ತ್ರಜ್ಞರು, ವೇದ ವೇದಾಂತಗಳ ಅಧ್ಯಯನಕ್ಕಾಗಿ ಇದರಿಂದ ಕೆಲಬರು ಪುರುಷಾರ್ಥ ಸಾಧಿಸಿಕೊಂಡರು.

ಶರಣರು ಆರು ಹೃದಯವಾದ್ದರಿಂದ ತನು,ಮನ,ಧನ, ಏಕಾರ್ಥ ಮಾಡಿದರು. ಶರಣ ಏಕಾರ್ಥದುದಯ ವೇದ ವೇದಾಂತಗಳಿಗಸಾಧ್ಯವಾದ ಅರುವಿಂಗರುವುಳ್ಳದ್ದಾಗಿ ತನು ತೆರಹಿಲ್ಲದ ಪ್ರಸಾದವಾಯಿತ್ತು. ಮನವು ತನ್ನ ನಿಜದಿರುವ ಕಂಡು ಹೇಳಬಾರದ ಘನ ತೋರಲೆಂದೇನೋ? ತೋರಬಾರದ ಘನ ಹೇಳಲೆಂದೇನೋ? ಕಲ್ಪಿತವಲ್ಲದ ಘನದಿರುವು ಪ್ರಜ್ವಲಿಸಿತ್ತು. ಧನವದು ಭಾವಕ್ಕಗಮ್ಯವಾಗಿ ನಿಜ ನಿವಾಸವಾಗಿ ಲಿಂಗ ಒಂದಾಗಿರ್ದ ಜಂಗಮ ಜಂಗಮ ಒಂದಾಗಿರ್ದ ಲಿಂಗ ಇದು ನಿರಾಭಾರಿ ಜಂಗಮವಾಗಿ ಪ್ರಜ್ವಲಿಸಿತ್ತು.

ಶರಣರಿಗೆ ತನು, ಮನ, ಧನ, ಏಕಾರ್ಥವಾಗಲು ಕಾರಣವುದೆಂದಲ್ಲಿ ಇವುಗಳ ನಿಜದಿರುವ ಅರಿತು ಏಕಾರ್ಥವಾಗಿ ಪ್ರಕಾಶಿಸಿತು. ಲೋಕ ದೃಷ್ಠಿಗೆ ಕಾಣಿಸುವ ತನು, ಮನ, ಧನಗಳೆಂಬವು ಭ್ರಾಂತಿ ಮಯವು. ತನುವಿನ ನಿಜದಿರುವ ಅಂದು ಅದೆ ಇಂದು ಅದೆ ಎಂದೆಂದೂ ಅದೆ ಇದಕ್ಕೆ ಇಲ್ಲದಿವಿಕೆಯಲ್ಲಿ ಭ್ರಾಂತಿಗೆ ತೋರುವ ತನುವಾಗಲಿ ಮನವಾಗಲಿ ಧನವಾಗಲಿ ಮಿಥ್ಯಾತೋರಿಕೆ ನಿಜದಿರುವಿಗೆ ಇವಿಗಳಿಗೆ ಅಸ್ತಿತ್ವವಿಲ್ಲ. ಬಂಜ ಮಗನಿಗೆ ಹೇಗೆ ಅಸ್ತಿತ್ವವಿಲ್ಲ, ಹಾಗೆ ಇವುಗಳಿಗೆ ಇಲ್ಲ ಇದ್ದುದು ಇದ್ದಂತೆ ಇದೆ. ಇದು ನುಡಿಗೆಡೆಗೊಡದ ಘನವಾಗಿದೆ ಅರಿತವಂಗೆ ಅನುಪಮವಾಗಿದೆ. ಇದರಿರುವ ಶೃತಿಗಗೋಚರವಾಗಿದೆ. ವಾಜ್ಞನೋತೀತವಾಗಿದೆ ವರ್ಣಾತೀತವಾದ್ದರಿಂದ ಇದರ ಇರುವು ಅದಾವ ವಿವೇಕ ಮತಿಗೂ ನಿಲುಕದು. ವೇದ ವೇದಾಂತವು ವರ್ಣಿಸ ಹೋಗಿ ನೇತಿ ನೇಲೆ ಎಂದು ಮೌನ ಧರಿಸಿತು.

ಇವೆರಡಕ್ಕೂ ಮೀರಿದ ನಿರಜ ನಿಜ ಚಿದ್ರೂಪ ತಿಳಿಯ ಹೋಗಿ ಅರಿಯಬಾರದ ಘನವೆ ಪ್ರಜ್ವಲಿಸಿತು. ಶರಣರಿಗೆ ಧನವು ಏಕಾರ್ಥವಾಗಿ ಉದಯವಾಯಿತ್ತು. ಧನವೆಂಬುದು ಈ ತೋರಿಕೆಯ ಸತಿ, ಸುತ, ಧನ, ಕನಕ, ಅಧಿಕಾರ, ಫಲ ಪದವಿಗೆ ಧನವೆಂದು ತಿಳಿದು ಬಹಳಷ್ಟು ಭ್ರಾಂತರಿದ್ದಾರೆ.

ತೋರಿಕೆಡುವ ಧಮ, ನಿಜವಾದ ಧನವಾಗದು. ಧನವದು ನಿತ್ಯ ನಿರತಶಯವಾದ ಜ್ಞಾನಾನಂದ ಇದು ಅಕ್ಷಯ ಧನ. ಭಾವಕ್ಕಗಮ್ಯುವಾದುದು ಭ್ರಾಂತರಿಗೆ ಇದರ ಘನವ ತಿಳಿಯದು. ಜ್ಞಾನೈಶ್ವರ್ಯವೆ ನಿಜವಾದಧನ, ಲಿಂಗಾಂಗ ಸಾಮರಸ್ಯವದು ನಿವಾದ ಧನ, ಪರಮ ಪುರುಷಾರ್ಥವೆ ನಿಜವಾದ ಧನ ವಿವರಿಸಿ ನೋಡುವುಡೆ ಸತ್ಯ ಜ್ಞಾನಾನಂದವು ಈ ಸತ್ಯಜ್ಞಾನಾನಂದವರಿಯ ಹೋದವರಿಗೆ ಲಿಂಗ ಒಂದಾಗಿರ್ದ ಜಂಗಮ ನಿಜೈಕ್ಯ ಜಂಗಮ, ಜಂಗಮ ನಿರಾಲಂಬವಾಗಿರುವುದು ಯತಾರ್ಥವು.

ಮನವು ತನ್ನ ನಿಜದಿರುವ ಅರಿಯ ಹೋಗಿ ಹೇಗೆ ಅನುಪಮ ಲಿಂಗವಾಯಿತ್ತು. ಹಾಗೆ ಧನವರಿಯಹೋಗಿ ಭಾವಕ್ಕಗಮುವಾದ ನಿರ್ಭಾವ ಜಂಗಮವಾಯಿತ್ತು. ಶರಣರಿಗೆ, ತನು, ಮನ, ಏಕಾರ್ಥವಾದ ಕಾರಣ ಉದಯದಲ್ಲಿ ಲಿಂಗವೆ ಶರಣು ಜಂಗಮವೆ ಶರಣು ಪ್ರಸಾದವೆ ಶರಣು ಕಂಡಯ್ಯ ಎಂದು ಚೆನ್ನಬಸವರಾಜ ದೇವರು ಶರಣರ ಅರು ಹೃದಯದ ಘನತ್ವ ಕೊಂಡಾಡಿಹರು. ಆರು ಹೃದಯ ನಿಸ್ಸೀಮ ಹೃದಯ ಖಂಡಿತವಲ್ಲದ ಅಖಂಡಿತ ಹೃದಯವುಳ್ಳರಾ ದುದರಿಂದ ತ್ರಿವಿಧ ಗುಣ ಸಂಪನ್ನರು ಏಕಾರ್ಥಮಯರು. ಭಕ್ತರಲ್ಲಿ ತ್ರಿವಿಧ ಒಂದಾದ ಗುಣ ಸಂಪನ್ನರು ಸಿಕ್ಕುವದು ವಿರಳ. ಇವರುಗಳ ತಿಳುವಳಿಕೆಲ್ಲಿ ಲಿಂಗ ಬೇರೆ, ಜಂಗಮ ಬೇರೆ, ಪ್ರಸಾದ ಬೇರೆಯೆಂದು ಭಿನ್ನದೃಷ್ಟಿಯುಳ್ಳ ಭಕ್ತರೆ ಬಹಳ ಇವರು ಲಿಂಗೈಕ್ಯ ಭಕ್ತರಾಗದ್ದರಿಂದ ಶರಣರ ಅರು ಹೃದಯ ಹಿರಿಮೆ ಇವರಿಗೆ ತಿಳಿಯಲಿಲ್ಲ. ಶರಣರದು ಅರು ಹೃದಯವಾಗಿದ್ದರಿಂದ ತನುವ ತೋರಲಿ, ಮನವ ಕಲ್ಪಿಸಲಿ, ಧನವು ತೋರಲಿ, ನುಡಿಗೆಡೆಗೊದ ಘನವಾಗಿ ಪ್ರಜ್ವಲಿಸಿದವು. ಇವು ಏಕಾರ್ಥವಾದ ಕಾರಣ ಮೂರಾಗಿ ಕಾಣಲಿಲ್ಲ, ಕಾಣಬಾರ ಘನವಾಗಿಹ ಲಿಂಗ, ಜಂಗಮ, ಪ್ರಸಾವುಗಳಾಗಿಹವು ಕಾರಣ ಶರಣರು ತ್ರಿವಿಧ ಗುಣ ಸಂಪನ್ನರು ಎಂದು ಹೇಳಿಹರು.

ಶರಣರು ಪ್ರಕೃತಿಯಿಂದ ಬಂದ ಗುಣ ಸಂಪನ್ನಿಕೆಯಲ್ಲ ಅರುವರಿತು ಅರು ಹೃದಯದಿಂದ ಬಂದ ಸಂಪನ್ನತ್ವ ಅರುವೆ ವಿಕಾಸವಾದ ಸಂಪನ್ನತ್ವ ಸಯಸುಖದಲ್ಲಿದ್ದ ಸಂಪನ್ನತ್ವ, ಇದು ಸೀಮೆ ಕೆಟ್ಟು ನಿಸ್ಸೀಮತ್ವವೆ ತನ್ನದಾದ ಸಂಪನ್ನತ್ವ. ಕೂಡಲ ಚೆನ್ನ ಸಂಗನ ಶರಣರು ಮಹಾಘನವಯ್ಯ ಶರಣರು ಘನ ಗಂಭೀರ ಮಹಾಘನರು ಅಸಾಧ್ಯವಾದುದ ಸಾಧಿಸಿದವರು. ಕಾಣದುದ ಕಂಡವರು. ಮುಟ್ಟಬಾರದುದ ಮುಟ್ಟಿದ್ದವರು. ಇವರಿಗೆ ತನುವೆಂಬುದು ತೆರಹಿಲ್ಲದ ಪ್ರಸಾದವಾಯಿತ್ತು. ಮನವು ವೇದ ವೇದಾಂತಗಳಿಗೆ ಸಾಧ್ಯವಾದ ಅನುಪಮ ಲಿಂಗವಾಯಿತ್ತು. ಧನವು ಭಾವಕ್ಕಗಮ್ಯವಾದ ನಿರಾಲಂಬ ನಿಜಲಿಂಗವಾಯಿತ್ತಾಗಿ ಅರಿಯದರುವೆ ಆಯಿತ್ತು. ಶರಣರು ತ್ರಿವಿಧ ಗುಣ ಸಂಪನ್ನರು ತೆರಹಿಲ್ಲದ ಪ್ರಸಾದಮಯರು, ಅಕಲ್ಪಿತರು, ನುಡಿಗೆಡೆಗೊಡದ ಘನರಾದುದರಿಂದ ಮಹಾ ಘನರು ಎಂದು ಹೇಳಿಹರು. ಈ ಮಹಾಂತರು ನಿಶಬ್ದವೇದಿಗಳಾಗಿರುವಲ್ಲಿ ತನು, ಮನ, ಧನ, ಏಕಾರ್ಥವಾಗಿಹ ಸಂಪನ್ನರು ಶಬ್ದವೆ ಮೀಸಲವಾಗಿಹ ಸಂಪನ್ನರು. ಭಾವಕ್ಕಿಂಬು ಕೊಡದ ನಿರ್ಭಾವದ ನಿಜಗುಣರು

ಇವರು ಅರು ಹೃದಯರು. ನಿಸ್ಸೀಮರು ಎಂದು ಹೇಳಿಹರು.

ವಚನ - 28

ಭಾವ ಬಲಿಸಬೇಕಲ್ಲದೆ ವಿಭಾವ ಮಾಡಲುಂಟೆ?
ಗುರುಭಕ್ತಿಯಲ್ಲಿ ಭಾವ ಬಲದುದೆ ಬ್ರಹ್ಮಜ್ಞಾನ, ಗುರು ಭಕ್ತಿಯಲ್ಲಿ ಭಾವನಿಂದುದೆ.
ಸಹಜ ಸ್ಥಿತಿ. ಗುರುಭಕ್ತಿ, ಮರೆವ ಅರಿವ ಮರೆತಂದೆ
ಕಪಿಲಸಿದ್ದ ಮಲ್ಲಿಕಾರ್ಜುನ ದೇವನ ಮಹಾಮನೆ ಇದು ಸತ್ಯಕೇಳಾ ಶಿವತಾಯೆ.

ತಾತ್ಪರ್ಯ: ಭಾವಬಲಿಸಬೇಕಲ್ಲದೆ ವಿಭಾವ ಮಾಡಲುಂಟೆ? ಗುರು ಭಕ್ತಿಯಲ್ಲಿ ಭಾವಬಲಿದುದೆ ಬ್ರಹ್ಮಜ್ಞಾನ : ಭಾರತವು ಪೂರ್ವ ಕಾಲದಿಂದಲೂ ಗುರುಭಾವಕ್ಕೆ ಒಪ್ಪಿಕೊಂಡುದು ಇದು. ಗುರುಭಕ್ತಿಯ ನಾಡು. ವಿದೇಶದಲ್ಲಿಯು ಗುರುಭಕ್ತಿ ಇದೆ. ಇದ್ದರೂ ಭಾರತದಲ್ಲಿ ವಿಶೇಷವಾಗಿ ಗುರು ಭಕ್ತರು ಹೆಚ್ಚಾಗಿ ಇಹರು ನಿಜ ಆದರೂ ಭಾವ ಬದಲಿಸಿದವರು ಸಿಕ್ಕುವದು ವಿರಳ.

ಭಾವ ವಿಭಾವ ಮಾಡಿದವರು ಸಿಕ್ಕುವರು. ಗುರು ಭಾವಕರಾಗಿದ್ದು ಪುನಃ ಗುರುಭಾವ ಮಾಡಿದವರೆ ಭಾವ ವಿಭಾವ ಮಾಡಿದವರು ಇವರು ಭಾವ ವಿಭಾವ ಮಾಡಲು ಕಾರಣ? ಇವರು ಭವದ ಭೀತಿಯಲ್ಲಿದವರು ಭೀತಿಯೆ ಇಲ್ಲದಿರುವಾಗ ಭವದಿಂದ ಬಿಡುಗಡೆಯಾಗುವ ಹಂಬಲವಿಲ್ಲದವರು ಲೋಕ ಪ್ರಿಯರು, ವಿಷಯಾಸಕ್ತರು, ದೇಹ ಬುದ್ದಿ, ದೇಹಾಭೀಮಾನ, ಬಲಗೊಂಡವರು ಇಂದ್ರಿಯಗಳ ಶುಭಾಶುಭಕ್ರಯಕ್ಕೆ ಒಪ್ಪಿದರು. ಅಧಾತ್ಮ ಜ್ಞಾನದ ನಿಜವಾದ ಹಸಿವುಳ್ಳವರಲ್ಲ. ಮತಿಗತಿಗೆ ಒಪ್ಪಿದವರು ಪ್ರಪಂಚದರತಿಯುಳ್ಳವರು ಗುರು ಪುತ್ರರಕಂಡು ಗುರು ಪುತ್ರರಾದವರು ಭಾವಿಕರ ಕಂಡು ಭಾವಿಸಿದವರು ಗುರುವನ್ನು ಚಾರಿತ್ರ ಪುರುಷನನ್ನಾಗಿ ಕಂಡವರು ಅರು ಹೃದಯ ಕಾಣದ್ದರಿಂದ ಭಾವ ವಿಭಾವ ಮಾಡಿದವರು ಎಂದು ಹೇಳಿದೆ.

ಗುರುಭಕ್ತಿಯಲ್ಲಿ ಭಾವ ಬಲಿದುದೆ ಬ್ರಹ್ಮಜ್ಞಾನ ಗುರುಭಕ್ತಿಯಲ್ಲಿ ಭಾವ ಬಲಿಯದಿರಲು ಕಾರಣವೇನು? ಏಕೆಂದರೆ ಗುರುಪುತ್ರರಾದವರು ಗುರುಭಕ್ತಿಯಲ್ಲಿ ಭಾವಬಲದುದು ಬ್ರಹ್ಮಜ್ಞಾನಿಗಳಾಗಲು ಕಾರಣ ಗುರುಭಕ್ತಿಯಲ್ಲಿ ಭಾವ ಬಲಿಯದಿರುವುದೆ ? ಭಾವ ವಿಭಾವ ಮಾಡಿದ ಕಾರಣವಾವುದು ? ಭಾವ ವಿಭಾವ ಮಾಡಿದ ಭಾವಿಕರ ಲಕ್ಷಣವೇನು? ಈ ಭಾವಿಕರು ಗುರುಘನವರಿಯ ಹೋಗಲಿಲ್ಲ. ಗುರು ಘನವ ದೇಹಧಾರಿಯಾಗಿ ಕಂಡರಲ್ಲದೆ ನಿರ್ದೇಹಿಯನ್ನಾಗಿ ಕಾಣಲಿಲ್ಲ. ಭೋದನಾಮೂರ್ತಿಯಾಗಿ ಕಂಡರಲ್ಲದೆ ಬೋಧಾ ಬೋಧಕ್ಕೆ ಮೀರಿದ ಸಮಪ್ರಕಾಶವೆಂದು ತಮ್ಮ ಹೃದಯದಲ್ಲಿ ನೋಡುವ ಭಾಗ್ಯ ಇವರದಾಗದೆ ಕುರುಡರಾದರು. ಜ್ಞಾನಾಂಧರಾದರು.

ಗುರುಘನಕ್ಕೆ ಗುಣಮಣಿಯೆಂದು ಸಗುಣಿಯೆಂದು ತಪೋನಿಷ್ಠೆ ಪೂಜಾನಿಷ್ಠ ಕ್ರಿಯಾ ನಿಷ್ಠ ಪ್ರಕೃತಿಧರನೆಂದು ಕಂಡರೆ ಹೊರತು ಪುರುಷೋತ್ತಮ ಪುರುಷನೆಂದು ಭಾವಿಸಲಿಲ್ಲ. ಅರಿಯಲಿಲ್ಲ. ಬಹು ಭಕ್ತರಿಗೆ ಗುರುವಾರು? ಹಿರಿಯರಾರು ? ಭಕ್ತರಾರು ? ಎಂಬುದ ನರಿಯದೆ ಗುರುಭಕ್ತರೆಂದೆನಿಸಿಕೊಳ್ಳುವ ಜನಸ್ತೋಮ ಹೆಚ್ಚಾಗಿದೆ. ಇವರು ಭಾವ ವಿಭಾವ ಮಾಡಿದವರು ಇತ್ತ ಕೆಲಬರು ಗುರುಗಳಾಗಲು ಜಗದ್ಗುರುಗಳಾಗಲು ಭಾವ ವಿಭಾವ

ಮಾಡಿದವರು ಇತ್ತ ಕೆಲವರು ಗುರುಗಳಾಗಲು ಜಗದ್ಗುರುಗಳಾಗಲು ಇಷ್ಟ ಪಡುತ್ತಾರೆ ಅಷ್ಟೇ. ಅವರುಗಳಲ್ಲಿ ನಿಜವಾದ ಗುರುವಿನ ಕರ್ತವ್ಯದಿಂದ ಬಹುದೂರವಾಗಿದ್ದವರಿಗೆ ಬಹು ಸಂಖ್ಯೆಯಲ್ಲಿ ಇಹರು. ಇದು ಕಾರಣ ಗುರುವೆಂದರೆ ಆರು ?

ಸೀಮೆ ಸಾಯುಜ್ಯವ ಮೀರಿದಾತನು ಗುರು, ನಾಮ ನಿರ್ನಾಮವಾದಾತ ಗುರುವೈ ಸೋಮ ಪ್ರಭೆಯಿಂದತ್ತತ್ತ ಪಾವನನಾದಾತ ಆದಿ ಅಕ್ಷರವ ನರಿತಾತ ಗುರುವೈನಾದ ಬಂದು ಕಳೆಯಾದಿ ಯರಿದಾತನು ಅಭೇದ್ಯಗುರು ಬಸವಣ್ಣ ಶ್ರೀಮಲ್ಲಿಕಾರ್ಜುನನಾದ ಸಿದ್ಧರಾಮ ಶಿವಯೋಗಿಶ್ವರರ ಪ್ರಸಾದವಾಣಿಯಂತೆ ಅಭೇದ್ಯ ಗುರುವೆ ಗುರು ಘನನು ಬಾಧಿತನು ಗುರುವಾಗನು ನಿಸ್ಸೀಮ ಗುರು ನಾಮ ನಿರ್ನಾಮವಾದ ಮಹಾಂತನೆ ಗುರುಘನನು ಪರ ಪ್ರಕಾಶವ ಕಾಣದಾತ ಭಾಷೆ ಪ್ರಸಾದ ನಷ್ಟ ಮಾಡುವಾತ. ಅರಿವ ಅರುಹಿಸಿಕೊಂಬು ಭಯಂಗಳ ಮೀರಿ ಅರಿಯಲಿಲ್ಲದ ಅರುವೆ ತಾನಾದಾತನೆ ಗುರು ಘನನು ಇಂತಪ್ಪ ಗುರು ಘನದಲ್ಲಿ ಭಾವ ಬಲಿಸುವದು. ಭಾವ ಬಲಿಸಿದವರು ಇವರಾರು?

ಗುರುವೆ ಮಹಾಮಹಿಮ ಅಕಲ್ಪಿತ ಅನುಪಮ ಶೃತಿಗಗೋಚರ ವರ್ಣಾತೀತ ಸ್ವಯಂಜ್ಯೋತಿ ಎಲ್ಲರ ಮರೆಯಬಹುದು. ಎನ್ನವಲಭ ಗುರು ಮೂರ್ತಿಯ ಮರೆಯಬಾರದು. ಎಲ್ಲರ ಕೀರ್ತಿಸಬಹುದು. ಎನ್ನ ಗುರು ಮೂರ್ತಿಯ ಕೀರ್ತಿಸಬಾರದು. ಎಲ್ಲರು ಹೋಗಲಾಡಿದರೆಂದು ಎನ್ನನಲ್ಲನು ಹೋಗಲಾಡನು ನಿಮ್ಮ ಪಾದ ಸಾಕ್ಷಿಯಾಗಿ ಎನ್ನುವವರೆಲ್ಲ ಭಾವ ಬಲಿಸಿದವು. ಇವರು ಶ್ರೀಗುರು ಘನವ ಅರಿಯ ಹೋದವರಾದುದರಿಂದ ಗುರುದೇವ ಚಾರಿತ್ರ ಪುರುಷನಾಗಿ ಕಾಣಲಿಲ್ಲ, ಕಲ್ಪಿತನಾಗಿ ಕಾಣಲಿಲ್ಲ, ಅಕಲ್ಪಿತ ಅನುಪಮನನ್ನಾಗಿ ಕಂಡ ಮೇಲೆ ಇನ್ನೇನಿನ್ನೇನು.

ಶ್ರೀಗುರು ಅಕಲ್ಪಿತನೆಂದರಿತ ಬಳಿಕ ತೋರಬಾರದ ಘನ ಹೇಳಲೆಂದೇನೋ ಹೇಳಬಾರದ ಘನ ತೋರಲೆಂದೇನೋ? ನುಡಿಗೆಡೆಗೊಡದ ಘನ ಕಾಣಬಾರದ ಘನನ್ನು ಬೋಧಾಮೂರ್ತಿಯೆಂದು ಹೇಗೆ ಹೇಳುವುದು. ತನಗಿಂತನ್ಯನಾಗದಿದ್ದಲ್ಲಿ ತೋರಲೆಂದೇನೋ? ಉಪವಾಸಲಿಲ್ಲಾಗಿ ಶಿಷ್ಯನೆನಲಿಲ್ಲ ಗುರುವೆನಲಿಲ್ಲ ಈರ್ವರ ಇರವು ಅರಿವು ಒಂದಾಗಿ ಅರ್ಪಿಸಲಿಲ್ಲ, ಅರ್ಪಿಸಲಿಲ್ಲ ಅರಿಯಲಿಲ್ಲದ ಅರುವೆ ಪ್ರಜ್ವಲಿಸುವಲ್ಲಿ ಶಬ್ದಕ್ಕೆ ತೆರಹಿಲ್ಲವಾಗಿ ಅದನೆಂತುಪಮಿಸುವದು ಅಲ್ಲಿ ಶ್ರೀಗುರುವಿಂಗೆ ದೀಕ್ಷಾಗುರು, ಶಿಕ್ಷಾಗುರು, ಮೋಕ್ಷಗುರುವೆಂದು ನಿರ್ಣಯ ಮಾಡಬಹುದೆ? ನಿಸ್ಸೀಮನು ಸೀಮಿತನಾಗಬಹುದೆ? ಖಂಡಿತವಲ್ಲದ ಅಖಂಡಿತನು ವಿಭಾಗವಾಗಬಹುದೆ?

ನಾಮವೆ ನಿರ್ನಾಮವಾದವಂಗೆ ಪೂರ್ವದಾಶ್ರಯವುಳ್ಳ ಶಿಷ್ಯನಿಲ್ಲ, ಅರುವಿನಾಶ್ರಯವುಳ್ಳ ಗುರುವಿಲ್ಲ, ಅರಿಯಲಿಲ್ಲದ ಅರುವಿ ಸ್ವೀಕರಿಸಿ ಅರಿಯಲಿಲ್ಲ, ಮರೆಯಲಿಲ್ಲ, ದನುಪಮರ್ ನಿಲವು ಅಭದಾರಯ್ಯ ಹೀಗೆಯೊಂದು ನಿರ್ಣಯಿಸುವರಾರಯ್ಯ. ಇಲ್ಲಿ ಅರಿಯಲಿಲ್ಲದ ಅರುವ ನರುಹಿಸಿದ ಗುರುಭಕ್ತಿಯಲ್ಲಿ ಭಾವ ಬಲಿದುದೆ ಬ್ರಹ್ಮಜ್ಞಾನ ಗುರುಭಕ್ತಿ ಕಲ್ಪಿತರ ಭಕ್ತಿಯಲ್ಲ ಭ್ರಾಂತಿ ಭಾವದಿಂದುಕ್ತವಾದ ಭಕ್ತಿಯು ಅಲ್ಲ, ನಾಮ ಸೀಮೆಯಿಂದುಕ್ತವಾದ ಭಕ್ತಿಯು ಅಲ್ಲ, ಅದು ಸೀಮೆ ಸಾಯುಜ್ಯವ ಮೀರಿದವರ ಭಕ್ತಿ ಎಂದು ಹೇಳಿದೆ.

ಸೀಮೆ ಸಾಯುಜ್ಯವ ಮೀರಿದ ಘನಗುರುವಿನ ಇರುವೆ ತನ್ನಯ ಇರವು ಈರ್ವರ

ಇರವು ಅರಿವು ಒಂದಾದುದು ಇದು ಪರಾತ್ಪರ ಭಕ್ತಿ. ನಾಮಂಗಳೆ ನಿರ್ನಾಮವಾದ ಅರಿವು ಇರವು ಉಪಮಿಸುವದದೆಂತು?

ಆದಿ ಅಕ್ಷರವ ನರಿಯಹೋಗಿ ಶೃತಿಗಗೋಚರರು ಧ್ವನಿಯ ಮರೆಯಲ್ಲಿರ್ದುದಂತು ಮುನ್ನವೆ ಆದವರು ತಮ್ಮಿಂದ ತಾವಾದವರು ಲಿಂಗದಲ್ಲಿ ಉದಯವಾದ ಲಿಂಗೈಕ್ಯರಿಗೆ ಮತ್ತೊಂದೆಡೆಯುಂಟೆ? ಇದು ಪರಾತ್ಪರ ಇರುವುಳ್ಳ ಗುರುಲಿಂಗುವಯ ಇಲ್ಲಿ ಕಾಣುವದಾಗಿದೆ. ಇಂತಪ್ಪ ಮಹದರುವುಳ್ಳ ಗುರುಭಕ್ತಿಯಲ್ಲಿ ಭಾವ ಬಲಿತುದೆ ಬ್ರಹ್ಮಜ್ಞಾನ ಇಲ್ಲಿಯೆ ಗುರುಭಕ್ತಿ ಸತ್ತ ಗುರುವಿನ ಕಾರುಣ್ಯದ ಸತ್ತುಕೊಂಬ ಶಿಷ್ಯ ಬದುಕಿದವರು ಅಹಮಿಲ್ಲದ ಚಿದ್ಘನವೆ ತಮ್ಮಿರುವೇ ಅರುವಾಗಿ ಪ್ರಜ್ವಲಿಸಿದುದು ಎಂದು ಹೇಳಿದರು.

ಗುರು ಭಕ್ತಿಯಲ್ಲಿ ಭಾವನಿಂದುದೆ ಸಹಜ ಸ್ಥಿತಿ ಅಭೇದ್ಯ ಗುರುಪದವ ನರಿಯ ಹೋಗಿ ತನ್ನೊಳತಾನೆ ಗುರುಲಿಂಗದುದಯವಾಗಿ ಅರಿವ ಅರುಹಿಸಿಕೊಂವ ಈ ಉಭಯವ ಅರಿಯದಂತಿಹುದೆ ಗುರುವ ಕಂಡುದು ತನ್ನೊಳಗೆ ತನ್ನಂತರಂಗದಲ್ಲಿ ತನ್ನಿರುವಾಹಗಿಹ ಗುರು ಲಿಂಗದಲ್ಲಿ ಹೊರಗೂ ಗುರುಲಿಂಗ ಒಳಹೊರಗೆನ್ನದೆ ಖಂಡಿತವಲ್ಲದ ಅಖಂಡಿತನಾಗಿಹ ಗುರುದರ್ಶನ. ಇದು ತೆರಹಿಲ್ಲದಭವನ ದರ್ಶನ ನುಡಿಗೆಡೆಗೊಡದವನ ದರ್ಶನವಾದ್ದರಿಂದ ಭತಿರದೃಷ್ಠಿ ಭರಿತಭಾವ ತುಂಬಿ ತುಳುಕದ ಭಾವ ಸಂದೇಹಕ್ಕೆಡೆಗೊಡದ ಭಾವ ನೆರೆ ಅರಿದ ಭಾವ ಇಂತಪ್ಪ ಅಖಮಡ ಭಾವನಿಂದುದೆ ಸಹಜ ಸ್ಥಿತಿ ಇದು ನಾನೀನೆಂಬೆ ಸಂದಳಿದ ಸ್ಥಿತಿ ತೆರಹಿಲ್ಲದ ಘನವು ಕರಿಗೊಂಡ ನಿಲವು.

ಗುರುಭಕ್ತಿ ಮರೆವ ಅರಿವ ಮರೆ ತಂದೆ ಓಗೋ ಗುರು ಭಕ್ತಿ ಗುರುವರಿಯಹೋಗಿ ಗುರುವಿನಲ್ಲಿ ಒಂದಾದುದು ಈ ಒಂದಾದ ಭಕ್ತಿ ಶಬ್ದಕ್ಕೆ ತೆರಹಿಲ್ಲದ ಭಕ್ತಿ ಇದು ತೃಪ್ತರೂಪ ತೃಪ್ತಿ ನಿಲಯ ಪರಮಾನಂದದ ರಸಾಬ್ದಿ ಇಲ್ಲಿ ಅರಿಯೆಂಬ ಮರವಿಂಗೂ ಅವಕಾಶವಿಲ್ಲ. ಅರಿತೆನೆಂಬ ಅರಿಯುವ ಅರುವಿಂಗೂ ಅವಕಾಶವಿಲ್ಲ. ಬುದ್ಧಿಯೆ ಭಸ್ಮವಾಗಿರುವಲ್ಲಿ ಮರವರುವಿನ ಎಡೆಯೂಟ ಅಲ್ಲಿಬಾರದು. ಇದು ಮಹಾಲಿಂಗರೂಪಿ ಅರಿಯಲಿಲ್ಲದ ಅರುವು ಪ್ರಜ್ವ ಲಿಸುವದರಿಂದ ನಿಜ ನಿಲವು. ಸುಖದ ಸುಖವೆ ಸ್ವಸ್ವರೂಪವಾಗಿ ಬೆಳಗುವಲ್ಲಿ ನಾಮ ರೂಪಂಗಳ ಭ್ರಮಿತ ಭಾವ ಮರೆಯುವದು ಸಹಜ ಗುರುಭಕ್ತಿಯ ಮೂಕ ಸಕ್ಕರೆಯ ಸವಿಧ ಸುಧಾರಸ ಹೇಗೋ ಹಾಗೇ ನಿಶಬ್ದ ಘನವ ವೇಧಿಸಿದ ಭಕ್ತಿ. ಇಲ್ಲಿಯೆ ಸುಖ ಅಪಾರವಾದುದರಿಂದ ಸಕಲವು ಮರೆತು ಹೋಗುವ ಕೂಟಸ್ಥ ನಿಲವು ಇದು ಕಾರಣ ಮರೆ ತಂದೆ ಎಂದು ಹೇಳಿಹರು.

ಕಪಿಲಸಿದ್ಧ ಮಲ್ಲಿಕಾರ್ಜುನ ದೇವನ ಮಹಾಮನೆ ಇದು ಸತ್ಯಕೇಳಾ ಶಿವತಾಯೆಎ, ಗುರುಭಕ್ತಿಯು ಕಪಿಲಸಿದ್ದ ಮಲ್ಲಿಕಾರ್ಜುನ ದೇವನ ಮಹಾಮನೆ ಏಕೆಂದರೆ ಶ್ರೀಗುರು ಅಕಲ್ಪಿತ ಅನುಪಮ ನಾಮಂಗಳ ನಿರ್ನಾಮ ಮಾಡುವ ಬೆಳಗುಳ್ಳ ಜ್ಯೋತಿ ಏಕತ್ವವದು ಗುರು ಭಕ್ತಿ ಗುರುಭಕ್ತಿ ಬೇರಲ್ಲ, ಕಪಿಲಸಿದ್ದ ಮಲ್ಲಿಕಾರ್ಜುನ ದೇವನ ಮಹಾಮನೆ ಬೇರಲ್ಲ, ಬೋಧಾ ಬೋಧಕ್ಕೆ ಮೀರಿ ಬೆಳಗುವ ಸ್ವತೇಜ ಬೇರಲ್ಲ ಗುರು ಘನನನು ಬೇರಲ್ಲ ಕಪಿಲ ಸಿದ್ದ ಮಲ್ಲಿಕಾರ್ಜುನನ ಬೆಳಗುವ ಬೆಳಗು ಬೇರಲ್ಲ. ತಾನು ಬೇರಲ್ಲ.

ಆವಲ್ಲಿ ಗುರುಭಕ್ತಿಯು ನೆಲೆಯೂರಿರುವದು ಅಲ್ಲಿ ಬೆಳಗುಳ್ಳೆ ಬೆಳಗು ಸ್ವಯಂ ಬೆಳಗು ಪ್ರಜ್ವಲಿಸುವದು. ಅದು ಎರವಲವಾಗಿ ಬಂದ ಬೆಳಗು ಅಲ್ಲ. ಸ್ವಯಮೇವ ಬೆಳ

ಗುಳ್ಳ ಬೆಳಗು ಉದಯಾಸ್ತವೆನ್ನದೆ ಬೆಳಗುಳ್ಳ ಸ್ವಯಂಜ್ಯೋತಿ ಈ ಚಿಜ್ಯೋತಿಯ ಗುರು ರೂಪದಿಂದ ಭಕ್ತರ ಹೃದಯದಲ್ಲಿ ಬೆಳಗುವದರಿಂದ ಮಹಾಮನೆ ಎಂದು ಹೇಳಿಹರು.

ಇಂತಪ್ಪ ಮಹದರಿವು ಅರಿದಂದು ನೋಡಿದವರಿಗೆ ಸತ್ಯವದು ಎಂದು ಹೇಳಿಹರು. ಕೆಲಬರು ಗುರುಭಕ್ತರಾಗಿಯೂ ಗುರುಘನವ ತಿಳಿಯಲಿಲ್ಲ. ಗುರು ಕಾರುಣ್ಯದಿಂದ ದೊರೆತ ಅದ್ವೈತವೆಂಬ ಶಿಶು ಕರಸ್ಥಲದಲ್ಲಿ ಬೆಳಗುವ ಲಿಂಗಘನವು ಅರಿಯರು ಅರಿಯದೆ ಕರಸ್ಥಲ ಲಿಂಗ ದೇವನ ಇವರ ಕುಲದೈವ ಎಂದು ಹೇಳುವ ವೀರಶೈವರು ಇಹರು ಅವರಿಗೆ ಶೈವ ಭಕ್ತರೆನಬೇಕೋ? ಗುರುಭಕ್ತರೆನಬೇಕೋ? ಲಿಂಗಭಕ್ತರೆನಬೇಕೋ? ಇದಾರು ನಿರ್ಧರಿಸು ವದು. ಅವರವರ ಹೃದಯವೆ ಉತ್ತರವಾಗಿದೆ.

ವಚನ - 29

> **ವೀರಭದ್ರ ಬಸವಣ್ಣ ಮಲ್ಲಿಕಾರ್ಜುನನೆಂಬ ದೈವಂಗಳಿಗೆ**
> **ನಮ್ಮ ಕುಲ ದೈವಂಗಳೆಂದು**
> **ಹೇಳುವವರಿಗೆ ಗುರುವಿಲ್ಲ. ಲಿಂಗವಿಲ್ಲ ಪಾದೋದಕವಿಲ್ಲ.**
> **ಪ್ರಸಾದವಿಲ್ಲ ಕೂಡಲ ಚೆನ್ನಸಂಗಮದೇವಾ.**

ತಾತ್ಪರ್ಯ: ವೀರಭದ್ರ ಬಸವಣ್ಣ ಮಲ್ಲಿಕಾರ್ಜುನನೆಂಬ ದೈವಂಗಳಿಗೆ ಕುಲ ದೈವಂಗ ಳೆಂದು ಹೇಳುವ ಮಾನವ ಸಮಾಜ ಬಹಳ ಇದೆ. ಬಹು ಜನರಿಗೆ ದೈವಂಗಳಿಗೆ ದೇವರೆನ್ನುವ ಪರಿಪಾಠವಾಗಿದೆ. ದೈವಂಗಳೆಂದೆನಿಸಿಕೊಳ್ಳುವವು ದೇವ ನಾಗಲಾರವು ಕುಲದೈವಂಗಳು ದೇವ ಆಗಲಾರವು.

ಮಾನವ ಜನ್ಮ ಅರುವುಳ್ಳ ಜನ್ಮ ಅರು ಸ್ವರೂಪ ಅರುವುಳ್ಳ ಕಾಲಕ್ಕೆ ಅರುವ ಅರಿದ ರಿದು ನೋಡಿದಡೆ ಅರು ಸ್ವರೂಪನೆ ದೇವನು ಈ ದೇವನು ಏಕ ಏವ ಅದ್ವಿತೀಯ ಸಚ್ಚಿ ದಾನಂದಮಯನಾದ ಚೈತನ್ಯ ದೇವನೆ ದೇವನು ಎಂಬರಿವು ಬಹುಜನರಿಗೆ ಇಲ್ಲ. ನರಜನ್ಮ ಅರುವಿನ ಜನ್ಮ ನಿಜ. ಅರುವಿನ ಘನವ ತಿಳಿಯದಿದ್ದಲ್ಲಿ ಎನನೋಡಿದಡೇನು? ಎನ ಕೇಳಿದ ಡೇನು, ಎನ ಹೇಳಿದಡೇನು? ಅದು ಮರವಿನಲ್ಲಿ ಗಣನೆಯಾಗುವದು. ಮತಿವಂತರು ಇಹರು ಅವರಿಗೆ ಅರುವಿಂಗರಯವಾದ ಅರುವು ಇಲ್ಲದುದರಿಂದ ಅರುವುಳ್ಳದವನಾದರೂ ಭೇದ ಜ್ಞಾನವೂ ನಷ್ಟವಾಗಲಿಲ್ಲ.

ಇದುವೆ ಪ್ರಧಾನವಾದುದರಿಂದ ದೈವಂಗಳಲ್ಲಿ ಭೇದ, ಗುರು, ಲಿಂಗ, ಜಂಗಮರ ಲ್ಲಿಯೂ ಕೂಡ ಭೇದವೆ ಮುಂದು ಮಾಡಿತ್ತು. ಹೀಗಾಗಿ ಮಾನವ ಅರುವಿನ ಪಿಂಡವಾ ದರೂ ಅರುವಿನ ಘನತ್ವ ತಿಳಿಉದ್ದರಿಂದ ಅದು ಪ್ರಕೃತಿಯಾಗಿ ಕಂಡಿತ್ತು. ಮಾನವ ಪ್ರಕೃತಿವಶ ನಾಗಿ ಪುರುಷನಾರು? ಎಂಬುದನರಿಯದೆ ನಾನಾಗುಣ ಕ್ರಿಯೆಯುಳ್ಳವನಾಗಿ ಭಿನ್‌ಜ್ಞಾನ ಭಿನ್ ದೃಷ್ಠಿ ಭಿನ್ನ ಭಾವುಕನಾಗಿ ಕಲ್ಪಿತವಾದ ದೈವಂಗಳಿಗೆ ದೇವರೆನ್ನುವ ರೂಢಿಯಾಗಿ ಇದ ರಿಂದ ಮತಿವಂತರಿಗೂ ಭಾವಿಕರಿಗೂ ಆಸ್ತಿಕರಿಗೂ ಅಧಿಷ್ಠಾನ ಜ್ಞಾನವಿಲ್ಲದೆ ಆಘಾತವಾ ಯಿತು. ಇದರಿಂದ ಅಂಧ ಶ್ರದ್ಧೆ ಬೆಳೆದು ಸಮಾಜ ಕುರುಡಾಯಿತು. ಇಲ್ಲಿ ಗುರುವಾರೊ? ಲಿಂಗವಾವುದೋ? ಜಂಗಮವಾವುದು ಪ್ರಸಾದವಾವುದು ತಿಳಿಯದಂತಾಗಿ ಲಿಂಗಾಂಗ ಸಾಮ

ರಸ್ಯ ಜ್ಞಾನವೆ ಕುಂಠಿತವಾಯಿತು.

ಸದ್ಯದ ಸಮಯದಲ್ಲಿ ಗುರುವಿಂಗೆ ಗುರುವಾಗಿಹ ಗುರುಲಿಂಗ ಸ್ವಯಂಜ್ಯೋತಿ ಲಿಂಗದಿರುವ ಕರುಣಿಸುವ ಪ್ರತಮಾಚಾರ್ಯನಿಲ್ಲ ಲಿಂಗಕ್ಕೆ ಲಿಂಗವಾಗಿಹ ಸ್ವಯಂಜ್ಯೋತಿ ಲಿಂಗದಿರುವ ಕರುಣಿಸುವ ಘನ ಚೈತನ್ಯ ಜಂಗಮನಿಲ್ಲ. ಇದು ಕಾರಣ ವೀರಶೈವರು ಲಿಂಗಧ ರಿಸಿದರೂ ಲಿಂಗಜ್ಞಾನವಿಲ್ಲದಾಗಿದೆ. ಲಿಂಗದಿರುವು ತಿಳಿಯಬೇಕೆಂಬ ಮಹದಾಶೆಯಲ್ಲದೆ ಲಿಂಗ ಪೂಜಿಸುವ ಲಿಂಗಾರ್ಚಕರೆ ವೀರಶೈವರು ಹೆಚ್ಚಾಗಿ ಇರುವುದರಿಂದ ಲಿಂಗ, ಲಿಂಗ, ಎಂಬ ಭಾವ ಗುರು, ಗುರು ಎಂಬ ಭಾವ ಭಾವಿಸುವದು ಸಹಜ ಬೇರೂರಿ ಅಂಧ ಶ್ರದ್ಧೆಗೆ ನಾಂದಿ ಯಾದಂತಾಗಿಹುದು ಹೀಗಾದಲ್ಲಿ ತೆರಹಿಲ್ಲದ ಲಿಂಗ ಭರಿತವೆಂಬ ಜ್ಞಾನ ಆರೂರು ಕೇಳ ದಂತಾಗಿ ಭಾವಿಸದಂತಾಗಿ ಭಾವಿಸದಂತಾಗಿ ಅರಿಯದಂತಾಗಿ ಲಿಂಗದೇವನ ಪೂಜಿಸಿಯೂ ಲಿಂಗ ಜ್ಞಾನವಿಲ್ಲವಾಯಿತ್ತು. ಸಕಲರ ಸ್ವರೂಪವಾಗಿಹ ಲಿಂಗ ಅದು ಕುರುಗುಳ್ಳದ್ದಾಗಿ ಪೂಜಾಲಿಂಗವಾಯಿತ್ತು. ಸಕಲರ ಸ್ವರೂಪವಾಗಿಹ ಲಿಂಗ ಅದು ಕುರುಹಳ್ಳದ್ದಾಗಿ ಪೂಜಾ ಲಿಂಗವಾಯಿತ್ತು. ತೆರಹಿಲ್ಲದ ಲಿಂಗಭರಿತವಾದುದು ಸಮಯದವರಲಿಂಗವಾಯಿತ್ತು. ವ್ಯಾಪಕ ಲಿಂಗ ಸಮತತ್ವ ಲಿಂಗ ಒಂದು ಪಕ್ಷದ ಲಿಂಗವಾಯಿತು. ಅಂಗದ ಮೇಲೆ ಲಿಂಗಧರಿಸುವ ವರ ಲಿಂಗವಾಯಿತ್ತು. ಅಂಗ ಪ್ರಾಣದೊಳಗೆ ಬೆರಸಿಪ್ಪಲಿಂಗ ಇದು ಪೂಜಿಸುವವರ ಪೂಜಾ ಲಿಂಗವಾಗಿ ಇಷ್ಟ ಲಿಂಗವೆನಿಸಿತ್ತು.

ಇದು ಲಿಂಗಜ್ಞಾನವಾಗದ ಪರಿಣಾಮ ವೀರಶೈವರು ಅಂಗದ ಮೇಲೆ ಲಿಂಗಧರಿಸಿ ದರೂ ಲಿಂಗ ಜ್ಞಾನ ಮಾಡಿಕೊಳ್ಳುವ ಇಚ್ಛೆಯಿಲ್ಲ. ಭಕ್ತರಿಗೆ ಲಿಂಗಧರಿಸಿ ಲಿಂಗ ಪೂಜಿಸಲು ಅಪ್ಪಣೆ ಮಾಡದ ಗುರುಘನನಿಗೂ ಲಿಂಗಜ್ಞಾನ ಮಾಡಿಕೊಡಬೇಕೆನ್ನುವ ಕರುಣೆಯಿಲ್ಲ. ಹೀಗಾಗಿ ವೀರಶೈವರಲ್ಲಿ ಅಂಧ ಶ್ರದ್ಧೆ ಮುಗ್ಧ ಭಾವಿಕತನ ಬೆಳೆದು ಬಂದುದರಿಂದ ತತ್ವಜ್ಞಾನಿಗಳಿಗೆ ಪ್ರಧಾನತ್ವವಿಲ್ಲವಾದ್ದರಿಂದ ಲಿಂಗಾಂಗ ಸಾಮರಸ್ಯ ಜ್ಞಾನ ತಿಳಿಯುವದದೆಂತು ಸಾಧ್ಯ. ಇವರು ಜೀವ ಬ್ರಹ್ಮರೇಕತ್ವ ಜ್ಞಾನಕ್ಕೆ ಒಪ್ಪುವದದೆಂತು ನಿತ್ಯ ನಿರಂಜನ ತಾನೆಂದು ಅರಿಯುವದ ದೆಂತು? ಆರದು ಗುರು ಕರುಣೆಯಿಂದ ಅರುವಿನ ಪಿಂಡವಾಗಿದೆ. ಅವರು ವೀರಭದ್ರ ಬಸ ವಣ್ಣ ಮಲ್ಲಿಕಾರ್ಜುನ ದೈವಂಗಳಿಗೆ ದೇವನೆನ್ನರು ಅವರು ದೇವನ ಅರಿತುದರಿಂದ ಏಕ ಎವ ಅದ್ವಿತೀಯ ಘನ ಚೈತನ್ಯವೆ ದೇವನೆಂದು ಅವರಿಗೆ ಕರಿಗೊಂಡಿದೆ. ಇದು ಕಾರಣ ಅಜಾತರು ಸಕಲ ದೇಹದೊಳಗೆ ಬೆಳಗುವ ಚಿಜ್ಯೋತಿ ಲಿಂಗೆವ ಅವರ ದೇವ ಅವರ ಸ್ವರೂಪ ವಿಶ್ವವೆ. ಚೈತನ್ಯಮಯ ಲಿಂಗ ಚೈತನ್ಯಮಯ ಲಿಂಗವೆ ವಿಶ್ವ ತಾನು ಲಿಂಗ ಲಿಂಗ ತಾನು ಎಂಬ ವಿಶ್ವಾಸ ಭಾವ, ಅರಿವು, ಹೃದಯದಲ್ಲಿ ಕರಿಗೊಂಡಿದೆ.

ಅಂಗ, ಲಿಂಗ, ಒಂದಾಗಿ ಕಾಣುವದೆ. ಅವರ ಅರು ಹೃದಯ ಅಲ್ಲಿ ಸಮರತಿ ಸಮ ದೃಷ್ಠಿ ಸಮಭಾವ, ಸಮಗೋಷ್ಠಿ, ಸಮ್ಯಜ್ಞಾನ, ಅಲ್ಲಿ ತುಂಬಿದೆ ಇದು ಕಾರಣ ಗುರುಕರುಣೆ ವುಳ್ಳವರು ಗುರುಭಕ್ತರು. ಗುರುವ ತನ್ನಲ್ಲಿ ಕಂಡವರು. ತನ್ನ ಗುರುವಿನಲ್ಲಿ ಕಂಡುದರಿಂದ ಸಮರತಿ ಉಳ್ಳವರು ಸಮದೃಷ್ಠಿಯುಳ್ಳವರು ಎಂದು ಹೇಳಿದೆ. ಅಚಂತ್ಯಪ್ರಮಾಣಗಮ್ಯ ಅಕಲ್ಪಿ ತದಿರುವು ಆವ ಹೃದಯದಲ್ಲಿ ಮಹಾ ಬೆಳಗುಳ್ಳದ್ದಾಗಿದೆ. ಅವರು ಚೈತನ್ಯ ಲಿಮಗವಾಗಿಹ ಲಿಂಗವುಳ್ಳವರು ಸಚ್ಚಿದ್ರೂಪವಾದ ಜ್ಞಾನಾನುಭವವೆ ಅಲ್ಲಿ ಪಾದೋದಕವಾಗಿದೆ. ನಿಸ್ಸೀಮ ವಾದ ಸತ್ಯಜ್ಞಾನಾನಂದವೆ ಅಲ್ಲಿ ಪ್ರಸಾದವಾಗಿದೆ. ಇಂತಪ್ಪ ಜ್ಞಾನಾರ್ಜುನಯೆ ಅಂಧ ಶ್ರದ್ಧೆ

ಮೂಢ ಭಾವ, ಮುಗ್ದ ಭಾವ, ಹೊಡದೋಡಿಸುವ ಪ್ರಚಂಡ ಜ್ಞಾನವಾಗಿದೆ. ಇಂತಪ್ಪ ಮಹಾಜ್ಞಾನವಿಲ್ಲದವರಿಗೆ ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ, ಪಾದೋದಕ, ಪ್ರಸಾದವಿಲ್ಲ, ಕೂಡಲಚೆನ್ನಸಂಗಮದೇವಾ ಎಂದು ಹೇಳಿದರು.

ವಚನ - 30

> **ಮಧುರ ಗುಣವ ಇರುವೆ ಬಲ್ಲುದು ವೇಳೆಯ ಗುಣ ಕೋಳಿ ಬಲ್ಲದು**
> **ಗೋತ್ರದ ಗುಣ ಕಾಗೆ ಬಲ್ಲುದು ಮನುಷ್ಯ ಜನ್ಮದಲ್ಲಿ ಹುಟ್ಟಿ**
> **ಶಿವಜ್ಞಾನಿಯ ಶಿವಜ್ಞಾನಿಗಳ ಬರವ ನರಿಯದಿಪ್ಪಡೆ**
> **ಆ ಕೋಳಿ ಕಾಗೆ ಇರುವೆಗಿಂತಲೂ ಕರಕಷ್ಠ ಕಾಣಾ ಕೂಡಲ ಚೆನ್ನಸಂಗಮದೇವಾ.**

ತಾತ್ಪರ್ಯ: ಮಧುರ ಗುಣಂ ಇರುವೆ ಬಲ್ಲದು. ಇರುವೆಗೆ ಪ್ರಿಯವಾದುದು ಮಧುರ : ಮಧುರ ಎಲ್ಲಿದ್ದರೂ ಅದನ್ನು ಅದು ಬಲ್ಲದು. ಗಿಡ ಮರಗಳ ಎಲೆ, ಪುಷ್ಪ ಫಲಂಗಳಲ್ಲಿದ್ದರೂ ಅದು ಬಲ್ಲದೂ ಕಬ್ಬು ಬಾಳೆ ಮಾವುಗಳಲ್ಲಿದ್ದುದು ಅದು ಬಲ್ಲದು. ವೇಳ್ಯೆಯ ಗುಣ ಕೋಳಿ ಬಲ್ಲುದು. ಕೋಳಿಯು ಬ್ರಾಹ್ಮಿ ಮುಹೂರ್ತವ ಬಲ್ಲದು. ಅದು ಬೆಳಗಿನ ಜಾವದಲ್ಲಿ ಎಚ್ಚರವಾಗಿರುವದರಿಂದ ತನ್ನ ಕೂಗಿನಿಂದ ವೇಳ್ಯವ ಬಲ್ಲದು ತಿಳಿಸುತ್ತದೆ. ಗೋತ್ರ ಗುಣ ಕಾಗೆ ಬಲ್ಲದು. ಕಾಗೆಗೆ ತನ್ನ ಗೋತ್ರದ ಅರಿವು ಚೆನ್ನಾಗಿ ತಿಳಿದಿರುವದರಿಂದ ಕಾಗೆ ಒಂದಗಳ ಕಂಡರೆ ತನ್ನ ಕುಲವನ್ನೆ ಕೂಡಿಸುತಿಹುದು. ಅದರೊಳಗೆ ಇನ್ನೊಂದು ಕುಲದ್ದು ಬಂದರೆ ಸೇರದು. ಮಧುರ ಗುಣ ಇರುವೆ ಬಲ್ಲುದು. ಎಲ್ಲಕ್ಕಿಂತಲೂ ಮಧುರವಾದುದು ಅರುವಿನ ಇರವು ಈ ಇರವು ಆರು ಬಲ್ಲರು ಅವರಿಗೆ ಮಧುರಾಮೃತವು ಬಹುಪ್ರಿಯವಾದುದು ಸಕಲರಿಗೂ ಮಧುಬಹುಪ್ರಿಯವಾದುದು ಹಾಗೆ ಜ್ಞಾನಾಮೃತವು ಜ್ಞಾನಾನಂದ ಬಹು ಪ್ರಿಯವಾದುದು. ಇದಾರಿಗೂ ಬೇಡವಾಗಿದೆ. ಇದರಿಂದ ಅತ್ಯಂತ ದುಃಖದ ನಿವೃತ್ತಿ ಸಕಲ ರಿಗೂ ಬೇಕಾದುದು ಪರಮಾನಂದ ಪ್ರಾಪ್ತಯು ಬೇಕಾದುದು. ಸಕಲ ಜೀವಿಗಳ ಲೇಸನೆ ಬಯಸುವ ಕೂಡಲ ಸಂಗನ ಸದಿಚ್ಚೆಯು ಇದುವೆ ದಯಾದೃಷ್ಠಿಯುಯಾದುದರಿಂದ ಮಧುರ ಗುಣವಾಗಿದೆ.

ವೇಳೆಯ ಗುಣ ಕೋಳಿ ಬಲ್ಲದು. ಇದಾವ ವೇಳ್ಯೆಯು? ಇದಾವ ಕೋಳಿ? ಏನು ಬಲ್ಲುದು ಇದು ಬ್ರಾಹ್ಮಿ ಮುಹೂರ್ತವ ಬಲ್ಲದು ಬ್ರಹ್ಮ ಅರುವುಳ್ಳ ಕೋಳಿ ಇದು ಅರಿಯ ಬಾರದ ಘನದಿರುವುಳ್ಳ ಅರುವು ಬಲ್ಲದು. ದೇಹಿಗೆ ದೇಹಿಯಾದ ಭೇದಬಲ್ಲದು ಇದಾವ ಕೋಳಿ ಅವರ್ಣೀಯ ಕೋಳಿ. ಈ ಕೋಳಿಗೆ ಬೆಳಗುಳ್ಳ ಬೆಳಗಿನ ಜಾವರೂಪ ಪ್ರಶಾಂತವ ಕಂಡ ಕೋಳಿ. ಇದರ ಕೂಗು ಸಕಲರು ಎಚ್ಚರವಾಗುವ ಕೂಗು. ಸಕಲವು ಶಿವೋಹಂ ಸಚ್ಚಿದಾನಂದೋಹಂ ಪರಿಪೂರ್ಣೊಹಂ ಎಂದೆನ್ನುವ ಕೂಗು. ಇದು ತೆರಹಿಲ್ಲದ ಮಹಾಘನದಿರುವುಳ್ಳ ಪರ ಬ್ರಹ್ಮ ಬೆಳಗಿನ ಜಾವದ ಕೂಗು, ತಾನೆ ಪರಬ್ರಹ್ಮನಾಗಿ ಕೂಗು ಈ ಕೂಗು ಕೇಳಿ ಸಕಲರು ಎಚ್ಚರದ ಎಚ್ಚರವಾಗುವುದಿಲ್ಲವೆಂದಲ್ಲಿ ಮಾನವ ಎಚ್ಚು ಕಾಲ ಬಾಳಿದರೂ ನಿರರ್ಥಕವು. ಇದು ಕಾರಣ ವೇಶ್ಯೆಯ ಗುಣ ಕೋಳಿ ಬಲ್ಲದು ಎಂದು ಹೇಳಿಹರು.

ಅರುರೂಪ ಪರಬ್ರಹ್ಮವಾಗಿಹ ಕೋಳಿ ಕೂಗಿದಾಗ ಭ್ರಮದಿಂದುಕ್ತವಾದ ಅತ್ಯಂತ

ದುಃಖವು ನಿವೃತ್ತವಾಗುವದು ಪರಮಾನಂದ ಪ್ರಾಪ್ತರೂಪ ಪ್ರಾಪ್ತಿಯು ಲಭಿಸುವದು. ಬೆಳಗಿನ ಜಾವ ಅರುವುಳ್ಳ ಮಾನವ ಜನ್ಮದಲ್ಲಿ ಲಭಿಸಿದುದು ಬೆಳಗಿನ ಜಾವ ಬೆಳಗುಳ್ಳ ಜಾವ ಈ ಜಾವದಲ್ಲ ತಾನಾರೆಂದು ತಿಳಿದಾಗ ಬೆಳಗಿನ ಜಾವ ವೇದ್ಯವಾಗುವದು ಆಗ ಸಕಲರ ಕೂಗು ಒಂದೆ. ಶಬ್ಮ ಅಪಶಬ್ದ ಶಬ್ದದಲ್ಲಿ ಕಂಡ ಸಮ ಸ್ವರೂಪ ಈ ಕೂಗಿನಿಂದ ನಿರಂತರ ಬೆಳಗುಳ್ಳ ಬೆಳಗಿನ ಜಾವ ಇದು ಅರುವಿನ ಜಾವ ಇದರಿಂದ ಅರುರೂಪಿ ಸ್ವಪ್ರಾಶನಾಗಿಹ ಚಿತ್ ಸೂರ್ಯನ ಪ್ರಜ್ವಲಿಸುವನ. ಅರುವಿನ ಜನ್ಮದಲ್ಲಿ ಬಂದ ಮೇಲೆ ತನ್ನ ಸ್ವತೇಜವು ತಾ ಕಂಡುದು.

ಗೋತ್ರದ ಗುಣ ಕಾಗೆ ಬಲ್ಲುದು ಕಾಗೆಗೆ ತನ್ನ ಸಜಾತಿಯೆ ಜ್ಞಾನ ಚೆನ್ನಾಗಿ ಇರುವದ ರತಿಂದ ಅದು ವಿಜಾತಿಯ ಸೇರದು. ಹಾಗೆ ಮಾನವರಿಗೆ ತನ್ನದಾದ ಆಸ್ತಿ, ಭಾತಿ, ಪ್ರಿಯ ವೆಂಬ ಜ್ಞಾನ ಚೆನ್ನಾಗೊ ಕರಿಗೊಂಡಲ್ಲಿ ತನಗಿಂತನ್ಯವಾದ ಸ್ಥಾವವರ ಜಂಗಮರೂಪಿ ಜವ ಸೇರನು ತನಗೆ ಸಚ್ಚಿದಾನಂದವಾಗಬೇಕು. ಎನು ಕಂಡರೂ ಏನ ಕೇಳಿದರೂ ಏನ ಮಾತಾನ ಡಿದರು ಸಚ್ಚಿದಾನಂದ, ಪರಮಾನಂದ, ಪೂರ್ಣಾನಂದ, ಅಖಂಡಾನಂದ್ದಾಗವೇಜಯ, ರೂಪ ಸಚ್ಚಿದಾನಂದ ಶಬ್ದ ಸಚ್ಚಿದಾನಂದ ಕಿವಿ ಸಚ್ಚಿದಾನಂದವೆಂಬ ನಿಸ್ಸೀಮತ್ವ ಕರಿಗೊಳ್ಳಬೇಕು. ಇದು ಒಂದಾದ ಘನತ್ವ. ಅರುವಿನ ಇದುವರಿತ ಘನತ್ವ ಈ ಕಾಗೆ ಅರುವಿನ ಗೋತ್ರಬ ಲ್ಲದು. ನಿಶಬ್ದ ಬ್ರಹ್ಮ ಮುಚ್ಚತ್ತೆ ಎಂಬ ಅರುವಿನ ಗೋತ್ರ ಬಲ್ಲದು ಇದು ಕಾರಣ ವೇಳೆಯ ಗುಣ ಕಾಗೆ ಬಲ್ಲದು ಎಂದು ಹೇಳಿಹರು.

ಮನುಷ್ಯಜನ್ಮದಲ್ಲಿ ಹುಟ್ಟಿ ಶಿವ ಜ್ಞಾನಿಗಳ ಬರವ ನರಿಯದಿದ್ದಡೆ ಆ ಕಾಗೆ, ಕೋಳಿ, ಇರುವೆಗಿಂತಲೂ ಕೀಳು ಎಂದು ಹೇಳಿರುವಲ್ಲಿ ಮನುಷ್ಯ ಜನ್ಮ ಹುಟ್ಟಿದುದು ಶಿವತತ್ವ ತಿಳಿ ಯಲು ಇದು ಅರುವಿನ ಜನ್ಮವಾದುದರಿಂದ ಅರುವಿನಿಂದ ಶಿವತತ್ವ ತಿಳಿಯಲು ಬಹು ಸುಲಭ ಅರುವೆಂದರೆ ಶಿವ. ಶಿವನೆಂದರೆ ಅರುವು ತನ್ನಲ್ಲಿದ್ದ ಅರುವ ತಿಳಿವವರೆ ಶಿವ ಸ್ವರೂ ಪ ತಿಳಿವವರು. ಶಿವ ಸ್ವರೂಪ ತಿಳಿಯುವದು ಬೇರಲ್ಲ, ತನ್ನ ಅರು ಸ್ವರೂಪ ತಿಳಿಯುವದು ಬೇರಲ್ಲ ಇದು ಕಾರಣ ಅದು ಸ್ವರೂಪವಾಗಿಹ ಮನುಷ್ಯ ಜನ್ಮದಲ್ಲಿ ಹುಟ್ಟಿದ ಬಳಿಕ ಶಿವ ತತ್ವ, ಶಿವಜ್ಞಾನ, ಶಿವಯೋಗದ ಬರವ ತಿಳಿಯುವದಾಗಬೇಕು. ಈ ಸುಯೋಗತಾನಾರೆಂದು ತನ್ನ ತಾ ಅರಿಯುವ ಯೋಗ ಇದು ಶಿವಜ್ಞಾನಿಗಳ ಬರವ ಅರಿಯುವ ಯೋಗ ಈ ಯೋಗ ತನ್ನೊಳ ತಾನು ತಿಳಿಯದಿರ್ದಡೆ ಆ ಕಾಗೆ ಕೋಳಿ ಇರುವೆಗಿಂತಲೂ ಕೀಳು ಎಂದು ಹೇಳಿಹರು.

ವಚನ - 31

ಅಷ್ಟವಿದಾರ್ಚನೆ ಷೋಡಶೋಪಚಾರ ಅರಸರಿಯದ ಬಿಟ್ಟೆ ಕಾಣಿಭೋ,
ಸಗುಣ, ನಿರ್ಗುಣ, ತೂರ್ಯ, ಸೂಕ್ಷ್ಮ ಅವು ನಿಮ್ಮನರಿವವೇ
ಕನ್ನಡಿಯೊಳಗಣ ಪ್ರತಿಬಿಂಬದಂತೆ ಅವು ತಮ್ಮ ತಾವರಿಯವು
ಅವು ಭಿನ್ನಭಾವದಿಂದ ಅರಸಲುಂಟೆ? ಕೂಡಲ ಚೆನ್ನ ಸಂಗಮದೇವಾ.

ತಾತ್ಪರ್ಯ: ಅಷ್ಟ ವಿದ್ಯಾರ್ಚನೆ ಷೋಡಶೋಪಚಾರ ಅರಸರಿಯದ ಬಿಟ್ಟಿಕಾಣಿಭೋ : ಬಹುಭಕ್ತರು ಭೇದ ಜ್ಞಾನಿಗಳು ಇದ್ದುದರಿಂದ ಸೇವ್ಯಸೇವಕ, ಪೂಜ್ಯ ಪೂಜಕ, ಅಂಶ ಅಂಶಿ,

ಭಾವುಕರು ದೇವನು ಸಾಕಾರನೆಂದು ಸಗುಣನೆಂದು ಪಾದ್ಯ ಅರ್ಘ್ಯ, ಅರ್ಚನೆ, ಪತ್ರಿ, ಪುಷ್ಪ ಗಂಧ, ಅಕ್ಷತೆಯಿಂದಲೂ ಯಜ್ಞೋಪವೀತ ಛತ್ರ, ಚಾಮರ, ವ್ಯಜನ ಗೀತ ವಾದ್ಯ, ನೃತ್ಯ ಪ್ರದಕ್ಷಿಣೆ ನಮಸ್ಕಾರ ಸ್ತೋತ್ರಗಳಿಂದಲೂ ಅಷ್ಟ ವಿದ್ಯಾರ್ಚನೆ ಮಾಡುವರು. ಶರಣರ ದೃಷ್ಠಿ ಯಲ್ಲಿ ಅಷ್ಟ ವಿದ್ಯಾರ್ಚನೆ, ಷೋಡಶೋಪಚಾರ, ಅರಸರಿಯದ ಬಿಟ್ಟ ಕಾಣಿಭೋ ಎಂದು ಜರಿದಿದ್ದಾರೆ. ಏಕೆಂದರೆ ಎರಡೆಂಭತ್ತು ಕೋಟಿ ವಚನಗಳ ಹಾಡಿ ಹಾಡಿ ಸೋತಿತ್ತೆನ್ನಮನ ಮನ ಘನವರಿಯದು ಎಂದು ಪ್ರಭುದೇವ ಬಿತ್ತರಿಸಿದುದು ನೋಡಿದಡೆ ಮನವು ಅರುವಿ ನಿಂದುಕ್ತವಾದ ಎರಡೆಂಭತ್ತುಕೋಟಿ ವಚನಂಗಳ ಹಾಡಿ ಸೋತುದಲ್ಲದೆ ಅದು ಲಿಂಗದೇವ ನರಿಯದಿದ್ದಲ್ಲಿ ಬಹಿರಂಗದಲ್ಲಿ ತೋರುವ ಪೂಜೆ ಸ್ತೋತ್ರಂಗಳು ಇವು ಅರಸರಿಯದ ಬಿಟ್ಟಿಕಾ ಣಿಭೋ ಎಂದು ಹೇಳಿಹಳು.

ಕೆಲಬರು ತಾವಾರೆಂದರಿಯದೆ ದೇವನನ್ನು ಸಗುಣ, ನಿರ್ಗುಣ, ತೂರ್ಯ, ಸೂಕ್ಷ್ಮ ವೆಂದು ಹೇಳುವಲ್ಲಿ ಇವುಗಳನ್ನು ತಾನು ಅರಿತನೋ? ಅಥವಾ ಇವು ತನ್ನು ಅರಿತವೋ? ಎಂದು ತನ್ನೊಳಗೆ ವಿಚಾರ ಮಾಡದ ಆಧ್ಯಾತ್ಮವಂತರು ಇದ್ದಾರೆ. ಇವರಿಗೆ ತನ್ನಿರುವು ನುಡಿಗೆ ಡೆಗೊಡದ ಘನವಾದುದು ಅದೀಗ ಸಗುಣ, ನಿರ್ಗುಣವೆಂದು ನುಡಿಗೊಳಪಟ್ಟಿತೆ? ನುಡಿಗೆಡೆ ಗೊಡದ ಘನ ತೂರ್ಯ ಸೂಕ್ಷವೆಂಬ ನಡೆಗೊಳಪಟ್ಟಿತೆ? ಇವರು ತಾನಾರೆಂದು ತನ್ನ ಮಹ ರಿವು ಅರಿಯದವರು ಎಂದು ತಿಳಿಯುವರು. ಇವು ಕನ್ನಡಿಯೊಳಗಿನ ಪ್ರತಿಬಿಂಬದಂತೆ ಅವು ತಮ್ಮ ತಾವರಿಯವು ಸಗುಣವೆ ಇರಲಿ ನುರ್ಗುಣವೆ ಇರಲಿ ತೂರ್ಯವೆ ಇರಲಿ ಸೂಕ್ಷ್ಮವೆ ಇರಲಿ ಇವು ಕನ್ನಡಿಯೊಳಗಣ ಪ್ರತಿಬಿಂಬದಂತೆ ತಮ್ಮ ತಾವರಿಯವು.

ಇವು ತನ್ನ ಭಾವವೆಂಬ ಕನ್ನಡಿಯೊಳಗಣ ಪ್ರತಿಬಿಂಬ ಆಭಾಸ ತನ್ನ ಸ್ವರೂಪ ವಾಗುವು ಏಕೆಂದರೆ ತಾನಾರೆಂದರಿದ ಬಳಿಕೆ ಅವ ಭಿನ್ ಭಾವದಿಂದ ಅರಸಲುಂಟೆ? ಕೂಡಲ ಚೆನ್ನ ಸಂಗಮದೇವಾ. ತನ್ನನರಿಯದ ಮುನ್ನ ಸಗುಣವೆಂದ ನಿರ್ಗುಣವೆಂದ ತೂರ್ಯ ನೆಂದ ಸೂಕ್ಷ್ಮವೆಂದ ಅರಿತಲ್ಲಿ ಭಾವಕ್ಕಿಂಬಿಲ್ಲ ಶಬ್ದ ಮೀಸಲು ನುಡಿಗಡೆಯಿಲ್ಲ ಎಡೆಗೆ ಕಡೆ ಯಿಲ್ಲ ಗುಹೇಶ್ವರ ಲಿಂಗ ವೇಧಿಸಲೊಡನೆ ಎಂದು ತನ್ನ ತಾನರಿತ ಘನತ್ವ ಇಲ್ಲಿ ಬಿತ್ತರಿಸಿ ಹನು. ಎಲ್ಲಿ ಭಿನ್ನ ಭಾವಿಗಳಾಗಿ ಹಲಬುವವರಾಗುಹರು ಅವರು ತತ್ತ್ವಜ್ಞರಲ್ಲ, ತಮ್ಮ ತಾವ ರಿತವರಲ್ಲ, ಅದಕಾಕಾಗಿ ಭೇದ ಜ್ಞಾನಿಗಳು ಅರಿತ ಶರಣ ನುಡಿಗೆಡೆಗೊಡದ ಘನದಿರುವೆ ತನ್ನಿರುವು ಎಂದು ತಿಳಿದುದರಿಂದನುಪಮ ತಾನೆ ನಿಃಕಳ ತಾನೆ ಆಗಿರುವದರಿಂದ ಮಹಾಂತ ಭಿನ್ನಭಾವದಿಂದ ಹೇಗೆ ಅರಸುವನು ಎಂದು ಹೇಳಿಹಳು.

ವಚನ - 32

ಅರ್ಥ ಸನ್ಯಾಸಿಯಾದಡೇನಯ್ಯ ಆವಂಗದಿಂದ ಬಂದಡೆಯೂ ಕೊಳ್ಳದಿರಬೇಕು.
ರುಚಿ ಸನ್ಯಾಸಿಯಾದಡೇನಯ್ಯ. ಜಿಹ್ವೆಯ ಕೊನೆಯಲ್ಲಿ ಮಧುರವನರಿಯದಿರಬೇಕು.
ಸ್ತ್ರೀ ಸನ್ಯಾಸಿಯಾದಡೇನಯ್ಯ ಜಾಗ್ರತ ಸ್ವಪ್ನ ಸುಷುಪ್ತಿಯಲ್ಲಿ ತಟ್ಟಲ್ಲದಿರಬೇಕು.
ದಿಗಂಬರಿಯಾದವಡೇನಯ್ಯ ಮನ ಬತ್ತಲೆ ಇರಬೇಕು. ಇಂತೀ ಚತುರ್ವಿಧವ
ನರಿಯದೆ ಹೊಲಬನರಿಯದೆ ವೃಥಾಕೆಟ್ಟರು ಕಾಣಾ ಚೆನ್ನಮಲ್ಲಿಕಾರ್ಜುನಾ.

ತಾತ್ಪರ್ಯ: ಸನ್ಯಾಸಿಗಳಲ್ಲಿ ಅರ್ಥ ಸನ್ಯಾಸಿ ಎಂದು ರುಚಿ ಸನ್ಯಾಸಿಯೆಂದು ಸ್ತ್ರೀ ಸನ್ಯಾಸಿಯೆಂದು ದಿಗಂಬರ ಸನ್ಯಾಸಿಯೆಂದು ಹೇಳಿಸಿಕೊಳ್ಳು ಸನ್ಯಾಸಿಗಳಿಗೆ ಕರಸ್ಥಲದ ಲಿಂಗ ದಲ್ಲಿ ದೃಷ್ಟಿ ನಟ್ಟ ಅಕ್ಕಮಹಾದೇವಿಯು ಸನ್ಯಾಸದ ಘನತ್ವ ಹೇಳಿಕೊಟ್ಟಿಹಳು. ಅರ್ಥ ಸನ್ಯಾಸಿ ಯಾದಡೇನಯ್ಯ ಆವಂಗದಿಂಕೊಳ್ಳದಿರಬೇಕು. ವಿರತಿಯು ಆವರೀತಿಯಲ್ಲಾಗಲಿ ಹಣವು ಬರಲಿ, ಭವಿಯ ಹಸ್ತದಿಂಬರಲಿ ಭಕ್ತನ ಹಸ್ತದಿಂ ಬರಲಿ ಅದನರಕೊಳ್ಳದಿರಬೇಕು. ಭವಿ ಯೆಂದರೆ ನಾಸ್ತಿಕನು ತಾನಾಗದ ತನ್ನದಾಗದ ದೇಹಾದಿಗಳೆ ತಾನೆಂದು ತನ್ನವೆಂದು ಅಹಂ ಮಮವುಳ್ಳವನಾದವನೆ ಭವಿ.

ಭಕ್ತನೆಂದರೆ ತನು, ಮನ, ಧನಗಳನ್ನೆ ಗುರುಲಿಂಗ ಜಂಗಮಕ್ಕೆ ಅರ್ಪಿಸಿದ ಸರ್ಮ ರ್ಪಣ ಭಕ್ತ ಇವರೀರ್ವರು ಭೇದ ಜ್ಞಾನವುಳ್ಳವರು. ಜಂಗಮಕ್ಕೆ ಅರ್ಪಿಸಿದ ಸರ್ವಾರ್ಪಣ ಭಕ್ತ ಇವರೀರ್ವರು ಭೇದ ಜ್ಞಾನವುಳ್ಳವರು. ಇದರಿಂದ ಕೊಳ್ಳದಿರಬೇಕು. ಸನ್ಯಾಸಿಯು ಅಂಗ ಬುದ್ಧಿಯುಳ್ಳವನಾಗದೆ ಲಿಂಗ ಬುದ್ಧಿಯಿಂದುಕ್ತನಾದ ಲಿಂಗ ದೇಹಿಯಾಗಿರಬೇಕು. ಗುರುದೇವನ ಕೈಯಲ್ಲಿ ಆನೆಂಬುದು ಸತ್ತು ಹುಟ್ಟಿ ಆನು ನೀನೆಂಬ ಸಂದಳಿದಿರಬೇಕು.ಇಂತಪ್ಪ ಮಹಾಂತ ಅರ್ಥ ಸನ್ಯಾಸಿಯು ನಿಸ್ಸೀಮ ನಿಲುವುಳ್ಳ ನಿಜೈಕ್ಯ ಆವಂಗದಿಂ ಬಂದಡೆಯೂ ಕೊಳ್ಳದ ಘನವಂತ ಕೊಂಬುವ ಕೊಡುವ ಭಿನ್ನ ದೃಷ್ಠಿ ಭಿನ್‌ಜ್ಞಾನ ನಷ್ಟವಾದ್ದರಿಂದ ಲಿಂಗ ದೃಷ್ಠಿಯುಳ್ಳ ಮಹಾಮಹಿಮ ಇದು ಕಾರಣ ಈ ಮಹಾಂತ ಅರ್ಥ ಸನ್ಯಾಸಿಯು ಆವಂಗ ದಿಂದ ಬಂದಡೆಯು ಕೊಳ್ಳಡಿದ್ದಾನೆಂದು ತಿಳಿಯುವದು.

ಜಿಹ್ವೆಯು ಕೊನೆಯಲ್ಲಿ ಮಧುರವ ನರಿಯದವ ರುಚಿ ಸನ್ಯಾಸಿಯು ಕೆಲಬರು ಸನ್ಯಾಸಿಗಳು ತಾವೆಂದು ರಚಿಯ ತ್ಯಾಗ ಮಾಡಬೇಕೆಂದು ಷಡ್ರಸಗಳ ರಸನೇದ್ರಿಯಕ್ಕೆ ಮುಟ್ಟಿ ಸುವದಿಲ್ಲ, ಕೇವಲ ಸಪ್ಪಗಿರುವ ಆಹಾರವ ಸೇವಿಸುವರು ಇವರಿಗೆ ರುಚಿ ಸನ್ಯಾಸ ಎನ ಬೇಕೊ? ಅಥವಾ ಜಿಹ್ವೆಗೆ ಕೊನೆಯಲ್ಲಿ ಮಧುರವ ನರಿಯದವ ರುಚಿ ಸನ್ಯಾಸಿ ಎನಬೇಕು?

ರುಚಿ ಸನ್ಯಾಸಿಯಾದ ವಿರತಿ. ಲಿಂಗೈಕ್ಯ ವಿರತಿ, ಎಲ್ಲ ಸೋಂಕು ಅಲ್ಲಿಯೆ ತೆರಹಿಲ್ಲದ ಲಿಂಗ ಭರಿತ ಕಂಡವಿರತಿ ಭರಿತ ಭಾವಿ ಸಮರತಿ ವಿರತಿಯ ದೃಷ್ಠಿಗೆ ರುಚಿಯುಳ್ಳ ಷಡ್ರಸಗ ಳಿಲ್ಲ ರಸಗಳ ಸೇವಿಸುವ ರಸನೇಂದ್ರಿಯಿಲ್ಲ, ಇಲ್ಲಾದುದೆಲ್ಲಿಪ್ಪುದು ಇದ್ದ ಲಿಂಗ ಘನ ಒಳಹೊ ರಗೆನ್ನದೆ ಭರಿತವಾದ್ದರಿಂದ ಲಿಂಗ ಭೋಗೋಪಭೋಗಿಯು ರುಚಿಯ ಸನ್ಯಾಸಿಯು ಎಂದು ಹೇಳಿಹಳು.

ಒಳಹೊರಗೆನ್ನದೆ ಭರಿತವಾದ್ದರಿಂದ ಲಿಂಗ ಭೋಗೋಪ ಭೋಗಿಯು ರುಚಿಯ ಸನ್ಯಾಸಿಯು ಎಂದು ಹೇಳಿಹಳು. ಸ್ತ್ರೀ ಸನ್ಯಾಸಿಯಾದಡೇನಯ್ಯ ಜಾಗ್ರತ, ಸ್ವಪ್ನ, ಸುಷಪ್ತಿ ಯಲ್ಲಿ ತಟ್ಟಿಲ್ಲದಿರಬೇಕು. ಬಹು ವಿರತಿವಂತರು ಜಿತೇಂದ್ರಿಯರಾಗಿರುವದೆ ಸ್ತ್ರೀ ಸನ್ಯಾಸವೆ ಂದು ತಿಳಿದು ಸ್ತ್ರೀ ವಿಷಯ ಕನಸಿನಲ್ಲಿಯು ಸಹ ಸ್ಮೃತಿಗೆ ಬರಬಾರದೆಂದು ಕಾಯ, ವಾಚ, ಮನದಿಂದ, ಇಂದ್ರಿಯಂಗಳನಿಗ್ರಹಕ್ಕೂ ಮನಸ್ಸಿನ ಕಾಮಾಕಾರ ವೃತ್ತಿ ಸಹಿತ ತಮ್ಮಂತರಂದೊ ಳಗೆ ನಿರ್ವಿಷಯರಾಗಿಹೆವು ಎಂದು ತಿಳಿದಿಹರು.

ಜೀತೆಂದ್ರನಾದ ವಿರತಿ ತಾನಾರೆಂದು ತಿಳಿದು ಜೀತೆಂದ್ರಿಯನಾಗಿಹನೋ? ಅರಿಹುದೆ ಆಗಿಹನು ಅರಿತವನು ಸಮ ಪ್ರಕಾಶವಾಗಿಹ ತತ್ವ ಅತೀಂದ್ರ, ಅಕಾಯ, ನಿರುಪಾಧಿ ಅವ ನೆಂತು ಉಪಾಧಿ ಕಾಣುವನು ಜಾಗ್ರತ ಸ್ವಪ್ನ, ಸುಷತ್ತಿಯಲ್ಲಿ ತಟ್ಟಿಲ್ಲದಿರುವ ಮಹಾಂತ ಬಸವ

ರಸ ತನು, ಮನ, ಧನ ಏಕಾಥವಾದ ಕಾರಣ ಉದಯದಲ್ಲಿ ಲಿಂಗವೆ ಶರಣು ಜಂಗಮವೆ ಶರಣು. ಪ್ರಸಾದವೆ ಶರಣು ಕಂಡಯ್ಯ ಈ ತ್ರಿವಿಧ ಗುಣ ಸಂಪನ್ನರು ಕೂಡಲ ಚೆನ್ನ ಸಂಗಯ್ಯನ ಶರಣು ಮಹಾಘನವಯ್ಯ ಕಲ್ಪಿತ ತಾನೆಂಬ ಭ್ರಮ ಎಲ್ಲಿಯವರೆಗೆ ತನ್ನೊಳಗೆ ಹುದುಗಿಹುದು. ಇದರಿಂದ ಅವಸ್ಥೆಗಳು ತೋರುವವರು ಆರು ಗುರುಕಾರುಣ್ಯದಿಂದ ತಾನಾರೆಂದರಿಯ ಹೋಗಿ ತನುವೆ ಪ್ರಸಾದವಾಗಿದೆ. ಮನವೆ ಲಿಂಗವಾಗಿದೆ. ಧನ ಜಂಗಮವಾಗಿಹ ಮಹಾ ಘನವಂತರು ಇಲ್ಲದ ಭ್ರಾಂತಿಯ ತೋರಿಕೆ ತನು, ತೋರಿಕೆ ಮನ, ತೋರಿಕೆಯ ಧನ ಇಲ್ಲವಾಗಿದೆ. ಈ ಇಲ್ಲೆಂದು ಇಲಲ್ವಾಗಿ ತನುವು ಮರೆತು ಮಹಾ ಪ್ರಸಾದವಾದುದು ಮನವ ಮರೆತು ಲಿಂಗವಾದುದು ಧನವ ಮೆತು ಜಂಗಮವಾದುದು. ಇದು ಕಾರಣ ತೆರಹಿಲ್ಲದಭವನಿಗೆ ಅದಾವ ಜಾಗ್ರತಾ ಅದಾವ ಸ್ವಪ್ನ ಅದಾವ ಸುಷುಪ್ತಿ ಅದಾವ ತೂರ್ಯ ತೆರಹಿಲ್ಲದ ಲಿಂಗಭರಿತವೆಂಬ ಗುರುಕಾರುಣ್ಯವ ಆರು ಅರಿದರಿದು ನೋಡಿಹರು ಅವರೆ ಜಾಗೃತ ಸ್ವಪ್ನ ಸುಷಪ್ತಿಯ ತಟ್ಟಿಲ್ಲದಿರುವ ಸ್ತ್ರೀ ಸನ್ಯಾಸಿಗಳೆಂದು ತಿಳಿಯುವದು.

ದಿಗಂಬರಿಯಾದಡೇನಯ್ಯ ಮನ ಬತ್ತಲೆ ಇರಬೇಕು. ದೇಹ ದಿಗಂಬರವಾದವರುಂಟು ಮನದಿಗಂಬರವಾದವರುಂಟೆ? ಮನ ದಿಗಂಬರವಾಗದಿದ್ದರೆ ಭಾವ ನಿರ್ಭಾವವಾಗುವದದೆಂತು? ತಾನು ಅಂಬರನು ಅಲ್ಲ ದಿಗಂಬರನು ಅಲ್ಲ ಅಲ್ಲವೆಂಬುದು ಇದು ಇಲ್ಲವಾಗಿದೆಯೊ? ಇದು ಎಲ್ಲಾ ಮನದ ಕಾರ್ಯ ಇದು ತನ್ನ ಕಾರ್ಯದಿಂದ ನಿವೃತ್ತವಾಗಿ ನಿಶ್ಚಿಂತವಾಗಿದೆಯೋ? ನಿಶ್ಚಿಂತವಾಗಿದ್ದಲ್ಲಿ ಅಚಂತ್ಯಪದವದು ತನ್ನದಾಗಿದೆಯಾ? ಇದು ತಾನಾರೆಂದರಿತಲ್ಲಿ ತನ್ನಿಂದ ತನಗದು ಅಚ್ಯಿಂಪದವದು ಸ್ವತಃ ಸಿದ್ಧವು ಇಂತೀ ಚತುರ್ವಿಧ ಹೊಲಬನರಿಯದೆ ವ್ಯರ್ಥಕೆಟ್ಟರು. (ಕೂಡಲಚೆನ್ನಸಂಗಂ) ಕಾಣಾ ಚೆನ್ನ ಮಲ್ಲಿಕಾರ್ಜುನ.

ಅಚಿಂತ್ಯಪದವಾಗಿಹ ತನ್ನಿರುವ ಅರಿಯದೆ ಅರ್ಥ ಸನ್ಯಾಸಿಯದಡೇನು? ರುಚಿ ಸನ್ಯಾಸಿಯಾದಡೇನು ಸ್ತ್ರೀ ಸನ್ಯಾಸಿಯಾದಡೇನು. ದಿಗಂಬರ ಸನ್ಯಾಸಿಯಾದಡೇನು ಸನ್ಯಾಸಿಯಾದವ ತಾನಾರೆಂಬುದ ನರಿಯದೆ ಹೋದಡೆ ಫಲವಿಲ್ಲ, ಅಚಿಂತ್ಯಪದ ತನ್ನದಾಗದಿದ್ದಲ್ಲಿ ವೃಥಾಕೆಟ್ಟರು ಎಂದು ಹೇಳಿಹರು.

ವಚನ - 33

ನಾನೊಬ್ಬನುಂಟು ಎಂಬವಂಗೆ ನೀನೊಬ್ಬನು ಉಂಟಾಗಿ ತೋರುವೆ
ನಾನು ನೀನು ಎಂಬುದು ಉಂಟಾದಲ್ಲಿ ಜ್ಞಾನ ಅಜ್ಞಾನ ಉಂಟಾಯಿತ್ತು.
ಜ್ಞಾನ ವಿಜ್ಞಾನ ಉಂಟಾದಲ್ಲಿ ನಾನಾ ವಿಧ ಪ್ರಪಂಚ ಆಯಿತ್ತು ನೋಡಾ
ಮಾಯಿಕವೆಂಬುದು ಹೀಗಲ್ಲದೆ ಇನ್ನು ಹೇಗಿಹುದು
ನಾನು ನೀನು ಎಂಬೆರಡು ಸತ್ತರೆ ಜ್ಞಾನ ಅಜ್ಞಾನ ಅರಿತಿತ್ತು ಗುಹೇಶ್ವರಾ.

ತಾತ್ಪರ್ಯ : ನಾನೊಬ್ಬನುಂಟು ಎಂಬವಂಗೆ ನೀನೊಬ್ಬನು ಉಂಟಾಗಿ ತೋರುವೆ : ಈ ತೋರುವ ತೋರಿಕೆ ಬಂದ ತೆರವಾಗಿರದು ನೋಡಾ ಒಮ್ಮೆ ಅಹಂಭಾವಿಯಾಗಿ ತೋರಿದರೆ ಇನ್ನೊಮ್ಮೆ ಅದುವೆ ನಿರಹಂಭಾವಿಯಾಗಿ ತೋರುವದು.

ಒಮ್ಮೆ ನಾನಾಗಿ ತೋರಿದರೆ ಮತ್ತೊಮ್ಮೆ ನೀನಾಗಿ ತೋರುವದು ಅದುವೆ ಕೋಹಂ

ಆಗಿ ಸೋಹಂ ಆಗಿ ಚಿದಹಂ ಆಗಿ ಹೀಗೆಯೇ ತೋರಿಕೆಯ ಜ್ಞಾನ ಅಜ್ಞಾನಕ್ಕಿಂಬು ಮಾಡಿತ್ತು. ಹಾಗಾದಲ್ಲಿ ನಾನೆಂಬುದು ಜ್ಞಾನವೆನಬೇಕೋ? ನೀನೆಂಬುದು ಜ್ಞಾನವೆನಬೇಕೋ? ವಿಚಾರಿಸಿ ನೋಡಿದಡೆ ನಾನೆಂದಲ್ಲಿ ನಾನಿಲ್ಲ, ಕೋಹಂ ಎಂದಲ್ಲಿ ಸೋಹಂ ಇಲ್ಲ ಸೋಹಂ ಎಂದಲ್ಲಿ ಚಿದಹಂ ಇಲ್ಲ, ಇವುಗಳೆಲ್ಲ ನಾನೆಂದಲ್ಲಿ ನೀನು ಇಲ್ಲ, ನೀನೆಂದಲ್ಲಿ ನಾನು ಇಲ್ಲ, ನಾನು ನೀನು ಅರಿಯದ್ದರಿಂದ ಜ್ಞಾನ-ಅಜ್ಞಾನ ಉಂಟಾಯಿತ್ತು. ಇವೆರಡು ಉಂಟಾದಲ್ಲಿ ನಾನಾ ವಿಧ ಪ್ರಪಂಚವಾಯಿತ್ತು.

ಈ ಪ್ರಪಂಚವು ತ್ರಿವಿಧ ರೂಪವಾಯಿತ್ತು. ಒಂದು ಕಡೆ ಕರ್ಮಕಾಂಡದವರ ಪ್ರಪಂಚ ತೋರಿತ್ತು. ಇನ್ನೊಂದು ಪೂಜ್ಯ ಪೂಜಿಕರ ಪ್ರಪಂಚ . ಸೇವ್ಯ ಸೇವಕರ ಪ್ರಪಂಚ ಒಬ್ಬನು ಅರ್ಪಿಸುವ ಭಕ್ತನಾಗಿ ಇನ್ನೊಬ್ಬ ಅರ್ಪಿಸಿದುದ ಕೊಂಬ ಈಶ್ವರನಾಗಿ ಫಲಪದಂಗಳ ಪಡೆಯುವ ಭಕ್ತನಾಗಿ ಫಲಪದಂಗಳ ವರವನ್ನೀಯುವ ದೇವನಾಗಿಇದು ಕೊಂಬುವ ಕೊಳ್ಳುವ ಪ್ರಪಂಚವಾಗಿ ತೋರಿತ್ತು.

ಮತ್ತೊಂದು ಕಡೆ ಸಕಲ ಕರ್ಮಂಗಳಿಗೆ ಸಾಕ್ಷಿ ನಾನೆನ್ನುವ ಜ್ಞಾನ ಕಾಂಡಿಯ ಪ್ರಪಂಚ. ಅಸಂಗ ನಾನು. ಪ್ರತ್ಯಗಾತ್ಮ ನಾನು. ಸಚ್ಚಿದಾನಂದ ನಿತ್ಯ ನಾನು , ಪೂರ್ಣ ನಾನೆನ್ನುವ ಚಿದಹಮ್ಮಿನ ಪ್ರಪಂಚ ಹೀಗೆ ನಾನಾ ವಿಧವಾಗಿ ತೋರುವುದು ಮಾಯಿಕ. ಮಾಯಿಕವೆಂಬುದು ಹೀಗಲ್ಲದೆ ಇನ್ನು ಹೇಗಿರುವದು ಹೇಳಾ. ಇದು ತೋರಿ ಇಲ್ಲವಾಗುವ ಮಾಯಿಕದ ಹಗರಣವ ಕೆಲಬರು ಅರಿಯ ಹೋಗಲಿಲ್ಲ ಅರಿಯ ಹೋಗದ್ದರಿಂದ ನಾನೊಬ್ಬನುಂಟು ಎಂಬುವಂಗೆ ನೀನೊಬ್ಬನು ಉಂಟಾಗಿ ತೋರುವೆ ಕರ್ಮಕಾಂಡದ ಕಾಯನಾನೆಂಬುದು ಉಂಟಾಗಿ ಇವುಗಳರ್ಪಿಸುವ ನೀನೆಂಬುದು ಉಂಟಾಯಿತ್ತು.

ಇವುಗಳನ್ನಾಪೇಕ್ಷೆಮಾಡಿಕೊಂಡು ಸಾಕ್ಷಿನಾನೆಂಬುದು ಉಂಟಾಗಿ ಕಾಯನಾನೆನ್ನುವವರು ಪ್ರಪಂಚ ಈಶಾರ್ಪಣ ಮಾಡುವ ಭಕ್ತರ ಪ್ರಪಂಚ ಇತ್ತ ಸತ್ಯರು, ನಿತ್ಯರು, ಮುಕ್ತರು ನಾನೆನ್ನುವವರ ಚಿದಹಂ ಪ್ರಪಂಚ ಆಯಿತ್ತು ಮಾಯಿಕವೆಂಬುದು ಹೀಗಲ್ಲದೆ ಇನ್ನು ಹೇಗೆ ಇಹದು ಎಂದು ಕೇಳಿಹರು. ನಾನು ನೀನು ಎಂಬೆರಡು ಸತ್ತರೆ ಜ್ಞಾನ ಅಜ್ಞಾನ ಅರಿತಿತ್ತು ಗುಹೇಶ್ವರಾ. ಆವ ಹೃದಯದಲ್ಲಿ ನಾನು ನೀನು ಎಂಬೆರಡು ಸತ್ತಿರುವವು ಅಲ್ಲಿ ಅಜ್ಞಾನ ಜ್ಞಾನ ಬಲ್ಲುದಾಗಿದೆ. ನಾನು ನೀನೆಂಬುದು ಸತ್ತುದು ಹೇಗಂದಲ್ಲಿ ತಾನಾರೆಂದರಿತಲ್ಲಿ ತಾನು ಸಮ ಸ್ವರೂಪ ನಿರಂತರವಾಗಿಹ ಮಂಗಲಮಯ ಸ್ವಯಂಜ್ಯೋತಿ ಎಂದು ತನ್ನಿಂದ ತನಗದು ವೇದ್ಯವಾಗಿ ನಾನು ನೀನು ಸತ್ತುದು ಅರಿತ ಶರಣ. ಅಹಂ ಭಾವಿಯು ಆಗದವನು ನಿರಹಂ ಭಾವಿಯು ಆಗದವನು ಭಾವಕ್ಕಗಮ್ಯವಾಗಿಹ ತನ್ನಿರುವು ಕರಿಗೊಂಡಿರುವದರಿಂದ ಕಾಯನಾನೆನ್ನುವ ಕರ್ಮಿಯು ಆದವನಲ್ಲ, ಈಶಾರ್ಪಣ ಮಾಡುವ ಭಕ್ತ ಕಾಂಡಿಯು ಆದವನಲ್ಲ ಸಕಲ ಸಕಲ ಕರ್ಮಗಳಿಗೆ ಸಾಕ್ಷಿ ನಾನೆನ್ನುವ ಜ್ಞಾನ ಕಾಂಡಿಯು ಆದವನಲ್ಲ, ತ್ರಿಕಾಂಡಗಳಿಗೆ ಮೀರಿದ ಮಹಾಂತ ಕೂಟಸ್ಥ ಸಮಸ್ವರೂಪ ತಾನಾರೆಂದರಿತ ಮಹಾಂತನ ದೃಷ್ಠಿಯಲ್ಲಿ ಆನೆಂಬುದಿಲ್ಲ,

ನೀನೆಂಬುದಿಲ್ಲ ಸ್ವಯವೆಂಬುದಿಲ್ಲ, ಪರವೆಂಬುದಿಲ್ಲ, ಅರುವೆಂಬುದಿಲ್ಲ, ಮರವೆಂಬುದಿಲ್ಲ ಒಳಗೆಂಬುದಿಲ್ಲ ಹೊರಗೆಂಬುದಿಲ್ಲ ಕೂಡಲ ಚೆನ್ನ ಸಂಗಯ್ಯನೆಂಬ ಶಬ್ದಮುನ್ನಿಲ್ಲ ಇಂತಪ್ಪ ಮಹದಿರುವ ಅರಿತ ಘನಪ್ರಸಾದಿ ಇದು ಕಾರಣ ನಿಸ್ಸೀಮ ನಿಲುವುಳ್ಳ

ಶರಣ ತೆರಹಿಲ್ಲದ ಪ್ರಸಾದಿ ನಾನೀನೆನ್ನದಿಹ ಸುಖ ಸ್ವರೂಪ ಜ್ಞಾನ ಅಜ್ಞಾನವ ಕಾಣದ ಪರಿಣಾಮ ತುದಿ ಮೊದಲಿಲ್ಲದ ಅಖಂಡಿತ ಅನುಪಮ, ಉಪಮೆಯುಳ್ಳದೆಲ್ಲವು ಜ್ಞಾನ ಅಜ್ಞಾನ ಅನುಪಮವೆ ಸುಜ್ಞಾನ. ಶಬ್ದಕ್ಕಿಂಬುಕ್ಕೊಟ್ಟುದೆಲ್ಲವು ಜ್ಞಾನ ಅಜ್ಞಾನವು ಶಬ್ದವೆ ಮೀಸಲವಾದುದು ಸುಜ್ಞಾನ.

ಎಂಜಲ ಮಾತುಗಳೆಲ್ಲವು ಜ್ಞಾನ-ಅಜ್ಞಾನವು ಮಿಗೆ ಮಿಗೆ ಮೀಸಲವಾದುದು ಸುಜ್ಞಾನ ನುಡಿಗೊಳಪಟ್ಟುದೆಲ್ಲವು ಜ್ಞಾನ ಅಜ್ಞಾನವು ನುಡಿಗೆಡೆಗೊಡದ ಘನವರಿತುದು ಸುಜ್ಞಾನವು ಅರಿದರುಹಿಸಿಕೊಂಬುದಕ್ಕೆ ಅವಕಾಶಕೊಟ್ಟುದೆಲ್ಲವು ಜ್ಞಾನ ಅಜ್ಞಾನ ಅರಿಯಲಿಲ್ಲದ ಅರುವರಿತ್ತದೆ ಸುಜ್ಞಾನವು ಇದುವೆ ನಾನು ನೀನೆಂಬ ಎರಡು ಸತ್ತರೆ ಜ್ಞಾನ ಅಜ್ಞಾನವರಿತ ಚಿನ್ನ ನೋಡಾ ಎಂದು ಹೇಳಿಹರು.

ಇತಿ ಸಮಾಪ್ತಿ

ವಚನಾನುಕ್ರಮಣಿಕೆ



ಪರಮ ಪೂಜ್ಯ ಸದ್ಗುರು ಶ್ರೀ ವಿದ್ಯಾನಂದ ಶರಣರು

ದ್ವೈತ, ದ್ವೈತಾದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಿವಶಕ್ತಿ ವಿಶಿಷ್ಟಾದ್ವೈತ, ಮುಂತಾದ ಸಿದ್ಧಾಂತಗಳು ಭಾರತದಲ್ಲಿ ಪ್ರಚಲಿತದಲ್ಲಿವೆ. ಪ್ರತಿ ದೇಹದಲ್ಲಿರುವ ಶಕ್ತಿಯನ್ನು ಆಯಾ ದೇಹವೇ ಬಳಕೆ ಮಾಡಿಕೊಳ್ಳಲು ಸಕಲ ದೇಹಗಳಿಗೆ ನೆರವಾಗಲೆಂದು ಆಯಾ ಸಿದ್ಧಾಂತಗಳನ್ನು ಮಹಾಜ್ಞಾನಿಗಳು ರಚಿಸಿರುವರು. ಆದರೆ ಜನ ಆಯಾ ಗ್ರಂಥಗಳನ್ನು ಬರೆದ ಜ್ಞಾನಿಗಳನ್ನು ಅವರು ಬರೆದ ಸೂತ್ರಪ್ರಧಾನವಾದ ಜ್ಞಾನ ಗ್ರಂಥಗಳನ್ನು ಮಾತ್ರ ವಿಶ್ವಾಸಕ್ಕೆ ತೆಗೆದುಕೊಂಡರು. ತಮ್ಮ ತಮ್ಮ ದೇಹಗಳಲ್ಲಿ ತನ್ಮಯವಾದ ಅರಿವಿನ ಶಕ್ತಿಯನ್ನೆ ಮರೆತರು. ಒಬ್ಬೊಬ್ಬ ಜ್ಞಾನಿಯ ಹೆಸರಲ್ಲಿ ಮತ ಧರ್ಮ ನಿರ್ಮಾಣವಾಯಿತು. ಜಾತಿ ಉಪಜಾತಿ ಪಂಗಡಗಳು ಹುಟ್ಟಿಕೊಂಡವು. ಜ್ಞಾನಿಗಳು ಬರೆದ ಸೂತ್ರ ಪ್ರಧಾನ ಸಿದ್ಧಾಂತಗಳೆಲ್ಲಾ ಧರ್ಮಗ್ರಂಥಗಳಾದವು. ಅವು ಪೂಜೆಗೆ, ವಾದ ವಿವಾದಗಳಿಗೆ ಉಪನ್ಯಾಸಕ್ಕೆ ಮೀಸಲಾದವು.

ದೇಹದ ಉನ್ನತಿಗಾಗಿ ದೇಹದಿಂದಲೇ ಬರೆದ ಗ್ರಂಥಗಳು ದೇಹಗಳಿಗೆ ಮುಳುವಾದವು. ಈ ಸಕಲ ಸಿದ್ಧಾಂತಗಳಿಂದ ಆದ ಬದಲಾವಣೆಯನ್ನು ಶ್ರೀ ವಿದ್ಯಾನಂದ ಶರಣರು ಗಮನದಲ್ಲಿಟ್ಟುಕೊಂಡು ಶರಣರ ವಚನಗಳನ್ನು ತೆಗೆದುಕೊಂಡು ಅವುಗಳಿಗೆ ತಮ್ಮದೆ ಆದ ಸೂತ್ರ ರೂಪದ ವ್ಯಾಖ್ಯಾನವನ್ನು ಬರೆದರು. ಇವು ಮನುಕುಲವನ್ನು ಮಹಾ ಮನುಕುಲದತ್ತ ತೆಗೆದುಕೊಂಡು ಹೋಗುವುದರಲ್ಲಿ ಸಂದೇಹವೇ ಇಲ್ಲ.

ಸದ್ಗುರು ವಿದ್ಯಾನಂದರು ಈ ನಾಡು ಕಂಡ ಮಹಾನ್ ಸಂತರು. ಮಠ ಮಾನ್ಯಗಳ ಒಡೆಯರು ಸಾಹಿತಿಗಳು ಈ ಸತ್ಪುರುಷರನ್ನು ನೋಡಲು ಬರಲಿಲ್ಲ. ರಾಜಕಾರಣಿಗಳು ಇವರತ್ತ ಸುಳಿಯಲಿಲ್ಲ. ಗುರುಗಳಾದರೂ ಅಷ್ಟೆ. ಅವರ ನೆರಳಿನ ಸಾಮಿಪ್ಯವೂ ಹೋಗಲಿಲ್ಲ. ಅರುಹೃದಯಿಗಳನ್ನು ಕಂಡು ಅರಿವಿನ ಬೀಜ ಬಿತ್ತಿದರು. ಮೊಳಕೆಯೊಡೆದು ಸಸಿಗಳಾಗಿವೆ. ಕೆಲವು ಮರಗಳಾಗಿ ಫಲಕ್ಕೆ ಬಂದಿವೆ ಆ ಮಾಗಿದ ಅರಿವಿನ ಫಲ ತನ್ನ ಕೆಲಸ ಮಾಡದೇ ಇರದು.

ಬಸವರಾಜ ಸ್ವಾಮಿ
ಸಂಪಾದಕ